


ಗಾಂಧೀಜಿ ಮತ್ತು ಸ್ವಾತಂತ್ರ್ಯ ಸಂಗ್ರಾಮ

3

ಎಸ್. ವಿ. ಶ್ರೀನಿವಾಸರಾವ್



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬

K-08

ಪ್ರಿಯರಾದ ಡಾ. ಶ್ರೀ. ಶಿವಾನಂದಯ್ಯ
ಅವರಿಗೆ
ಗೌರವಪೂರ್ವಕವಾಗಿ
ಎಸ್. ವಿ. ಶಿವಾನಂದರ್
7/9/06

ಗಾಂಧೀಜಿ

ಮತ್ತು

ಸ್ವಾತಂತ್ರ್ಯ ಸಂಗ್ರಾಮ

ಗಾಂಧೀಜಿ

ಮತ್ತು

ಸ್ವಾತಂತ್ರ್ಯ ಸಂಗ್ರಾಮ

ಪ್ರಧಾನ ಸಂಪಾದಕರು

ಡಾ. ಎಸ್. ಶಿವರಾಜಪ್ಪ

ಲೇಖಕರು

ಎಸ್. ವಿ. ಶ್ರೀನಿವಾಸರಾವ್

ಗಾಂಧೀಭವನ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೨೦೦೫

GANDHIJI MATTU SWATHANTRYA SANGRAMA by S.V. Srinivasa Rao, Published by the Director, Prasaranga, University of Mysore, Mysore-570 006; Pages : xi + 155, Price : Rs. 50-00

First Edition : 2005

ಬೆಲೆ : ರೂ. ೫೦-೦೦

ಪ್ರಕಾಶಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕರು, ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಮುದ್ರಕರು

ಚಂದ್ರಶೇಖರ ದೊಡ್ಡಮನಿ
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ
ಮೈಸೂರು ೫೭೦ ೦೦೬

ಮುನ್ನುಡಿ

ಗಾಂಧೀಜಿಯವರ ಬದುಕೇ ಒಂದು ಮಹಾಕಾವ್ಯ. ಅವರ ಬದುಕಿನ ರೀತಿ ನೀತಿ ಕಲಾತ್ಮಕವಾದುದು. ನೇರನುಡಿ, ಸ್ಪಷ್ಟತೆ, ಸರಳತೆ ಹಾಗೂ ಖಚಿತತೆಗಳು ಅವರ ಬರವಣಿಗೆಯ ಮುಖ್ಯ ಲಕ್ಷಣಗಳು. ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿಯವರ ಸ್ಥಾನ ಪ್ರಮುಖವಾದುದು. ಗಾಂಧೀಜಿಯವರ ವ್ಯಕ್ತಿತ್ವ, ಸಾಧನೆ ಸಿದ್ಧಿಗಳ ಬಗ್ಗೆ ಪ್ರಕಟವಾಗಿರುವಷ್ಟು ಸಾಹಿತ್ಯ ಜಗತ್ತಿನ ಬೇರಾವ ವ್ಯಕ್ತಿಯ ಕುರಿತು ಪ್ರಕಟವಾಗಿಲ್ಲವೆನಿಸುತ್ತದೆ. ಬುದ್ಧ ಬಸವ ವಿವೇಕಾನಂದರ ಅಂಥದೇ ಕೀರ್ತಿಯನ್ನು ಲೋಕಾದ್ಯಂತ ಹರಡಿದ ಭಾರತೀಯ ಅವರೊಬ್ಬರೆ. ಅವರ ಸಂದೇಶ ಲೋಕಕ್ಕೆ ಎಲ್ಲ ಕಾಲದಲ್ಲಿಯೂ ಸ್ಫೂರ್ತಿದಾಯಕವಾಗಿದೆ. ಸಾಹಿತ್ಯಾಭಿಮಾನಿಗಳಿಗೆ, ಚಿಂತಕರಿಗೆ, ವಿಮರ್ಶಕರಿಗೆ ಗಾಂಧೀಜಿಯವರ ಬದುಕೊಂದು ಗಣಿ. ಇವರನ್ನು ಕುರಿತು ಪ್ರಕಟವಾಗಿರುವ, ಆಗುತ್ತಿರುವ ಬರವಣಿಗೆಗೆ ಲೆಕ್ಕವಿಲ್ಲ.

ಗಾಂಧೀಜಿಯವರು ಕೇವಲ ರಾಷ್ಟ್ರನಿರ್ಮಾಪಕರಾಗಿರಲಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಅವರು ರಾಷ್ಟ್ರೀಯ ಭಾವೈಕ್ಯದ ಸಂಕೇತವಾಗಿದ್ದರು. ನಿರ್ಲಕ್ಷ್ಯ ತಾತ್ಸಾರಗಳಿಗೆ ಪಾತ್ರವಾಗಿದ್ದ ಭಾರತೀಯ ಭಾಷೆಗಳಿಗೆ ಶಕ್ತಿಯನ್ನೂ, ಆತ್ಮಪ್ರತ್ಯಯವನ್ನೂ ತಂದುಕೊಟ್ಟವರು ಗಾಂಧೀಜಿ ಎಂಬುದನ್ನು ನಾವು ಮರೆಯುವಂತಿಲ್ಲ. ರಾಷ್ಟ್ರದ ರಾಜಕೀಯ ಹಾಗೂ ಅರ್ಥಶಾಸ್ತ್ರಗಳ ಮೇಲೆ ಗಾಂಧೀಜಿಯವರ ಪ್ರಭಾವದ ಪ್ರಮಾಣ ಏನೇ ಇರಲಿ, ನಮ್ಮ ಸಾಹಿತ್ಯ ಪ್ರಕಾರಗಳ ಮೇಲೆ ಅವರ ಪ್ರಭಾವ ಗಾಢವಾದುದೆಂಬುದರಲ್ಲಿ ಸಂಶಯವಿಲ್ಲ. ಶತಮಾನಗಳ ದೀರ್ಘ ಇತಿಹಾಸವನ್ನುಳ್ಳ ನಮ್ಮ ಭಾಷೆಗಳಿಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟ ಕೀರ್ತಿ ಮಹಾತ್ಮ ಗಾಂಧೀಜಿಯವರದು. ಇವರು ನೇರವಾಗಿ ತಾವು ಬರೆಯುವುದರ ಮೂಲಕವಾಗಿಯಲ್ಲದೆ ತಮ್ಮ ಕ್ರಿಯಾಶೀಲತೆ, ಉದ್ದೇಶ, ಆದರ್ಶಗಳ ಮೂಲಕವಾಗಿಯೂ ಆಧುನಿಕ ಭಾರತೀಯ ಸಾಹಿತ್ಯದಲ್ಲಿ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಿದರು. ಬಡವರ, ನತದೃಷ್ಟರ, ನೊಂದವರ

ಹಾಗೂ ತಿರಸ್ಕೃತರ ಬಗೆಗೆ ಮಾನವೀಯ ಅನುಕಂಪವನ್ನು ಗಾಂಧೀಜಿಯವರು ತಮ್ಮ ಬದುಕಿನುದ್ದಕ್ಕೂ ಇಟ್ಟುಕೊಂಡು ದಲಿತೋದ್ಧಾರಕರಾಗಿದ್ದರು.

ಶ್ರೀಮಂತ ಸಮಾಜದಿಂದ ದೀನ ದಲಿತರ ಕಡೆಗೆ ಹೀಗೆ ಆಸಕ್ತಿ ಬದಲಾದುದಕ್ಕೆ ಕಾರಣವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಗಾಂಧೀಜಿಯವರ ವಿಚಾರಧಾರೆಯ ಪ್ರಭಾವದಲ್ಲಿ ಮನಗಾಣಬಹುದು. ರಾಷ್ಟ್ರಕವಿ ಕುವೆಂಪು ಅವರು ಗಾಂಧೀಜಿಯವರನ್ನು "ಸಭ್ಯತಾದೇವತೆ ಮತ್ತು ಪ್ರಚ್ಛನ್ನ ಕಲ್ಕಿ" ಎಂದು ಪ್ರಶಂಸಿಸಿದ್ದಾರೆ. ರಾಷ್ಟ್ರದ ಅತ್ಯುತ್ತಮ ಪ್ರತಿಭೆ ಎನಿಸಿದ ಕೈಲಾಸಂ ಅವರು ಗಾಂಧೀಜಿಯವರನ್ನು ಕುರಿತು "ಸೆಳೆಬೊಂಬಿನಾಲಂಬವನ್ನಿತ್ತು, ಬಡಿಸು ತಾ; ಅವನೆ ಕಾಣ್, ಲೋಕತಾರಕ ನಮ್ಮ ಬಾಪೂ" ಎಂದು ಅನ್ಯಾದೃಶವಾಗಿ ಬಣ್ಣಿಸಿದ್ದಾರೆ.

ಇಂಥ ಮಹಾನ್ ವ್ಯಕ್ತಿ-ಶಕ್ತಿಯ ಚಿಂತನೆಗಳನ್ನು ಓದುಗರಿಗೆ ತಲುಪಿಸಬೇಕೆಂಬ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯವು ಗಾಂಧೀಭವನದ ವತಿಯಿಂದ ಇಪ್ಪತ್ತೈದು ಕೃತಿಗಳನ್ನು ರಾಷ್ಟ್ರಕವಿ ಕುವೆಂಪು ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಹೊರತರುತ್ತಿದೆ. ಇಂತಹ ಮೌಲಿಕ ಕೃತಿಗಳನ್ನು ಪ್ರಕಟಿಸಲು ಶ್ರಮಿಸುತ್ತಿರುವ ಗಾಂಧೀಭವನದ ಗೌರವ ನಿರ್ದೇಶಕರಾದ ಡಾ. ಎಸ್. ಶಿವರಾಜಪ್ಪ ಮತ್ತು ಪ್ರಕಾಶನದ ಜವಾಬ್ದಾರಿ ಹೊತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಲಕ್ಷ್ಮೀನಾರಾಯಣ ಅರೋರಾ ಇವರ ಕಾರ್ಯ ಶ್ಲಾಘನೀಯ. ಕೃತಿಯನ್ನು ಬರೆದುಕೊಟ್ಟು, ಪ್ರಕಟಣೆಗೆ ಕಾರಣಕರ್ತರಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರಿಗೆ ವಂದನೆಗಳು. ಸಾಮಾನ್ಯ ಜನರಿಗೂ ಗಾಂಧಿ ಚಿಂತನೆಗಳು ನಿಲುಕುವಂತಾಗಲು ಇಂತಹ ಪ್ರಕಟಣೆಗಳು ಸಹಕಾರಿಯಾಗಿವೆ. ಕನ್ನಡಿಗರು ಇದರ ಸದುಪಯೋಗವನ್ನು ಮಾಡಿಕೊಂಡರೆ ನಮ್ಮ ಶ್ರಮ ಸಾರ್ಥಕ.

ಪ್ರೊ. ಜೆ. ಶಶಿಧರ ಪ್ರಸಾದ್
ಕುಲಪತಿಗಳು

ನುಡಿನಮನ

"ಭಾರತ ಭಾಗ್ಯವಿಧಾತಾ" ಎನಿಸಿರುವ ಮಹಾತ್ಮ ಗಾಂಧೀಜಿಯವರು ಇಂದು ಕೇವಲ ಭಾರತದ ಸಂದರ್ಭದಲ್ಲಿ ಮಾತ್ರವೇ ಅಲ್ಲ, ವಿಶ್ವದ ದೃಷ್ಟಿಯಲ್ಲೂ ಒಬ್ಬ ಅಸಾಮಾನ್ಯ ಮಹಾಪುರುಷರೆಂದೆನಿಸಿಕೊಂಡಿದ್ದಾರೆ. ನಿಜವಾದ ಅರ್ಥದಲ್ಲಿ ಅವರೊಬ್ಬ ಮಹಾಮಾನವ, ವಿಶ್ವಮಾನವ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ದೇಶಕ್ಕಾಗಿ, ನಾಡಿನ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ನಡೆಸಿದ ಹೋರಾಟ, ತಳೆದ ನಿಲುವುಗಳು, ಕಂಡ ಕನಸುಗಳು ನಾಡಿನ ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲು ಯೋಗ್ಯವಾದವು.

"ರಾಷ್ಟ್ರಪಿತ" ಎಂಬ ಅಗ್ಗಳಿಕೆಗೆ ಪಾತ್ರರಾದ ಗಾಂಧೀಜಿಯವರ ಹೋರಾಟ ಮತ್ತು ಸಾಧನೆಗಳು ನಾಡಿಗೆ ಸ್ವಾತಂತ್ರ್ಯ ತಂದುಕೊಡುವಷ್ಟರವುಟ್ಟಿಗೆ ಸೀಮಿತವಾಗಿದ್ದಿದ್ದರೆ ಪ್ರಾಯಃ ಅವರ ಸ್ಥಾನ ದೇಶದ ದೃಷ್ಟಿಯಲ್ಲಿ ಈಗಿರುವುದಕ್ಕಿಂತ ಭಿನ್ನವಾಗಿರುತ್ತಿತ್ತೇನೋ, ಆದರೆ ಗಾಂಧೀಜಿಯವರಂತಹ ಅದ್ಭುತ ಚೇತನದ ಬಹುಮುಖೀ ಆಯಾಮಗಳು; ಸರಳತೆ-ಸಜ್ಜನಿಕೆ, ದೂರದೃಷ್ಟಿ ಕರ್ತವ್ಯಪರಾಯಣತೆಗಳ ಅಪೂರ್ವ ಸಂಗಮವಾಗಿದ್ದು ಅವರ ಜಿಜ್ಞಾಸೆ ಮತ್ತು ಅಂದಿನ ಕ್ಷೇತ್ರಗಳು ಹತ್ತಾರು ದಿಶೆಗಳಲ್ಲಿ ಸಿರಿದುಂಬಿ ಮೈವೆತ್ತಿ ಭವಿಷ್ಯ ಭಾರತವನ್ನು ಕಟ್ಟುವ ಚಿಂತನೆಯೊಡನೆ, ಸಂಕಲ್ಪದೊಡನೆ ಅಭಿಮುಖಿಯಾಗಿ ಮುನ್ನಡೆದಿದ್ದವು. ಸಮಾಜ, ರಾಜನೀತಿ, ಆರ್ಥಿಕ ವಿಚಾರಗಳು, ಸಂಸ್ಕೃತಿ, ಜನಜೀವನ, ಸಾಹಿತ್ಯ- ಹೀಗೆ ಒಂದಲ್ಲ ಹಲವಾರು ವಿಷಯಗಳಲ್ಲಿ ಅವರ ಜಿಜ್ಞಾಸೆ ಪಕ್ವಗೊಂಡು ಅವುಗಳ ಫಲಶ್ರುತಿ ನಿಸ್ಸಂದೇಹವಾಗಿ ಭವ್ಯಭಾರತದ ನಿರ್ಮಾಣದಲ್ಲಿ ಸಾರ್ಥಕವೆನಿಸಿದ್ದವು. ಈ ಎಲ್ಲ ಸಾಮಾಜಿಕ, ಆರ್ಥಿಕ ಮತ್ತು ದಾರ್ಶನಿಕ ಚಿಂತನೆಗಳು ಹಾಗೂ ಆ ಚಿಂತನೆಗಳ ಪ್ರಾಯೋಗಿಕ ಅನ್ವಯ ಗಾಂಧೀವಾದಕ್ಕೆ ಹಾದಿ ತೆರೆದವು. ಪ್ರಾಯಃ ಗಾಂಧೀಜಿಯವರ ಬದುಕಿನ ಮತ್ತು ಚಿಂತನೆಯ ಪ್ರಸ್ತುತತೆ ಎಂದಿಗಿಂತ ಇಂದು ಹೆಚ್ಚು ಮಹತ್ವಪೂರ್ಣವಾಗಿದ್ದು, ಅದರ ವಿಚಾರಧಾರೆಗಳು ಯಂತ್ರಯುಗದ ಭರಾಟೆಯಲ್ಲಿ ಬಸವಳಿದು ಕ್ಷೀಣಿಸುತ್ತಿರುವ ಮಾನವ ಮನಸ್ಸನ್ನು ಪುನಶ್ಚೇತನಗೊಳಿಸುವ ಮತ್ತು ಸನ್ಮಾರ್ಗದಲ್ಲಿ ಕೊಂಡೊಯ್ಯುವ ದಿಸೆಯಲ್ಲಿ ಯಶಸ್ವಿಯಾಗಿ ಮುನ್ನಡೆದಿದೆ. ಇಂತಹ ಉದಾತ್ತ ಚಿಂತನೆಯಿಂದ

ಮನುಕುಲದ ಭವಿಷ್ಯದ ಹಾದಿಯನ್ನು ತಮ್ಮ ಅಸಾಧಾರಣ ಕಾಣ್ಕೆಯಿಂದ ವೀಕ್ಷಿಸಲು ಯತ್ನಿಸಿದ ಗಾಂಧೀಜಿ ಕೇವಲ ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ, ತಮ್ಮ ವಿಶಿಷ್ಟ ವರ್ಚಸ್ಸಿನಿಂದ ಸೂಜಿಗಲ್ಲಿನ ವ್ಯಕ್ತಿತ್ವದ ಪ್ರಭೆಯನ್ನು ಬೀರಿದ್ದಾರೆ. ಹಾಗಾಗಿ ಗಾಂಧೀಜಿಯುವರನ್ನು ಮತ್ತು ಅವರ ಚಿಂತನೆಯನ್ನು ಕುರಿತ ಜಿಜ್ಞಾಸೆ ಮತ್ತು ಅಧ್ಯಯನಶೀಲತೆ ವಿಶ್ವವ್ಯಾಪಿಯಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ "ಗಾಂಧೀಭವನ" ಇಂತಹ ಚಿಂತನೆ ಮತ್ತು ಚಟುವಟಿಕೆಗಳ ಒಂದು ಕೇಂದ್ರವಾಗಿದ್ದು, ಆ ಕೇಂದ್ರದ ಆಶ್ರಯದಲ್ಲಿ ಸಿದ್ಧಪಡಿಸಲಾಗುತ್ತಿರುವ ಗಾಂಧೀಜಿಯವರನ್ನು ಕುರಿತ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡುವ ಇಪ್ಪತ್ತೈದು ಕಿರುಹೊತ್ತಗೆಗಳನ್ನು ಪ್ರಸಾರಾಂಗ ಹೊರತರುತ್ತಿದೆ. ಪ್ರಸಾರಾಂಗದ ಎಲ್ಲಾ ಪ್ರಕಾಶನ ಚಟುವಟಿಕೆಗಳಲ್ಲಿ ಅಪಾರ ಪ್ರೋತ್ಸಾಹ ಮತ್ತು ಸಹಕಾರಗಳನ್ನು ನೀಡುತ್ತಿರುವ ಕುಲಪತಿಯವರಾದ ಪ್ರೊ.ಜೆ.ಶಶಿಧರಪ್ರಸಾದ್ ಹಾಗೂ ಕುಲಸಚಿವರಾದ ಶ್ರೀ ಎನ್.ಡಿ. ತಿವಾರಿ ಅವರಿಗೆ ನಾನು ವಿಶೇಷ ಆಭಾರಿಯಾಗಿದ್ದೇನೆ. ಈ ಹೊತ್ತಗೆಗಳನ್ನು ಹೊರತರುವಲ್ಲಿ ವಿಶೇಷ ಕಾಳಜಿ ವಹಿಸಿ ನೆರವು ಒದಗಿಸುತ್ತಿರುವ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳಾದ ಶ್ರೀ ಸಣ್ಣಸ್ವಾಮಿಯವರಿಗೂ, ಗಾಂಧೀ ಭವನದ ನಿರ್ದೇಶಕರಾದ ಡಾ. ಎಸ್. ಶಿವರಾಜಪ್ಪ ಅವರಿಗೂ ಕೃತಜ್ಞತೆಗಳು. ಹೆಸರಾಂತ ಲೇಖಕರಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ನಮ್ಮ ಮೇಲಿನ ವಿಶ್ವಾಸದಿಂದ ಈ ಹೊತ್ತಗೆಯನ್ನು ಸಿದ್ಧಪಡಿಸಿಕೊಟ್ಟಿರುವುದಕ್ಕಾಗಿ ಕೃತಜ್ಞತೆಗಳು. ಎಂದಿನಂತೆ ಈ ಕೆಲಸದಲ್ಲಿ ಎಲ್ಲ ಸಹಕಾರಗಳನ್ನು ನೀಡುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ.ವೇ. ಶ್ರೀಧರ ಅವರಿಗೂ, ಸಹೋದ್ಯೋಗಿಗಳಾದ ಶ್ರೀಮತಿ ಟಿ. ಕಮಲಮ್ಮ ಮತ್ತು ಶ್ರೀಮತಿ ಡಿ.ಎಸ್. ಶೋಭಾ ಅವರಿಗೂ, ಪುಸ್ತಕದ ಡಿ.ಟಿ.ಪಿ. ಕೆಲಸ ನಿರ್ವಹಿಸಿಕೊಟ್ಟ ಕೀರ್ತನ್ ಗ್ರಾಫಿಕ್ಸ್‌ನ ಶ್ರೀಮತಿ ಬಿ.ಎಂ. ಮಂಜುಳ ಅವರಿಗೂ, ಮುಖಪುಟ ವಿನ್ಯಾಸ ಮಾಡಿದ ಶ್ರೀ ಕುಮಾರ್ ಅವರಿಗೂ, ಅಂದವಾಗಿ ಮುದ್ರಿಸಿಕೊಟ್ಟಿರುವ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಚಂದ್ರಶೇಖರ ದೊಡ್ಡಮನಿ ಹಾಗೂ ಅವರ ಸಿಬ್ಬಂದಿವರ್ಗದವರಿಗೂ ತುಂಬು ಹೃದಯದಿಂದ ಆಭಾರಿಯಾಗಿರುತ್ತೇನೆ.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕರು, ಪ್ರಸಾರಾಂಗ

ಕೃತಜ್ಞತೆ

ಜಗತ್ತಿನ ಮಹಾಮಾನವತಾವಾದಿಗಳಾದ ಬುದ್ಧ, ಬಸವ, ಗಾಂಧೀಜಿ, ಸ್ವಾಮಿ ವಿವೇಕಾನಂದ, ಅಂಬೇಡ್ಕರ್, ಕುವೆಂಪು ಮುಂತಾದ ಮಹಾನುಭಾವರು ಜನ್ಮ ತಾಳಿ ಸಕಲ ಜೀವಿಗಳಿಗೂ ಪ್ರಿಯರೆನಿಸಿದ್ದಾರೆ. ಎಲ್ಲರ ಗುರಿಯೂ ಒಂದೇ ಆಗಿದ್ದರೂ ಮಾರ್ಗ ಮಾತ್ರ ಭಿನ್ನ.

ಮಹಾತ್ಮ ಗಾಂಧೀಜಿಯವರ ಬದುಕು ಬರಹಗಳು ಇಡೀ ಜಗತ್ತಿನ ಸಮಸ್ಯೆಗಳಿಗೆ ಉತ್ತರ ನೀಡುತ್ತವೆ. ಸತ್ಯ, ಪ್ರೇಮ, ಅಹಿಂಸೆಗಳ ಮೂಲಕ ಎಂಥ ದುಷ್ಟಶಕ್ತಿಯನ್ನಾದರೂ ದಮನಗೊಳಿಸಬಹುದೆಂಬುದಕ್ಕೆ ಅವರ ಬದುಕೇ ನಿದರ್ಶನವಾಯಿತು. ನಮ್ಮ ದೇಶದ ಜನ ಸುಖವಾಗಿ ಬಾಳಲೆಂದು, ವಿಶ್ವಕ್ಕೆ ಶಾಂತಿ ಸಿಗಲೆಂದು ತಮ್ಮ ಪ್ರಾಣವನ್ನು ಪಣವೊಡ್ಡಿ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಸ್ವತಂತ್ರ ಧೀರರು ಇವರು. ಗಾಂಧೀಜಿಯವರು ಆರಿಸಿಕೊಂಡ ಮಾಧ್ಯಮ ಭಾರತೀಯ ಸಂಸ್ಕೃತಿಗನುಗುಣವಾದುದೆನ್ನುವುದನ್ನು ಯಾರೂ ಮರೆಯುವಂತಿಲ್ಲ. ಇವರು ನಡೆದ ದಾರಿ ಕಷ್ಟತಮವಾದದ್ದು. ಅಧಿಕಾರ ವಿಕೇಂದ್ರಿಕರಣ, ಗ್ರಾಮ ಸ್ವರಾಜ್ಯ, ಯಾಂತ್ರೀಕರಣರಹಿತ ಅರ್ಥನೀತಿ, ಭಾರತೀಯತ್ವ ನಿಷ್ಠೆ ಇವು ಗಾಂಧೀಜಿಯವರ ಮೂಲಮಂತ್ರವಾಗಿದ್ದವು. ಜಗತ್ತಿನಲ್ಲಿ ಹಿಂಸಾತ್ಮಕವಾದ ಯಾವ ಸಾಧನೆಯೂ ಶಾಶ್ವತವಾದುದಲ್ಲವೆಂಬುದು ಗಾಂಧೀಜಿಯವರ ವಾದವಾಗಿತ್ತು. ಇದನ್ನು ಇಂದಿನ ಯುವಜನಾಂಗ ಅರ್ಥೈಸಿಕೊಂಡು ಜೀವನ ನಡೆಸಬೇಕಾಗಿದೆ.

ಅಂದಿಗಿಂತ ಇಂದು ಗಾಂಧೀಜಿಯವರ ಮೌಲಿಕ ಚಿಂತನೆಗಳು ಭರತಖಂಡದ ಉದ್ಧಾರಕ್ಕೆ ಹೆಚ್ಚು ಉಪಯುಕ್ತವಾಗಿವೆ. ಅವರ ಸಾಹಿತ್ಯ ಮತ್ತು ಸಂದೇಶದ ಪ್ರಸಾರ ಭಾರತೀಯರಿಗೆ ಶ್ರೀರಕ್ಷೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇಂದಿನ ಯುವಜನಾಂಗ ಅವರ ಮೌಲಿಕ ಚಿಂತನೆಗಳನ್ನು ಯಾವ ರೀತಿ ಅರ್ಥೈಸಿಕೊಳ್ಳುತ್ತಿದೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.


ನಾನು ಗೌರವ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡ ಮೇಲೆ ಗಾಂಧೀಭವನದ ಹಲವಾರು ಹೊಸ ಯೋಜನೆಗಳನ್ನು, ನಮ್ಮ ನೆಚ್ಚಿನ ಕುಲಪತಿಗಳಾದ ಪ್ರೊ. ಜೆ. ಶಶಿಧರಪ್ರಸಾದ್ ಅವರ ಮುಂದಿಟ್ಟೆ. ಅವರು ಬಹಳ ಸಂತೋಷಪಟ್ಟರು. ಅವರ ಮನಸ್ಸಿಗೆ ಒಮ್ಮೆ ಬಂದಿತೆಂದರೆ ಆ ಕೆಲಸ ಆದಂತೆಯೇ. ಕುಲಪತಿಗಳ ಉದಾರ ಮನಸ್ಸಿನ ಪ್ರಯತ್ನದಿಂದ ಇಂದು ನಾವು ಗಾಂಧೀ ಭವನದ ಪ್ರಕಟಣೆಗಳ ಶೀರ್ಷಿಕೆಯಡಿ ೨೫ ಕೃತಿಗಳನ್ನು ಪ್ರಕಟಿಸುತ್ತಿದ್ದೇವೆ. ಈ ಸಾಹಿತ್ಯ ಪ್ರಕಟಣೆಗಳ ಪರಿಕಲ್ಪನೆಯನ್ನು ರಚಿಸಿಕೊಡುವುದರ ಜೊತೆಗೆ ಗಾಂಧೀ ಭವನದ ಕಾರ್ಯಕ್ರಮಗಳಿಗೆ ಊರುಗೋಲಾಗಿ ನಿಂತಿರುವ ನಾಡೋಜ ಪ್ರೊ. ದೇಜಗೌ ಅವರು ಗಾಂಧೀ ತತ್ವಗಳನ್ನು ಅನುಷ್ಠಾನಕ್ಕೆ ತರಲು ಹಲವಾರು ಮಾರ್ಗಗಳನ್ನು ಸೂಚಿಸಿ ಆಶೀರ್ವದಿಸಿದ್ದಾರೆ. ಅದರಲ್ಲಿ ಗಾಂಧೀಜಿಯವರ ಬದುಕು ಬರಹಗಳ ಸಾಹಿತ್ಯ ಪ್ರಸಾರವೂ ಒಂದು. ಅವರ ಬೆಂಬಲ ನಮಗೆ ಸ್ಫೂರ್ತಿದಾಯಕ. ಗಾಂಧಿ ಭವನದ ಕ್ರಿಯಾಶೀಲ ಚಟುವಟಿಕೆಗಳಿಗೆ ಮಾನ್ಯ ಕುಲಸಚಿವರಾದ ಶ್ರೀ ಎನ್.ಡಿ. ತಿವಾರಿ ಅವರು ಸದಾ ಬೆಂಬಲ ನೀಡಿ, ಪ್ರೋತ್ಸಾಹಿಸುತ್ತಿರುವುದಕ್ಕೆ ಆಭಾರಿಯಾಗಿದ್ದೇನೆ.

ಈ ಯೋಜನೆಯಡಿ ಗಾಂಧೀಪರ ಚಿಂತಕರಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು "ಗಾಂಧೀಜಿ ಮತ್ತು ಸ್ವಾತಂತ್ರ್ಯ ಸಂಗ್ರಾಮ" ಎಂಬ ಕೃತಿಯನ್ನು ರಚಿಸಿಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳು. ಅಂದವಾಗಿ ಮುದ್ರಿಸಿ ಪ್ರಕಟಣೆಗೆ ಸಹಕರಿಸಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಲಕ್ಷ್ಮೀನಾರಾಯಣ ಅರೋರಾ ಅವರಿಗೆ ಧನ್ಯವಾದಗಳು. ಈ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಅತ್ಯಂತ ಲಗುಬಗೆಯಿಂದ ಸಮರ್ಪಿಸುತ್ತಿದ್ದೇವೆ. ಗಾಂಧೀಜಿಯವರ ಬದುಕು ಮತ್ತು ಚಿಂತನೆಗಳ ಸಂಸರ್ಗದಿಂದ ಕನ್ನಡಿಗರ ಹೃದಯ ಶ್ರೀಮಂತವಾದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ.

ಡಾ. ಎಸ್. ಶಿವರಾಜಪ್ಪ

ಗೌರವ ನಿರ್ದೇಶಕರು, ಗಾಂಧೀ ಭವನ

ಪರಿವಿಡಿ



ಗಾಂಧೀಜಿಯವರ ದೃಷ್ಟಿಯಲ್ಲಿ ಸಪ್ತ ಮಹಾಪಾತಕಗಳು

೧. ತತ್ತ್ವರಹಿತ ರಾಜಕೀಯ

೨. ದುಡಿಮೆ ಇಲ್ಲದ ಸಂಪತ್ತು


೩. ನೀತಿಹೀನ ವಾಣಿಜ್ಯ

೪. ಶೀಲವಿಲ್ಲದ ಶಿಕ್ಷಣ

೫. ಆತ್ಮಸಾಕ್ಷಿರಹಿತ ಭೋಗ

೬. ಮಾನವತಾಶೂನ್ಯ ವಿಜ್ಞಾನ

೭. ತ್ಯಾಗವಿಲ್ಲದ ಪೂಜೆ



ಸ್ವದೇಶಿ ಆಂದೋಳನದ ಅಂಗವಾಗಿ ಚರಕದ ಮುಂದೆ ಕುಳಿತ ಗಾಂಧಿ




ಸಸ್ಯಾಹಾರವನ್ನೇ ಯಾವಾಗಲೂ
ಪುರಸ್ಕರಿಸುತ್ತಿದ್ದ ಗಾಂಧಿಜಿ



ದೇಶಬಾಂಧವರನ್ನುದ್ದೇಶಿಸಿ
ಮಾತನಾಡುತ್ತಿರುವ ಗಾಂಧಿಜಿ



ಮೌಂಟ್‌ಬ್ಯಾಟನ್ ಮತ್ತು ಲೇಡಿ ಮೌಂಟ್‌ಬ್ಯಾಟನ್ ಜೊತೆಯಲ್ಲಿ



ದಕ್ಷಿಣ ಆಫ್ರಿಕದ ದರ್ಬಾನಿನಲ್ಲಿ
ವೃತ್ತಿನಿರತ ಗಾಂಧಿಜಿ




ದಕ್ಷಿಣ ಆಫ್ರಿಕದಿಂದ ಭಾರತಕ್ಕೆ
ಮರಳುತ್ತಿರುವ ಗಾಂಧಿಜಿ




ರಾಷ್ಟ್ರವನ್ನು ಮುನ್ನಡೆಸುವ
ಮಹಾಚೇತನವಾಗಿ ಗಾಂಧಿಜಿ




ಗಾಂಧಿಜಿ ಚಿಂತನಶೀಲ ಭಂಗಿಯಲ್ಲಿ








ಉಪ್ಪಿನ ಸತ್ಯಾಗ್ರಹದಲ್ಲಿ ಪಾಲುಗೊಂಡಿರುವ ಗಾಂಧಿಜಿ



ಗಾಂಧಿ ಮತ್ತು ನೆಹರೂ ಜುಲೈ,೧೯೪೬ರಲ್ಲಿ ಮುಂಬಯಿಯಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನದಲ್ಲಿ



ಗಾಂಧಿಜಿ ಅಂತಿಮ ಯಾತ್ರೆ



೧. ಪ್ರಸ್ತಾವನೆ

'ಗಾಂಧಿಯವರ ಜೀವನ ಒಂದು ಮಹಾಸಾಗರ, ಈ ಬಗ್ಗೆ ಒಂದು ಮಹಾಭಾರತವನ್ನು ಬರೆಯಬಹುದು. ಬರೆಯುವವನು ಮಾತ್ರ ಶ್ರೀ ವೇದವ್ಯಾಸನಾಗಿರಬೇಕು' ರಂಗನಾಥ ದಿವಾಕರರ ಈ ಹೇಳಿಕೆಯನ್ನು ಅನುಮೋದಿಸುತ್ತಾ ವೇದವ್ಯಾಸನಾಗಬಯಸದೆಯೇ ಗಾಂಧೀಜಿಯವರ ಸ್ವಾತಂತ್ರ್ಯಸಂಗ್ರಾಮದ ಸಂಕ್ಷಿಪ್ತ ಚಿತ್ರಣ ನೀಡುವ ಸಾಹಸ ನಡೆಸಿದ್ದೇನೆ.

ಒಬ್ಬ ವ್ಯಕ್ತಿ ಯಾವ ಆಡಂಬರವೂ ಇಲ್ಲದೆ, ಅಧಿಕಾರದ ದರ್ಪ ಸಹ ಇಲ್ಲದೆ, ಬರುವ ಆತ್ಮಶಕ್ತಿಯಿಂದಲೇ ಪ್ರಪಂಚವನ್ನೆಲ್ಲಾ ತನ್ನ ಪ್ರಭಾವಕ್ಕೆ ಒಳಪಡಿಸಬಲ್ಲನೆಂಬುದಕ್ಕೆ ಗಾಂಧೀಜಿಯವರ ಜೀವನವೇ ಸಾಕ್ಷಿ. ಅವರ ಈ ಸಾಧನೆಗೆ ಬಳಸಿದ ಅಸ್ತ್ರಗಳು ಎರಡು. ಮೊದಲನೆಯದು 'ಅಹಿಂಸೆ', ಎರಡನೆಯದು 'ಸತ್ಯಾಗ್ರಹ'. ಈ ಮಹಾಸ್ತ್ರಗಳನ್ನು ಪ್ರಾಯೋಗಿಕವಾಗಿ ದಕ್ಷಿಣ ಆಫ್ರಿಕಾದಲ್ಲಿ ಪ್ರಯೋಗಿಸಿ, ಸಫಲತೆ ಕಂಡು, ಅದನ್ನು ಸಮರ್ಥವಾಗಿ, ಹೆಚ್ಚು ಶಕ್ತಿಯುತವಾಗುವಂತೆ ಭಾರತದಲ್ಲಿ ಬಳಸಿ, ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಯಶಸ್ವಿಯಾದರು.

'ಗಾಂಧಿಯವರು ಕುಳಿತ ಸ್ಥಳ ದೇವಾಲಯವಾಗಿತ್ತು. ಅವರು ನಡೆದ ನೆಲ ಪವಿತ್ರವಾಗಿತ್ತು' ನೆಹರೂರವರ ಈ ಗೌರವಾಭಿಮಾನದ ಮಾತುಗಳ ಹಿನ್ನೆಲೆಯಲ್ಲಿ ಗಾಂಧಿಯವರ ಜೀವನವನ್ನು ಪೃಥಕ್ಕರಿಸಿ ನೋಡಿದಾಗ ಕಿಂಚಿತ್ತೂ ಉತ್ಪ್ರೇಕ್ಷೆಯಾಗಿ ಕಾಣಿಸದು.

ಅಹಿಂಸೆ, ಸತ್ಯಾಗ್ರಹ, ಸ್ವಾತಂತ್ರ್ಯ ಈ ಮೂರು ಸತ್ವಯುತ ಹಾಗೂ ಸ್ವತಂತ್ರ ಪದಗಳ ಪ್ರಭಾವಲಯದೊಳಗೇ ಸಿಲುಕಿ ಸಾಗುವ ಗಾಂಧೀಜಿಯವರ ಜೀವನವನ್ನು ಪರಾಮರ್ಶಿಸುವಾಗ ಅಹಿಂಸೆ, ಸತ್ಯಾಗ್ರಹ, ಸ್ವಾತಂತ್ರ್ಯ ಇವುಗಳ ಅರ್ಥ, ವ್ಯಾಪ್ತಿ ಹಾಗೂ ಮಹತ್ವವನ್ನು ಅರಿಯುವುದು ಒಳಿತು.

'ಅಹಿಂಸಾ ಪರಮೋಧರ್ಮಃ ; ಅಹಿಂಸಾ ಪರಮೋ ತಪಃ ; ಅಹಿಂಸಾ ಪರಮೋ ಸತ್ಯಂ ; ತತೋ ಧರ್ಮ ಪ್ರವರ್ತತೇ' ಮಹಾಭಾರತ (ಅನುಶಾಸನ

ಪರ್ವ) ದ ಈ ಉಕ್ತಿಗೆ 'ಬುದ್ಧ'ನ ಈ ಕೆಳ ಮಾತುಗಳು ಅರ್ಥಪೂರ್ಣ ವಿಶ್ಲೇಷಣೆ ನೀಡುತ್ತವೆ.

'ಮನುಷ್ಯನ ದೇಹಕ್ಕೆ ಎರಡು ಕಣ್ಣುಗಳಿರುವಂತೆ ಅವನ ಧರ್ಮಕ್ಕಿರುವ ಎರಡು ಕಣ್ಣುಗಳು 'ಅಹಿಂಸೆ' ಮತ್ತು 'ಸತ್ಯ'.

'ಅಹಿಂಸೆ'ಯ ಬಗ್ಗೆ ಗಾಂಧೀಜಿಯ ಅರ್ಥವಿವರಣೆ ಜೀವನಕ್ಕೆ ಹೆಚ್ಚು ಹತ್ತಿರವಾಗಿದೆ. ಅಷ್ಟೇ ಅಲ್ಲದೆ ನೀತಿಯುತ ಜೀವನಕ್ಕೆ ಮಾರ್ಗ ನಿರ್ದೇಶಿಸುತ್ತದೆ.

'ನಮ್ಮನ್ನು ಪ್ರೀತಿಸುವವರನ್ನು ಮಾತ್ರ ಪ್ರೀತಿಸಿದರೆ ಅದು 'ಅಹಿಂಸೆ' ಯಲ್ಲ. ನಮ್ಮನ್ನು ದ್ವೇಷಿಸುವವರನ್ನು ನಾವು ಪ್ರೀತಿಸುವುದು 'ಅಹಿಂಸೆ'. ಹಿಂಸೆ, ಶಕ್ತಿಹೀನರ ಅಸ್ತ್ರ ; 'ಅಹಿಂಸೆ' ಬಲಿಷ್ಠರ ಅಸ್ತ್ರ. ಅಹಿಂಸೆಯೇ ಪರಮ ಧರ್ಮ. ಅದಿಲ್ಲದೆ ಸತ್ಯದರ್ಶನ ಸಾಧ್ಯವಿಲ್ಲ'. ಹೀಗೆ ಗಾಂಧೀಜಿ ಪ್ರೀತಿ, ಸ್ನೇಹ ಮತ್ತು ಕರುಣೆಯ ಮೂರ್ತವೆತ್ತ ರೂಪವೇ 'ಅಹಿಂಸೆ'ಯೆಂದು ವ್ಯಾಖ್ಯಾನಿಸುತ್ತಾರೆ ಹಾಗೂ ತಮ್ಮ ಮೂಲೋದ್ದೇಶ 'ಸ್ವಾತಂತ್ರ್ಯ' ಗಳಿಸುವುದಕ್ಕಾಗಿ ಅವರು ಆರಿಸಿಕೊಂಡ ಸತ್ಪಥ 'ಅಹಿಂಸೆ'. ಉಪಯೋಗಿಸಿದ ವಜ್ರಾಯುಧ 'ಸತ್ಯಾಗ್ರಹ'.

'ಸತ್ಯಾಗ್ರಹ' ಈ ಶಬ್ದ ಹೊಸದು. ಸತ್ಯವಂತ, ಸತ್ಯಸಂಧ, ಸತ್ಯನಿಷ್ಠ, ಸತ್ಯಶೀಲ, ಸತ್ಯವಾದಿ ಇತ್ಯಾದಿ ಶಬ್ದಗಳು ಪ್ರಚಲಿತವಿವೆ. ಆದರೆ 'ಸತ್ಯಾಗ್ರಹ' ಇದು ಹೊಸ ಶಬ್ದ. ವಿಶಿಷ್ಟಾರ್ಥವುಳ್ಳದ್ದು. 'ಸತ್ಯಾಗ್ರಹ'ವೆಂದರೆ ಸತ್ಯವಾದದ ಆಗ್ರಹವಲ್ಲ. ಸತ್ಯವನ್ನು ಕುರಿತು ಅಹಿಂಸಾಯುಕ್ತವಾದ ಅಥವಾ ಅಹಿಂಸಾಮಯ ವಾದ 'ಆಗ್ರಹ' ಅಥವಾ ಹಟ. ಗಾಂಧೀಜಿ ಈ ಹೊಸ ಅಸ್ತ್ರವನ್ನು ತಮ್ಮ ಧಾರ್ಮಿಕ ಬತ್ತಳಿಕೆಯಿಂದ ಹೊರ ತೆಗೆದು ವೈಶಿಷ್ಟ್ಯಪೂರ್ಣ ರೀತಿಯಲ್ಲಿ ವಿಶಿಷ್ಟ ಸಂದರ್ಭದಲ್ಲಿ ಪ್ರಯೋಗಿಸಿ ತಮ್ಮ ಹಿರಿಮೆ ಮೆರೆದಿದ್ದಾರೆ. ಜಗದ್ವಿಖ್ಯಾತರಾಗಿದ್ದಾರೆ.

ಫ್ರೆಂಚ್ ಪತ್ರಕಾರ ಡೆನಿಸ್ ಬ್ರಹತ್‌ನ ಈ ಕೆಳಕಂಡ ಮಾತುಗಳು 'ಸತ್ಯಾಗ್ರಹ'ದ ಮಹತ್ವವನ್ನು ಎತ್ತಿಹಿಡಿದಿದೆ.

"'ಸತ್ಯಾಗ್ರಹ' ಅಹಿಂಸಾಮಯ ಆಂದೋಲನ. ಇದು ಭಾರತವು ವಿಶ್ವಕ್ಕೆ ಕೊಟ್ಟ ಕೊಡುಗೆ. ಒಬ್ಬ ಪಾಶ್ಚಾತ್ಯ ನಾಗರಿಕನಾದ ನನ್ನ ಮನಸ್ಸನ್ನು ಅದು ಹಿಡಿಯಿತು."

ಈ ಮಹಾನ್‌ಅಸ್ತ್ರ 'ಸತ್ಯಾಗ್ರಹ'ದ ಪ್ರಯೋಗಶಾಲೆ. ದಕ್ಷಿಣ ಆಫ್ರಿಕಾ ಎಂಬುದು ಗಾಂಧೀಜಿಯ ಜೀವನ ಅವಲೋಕಿಸಿದಾಗ ಕಂಡುಬರುತ್ತದೆ.

"'ಸ್ವಾತಂತ್ರ್ಯ'ವು ನನ್ನ ಜನ್ಮಸಿದ್ಧ ಹಕ್ಕು" ಎಂದು ಬಾಲಗಂಗಾಧರ ತಿಲಕ್ ಅವರು ಗುಡುಗಿದ್ದಾರೆ. "'ಸ್ವಾತಂತ್ರ್ಯ'ವು ನನ್ನ ಆತ್ಮಗೀತೆ" ಎಂದು ಇದರ ಸಾಧನೆಗಾಗಿಯೇ ಜೀವತೆತ್ತವರು ಸುಭಾಷ್‌ಚಂದ್ರ ಬೋಸ್.

'ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಸುಖ ಯಾವುದೂ ಇಲ್ಲ' ಎನ್ನುತ್ತದೆ ಮಹಾಭಾರತ. 'ಸ್ವಾತಂತ್ರ್ಯವೇ ಸುಖ; ಪರತಂತ್ರವೇ ದುಃಖ' ಅನ್ನುತ್ತಾನೆ ಮನು.

ಗಾಂಧೀಜಿ ಈ ಬಗ್ಗೆ ನುಡಿಯುತ್ತಾರೆ 'ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವನೋದ್ದೇಶ. ಅದಕ್ಕಾಗಿ ನಾನು ಸಾಯಲೂ ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೇ ಭರತಖಂಡ ಸತ್ಯ ಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು. ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ, ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ.......'

ಗಾಂಧೀಜಿ ಆಶಿಸಿದ್ದುದು, ಅಹರ್ನಿಶಿ ಭಾರತದಲ್ಲಿ ಇದಕ್ಕಾಗಿ ದುಡಿದಿದ್ದುದು ಕೇವಲ ರಾಜಕೀಯ ಸ್ವಾತಂತ್ರ್ಯ ಗಳಿಸುವುದಕ್ಕಾಗಿರಲಿಲ್ಲ. ಅವರು ಬಯಸಿದ್ದುದು ಸರ್ವರಿಗೂ ಉಪಯುಕ್ತವಾಗುವ, ಪ್ರತಿಯೊಬ್ಬರ ಆತ್ಮೋದ್ಧಾರಕ್ಕೆ ದಾರಿಮಾಡಿಕೊಡುವಂತಹ, ಅನುಭವಯೋಗ್ಯ ; ಹೊಣೆಗಾರಿಕೆ ಯುಕ್ತ, ಸಚ್ಚಾರಿತ್ರ್ಯ ಭರಿತ, ಮುಕ್ತ ವ್ಯಾವಹಾರಿಕ ವೈಯಕ್ತಿಕ ಸ್ವಾತಂತ್ರ್ಯ. ಇದು ರಾಜಕೀಯ ಸ್ವಾತಂತ್ರ್ಯಕ್ಕೆ ಪ್ರೇರಣೆ ನೀಡಿ, ಪೋಷಕ ಕಾರ್ಯವನ್ನೂ ಕೈಗೆತ್ತಿಕೊಂಡಾಗ 'ಸ್ವಾತಂತ್ರ್ಯ'ಕ್ಕೆ ಬೆಲೆ ಬರುತ್ತದೆ. ಆಗ 'ಸ್ವಾತಂತ್ರ್ಯ' 'ಸ್ವಚ್ಛಂದ'ವಲ್ಲ ಎಂಬ ಅರಿವು ಮೂಡುತ್ತದೆ. ಸ್ವಾತಂತ್ರ್ಯವನ್ನು ಒಂದು ಸೌಕರ್ಯವೆಂದಾಗಲಿ, ಸವಲತ್ತು ಎಂದಾಗಲಿ ಪರಿಗಣಿಸಿದರೆ ಆಗ ಅದು ಸ್ವಾತಂತ್ರ್ಯದ ಮೇಲೆಸಗಿದ ವ್ಯಭಿಚಾರವಾಗುತ್ತದೆ.

'ಸ್ವಾತಂತ್ರ್ಯ ಇಲ್ಲದವನಿಗೆ ಬೆಲೆಯಿಲ್ಲ' ಎಂಬ 'ರೂಸೋ' ನ ಮಾತು ರಾಷ್ಟ್ರಕ್ಕೂ ಅನ್ವಯಿಸುತ್ತದೆ. ಅಭೂತಪೂರ್ವ ಧಾರ್ಮಿಕ, ಸಾಂಸ್ಕೃತಿಕ ಹಾಗೂ

ಚಾರಿತ್ರಿಕ ಹಿನ್ನೆಲೆಯುಳ್ಳ ಈ ಭವ್ಯ ಭಾರತಕ್ಕೆ ವಜ್ರದ ಬೆಲೆಯನ್ನು ತಂದುಕೊಡುವ ಉದ್ದೇಶದಿಂದಲೇ ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದುದು. ಧುಮುಕಿದುದೊಂದೇ ಅಲ್ಲ. ಅಹಿಂಸಾತ್ಮಕ ಚಳುವಳಿಯಿಂದಲೇ ಸ್ವಾತಂತ್ರ್ಯ ಗಳಿಸಿಕೊಟ್ಟ ಹೆಗ್ಗಳಿಕೆಗೂ ಪಾತ್ರರಾದರು.

ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮದ ಮಜಲುಗಳನ್ನು ಈಗ ಒಂದೊಂದಾಗಿ ಅವಲೋಕಿಸೋಣ.

◆ ◆ ◆

ಜಾಡಮಾಲಿ ವೃತ್ತಿ

ಒಮ್ಮೆ ಒಬ್ಬ ವಿದೇಶಿ ಪ್ರಮುಖ ಗಾಂಧೀಜಿಯವರನ್ನು ಪ್ರಶ್ನಿಸಿದರು. "ಗಾಂಧೀಜಿ, ನಿಮ್ಮನ್ನು ಒಂದು ದಿನದ ಮಟ್ಟಿಗೆ ಭಾರತದ ವೈಸ್‌ರಾಯ್ ಆಗಿ ನೇಮಿಸಿದರೆ ನೀವು ಮಾಡುವ ಮೊದಲ ಕಾರ್ಯವೇನು ?"

ಗಾಂಧೀಜಿ ಥಟ್ಟನೆ ಉತ್ತರಿಸಿದರು.

"ವೈಸ್‌ರಾಯರ ಮನೆಯನ್ನು ಶುಚಿಗೊಳಿಸುವ ಜಾಡಮಾಲಿಗಳ ಗುಡಿಸಲುಗಳನ್ನು ಮೊದಲು ಶುಚಿಗೊಳಿಸುತ್ತೇನೆ."

"ನಿಮ್ಮನ್ನು ಇನ್ನೊಂದು ದಿನ ಅದೇ ಉದ್ಯೋಗದಲ್ಲಿ ಮುಂದುವರಿಸಿದರೆ ?"

ಮರುದಿನವೂ ನಾನು ಪ್ರಾರಂಭಿಸಿದ ಕಾರ್ಯವನ್ನು ಮುಂದುವರಿಸುತ್ತೇನೆ"

('ಹೀಗಿದ್ದರು ಬಾಪೂ', ಸಂಗ್ರಾಹಕ : ಟಿ. ವಿ. ವೆಂಕಟರಮಣಯ್ಯ)

೨. ಗಾಂಧೀಜಿಯ ಜನನ-ಬಾಲ್ಯ-ವಿದ್ಯಾಭ್ಯಾಸ

'ಗಾಂಧಿ' ಇದೊಂದು ಮನೆತನದ ಹೆಸರು. ಈ ಮನೆತನದವರು ಗುಜರಾತ್ ಪ್ರಾಂತದ ಪೋರ್‌ಬಂದರಿನಲ್ಲಿ ಸಣ್ಣ ಪ್ರಮಾಣದ ವ್ಯಾಪಾರದಲ್ಲಿ ತೊಡಗಿದ್ದರು. ಗಾಂಧಿಯ ತಾತ ಉತ್ತಮಚಂದ್ ಪೋರ್‌ಬಂದರ್ ಸಂಸ್ಥಾನದ ದಿವಾನರಾಗಿದ್ದು ರಾಜಕೀಯ ಕಾರಣದಿಂದಾಗಿ ಅದನ್ನು ಬಿಟ್ಟು ಬಂದು ಜುನಾಘಡ್‌ನಲ್ಲಿ ನೆಲೆಸಿದ್ದರು. ಗಾಂಧಿಯ ಹಿರಿಯರೆಲ್ಲಾ ದೈವಭಕ್ತರು, ಧರ್ಮನಿಷ್ಠರೂ ಆಗಿದ್ದರು.

ಉತ್ತಮ್‌ಚಂದ್ ಗಾಂಧಿಗೆ ಆರು ಜನ ಗಂಡುಮಕ್ಕಳಿದ್ದರು. ಈ ಗಂಡುಮಕ್ಕಳಲ್ಲಿ ಐದನೆಯವರಾದ ಕರಮ್‌ಚಂದ್‌ಗಾಂಧಿ. (ಇವರನ್ನು ಕಾಬಾಗಾಂಧಿಯೆಂದೂ ಕರೆಯುತ್ತಿದ್ದರು.) ರಾಜ್‌ಕೋಟ್ ಹಾಗೂ ಬಿಕನೀರ್ ಸಂಸ್ಥಾನಗಳಲ್ಲಿ ದಿವಾನರಾಗಿದ್ದರು. ನ್ಯಾಯತೀರ್ಮಾನದಲ್ಲಿ ಇವರು ಹೆಸರು ಗಳಿಸಿದ್ದರು. ಎಲ್ಲೆಡೆ ಇವರಿಗೆ ಅಪಾರ ಗೌರವವಿತ್ತು. ಕರಮ್‌ಚಂದ್ ಗಾಂಧಿಯವರ ವೈವಾಹಿಕ ಜೀವನ ಅಷ್ಟು ಸುಖಪ್ರದವಾಗಿರಲಿಲ್ಲ. ಹೆಂಡತಿಯರ ಅಕಾಲ ಮರಣದಿಂದಾಗಿ ಇವರು ನಾಲ್ಕು ಬಾರಿ ಮದುವೆಯಾಗಿದ್ದರು. ಮೊದಲ ಮತ್ತು ಎರಡನೆಯ ಹೆಂಡತಿಯರಿಂದ ಇವರಿಗೆ ಎರಡು ಹೆಣ್ಣು ಮಕ್ಕಳು ಜನಿಸಿದ್ದರು. ಕೊನೆಯ ಹೆಂಡತಿ ಪುತಲಿಬಾಯಿಯಿಂದ ಇವರಿಗೆ ಒಬ್ಬ ಮಗಳು ಹಾಗೂ ಮೂರು ಜನ ಪುತ್ರರು ಜನಿಸಿದ್ದರು. (ಮಗಳು; ಕಲಿತಾಬೆನ್ ; ಗಂಡುಮಕ್ಕಳು ; ಕರ್ಸನ್‌ದಾಸ್ ಗಾಂಧಿ, ಲಕ್ಷ್ಮೀದಾಸ್ ಗಾಂಧಿ; ಮೋಹನ್‌ದಾಸ್ ಗಾಂಧಿ) ಮೋಹನದಾಸ ಕರಮಚಂದ್ ಗಾಂಧಿಯೇ ಕೊನೆಯವರು. ಇವರು ಜನಿಸಿದ್ದು ಅಕ್ಟೋಬರ್ ೨, ೧೮೬೯, ಪೋರ್‌ಬಂದರಿನಲ್ಲಿ (ಸುಧಾಮಪುರಿ).

ಮೋಹನ್‌ದಾಸ್‌ರ ಪ್ರಾಥಮಿಕ ವಿದ್ಯಾಭ್ಯಾಸ ಪೋರ್‌ಬಂದರಿನಲ್ಲಿ, ಮಾಧ್ಯಮಿಕ ವಿದ್ಯಾಭ್ಯಾಸ ರಾಜ್‌ಕೋಟ್‌ನಲ್ಲಿ ನಡೆಯಿತು. ತಂದೆಯ ನ್ಯಾಯಪರತೆ, ತಾಯಿಯ ದೈವಭಕ್ತಿ, ಸತ್ಯನಿಷ್ಠೆ ಇವರಲ್ಲೂ ಹಾಸು ಹೊಕ್ಕಾಗಿ ಬಂದಿದ್ದವು. ಮನೆಯಲ್ಲಿ ಹರಿಕಥೆ, ಪುರಾಣ, ಪುಣ್ಯಕಥೆಗಳ ಪ್ರವಚನ ಆಗಾಗ್ಗೆ

ನಡೆಯುತ್ತಿದ್ದವು. ತಾಯಿಯಿಂದ ಕೇಳಿದ್ದ ಶ್ರವಣ ಪಿತೃಭಕ್ತಿಕಥೆ ಇವರ ಮೇಲೆ ಬಹಳ ಪರಿಣಾಮಬೀರಿತ್ತು. ನೋಡಿದ್ದ 'ಹರಿಶ್ಚಂದ್ರ' ನಾಟಕ ಇವರಿಗೆ ಸತ್ಯಸಂಧರಾಗಿರಲು ಪ್ರೇರಣೆ ನೀಡಿತ್ತು. ಏನೇ ಕಾರಣಕ್ಕೂ ಅಸತ್ಯ ನುಡಿಯಬಾರದೆಂದು ಮನಸ್ಸು ನಿರ್ಧರಿಸಿತ್ತು. ಬಾಲ್ಯದಲ್ಲೇ ಈ ನಿರ್ಧಾರ ಕಾರ್ಯರೂಪಕ್ಕೆ ಬರಲು ಶಾಲೆಯಲ್ಲಿ ನಡೆದ ಒಂದು ಘಟನೆ ಕಾರಣವಾಯಿತು.

ಒಮ್ಮೆ ಇವರ ಶಾಲೆಗೆ ಇನ್ಸ್‌ಪೆಕ್ಟರ್ ಪರಿಶೀಲನೆಗಾಗಿ ಬಂದರು. ಓದು, ಬರಹದ ಮಟ್ಟವನ್ನು ನಿರ್ಧರಿಸಲು ಹುಡುಗರಿಗೆ ಕೆಲವು ಪದಗಳನ್ನು ಬರೆಯಲು ತಿಳಿಸಿದರು. ಅದರಲ್ಲಿ ಕೆಟಲ್ (KETTLE) ಒಂದು ಶಬ್ದವಾಗಿತ್ತು. ಮೋಹನದಾಸ್ ತಪ್ಪಾಗಿ ಬರೆದಿರುವುದನ್ನು ಗಮನಿಸಿದ ಉಪಾಧ್ಯಾಯರು ಇವರಿಗೆ ಸನ್ನೆ ಮಾಡಿ ಪಕ್ಕದ ಹುಡುಗನನ್ನು ನೋಡಿ ಸರಿಪಡಿಸಿಕೊಳ್ಳಲು ತಿಳಿಸಿದರು. ಆದರೆ ಗಾಂಧಿ ಹಾಗೆ ಮಾಡಲಿಲ್ಲ. ಇನ್ಸ್‌ಪೆಕ್ಟರ್ ಹೋದ ಮೇಲೆ ಗಾಂಧಿಯನ್ನು ಮೂರ್ಖನೆಂದು ನಿಂದಿಸಿದರು. ತನಗೆ ಅವಮಾನ ಮಾಡಿದೆ ಯೆಂದು ಖಂಡಿಸಿದರು. ಆದರೆ ಇದರ ಪರಿಣಾಮ ಅವರ ಮೇಲೆ ಕಿಂಚಿತ್ತೂ ಆಗಿರಲಿಲ್ಲ. ತಪ್ಪಿಗೆ ದಂಡನೆಯಾಯಿತು ಎಂದು ಸಮಾಧಾನದಿಂದಲೇ ಇದ್ದರು. ಕಾಪಿ ಹೊಡೆಯುವುದು ತಪ್ಪು ಎಂದೇ ಅವರ ಮನಸ್ಸು ನುಡಿದಿತ್ತು. ಹೆಚ್ಚು ಬುದ್ಧಿವಂತನೆಂದು ಶಾಲೆಯಲ್ಲಿ ಹೆಸರು ಗಳಿಸದ ಇವನಿಗೆ ಆಟ ಪಾಠಗಳಲ್ಲೂ ಆಸಕ್ತಿ ಇರಲಿಲ್ಲ. ಸಂಕೋಚ ಪ್ರವೃತ್ತಿ ಮುನ್ನುಗ್ಗಿ ಹೋಗಲು ಯಾವಾಗಲೂ ಅಡ್ಡಿಪಡಿಸುತ್ತಿತ್ತು.

ಆ ದಿನಗಳಲ್ಲಿ ಬಾಲ್ಯವಿವಾಹ ರೂಢಿಯಲ್ಲಿತ್ತು. ಗಾಂಧಿಗೆ ಸುಮಾರು ೧೩ ವರ್ಷ ವಯಸ್ಸಾಗಿದ್ದಾಗಲೇ ಆತನ ವಿವಾಹ ಮಾಡಲು ಹಿರಿಯರು ನಿಶ್ಚಯಿಸಿದರು. ಅಷ್ಟು ಹೊತ್ತಿಗಾಗಲೇ ಗಾಂಧಿಯ ಅಣ್ಣಂದಿರಿಗೆ ವಿವಾಹ ಆಗಿ ಹೋಗಿತ್ತು. ಗಾಂಧಿಯ ವಿವಾಹ ಪೋರ್‌ಬಂದರಿನಲ್ಲಿದ್ದ ಕಸ್ತೂರಬಾ ಜೊತೆ ನಿಶ್ಚಯವಾಯಿತು. ತಂದೆ ಹಾಗೂ ಸೋದರಮಾವ ಇಬ್ಬರಿಗೂ ವಯಸ್ಸಾಗಿದ್ದುದರಿಂದ ಗಾಂಧಿಗೆ ಬೇಗನೆ ವಿವಾಹ ಮಾಡಿ ತಮ್ಮ ಒಂದು ಕರ್ತವ್ಯವನ್ನು ಪೂರೈಸಿಕೊಳ್ಳಲು ಉತ್ಸುಕರಾಗಿದ್ದರು. ರಾಜ್‌ಕೋಟ್‌ನಿಂದ ಪೋರ್‌ಬಂದರಿಗೆ ಗಾಡಿಯಲ್ಲಿ ಬರುವಾಗ ತಂದೆಯವರಿಗೆ ಗಾಡಿ ಮಗುಚಿ ಬಿದ್ದು ಗಾಯವಾಯಿತು. ಆದರೂ ಅವರು ಅದನ್ನು ತೋರ್ಪಡಿಸಿಕೊಳ್ಳದೆ

ಮದುವೆ ಸಮಾರಂಭದಲ್ಲಿ ಸಂತೋಷವಾಗಿಯೇ ಚಟುವಟಿಕೆಯಿಂದ ಓಡಾಡಿಕೊಂಡೇ ಇದ್ದು ಸಂಭ್ರಮಿಸಿದರು. ಕಸ್ತೂರಬಾಗೂ ಆಗ ಸುಮಾರು ೧೩ ವರ್ಷ. ಸಮವಯಸ್ಸಿನ ಇಬ್ಬರಿಗೂ ಮದುವೆ ಒಂದು ಆಟದಂತಿತ್ತು. ಹೊಸ ಒಡವೆ, ಹೊಸ ಬಟ್ಟೆ, ಊಟ ಉಪಚಾರ, ಸಂಬಂಧಿಕರ ಸಡಗರ ಕಸ್ತೂರಬಾ-ಗಾಂಧಿಗೆ ಸಂತಸ ತಂದಿತ್ತು. ಕಸ್ತೂರಬಾ ಅವರದು ಬಹು ಸಂಕೋಚ ಪ್ರವೃತ್ತಿ. ಇನ್ನೂ ಎಳೆಯವಯಸ್ಸಾಗಿದ್ದುದರಿಂದ ಏನೂ ಮಾಡಲು ನಾಚಿಕೆ. ಗಂಡನೊಡನೆ ಮಾತನಾಡಲು ಧೈರ್ಯವೇ ಬರುತ್ತಿರಲಿಲ್ಲ. ಆಟ, ಹಬ್ಬ ಹರಿದಿನಗಳಲ್ಲಿ ಸಂಬಂಧಿಕರೊಡನೆ ಒಡನಾಟ, ಸ್ನೇಹಿತೆಯರೊಡನೆ ಒಡನಾಡುವ ಬಯಕೆ ಮುಂತಾದ ಬಾಲ್ಯಪ್ರವೃತ್ತಿ ಗಾಂಧಿಗೆ ಮುಜುಗರ ಉಂಟುಮಾಡುತ್ತಿತ್ತು. ಈ ಬಗ್ಗೆ ಆಕೆಯೊಡನೆ ಗಾಂಧಿ ಜಗಳ ಸಹ ಆಡಬೇಕಾಗುತ್ತಿತ್ತು. ಕಸ್ತೂರಬಾ ಏನೂ ಓದದೆ ಇದ್ದುದು ಅರಿವಿದ್ದ ಗಾಂಧಿ ಆಕೆಗೆ ವಿದ್ಯಾಭ್ಯಾಸ ಮಾಡಿಸಲು ಪ್ರಯತ್ನಿಸಿದರು. ಸಾಂಪ್ರದಾಯಿಕ ಗೃಹದ ಚಟುವಟಿಕೆಗಳು, ಧಾರ್ಮಿಕ ಆಚರಣೆಗಳು ತಂದೆತಾಯಿಯರ ಶುಶ್ರೂಷೆ ಮುಂತಾದವುಗಳಲ್ಲೇ ಆಸಕ್ತಿ ಇದ್ದ ಕಸ್ತೂರಬಾ ಹೆಚ್ಚು ಓದಲು ಆಸಕ್ತಿ ತೋರಲಿಲ್ಲ. ಇದು ಗಾಂಧಿಗೆ ಕೊಂಚ ಬೇಸರ ತಂದರೂ, ಆಕೆಯ ಮೇಲಿನ ಆಸಕ್ತಿ ಇವರಿಗೆ ಕಡಿಮೆ ಆಗಿರಲಿಲ್ಲ.

ವಿವಾಹದ ಸಡಗರ, ಗಡಿಬಿಡಿ, ಓಡಾಟ ಹಾಗೂ ಮುಂದಿನ ಕೆಲದಿನಗಳ ಸಂಭ್ರಮದಿಂದಾಗಿ ಗಾಂಧಿಯ ಒಂದು ವರ್ಷದ ಓದು ಹಾಳಾಗಿತ್ತು. ಗಾಂಧಿಯ ಕೈಬರಹ ಚೆನ್ನಾಗಿಲ್ಲದ್ದರಿಂದ ಚಿತ್ರಕಲೆ ಕಲಿತರೆ ಇದು ಸುಧಾರಿಸಬಹುದೆಂದು ಅದನ್ನೂ ಕಲಿತರು. ಇವರದು ಧಾರ್ಮಿಕ, ಸಾಂಪ್ರದಾಯಿಕ ಮನೆತನವಾಗಿದ್ದುದ ರಿಂದ ಸಂಸ್ಕೃತ ಕಲಿಯುವುದು ಅನಿವಾರ್ಯವಾಗಿತ್ತು. ತಾಯಿಯದು ಬಹು ಸಂಪ್ರದಾಯಸ್ಥ ಜೀವನ. ಹಬ್ಬಹರಿದಿನಗಳ ಮಹತ್ವ ಹೆಚ್ಚಿನದು. ದೇವತಾ ಆರಾಧನೆ, ಭಜನೆ, ಉಪವಾಸ, ವ್ರತಾಚರಣೆ ಒಂದಲ್ಲ ಒಂದು, ದಿನವೂ ಮನೆಯಲ್ಲಿ ನಡೆಯುತ್ತಲೇ ಇರುತ್ತಿತ್ತು. ಇವುಗಳ ಪ್ರಭಾವವೂ ಗಾಂಧಿಯ ಮನಸ್ಸಿನ ಮೇಲೆ ಆಗಿದ್ದು ಧಾರ್ಮಿಕ ಪ್ರವೃತ್ತಿಯನ್ನು ಉತ್ತೇಜಿಸಿತ್ತು.

ಶಾಲೆಯಲ್ಲಿ ಗಾಂಧಿ ಮಂದಬುದ್ಧಿಯ ವಿದ್ಯಾರ್ಥಿಯೆಂದೇ ಪರಿಗಣಿತವಾಗಿದುದ್ದರಿಂದ ಬುದ್ಧಿವಂತ ವಿದ್ಯಾರ್ಥಿಗಳನ್ನು ಕಂಡರೆ ಇವರಿಗೆ ಈರ್ಷೆಯಾಗುತ್ತಿತ್ತು. ಆದರೆ ಅವರನ್ನು ಸರಿಗಟ್ಟುವ ಅಥವಾ ಮೀರಿಸುವ

ಪ್ರವೃತ್ತಿ ಬೆಳೆಯುದಾಗಿತ್ತು. ಹೆಂಡತಿಯ ಕಡೆಯ ಒಲುವು ವಯಸ್ಸು ಬೆಳೆದಂತೆಲ್ಲಾ ವೃದ್ಧಿಸತೊಡಗಿತ್ತು. ಹೊರಗಿನ ಆಕರ್ಷಣೆಗಳತ್ತ ಮನಸ್ಸು ಹರಿದಾಡತೊಡಗಿತ್ತು. ಈ ಮಧ್ಯೆ ಗಾಂಧಿಗೆ ಅವರ ಬಂಧುವಿನ ಒಬ್ಬ ಮಿತ್ರನ ಪರಿಚಯವಾಯಿತು. ಆತನೊಡನೆ ಆತ್ಮೀಯ ಸಂಬಂಧ ಬೆಳೆಸಿಕೊಳ್ಳುವುದು ಮನೆಯುವರಿಗೆ ಯಾರಿಗೂ ಇಷ್ಟವಿರಲಿಲ್ಲ. ಆದರೆ ಗಾಂಧಿಗೆ ಆತನ ಸ್ನೇಹ ಹಿಡಿಸಿತ್ತು. ಆತನನ್ನು ಸುಧಾರಿಸಲೇ ಆತನ ಸ್ನೇಹ ಬೆಳೆಸಿದ್ದೇನೆಂದು ಮನೆಯವರನ್ನು ಸಮಾಧಾನ ಮಾಡಿದ್ದರು. ಇದು ಸುಳ್ಳೆಂದು ಗಾಂಧಿಗೆ ಅರಿವಿದ್ದರೂ ಏಕೋ ಮನಸ್ಸು ಆತನತ್ತಲೇ ಆಕರ್ಷಿತಗೊಂಡಿತ್ತು. ಆತ ಹೇಳುತ್ತಿದ್ದುದೆಲ್ಲಾ ಸರಿ ಎಂದು ಕಾಣಿಸುತ್ತಿತ್ತು.

'ಗಾಂಧಿ, ಬ್ರಿಟಿಷರು ಏಕೆ ಅಷ್ಟು ದಷ್ಟಪುಷ್ಟರಾಗಿದ್ದಾರೆ, ಶಕ್ತಿವಂತರಾಗಿದ್ದಾರೆ ನಿನಗೆ ಗೊತ್ತಾ ?' ಸ್ನೇಹಿತನ ಪ್ರಶ್ನೆಗೆ ಗಾಂಧಿಗೆ ತಕ್ಷಣ ಉತ್ತರ ಹೊಳೆಯಲಿಲ್ಲ.

"ಅವರು ಹೊರದೇಶದಿಂದ ಬಂದಿದ್ದಾರೆ. ಅಲ್ಲಿಯ ವಾತಾವರಣ ಅವರನ್ನು ಹಾಗೆ ಬೆಳೆಸಿದೆ."

"ಇಲ್ಲಾ ಗಾಂಧಿ, ಅವರು ಮಾಂಸ ತಿನ್ನುತ್ತಾರೆ. ಮಾಂಸ ತಿಂದಷ್ಟೂ ನಮ್ಮ ಮಾಂಸಖಂಡಗಳು ಬಲಿಷ್ಠವಾಗುತ್ತವೆ. ದೈಹಿಕ ಶಕ್ತಿ ಹೆಚ್ಚುತ್ತದೆ. ಎಂತಹ ಕಷ್ಟ ಬಂದರೂ ಎದುರಿಸುವ ಶಕ್ತಿ ಬರುತ್ತದೆ".

'ಇರಬಹುದು'

'ಇರಬಹುದು' ಅಲ್ಲಾ, ಅದೇ ಸತ್ಯ. ಅವರು ಅಷ್ಟು ಬಲಿಷ್ಠರಾಗಿರುವುದರಿಂದಲೇ ಅವರು ನಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ನಮ್ಮನ್ನು ಆಳುಗಳಂತೆ ನೋಡಿಕೊಳ್ಳುತ್ತಿದ್ದಾರೆ.

"ಹೌದು..... ಹೌದು....."

"ಅವರನ್ನು ಎದುರಿಸಬೇಕಾದರೆ, ಅವರನ್ನು ನಮ್ಮ ದೇಶದಿಂದ ಹೊರಗಟ್ಟಬೇಕಾದರೆ, ನಾವೂ ಬಲಿಷ್ಠರಾಗಬೇಕು"

"ಹೌದು..... ಹೌದು..... ಬಲಿಷ್ಠರಾಗಬೇಕು".

"ಬಲಿಷ್ಠರಾಗಬೇಕಾದರೆ ಮಾಂಸ ತಿನ್ನಲೇಬೇಕು".

"ಅಯ್ಯೋ, ಅಯ್ಯೋ, ಅದು ನಮ್ಮನೆಯಲ್ಲಿ ಸಾಧ್ಯವಿಲ್ಲ."

"ಬ್ರಿಟಿಷರ ಆಳಾಗಿರುವುದು ನಿನಗೆ ಇಷ್ಟವೇ ?"

"ಖಂಡಿತಾ ಇಲ್ಲ. ಹಾಗಾದರೆ ಮೊದಲು ನೀನು ಬಲಿಷ್ಠನಾಗು"

"ಅಪ್ಪ, ಅಮ್ಮನಿಗೆ ಇದು ಇಷ್ಟವಾಗುವುದಿಲ್ಲ. ಅವರಿಗೆ ಇಷ್ಟ ಇಲ್ಲದ್ದನ್ನು ನಾನು ಖಂಡಿತಾ ಮಾಡಲಾರೆ. ಹಾಗೆ ಮಾಡಿದರೆ ಅವರ ಮನಸ್ಸು ನೋಯುತ್ತದೆ."

"ಅವರಿಗೆ ನೋವಾಗದಂತಹ ಒಂದು ಉಪಾಯ ಮಾಡೋಣ".

"ಏನು?"

"ಮನೆಯಲ್ಲಿ ಈ ಬಗ್ಗೆ ಚಕಾರ ಎತ್ತಬೇಡ. ಮಾತಾಡುವಾಗೆಲ್ಲಾ ಮಾಂಸದ ಬಗ್ಗೆ ಜಿಗುಪ್ಸೆ ತೋರಿಸು. ಹೀಗೆ ಮಾಡುವವರು ಅಧರ್ಮಿಗಳು, ಅನಾಚಾರಿಗಳು ಎಂದು ಜೋರಾಗಿ ಕೂಗಾಡು. ನಾನು ಮನೆಯ ಹೊರಗೇ ಮಾಂಸ ತಿನ್ನಲು ವ್ಯವಸ್ಥೆ ಮಾಡುತ್ತೇನೆ. ಈ ಬಗ್ಗೆ ಕಿಂಚಿತ್ತೂ ಮನೆಯವರಿಗೆ ಸಂಶಯ ಬರದಂತೆ ನಾನು ನೋಡಿಕೊಳ್ಳುತ್ತೇನೆ. ಬ್ರಿಟಿಷರನ್ನು ಓಡಿಸುವುದು ನಮಗೆ ಮುಖ್ಯ. ದೇಶದ ಹಿತದೃಷ್ಟಿಯಿಂದ ನಾವು ಬಲಶಾಲಿಗಳಾಗುವುದು ಅನಿವಾರ್ಯ" ಮುಂತೆಲ್ಲಾ ಹೇಳಿ ಗಾಂಧಿಯ ಮನಸ್ಸನ್ನು ಮಲಿನಗೊಳಿಸಲು ಆತ ಸಮರ್ಥನಾದ.

ಗಾಂಧಿ ಆತನೊಡನೆ ಸೇರಿ ಹಲವು ಬಾರಿ ಮಾಂಸ ಸೇವಿಸಿದರು. ಸೇವಿಸುವಾಗೆಲ್ಲಾ ಮನಸ್ಸು ಅಳುಕುತ್ತಲೇ ಇತ್ತು. ಮನೆಯವರಿಗೆ ಹಾಗೂ ವೈದಿಕ ಸಮಾಜಕ್ಕೆ ಮೋಸ ಮಾಡುತ್ತಿದ್ದೇನೆಂದು ಮನಸ್ಸು ನೊಂದುಕೊಳ್ಳುತ್ತಲೇ ಇತ್ತು. ಪ್ರತಿ ಸಾರಿ ತಿನ್ನುವಾಗಲೂ ಇದೇ 'ಕೊನೆಸಾರಿ' ಎಂದು ನಿರ್ಧರಿಸುತ್ತಿದ್ದರು. ಆದರೆ ಸ್ನೇಹಿತನ ಜೊತೆ ಸೇರಿದಾಗ ಮಾಂಸಭಕ್ಷಣೆ ಕೆಲದಿನ ಮುಂದುವರಿದೇ ಹೋಯಿತು.

ಒಮ್ಮೆ ಹೀಗೆ ದುಶ್ಚಟಕ್ಕೆ ಬಲಿಯಾದ ಮನಸ್ಸು ಬಹುಬೇಗ ಇದಕ್ಕೆ ದಾಸನಾಗಿ ಹೋಗುತ್ತದೆ. ಅಳುಕುತ್ತಲೇ ಈ ದಾರಿಯಲ್ಲಿ ಮುಂದುವರಿಯುತ್ತಲೇ ಹೋಗುತ್ತದೆ. ಹೀಗೇ ಆಯಿತು. ಗಾಂಧಿಯು ಸಂಬಂಧಿಕರೊಬ್ಬರ ಸಹವಾಸದಿಂದ ಬೀಡಿ ಸೇದುವ ಚಟಕ್ಕೆ ಬಲಿಯಾದರು. ಇದಕ್ಕಾಗಿ ದುಡ್ಡು ಹೊಂಚಲು ಮನೆಯಲ್ಲಿ ಸಣ್ಣಪುಟ್ಟ ಕಳ್ಳತನ ಪ್ರಾರಂಭಿಸಿ, ಕೊನೆಗೆ ಮನೆಯ ನೌಕರರ ಹಣ ಕದಿಯುವತನಕ ಈ ದುಶ್ಚಟ ಮುಂದುವರಿಯಿತು. ಇದನ್ನು ಪ್ರತೀ ಸಲ ಮಾಡುವಾಗಲೂ ಮನಸ್ಸು ಅಳುಕುತ್ತಿತ್ತು. ಪಾಪಪ್ರಜ್ಞೆ ಕಾಡುತ್ತಿತ್ತು. ಆದರೂ

ಇದನ್ನು ಹತ್ತಿಕ್ಕಲು ಗಾಂಧಿಗೆ ಬಹುದಿನ ತೆಗೆದುಕೊಂಡಿತು. ಒಮ್ಮೆ ಗಾಂಧಿ ತನ್ನ ಅಣ್ಣ ಲಕ್ಷ್ಮೀದಾಸ್ ಗಾಂಧಿಯ ಚಿನ್ನದ ಕಡಗವನ್ನು ಮುರಿದು ಅದನ್ನು ಮಾರಿ ಚಟ ತೀರಿಸಿಕೊಳ್ಳುವ ಹಂತಕ್ಕೆ ಹೋಯಿತು. ಆದರೆ ಇದನ್ನು ಮಾಡಿದ ಮೇಲೆ ಗಾಂಧಿಯ ಮನಸ್ಸು ಜಿಗುಪ್ಸೆಗೊಂಡಿತು. ಇನ್ನೆಂದೂ ಯಾವ ಕಾರಣಕ್ಕೂ ಕಳ್ಳತನ ಮಾಡದಿರುವ ಬಗ್ಗೆ ನಿಶ್ಚಯಿಸಿ, ಪ್ರಾಯಶ್ಚಿತ್ತವಾಗಿ ತನ್ನ ತಂದೆಯ ಮುಂದೆ ಈ ತಪ್ಪನ್ನು ಒಪ್ಪಿಕೊಂಡು ಕ್ಷಮಾಪಣೆ ಕೇಳಲು ಸಿದ್ಧರಾದರು. ಆಗ ತಂದೆ ಕಾಯಿಲೆ ಮಲಗಿದ್ದರು. ಅವರ ಬಳಿ ಹೋಗಿ ತಪ್ಪನ್ನು ಒಪ್ಪಿಕೊಳ್ಳಲು ಹಲವು ಬಾರಿ ಪ್ರಯತ್ನಿಸಿದರು. ಆದರೆ ಧೈರ್ಯ ಬರಲಿಲ್ಲ. ಕಾಗದ ಬರೆದು ಅದನ್ನು ತಂದೆಯ ಹಾಸಿಗೆಯ ಮುಂದಿರಿಸಿ ತಲೆ ತಗ್ಗಿಸಿ ನಿಂತರು. ತಂದೆ ಅದನ್ನು ತೆಗೆದುಕೊಂಡು ಓದಿದಾಗ ಅವರ ಕಣ್ಣಿನಿಂದ ನಾಲ್ಕು ಹನಿ ತೊಟ್ಟಿಕ್ಕಿತು. ಸುಮ್ಮನೆ ಮಗನನ್ನು ಹನಿದುಂಬಿದ ಕಣ್ಣಿನಿಂದ ನೋಡಿದರು. ಕಾಗದವನ್ನು ಹರಿದು ತುಂಡು ತುಂಡು ಮಾಡಿ ಬದಿಗೆಸೆದರು. ಮತ್ತೊಂದು ಬದಿಗೆ ಹೊರಳಿ ಬಿಕ್ಕಿಬಿಕ್ಕಿ ಅಳ ಹತ್ತಿದರು. ಗಾಂಧಿಗೂ ದುಃಖವನ್ನು ತಡೆಯಲಾಗಲಿಲ್ಲ. ಗೋಳೋ ಎಂದು ಅತ್ತರು. ಕಣ್ಣೀರು ತಂದೆಯ ಪಾದ ತೊಳೆಯಿತು.

ಗಾಂಧಿ ಶುದ್ಧವಾದರು. ತಂದೆಯ ನಿರ್ಮಲ ಪ್ರೇಮದ ಕಣ್ಣೀರು ಇವರ ಮನಸ್ಸಿನ ಎಲ್ಲಾ ಮಾಲಿನ್ಯವನ್ನು ತೊಳೆದಿತ್ತು.

ಮೌನ ಮಾಣಿಕ್ಯ. ಮನದ ಮಾಲಿನ್ಯವನ್ನು ತೊಳೆಯುವ ಪವಿತ್ರ 'ಗಂಗೆ'-ಕಣ್ಣೀರು ಎಂದು ಅರ್ಥವಾಗಿತ್ತು.

ಗಾಂಧಿಯ ತಂದೆ ಮೂಲವ್ಯಾಧಿಯಿಂದ ಬಹಳ ದಿನಗಳಿಂದ ನರಳುತ್ತಿದ್ದುದು ಇದೀಗ ಅದು ಕೆರಳಿ ಪ್ರಕೋಪಕ್ಕೆ ಹೋಗಿತ್ತು. ಗಾಂಧಿ ತನ್ನೆಲ್ಲಾ ಪಾಪವನ್ನು ತೊಳೆದುಕೊಳ್ಳುವ ಒಳ್ಳೆಯ ಅವಕಾಶ ಲಭಿಸಿದೆಯೆಂದು ತಂದೆಯ ಆರೈಕೆಗೆ ಟೊಂಕ ಕಟ್ಟಿ ನಿಂತರು. ವ್ರಣವನ್ನು ತೊಳೆಯುವುದು, ಮುಲಾಮು ಹಚ್ಚುವುದು ಮುಂತಾದ ಕೆಲಸಗಳನ್ನು ಬಹಳ ಆಸ್ಥೆಯಿಂದ ಮಾಡತೊಡಗಿದರು. ಇದರಿಂದ ಗಾಂಧಿಯ ಮನಸ್ಸಿಗೆ ಕೊಂಚ ಸಮಾಧಾನ ಲಭಿಸತೊಡಗಿತು.

ತಂದೆಯ ಅಂತಿಮದಿನ ಆ ರಾತ್ರಿ! ಗಾಂಧಿ ಬಹಳ ಹೊತ್ತು ತಂದೆಯ ಪಾದವನ್ನು ಒತ್ತುತ್ತ ಕುಳಿತಿದ್ದರು. ಸುಮಾರು ೧೧-೧೨ ಗಂಟೆಯ ಹೊತ್ತಿಗೆ

ಗಾಂಧಿಯ ಚಿಕ್ಕಪ್ಪ ಒಳಗೆ ಬಂದು ಗಾಂಧಿಗೆ ಹೋಗಿ ಮಲಗಲು ತಿಳಿಸಿದರು. ಗಾಂಧಿ ತನ್ನ ಕೊಠಡಿಗೆ ಹೋಗಿ ಅದೇತಾನೇ ಮಲಗಿಕೊಂಡಿದ್ದರು. ಆಳು ಬಂದು ಬಾಗಿಲು ಬಡಿದ. "ಬೇಗ ಬನ್ನಿ ಮಾಲಿಕ್ ಎಂದು ಗಡಬಡಿಸಿದ".

ಗಾಂಧಿ ಎದ್ದು ತಂದೆಯ ಕೊಠಡಿಯ ಬಳಿ ಹೋದರು. ಚಿಕ್ಕಪ್ಪ ಹನಿದುಂಬಿದ ಕಣ್ಣನ್ನು ಗಾಂಧಿಯತ್ತ ಹರಿಸಿ ಗದ್ಗದ ಕಂಠದಿಂದ ನುಡಿದರು.

"ತಂದೆ ನಮ್ಮನ್ನೆಲ್ಲಾ ಬಿಟ್ಟು ಹೊರಟು ಹೋದರು."

ಗಾಂಧಿಗೆ ದುಃಖವನ್ನು ತಡೆಯಲಾಗಲಿಲ್ಲ. ತಂದೆಯ ಪಾದದ ಮೇಲೆ ತಲೆ ಇಟ್ಟು ಗೋಳೋ ಎಂದು ರೋಧಿಸಿದರು.

ಅಂತಿಮ ಕ್ಷಣದಲ್ಲಿ ತಂದೆಯ ಬಳಿ ತಾನು ಇರದೇ ಹೋದೆನಲ್ಲಾ ಎಂಬ ದುಃಖ ಅವರನ್ನು ಬಹಳ ದಿನ ಕಾಡುತ್ತಿತ್ತು. ತಾಯಿ ಹಾಗೂ ತಂದೆ ದಿನವೂ ಪಠಿಸುತ್ತಿದ್ದ 'ರಾಮನಾಮ' ಇವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿತ್ತು. ಅದನ್ನು ಇವರೂ ಪಠಿಸ ಹತ್ತಿದಾಗ ಮನಸ್ಸಿಗೆ ನೆಮ್ಮದಿ ಕಾಣಿಸತೊಡಗುತ್ತಿತ್ತು. ಈ ರಾಮನಾಮ ಪಠನವನ್ನು ಗಾಂಧಿ ತಮ್ಮ ದಿನ ದಿನನಿತ್ಯದ ಕಾರ್ಯಕ್ರಮವಾಗಿ ರೂಪಿಸಿಕೊಂಡು, ತಮ್ಮ ಅಂತ್ಯದ ಕ್ಷಣದವರೆಗೂ ಪಾಲಿಸಿಕೊಂಡು ಬಂದರು.

◆ ◆ ◆

೩. ವಿದೇಶದಲ್ಲಿ ಉನ್ನತ ವ್ಯಾಸಂಗ

೧೮೮೭ ರಲ್ಲಿ ಗಾಂಧಿ ಮೆಟ್ರಿಕ್ ಪಾಸಾದ ನಂತರ ಮುಂದಿನ ಓದಿಗಾಗಿ ಭಾವನಗರ ಕಾಲೇಜ್ ಸೇರಿದರು. ಅಲ್ಲಿನ ಒಂದು ವರ್ಷದ ಓದು ಮುಗಿಸಿ ಮನೆಗೆ ಬಂದಿದ್ದಾಗ, ಮನೆಗೆ ಬಹು ಆತ್ಮೀಯರಾಗಿದ್ದ ಮಾವಜಿದವೆ ಬಂದಿದ್ದರು. ಅವರು ಗಾಂಧಿಯ ಬಗ್ಗೆ ವಿಚಾರಿಸಿ ನುಡಿದರು.

'ಗಾಂಧಿ, ಈಗ ಕಾಲ ಬದಲಾಗಿ ಹೋಗಿದೆ. ನಿನ್ನ ತಂದೆಯಂತೆ ನೀನು ಸುಲಭವಾಗಿ ದಿವಾನ್ ಆಗಲಾರೆ. ಅದಕ್ಕೆ ಹೆಚ್ಚಿನ ಓದು ಅಗತ್ಯವಿದೆ. ನೀನ್ಯಾಕೆ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಆಗಿ ಬರಬಾರದು ?'

"ನನಗೆ ಡಾಕ್ಟರಾಗಲು ಇಷ್ಟ" ಗಾಂಧಿ ನುಡಿದರು :

"ಡಾಕ್ಟರಾದರೆ ನೀನು ದಿವಾನ್ ಆಗಲಾರೆ. ಆದ್ದರಿಂದ ನಿನ್ನ ಭವಿಷ್ಯದ ದೃಷ್ಟಿಯಿಂದ ನೀನು ಬ್ಯಾರಿಸ್ಟರ್ ಆದರೇ ಅನುಕೂಲ. ನನ್ನ ಮಗ ಕೇವಲ್‌ರಾಮ್ ರೀತ್ಯ ಅಲ್ಲಿನ ಓದು ಬಹು ಸುಲಭವಂತೆ, ನೀನು ಅದನ್ನೇ ಪಾಸು ಮಾಡಿಕೊಂಡು ಬಾ".

ಮಾವಜಿಯ ಈ ಸಲಹೆ ಗಾಂಧಿಗಲ್ಲದೆ ಮನೆಯಲ್ಲಿ ಎಲ್ಲರಿಗೂ ಹಿಡಿಸಿತು. ಅಣ್ಣನಿಗೂ ತಮ್ಮ ವಿದೇಶದಲ್ಲಿ ಓದಿ ಬಂದು ಕೈ ತುಂಬಾ ಹಣ ಸಂಪಾದಿಸಲಿ ಎಂಬ ಆಸೆ ಇತ್ತು. ಆದರೆ ಸದ್ಯದ ಆಗಿನ ಪರಿಸ್ಥಿತಿಯಲ್ಲಿ ಈ ಓದಿಗೆ ಕಳುಹಿಸಲು ಹಣ ಹೊಂದಿಸುವುದು ಸಮಸ್ಯೆಯಾಗಿತ್ತು.

ಗಾಂಧಿ ತಮ್ಮ ಪತ್ನಿಯ ಒಡವೆಗಳನ್ನು ಮಾರಿ ಹಣ ಹೊಂದಿಸುವ ಸಲಹೆ ನೀಡಿದರು. ಅದು ಅಣ್ಣನಿಗೆ ಸಮ್ಮತವಾಗಲಿಲ್ಲ. ಕಷ್ಟಪಟ್ಟು ಅವರೇ ಹಣವನ್ನು ಕೂಡಿಸಿದರು.

ತಾಯಿಗೆ ಮಗ ವಿದೇಶಕ್ಕೆ ಹೋದರೆ ಕೆಟ್ಟು ಹೋಗುತ್ತಾನೆಂಬ ಭಯ. ತಾಯಿ ಮಗನನ್ನು ಹತ್ತಿರ ಕೂಡಿಸಿಕೊಂಡು ಹೇಳಿದರು,

"ಮಗು, ಅಲ್ಲಿಗೆ ಹೋದವರು ಮಾಂಸ ತಿನ್ನುತ್ತಾರಂತೆ. ಹೆಂಡ ಕುಡಿಯುತ್ತಾರಂತೆ. ಬೇರೆ ಹೆಂಗಸಿನ ಸಹವಾಸ ಸಹ ಮಾಡುತ್ತಾರಂತೆ. ನಿನ್ನನ್ನು

ಕಳುಹಿಸಲು ನನಗೆ ಭಯವಾಗುತ್ತಿದೆ. ನಿನ್ನ ಹೆಂಡತಿ ಇನ್ನೂ ಚಿಕ್ಕವಳು, ಅವಳನ್ನು ನೀನು ಬಿಟ್ಟಿರುವುದೂ ಕಷ್ಟವಾಗಬಹುದು."

"ಇಲ್ಲಾ ಅಮ್ಮಾ, ಓದಿಗಾಗಿ ನಾನು ಎಲ್ಲಾ ತ್ಯಾಗಕ್ಕೂ ಸಿದ್ಧ. ಮಾಂಸ ತಿನ್ನುವುದಿಲ್ಲ. ಹೆಂಡ ಮುಟ್ಟುವುದಿಲ್ಲ. ಬೇರೆ ಹೆಂಗಸಿನ ಸಹವಾಸ ಮಾಡುವುದಿಲ್ಲ".

"ಸರಿ, ಹಾಗಾದರೆ ನೀನು ನಮ್ಮ ಗುರುಗಳ ಮುಂದೆ ಈ ಬಗ್ಗೆ ಪ್ರಮಾಣ ಮಾಡು. ಆಗ ನನಗೆ ಧೈರ್ಯ ಬರುತ್ತದೆ".

ಗಾಂಧಿ, ತಾಯಿ ಮತ್ತು ಕುಲಪುರೋಹಿತರ ಮುಂದೆ ಪ್ರಮಾಣ ಮಾಡಿ ಇಬ್ಬರಿಂದಲೂ ಆಶೀರ್ವಾದ ಸ್ವೀಕರಿಸಿ ವಿದೇಶಕ್ಕೆ ಹೋಗಲು ತಯಾರಿ ನಡೆಸತೊಡಗಿದರು.

ಮುಂಬೈಯಿಂದ ಹೊರಡುವ ಜಹಜಿನಲ್ಲಿ ಗಾಂಧಿ ಪಯಣಿಸ ಬೇಕಾಗಿದ್ದುದರಿಂದ, ಅಣ್ಣನ ಜೊತೆಯಲ್ಲಿ ಗಾಂಧಿ ರಾಜ್‌ಕೋಟ್‌ನಿಂದ ಮುಂಬೈಗೆ ಬಂದು ಸ್ನೇಹಿತರ ಮನೆಯಲ್ಲಿ ತಂಗಿದರು. ಜೂನ್, ಜುಲೈ ತಿಂಗಳಲ್ಲಿ ಸಮುದ್ರದಲ್ಲಿ ಭಾರಿ ಅಬ್ಬರದ ಅಲೆಗಳ ಆರ್ಭಟವಿರುವುದರಿಂದ ಸಮುದ್ರ ಪ್ರಯಾಣಕ್ಕೆ ಆ ಸಮಯ ಸರಿಯಲ್ಲವೆಂದು, ನವಂಬರ್ ಉತ್ತಮವೆಂದು ಸ್ನೇಹಿತರು ತಿಳಿಸಿದರು. ಆದ್ದರಿಂದ ಗಾಂಧಿಯನ್ನು ಸ್ನೇಹಿತರ ಮನೆಯಲ್ಲೇ ಇಳಿಸಿ, ಅಣ್ಣ ಲಕ್ಷ್ಮೀದಾಸ್ ರಾಜ್‌ಕೋಟ್‌ಗೆ ಹಿಂತಿರುಗಿದರು. ಇದೇ ಸಮಯದಲ್ಲಿ ಊರಿನಲ್ಲಿ ಧಾರ್ಮಿಕ ಮುಖಂಡರು ಗಾಂಧಿ ವಿದೇಶಕ್ಕೆ ಹೋಗುವುದನ್ನು ವಿರೋಧಿಸಿದರು. ಗಾಂಧಿ ಮತ್ತು ಅವರ ಅಣ್ಣನಿಗೆ ವಿದೇಶ ಪ್ರಯಾಣ ನಿಲ್ಲಿಸುವುದು ಇಷ್ಟವಿರಲಿಲ್ಲ. ಬನಿಯಾಸಮಾಜದವರು ಗಾಂಧಿಗೆ ಬಹಿಷ್ಕಾರ ಹಾಕಿದರು. ಗಾಂಧಿ ಮತ್ತು ಅವರ ಅಣ್ಣ ಈ ಬಗ್ಗೆ ಚಿಂತಿಸಲಿಲ್ಲ.

ಹದಿನೆಂಟು ವರ್ಷದ ಗಾಂಧಿ, ತನ್ನ ಹೆಂಡತಿ ಮತ್ತು ಚಿಕ್ಕ ಮಗುವನ್ನು ರಾಜ್‌ಕೋಟ್‌ನಲ್ಲೇ ಬಿಟ್ಟು ದಿನಾಂಕ ೪, ಸೆಪ್ಟೆಂಬರ್ ೧೮೮೮ರಂದು ಮುಂಬಯಿ ಯಿಂದ ಜುನಾಘಡ್‌ನ ವಕೀಲ ಟಿ. ಮಜುಂದಾರ್‌ರ ಜೊತೆಯಲ್ಲಿ ಜಹಜಿನಲ್ಲಿ ಲಂಡನ್ ಅತ್ತ ಪಯಣ ಬೆಳೆಸಿದರು.

ಹಡಗು ಸೌತ್‌ಹ್ಯಾಂಪ್ಟನ್ ಬಂದರಿನಲ್ಲಿ ಬಂದಿಳಿದಾಗ ಇವರನ್ನು ಡಾ. ಪಿ. ಮೆಹತಾ ಎಂಬುವವರು ಸ್ವಾಗತಿಸಿ ಮನೆಗೆ ಕರೆದೊಯ್ದರು ಹಾಗೂ

ಇವರಿಗೆ ಇಂಗ್ಲೆಂಡ್‌ನಲ್ಲಿ ಹೇಗೆ ಜನರೊಡನೆ ವ್ಯವಹರಿಸಬೇಕು ಎಂಬ ಬಗ್ಗೆ ತಿಳಿಸಿದರು. ಹೋಟೆಲ್ ಅಥವಾ ಗೆಸ್ಟ್‌ಹೌಸ್‌ನಲ್ಲಿ ಇಳಿದುಕೊಂಡರೆ ಬಹಳ ಹಣ ಖರ್ಚಾಗುವುದೆಂದು ತಿಳಿಸಿ ಇವರಿಗೆ ಆಂಗ್ಲೋಇಂಡಿಯನ್‌ರವರ ಮನೆಯಲ್ಲಿ ಪೇಯಿಂಗ್‌ಗೆಸ್ಟ್ ಆಗಿರಲು ವ್ಯವಸ್ಥೆ ಮಾಡಿಕೊಟ್ಟರು. ಅವಿವಾಹಿತ ರೆಂದು ಸುಳ್ಳು ಹೇಳಿ ಆ ಮನೆ ಸೇರಿದ್ದ ಇವರಿಗೆ ಇಬ್ಬರು ಪ್ರಾಪ್ತವಯಸ್ಸಿನ ಹುಡುಗಿಯವರೊಡನೆ ಬಹು ಬೇಗ ಬೆಳೆದ ಸಲಿಗೆ ಎಲ್ಲೆ ಮೀರುವ ಭಯ ಕಾಣಿಸಿದಾಗ ಮನೆಯ ಯಜಮಾನಿತಿಗೆ ಪತ್ರ ಬರೆದು ತನಗೆ ವಿವಾಹವಾಗಿದೆಯೆಂದು ತಿಳಿಸುವ ಧೈರ್ಯ ಮಾಡಿ ಮುಂದಾಗಬಹುದಾಗಿದ್ದ ಅನಾಹುತದಿಂದ ತಪ್ಪಿಸಿಕೊಂಡರು.

ಗಾಂಧಿಯವರಿಗೆ ಇಂಗ್ಲೆಂಡಿನ ವಾತಾವರಣ ಹಾಗೂ ನಾಗರಿಕತೆಗೆ ಹೊಂದಿಕೊಳ್ಳಲು ಕೆಲವೇ ದಿನಗಳು ಹಿಡಿದವು. ಉಪ್ಪು ಇಲ್ಲದ ಆಹಾರ ಸೇವಿಸಲು ಇವರಿಗೆ ಬಹಳ ದಿನ ಕಷ್ಟವಾಗಿ ಕೆಲವು ದಿನ ಬ್ರೆಡ್ ಹಾಗೂ ಹಣ್ಣನ್ನು ಸೇವಿಸಿಕೊಂಡೇ ಇರಬೇಕಾಗುತ್ತಿತ್ತು. ಹಲವು ದಿನ ಉಪವಾಸ ಸಹ ಮಾಡಬೇಕಾಗಿ ಬರುತ್ತಿತ್ತು. ಅಲ್ಲಿನ ಜನ ಜೀವನಕ್ಕೆ ಹೊಂದಿಕೊಂಡು ಹೋಗಲು ಇವರು ನಾಟ್ಯ ಕಲಿತರು. ವಾಯಲಿನ್ ನುಡಿಸುವುದನ್ನೂ ಅಭ್ಯಾಸ ಮಾಡಿಕೊಂಡರು. ಸಸ್ಯಾಹಾರಿ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಸ್ಯಾಹಾರ ಸೇವನೆಯನ್ನು ಇಂಗ್ಲೆಂಡ್ ಜನರಲ್ಲಿ ಪ್ರಚೋದಿಸತೊಡಗಿದರು.

ತಾಯಿಗೆ ಭಾಷೆ ಕೊಟ್ಟಿದ್ದಂತೆ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಮದ್ಯ ಮತ್ತು ಮಾಂಸವನ್ನು ಮುಟ್ಟದೆ ಉಳಿದರು. ಹೋಟೆಲ್ ಹಾಗೂ ಪೇಯಿಂಗ್‌ಗೆಸ್ಟ್ ಊಟ ಉಪಚಾರದ ಖರ್ಚು ಹೆಚ್ಚೆಂದು ಮನದಟ್ಟಾದಾಗ ಇವರು ತಮ್ಮ ಕೊಠಡಿಯಲ್ಲೇ ಅಡಿಗೆ ಬೇಯಿಸಿಕೊಳ್ಳುವುದನ್ನು ಪ್ರಾರಂಭಿಸಿದರು. ಈ ಬಗ್ಗೆ ಸಾಲ್ಟ್ ಅವರ 'ಅನ್ನಾಹಾರ್‌ಕಿ ಹಿಮಾಯತ್' ಎಂಬ ಪುಸ್ತಕ ಬಹು ನೆರವು ನೀಡಿತು.

ಬ್ಯಾರಿಸ್ಟರ್ ಕಾನೂನು ಓದು ಅಷ್ಟೇನೂ ಕಷ್ಟದಾಯಕವಾಗಿರಲಿಲ್ಲ. ಒಳ್ಳೆಯ ಇಂಗ್ಲಿಷ್ ಕಲಿಯುವುದು ಒಳಿತೆಂದು ಇವರಿಗೆ ತೋರಿದಾಗ ಅಲ್ಲಿನ ಮೆಟ್ರಿಕ್ ಪರೀಕ್ಷೆಗೆ ಕುಳಿತು ಪಾಸಾದರು.

ಜೂನ್ ೧೦, ೧೮೯೧ ರಂದು ಗಾಂಧಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜೂನ್ ೧೧ ರಂದು ಇಂಗ್ಲೆಂಡಿನ ಹೈಕೋರ್ಟ್‌ನಲ್ಲಿ ತಮ್ಮ ಹೆಸರನ್ನು ಬ್ಯಾರಿಸ್ಟರಾಗಿ ನೊಂದಾಯಿಸಿಕೊಂಡರು. ಜೂನ್ ೧೩ ರಂದೇ ಭಾರತದತ್ತ ಪಯಣ ಬೆಳೆಸಿದರು.

ಗಾಂಧಿ, ಮುಂಬಯಿ ಬಂದರಿನಲ್ಲಿ ಬಂದು ಇಳಿದ ಮೇಲೆ ತನ್ನ ತಾಯಿ ಗತಿಸಿದ್ದಾರೆಂದು ತಿಳಿದುಬಂತು. ಈ ವಾರ್ತೆ ಕೇಳಿ ಗಾಂಧಿಗೆ ಬಹು ದುಃಖ ವಾಯಿತು. ತಾಯಿಯನ್ನು ಗಾಂಧಿ ಅತಿಯಾಗಿ ಪ್ರೀತಿಸುತ್ತಿದ್ದುದರಿಂದ ಇಂಗ್ಲೆಂಡಿನಲ್ಲೇ ಈ ವಾರ್ತೆಯನ್ನು ತಿಳಿಸಿದರೆ ಓದುತ್ತಿರುವ ವಿದ್ಯಾರ್ಥಿಗೆ ಆಘಾತವಾಗುವುದೆಂದು ಅಣ್ಣ ಈ ದುಃಖ ವಾರ್ತೆಯನ್ನು ಮುಚ್ಚಿಟ್ಟಿದ್ದರು.

ಗಾಂಧಿ, ರಾಜ್‌ಕೋಟ್‌ಗೆ ಹೋದಾಗ ಮನೆಯಲ್ಲಿ ಬಂಧು ಬಳಗ ಪುರೋಹಿತರು ಎಲ್ಲಾ ಸೇರಿದ್ದರು. ಜಾತಿಯಿಂದ ಹೊರಗೆ ಹಾಕಿದ್ದ ಇವರನ್ನು ಪುನಃ ಜಾತಿಗೆ ಸೇರಿಸಿಕೊಳ್ಳಲು ಎಲ್ಲಾ ಧಾರ್ಮಿಕ ಸಿದ್ಧತೆಗಳೂ ನಡೆದಿದ್ದವು. ಬಂಧುಬಳಗಕ್ಕೆ ಪವನಹೋಮ, ಪೂಜೆಯ ನಂತರ ಭಾರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಗಾಂಧಿಗೆ ಇವುಗಳ ಬಗ್ಗೆ ಆಸಕ್ತಿಯಾಗಲಿ, ನಂಬಿಕೆಯಾಗಲಿ ಇಲ್ಲದಿದ್ದರೂ ಪ್ರೀತಿಯ ಅಣ್ಣನಿಗಾಗಿ ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಸಹಕರಿಸಿದರು.

ಗಾಂಧಿ ತನ್ನ ವಕೀಲಿ ವೃತ್ತಿಯನ್ನು ಎಲ್ಲಿ ಪ್ರಾರಂಭಿಸುವುದು ಎಂದು ನಿಶ್ಚಯಿಸಬೇಕಿತ್ತು. ಗಾಂಧಿ ಬ್ಯಾರಿಸ್ಟರಾಗಿ ಬಂದಿದ್ದರೂ ಕಾನೂನು ಕದನದಲ್ಲಿ ಭಾಗವಹಿಸಿ, ಇತರೇ ವಕೀಲರೊಡನೆ ಸ್ಪರ್ಧೆ ನಡೆಸಿ, ಕೇಸು ಗೆಲ್ಲುವ ಧೈರ್ಯವಿರಲಿಲ್ಲ. ವಾದಿಸಲು ನಿಂತರೆ ಕೈಕಾಲು ನಡುಗ ತೊಡಗುತ್ತಿದ್ದವು. ಮಾತೇ ಬಾಯಿಂದ ಬಾರದೆ ಹೋಗುತ್ತಿತ್ತು. ಈ ಬಗ್ಗೆ ಗಾಂಧಿ ಸ್ನೇಹಿತರೊಡನೆ ಹಾಗೂ ಕುಟುಂಬದವರೊಡನೆ ವಿಚಾರ ವಿನಿಮಯ ಮಾಡಿದಾಗ ಸ್ವಲ್ಪ ದಿನದ ಮಟ್ಟಿಗಾದರೂ ಗಾಂಧಿ ಮುಂಬಯಿಗೆ ಹೋಗಿ ಅನುಭವವನ್ನು ಪಡೆದು ಹಾಗೂ ಭಾರತೀಯ ಕಾನೂನುಗಳನ್ನು ಅಭ್ಯಸಿಸಿ ಬರುವುದು ಉಚಿತವೆಂದು ಸೂಚಿಸಿದರು. ಆದ್ದರಿಂದ ಗಾಂಧಿ ಮುಂಬಯಿಗೆ ಪ್ರಯಾಣ ಬೆಳೆಸಿದರು.

ಮುಂಬಯಿಯಲ್ಲಿ ಮನೆ ಮಾಡಿ, ಅಡಿಗೆಯವನನ್ನೂ ಇಟ್ಟುಕೊಂಡು ೩-೪ ತಿಂಗಳು ಕಳೆಯುವುದರಲ್ಲಿ ಗಾಂಧಿಯವರಿಗೆ ಸಾಕಾಯಿತು. ಆದಾಯ

ಅತಿ ಕಡಿಮೆ ಇದ್ದು ದಿನೇ ದಿನೇ ಖರ್ಚು ಹೆಚ್ಚುತ್ತಲೇ ಹೋಯಿತು. ಅಲ್ಲಿ ಇರುವುದು ಸರಿಯಲ್ಲವೆಂದು ನಿರ್ಧರಿಸಿ ಗಾಂಧಿ ರಾಜ್‌ಕೋಟ್‌ಗೆ ಹಿಂತಿರುಗಲು ನಿರ್ಧರಿಸಿದರು. ಇದೇ ದಿನದಲ್ಲಿ ಪತ್ರಿಕೆಯೊಂದರಲ್ಲಿ ಬಂದ ಜಾಹೀರಾತು ಇವರನ್ನು ಆಕರ್ಷಿಸಿತು. ಒಂದು ಶಾಲೆಗೆ ಇಂಗ್ಲಿಷ್ ಅಧ್ಯಾಪಕರ ಅವಶ್ಯಕತೆಯಿತ್ತು. ಗಾಂಧಿ ಅದಕ್ಕೆ ಅರ್ಜಿ ಹಾಕಿದರು. ಮುಖತಃ ಬಂದು ಕಾಣಲು ಕರೆಬಂತು. ಗಾಂಧಿ ಬಹು ಉತ್ಸಾಹದಿಂದ ಶಾಲೆಯ ಅಧಿಕಾರಿಗಳ ಮುಂದೆ ಹೋಗಿ ನಿಂತರು. ಅಧಿಕಾರಿವರ್ಗ ಇವರ ಸರ್ಟಿಫಿಕೇಟ್‌ಗಳನ್ನು ಅವಲೋಕಿಸಿ ಅವರಿಗೆ ಬಿ.ಎ. ಡಿಗ್ರಿ ಇಲ್ಲದ್ದರಿಂದ ಅಧ್ಯಾಪಕರ ಹುದ್ದೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದಾಗ ಗಾಂಧಿಗೆ ಬಹು ನಿರಾಶೆಯಾಯಿತು. ಇದನ್ನು ತಿಳಿದು ಅಣ್ಣನಿಗೂ ಬೇಸರವಾಯಿತು. ರಾಜ್‌ಕೋಟ್‌ಗೆ ಹಿಂತಿರುಗಿ ಮನೆಯಲ್ಲೇ ಇದ್ದು ವಕೀಲಿ ಮಾಡಲು ಸೂಚಿಸಿದರು. 'ನನಗೆ ಇಲ್ಲಿ ಸಾವಿರಾರು ಜನ ಪರಿಚಯದವರಿದ್ದಾರೆ. ಕಕ್ಷಿಗಾರರು ಸಿಕ್ಕೇ ಸಿಕ್ಕುತ್ತಾರೆ. ನಾನೂ ನಿನಗೆ ಸಹಾಯಮಾಡಬಲ್ಲೆ ಇಲ್ಲೇ ಬಂದಿರು" ಎಂದರು. ಗಾಂಧಿಯವರಿಗೂ ಆದಾಯವಿಲ್ಲದ ಬೊಂಬಾಯಿ ಜೀವನ ಬೇಸರ ತಂದಿತ್ತು. ರಾಜ್‌ಕೋಟ್‌ಗೆ ಹಿಂತಿರುಗಿದರು. ಅಲ್ಲೂ ಗಾಂಧಿ ವಕೀಲರಾಗಿ ಪ್ರಸಿದ್ಧಿಗೆ ಬರಲಿಲ್ಲ. ಅಣ್ಣ ಬಯಸಿದ್ದಂತೆ ಹಣದ ಹೊಳೆ ಹರಿಸಲು ಅಸಮರ್ಥರಾಗಿದ್ದರು. ಗಾಂಧಿಯವರ ಮನೆಗೆ ಆತ್ಮೀಯರಾಗಿದ್ದ ಫಿರೋಜ್ ಷಾ ಮೆಹತಾ ಎದೆಗುಂದಬಾರದೆಂದು ಸಾಂತ್ವನ ಹೇಳಿದರು. ಆದರೂ ಆದಾಯವಿಲ್ಲದೆ ತಾನೊಬ್ಬ ಅಲ್ಲದೆ ಹೆಂಡತಿ ಮತ್ತು ಮಗ ಸಹ ಅಣ್ಣನಿಗೆ ಹೊರೆಯಾಗಿರುವುದು ಗಾಂಧಿಗೆ ಸಹನವಾಗುತ್ತಿರಲಿಲ್ಲ. ದಿನವೂ ನೊಂದುಕೊಳ್ಳುತ್ತಿದ್ದರು.

ಇದೇ ದಿನದಲ್ಲಿ ಗಾಂಧಿಯವರ ಜೀವನವನ್ನೇ ಬದಲಾಯಿಸುವ ಒಂದು ಪ್ರಸಂಗ ಒದಗಿಬಂತು. ಅಣ್ಣನಿಗೆ ಪರಿಚಯವಿದ್ದ ಪೋರ್‌ಬಂದರಿನ ಮೆಮನ್ ಸಂಸ್ಥೆಯ ಲಾಲಾ ಅಬ್ದುಲ್ಲಾರವರಿಂದ ಒಂದು ಸಂದೇಶ ಬಂತು.

◆ ◆ ◆

೪. ದಕ್ಷಿಣ ಆಫ್ರಿಕಾ ಪ್ರವಾಸ

'ದಕ್ಷಿಣ ಆಫ್ರಿಕಾದಲ್ಲಿ ನಮ್ಮದೊಂದು ವ್ಯಾಪಾರಿ ಸಂಸ್ಥೆಯಿದೆ. ಸುಮಾರು ೪೦ ಸಾವಿರ ಪೌಂಡ್ ಬಗ್ಗೆ ಕೋರ್ಟಿನಲ್ಲಿ ದಾವೆ ನಡೆಯುತ್ತಿದೆ. ನಮ್ಮ ಬಳಿ ಬಹು ಹೆಸರಾಂತ ಅನೇಕ ಬ್ಯಾರಿಸ್ಟರ್‌ಗಳು ಇದ್ದಾರೆ. ತಮ್ಮ, ತಮ್ಮನನ್ನು ನಮ್ಮ ಸಹಾಯಕ್ಕೆ ಕಳುಹಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ. ಅವರು ಇಲ್ಲಿ ಒಂದು ವರ್ಷವಿದ್ದರೆ ಅವರು ಹಡಗಿನಿಂದ ಬಂದು ಹೋಗುವ ಖರ್ಚನ್ನು ನಾವು ಭರಿಸುತ್ತೇವೆ. ಇಲ್ಲಿ ಮನೆ, ಊಟ ಉಪಚಾರಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆ. ೧೦೫ ಪೌಂಡ್ ಸಹ ಸಂಭಾವನೆ ನೀಡುತ್ತೇವೆ.'

ಗಾಂಧಿಯವರಿಗೆ ರಾಜ್‌ಕೋಟ್‌ನಲ್ಲಿನ ಕೆಲಸವಿಲ್ಲದ ಹಾಗೂ ಆದಾಯವಿಲ್ಲದ ಜೀವನ ಬೇಸರ ತಂದಿತ್ತು. ಅಣ್ಣ ನೀಡಿದ ಈ ಸಂದೇಶ ಗಾಂಧಿಗೆ ಒಪ್ಪಿಗೆಯಾಯಿತು. ಗಾಂಧಿಯವರಿಗೆ ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೆ ಎರಡನೆಯ ಮಗು ಜನಿಸಿತ್ತು. ಹೆಂಡತಿ ಮತ್ತು ಮಕ್ಕಳನ್ನು ಬಿಟ್ಟು ಹೋಗಬೇಕಲ್ಲಾ ಎಂಬ ನೋವು ಕಾಡಿದರೂ, ಒಂದು ವರ್ಷದ ನಂತರ ಮತ್ತೆ ಭೇಟಿಯಾಗುವ ಆಸೆಯಿಂದ ಹೆಂಡತಿಗೆ ಸಾಂತ್ವನ ನೀಡಿ, ದಕ್ಷಿಣ ಆಫ್ರಿಕಾಕ್ಕೆ ಹೋಗಲು ಸಿದ್ಧತೆ ನಡೆಸತೊಡಗಿದರು.

ಏಪ್ರಿಲ್ ೧೮೯೩ ರಲ್ಲಿ ಗಾಂಧಿ ದಕ್ಷಿಣ ಆಫ್ರಿಕಾದ ನೇಟಾಲ್‌ಗೆ ಹಡಗಿನಲ್ಲಿ ಪ್ರಯಾಣ ಬೆಳೆಸಿದರು.

ಹಡಗು ಬೊಂಬಾಯಿಯಿಂದ ಲಾಮು, ಮೊಂಬಾಸ, ಜಂಜಿಬಾರ್, ಮೊಸಾಂಬಿಕ್ ಬಂದರುಗಳ ಮುಖಾಂತರ ಹಾಯ್ದು ನೇಟಾಲ್ ಪ್ರಾಂತದ ಡರ್ಬನ್ ಬಂದರನ್ನು ಸೇರಿತು. ಅಲ್ಲಿ ಸೇಠ್ ಅಬ್ದುಲ್ಲಾ ಖುದ್ದಾಗಿ ಗಾಂಧಿಯನ್ನು ಸ್ವಾಗತಿಸಿದರು ಹಾಗೂ ತಮ್ಮ ಮನೆಯ ಬದಿಯಲ್ಲೇ ಗಾಂಧಿಯವರಿಗೆ ತಂಗಲು ವ್ಯವಸ್ಥೆ ಮಾಡಿದ್ದರು. ಗಾಂಧಿಯವರಿಗೆ ಇಂಗ್ಲೆಂಡಿನಿಂದ ಬ್ಯಾರಿಸ್ಟರ್ ಆಗಿ ಬಂದಿದ್ದುದರಿಂದ ಪೋಷಾಕಿನ ಬಗ್ಗೆ ಹೆಚ್ಚು ವ್ಯಾಮೋಹವಿತ್ತು. ಫ್ರಾಕ್‌ಕೋಟ್ ಹಾಗೂ ಬಂಗಾಳದ ಪಗರಿಯನ್ನು ಹೋಲುವ ಪೇಟ ದಕ್ಷಿಣ

ಆಫ್ರಿಕಾದ ಜನರ ಗಮನವನ್ನು ಸೆಳೆದಿತ್ತು. ಗಾಂಧಿಯ ಪಾಶ್ಚಿಮಾತ್ಯ ಹಾಗೂ ಭಾರತದ ಸಮ್ಮಿಶ್ರಣದ ಉಡುಪು ನೋಡಿ ಸೇಠ್ ಅಬ್ದುಲ್ಲಾಗೆ ಇಂಡಿಯಾದಿಂದ ಅತಿ ಬೆಲೆಬಾಳುವ ಬಿಳಿಯಆನೆಯನ್ನು ಕರೆಸಿಕೊಂಡಿದ್ದೇನೆಯೇ ಎಂದು ಸಂದೇಹ ಮೂಡಿತು. ಗಾಂಧಿಯ ಸೌಜನ್ಯ, ಪ್ರೀತಿ, ವಾತ್ಸಲ್ಯದ ನಡತೆ, ಸಹನಶೀಲತೆ ಬಹುಬೇಗ ಅಬ್ದುಲ್ಲಾರ ಸಂದೇಹವನ್ನು ದೂರ ಮಾಡಿತು. ಅಬ್ದುಲ್ಲಾರ ಕೇಸು 'ಟ್ರಾನ್ಸ್‌ವಾಲ್' ನಲ್ಲಿ ನಡೆಯುತ್ತಿತ್ತು. ಗಾಂಧಿಯನ್ನು ತಕ್ಷಣವೇ ಅಲ್ಲಿಗೆ ಕಳುಹಿಸಲು ಅವರಿಗೆ ಇಷ್ಟವಿರಲಿಲ್ಲ. ೩-೪ ದಿನದ ನಂತರ ಅವರನ್ನು ಡರ್ಬಾನ್ ಕೋರ್ಟಿಗೆ ಕರೆದೊಯ್ದರು. ಗಾಂಧಿ ತಮ್ಮ ಮಾಮೂಲಿ ಡ್ರೆಸ್‌ನಲ್ಲಿದ್ದರು. ಜಡ್ಜ್ ಇವರನ್ನು ಕೆಲಕಾಲ ದುರುಗುಟ್ಟಿಕೊಂಡು ನೋಡಿದರು. ಪೇಟವನ್ನು ತೆಗೆದು ಹಾಕಲು ಗಾಂಧಿಗೆ ಆದೇಶಿಸಿದರು. ಗಾಂಧಿಗೆ ಇದು ಇಷ್ಟವಾಗಲಿಲ್ಲ. ಅಸಮಾಧಾನ ಸೂಚಕವಾಗಿ ಹೊರ ಬಂದರು. ಈ ಬಗ್ಗೆ ಪತ್ರಿಕೆಗಳಿಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿ ಲೇಖನ ಬರೆದರು. ಅದು ಬಹಳಷ್ಟು ಪತ್ರಿಕೆಗಳಲ್ಲಿ ಪ್ರಕಟವಾಗಿ ಇವರು 'ಅನಿಮಂತ್ರಿತ್ ಅತಿಥಿ' (UN WELCOME VISITOR) ಎಂದು ಒಮ್ಮೆಗೇ ಪ್ರಸಿದ್ಧಿಗೆ ಬಂದರು. ಇದೇ ಅಸಹಕಾರ ಚಳುವಳಿಯ ಮೊದಲಮೆಟ್ಟಲಾಯಿತು.

ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ

ಆಫ್ರಿಕಾ ಪ್ರಪಂಚದ ದೊಡ್ಡ ಭೂಖಂಡಗಳಲ್ಲಿ ಒಂದು. ಇಲ್ಲಿ ದೊಡ್ಡ ಹಾಗೂ ಅನೇಕ ಸಣ್ಣ ರಾಷ್ಟ್ರಗಳಿವೆ. ಮುಖ್ಯವಾದವುಗಳೆಂದರೆ ಈಜಿಪ್ಟ್, ಲಿಬಿಯಾ, ಇಥೋಪಿಯಾ, ಝಾಯ್‌ರೆ, ನೈಜೀರಿಯಾ, ಸೂಡಾನ್, ಆಲ್‌ಜೀರಿಯಾ, ದಕ್ಷಿಣ ಆಫ್ರಿಕಾ ಮುಂತಾದವು. ಬೇಸಾಯ ಇಲ್ಲಿನ ಜನರ ಮುಖ್ಯ ಕಸುಬು. ಟ್ರಾನ್ಸ್‌ವಾಲ್, ಜೋಹಾನ್ಸ್‌ಬರ್ಗ್, ಪ್ರೆಟೋರಿಯಾ ಮುಂತಾದೆಡೆ ಚಿನ್ನ ಮತ್ತು ವಜ್ರದ ಗಣಿಗಳಿರುವುದರಿಂದ ಇಲ್ಲಿ ಜನಸಂದಣಿ ಹೆಚ್ಚು ಹಾಗೂ ಕೂಲಿಗಾರರ ಸಂಖ್ಯೆ ಅಧಿಕ. ನೀಗ್ರೋಗಳು ಇಲ್ಲಿನ ಮೂಲ ನಿವಾಸಿಗಳು. ದಕ್ಷಿಣ ಆಫ್ರಿಕಾ ಬೇಸಾಯ ಹಾಗೂ ಗಣಿ ಕೈಗಾರಿಕೆಯಲ್ಲಿ ಪ್ರಮುಖ ಸ್ಥಾನ ಪಡೆದಿರುವುದರಿಂದ ಇದನ್ನು ಲೂಟಿ ಮಾಡಲು ಬಹು ಸಂಖ್ಯೆಯಲ್ಲಿ ಯುರೋಪಿಯನ್ನರು ಇಲ್ಲಿ ಬಂದು ನೆಲೆಸಿದರು. ಡಚ್ಚರು,

ಪೋರ್ಚುಗೀಸರು, ಬ್ರಿಟಿಷರು ಮುಖ್ಯರು. ಯೂರೋಪಿಯನ್ನರಿಗೆ ಸಹಾಯ ಮಾಡಲು ಕೆಲಸದಾಳುಗಳ ಅಗತ್ಯವಿತ್ತು. ನೀಗ್ರೋಗಳು ವ್ಯವಸಾಯ ಮಾಡುತ್ತಿದ್ದರೂ ಅವರು ವರ್ಷವಿಡೀ ಕೆಲಸ ಮಾಡುತ್ತಿರಲಿಲ್ಲ. ಆರು ತಿಂಗಳು ದುಡಿದು, ಇನ್ನು ಆರು ತಿಂಗಳು ಆರಾಮವಾಗಿದ್ದು ಬಿಡುತ್ತಿದ್ದರು. ಕೂಲಿಯಾಳುಗಳಾಗಿ ಅವರು ಹೆಚ್ಚಿಗೆ ಯೂರೋಪಿಯನ್ನರಿಗೆ ಸಹಾಯಕರಾಗಿರಲು ಮುಂದಾಗುತ್ತಿರಲಿಲ್ಲ. ಆದ್ದರಿಂದ ಅಲ್ಲಿನ ಇಂಗ್ಲಿಷರು ಇಂಡಿಯಾ ಸರಕಾರವನ್ನು ಕೆಲ ಕೂಲಿಯಾಳುಗಳನ್ನು ಒದಗಿಸಿಕೊಡಲು ವಿನಂತಿಸಿಕೊಂಡರು. ಭಾರತಸರ್ಕಾರ ಒಪ್ಪಿ ಐದು ವರ್ಷಗಳ ಅವಧಿಗೆ ಕೂಲಿಯಾಳುಗಳ ಒಂದು ಗುಂಪನ್ನು ೧೬/೧೧/೧೮೬೦ ರಂದು ಕಳುಹಿಸಿತು. ಇದು ನಿಜವಾಗಿಯೂ ಚರಿತ್ರಾರ್ಹ ದಿನ. ಇಲ್ಲದಿದ್ದರೆ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರೂ ಇರುತ್ತಿರಲಿಲ್ಲ, ಸತ್ಯಾಗ್ರಹವೂ ನಡೆಯುತ್ತಿರಲಿಲ್ಲ. ಗಾಂಧಿಯವರು ಮಹಾತ್ಮರೆಂದಾಗಲಿ, 'ಸತ್ಯಾಗ್ರಹ'ದ ಜನಕರೆಂದಾಗಲಿ ಹೆಸರು ಪಡೆದು ಬಹುಶಃ ಭಾರತದ ಭಾಗ್ಯವಿಧಾತರೂ ಆಗುತ್ತಿರಲಿಲ್ಲ. ಸಾಮಾನ್ಯ ಬ್ಯಾರಿಸ್ಟರ್ ಆಗಿ, ಭಾರತದ ಕೋಟ್ಯಂತರ ಜನರಲ್ಲಿ ಒಬ್ಬರಾಗಿ ಹೋಗುತ್ತಿದ್ದರು. ಕೂಲಿಯಾಳುಗಳಾಗಿ ದಕ್ಷಿಣ ಆಫ್ರಿಕಾಕ್ಕೆ ಬಂದವರಲ್ಲಿ ತಮಿಳರು, ಮಲೆಯಾಳಿಗಳು, ತೆಲುಗರು ಅಲ್ಪಸಂಖ್ಯೆಯಲ್ಲಿ ಪಾರಸೀಕರು ಹಾಗೂ ಉತ್ತರ ಭಾರತದ ಇತರ ಜನ ಇದ್ದರು. ಯೂರೋಪಿಯನ್ನರಿಗೂ ಮುಂಚೆ ಇಲ್ಲಿಗೆ ವಲಸೆ ಬಂದಿದ್ದ ಮುಸ್ಲಿಮರು ವ್ಯಾಪಾರೋದ್ಯಮದಲ್ಲಿದ್ದು, ಜಮೀನು ಸಹ ಹೊಂದಿದ್ದು ದಕ್ಷಿಣ ಆಫ್ರಿಕಾದ ಅನೇಕ ವಿಶೇಷ ಸವಲತ್ತುಗಳನ್ನು ಪಡೆಯಲು ಅರ್ಹರಾಗಿದ್ದರು. ಬಹಳಷ್ಟು ಜನ ಧನವಂತರೂ ಆಗಿದ್ದರು.

ಭಾರತದಿಂದ ವಲಸೆ ಬಂದ ಜನರನ್ನು ಅಲ್ಲಿಯ ಜನ 'ಕೂಲಿ'ಗಳೆಂದೇ ಕರೆಯುತ್ತಿದ್ದರು. ಈ ಕೂಲಿಗಳಲ್ಲಿ ಎರಡು ವಿಧದ ಜನರಿದ್ದರು. ಐದು ವರ್ಷಗಳ ಅವಧಿಯ ಕೆಲಸಗಾರರು, ಅವಧಿ ಮುಗಿದ ಕೆಲಸಗಾರರು. ಐದುವರ್ಷಗಳ ಅವಧಿ ಮುಗಿದ ನಂತರ ಬಹಳಷ್ಟು ಕೂಲಿಯಾಳುಗಳು ಭಾರತಕ್ಕೆ ಹಿಂತಿರುಗದೆ ದಕ್ಷಿಣ ಆಫ್ರಿಕಾದಲ್ಲೇ ಉಳಿದು ವ್ಯವಸಾಯ ಅಥವಾ ವ್ಯಾಪಾರ ಮಾಡಿಕೊಂಡು ಅಲ್ಲೇ ಖಾಯಂ ಆಗಿ ನೆಲೆಸಿ ಬಿಟ್ಟಿದ್ದರು. ಅವಧಿ ಮುಗಿಸಿದ ಕೆಲಸಗಾರರನ್ನು ಯೂರೋಪಿಯನ್ನರು ಸಹಿಸುತ್ತಿರಲಿಲ್ಲ. ಅವರಿಗೆ

ಹಿಂಸೆ ಕೊಡಲು ಪ್ರಾರಂಭಿಸಿದ್ದರು. ಸರಕಾರವೂ ಸಹ ಇಂಗ್ಲಿಷರಿಗೆ ಹೆಚ್ಚಿನ ಬೆಂಬಲ ಕೊಡುತ್ತಿತ್ತು. ಐದು ವರ್ಷಗಳ ಅವಧಿ ಮುಗಿಸಿ ಭಾರತಕ್ಕೆ ಹಿಂತಿರುಗಿ ಹೋಗದೆ ಅಲ್ಲೇ ನೆಲೆಸ ಬಯಸಿದ ಭಾರತೀಯರಿಗೆ ವಾರ್ಷಿಕ ತಲೆಗಂದಾಯ ಹೇರಲು ಸರಕಾರ ಮುಂದಾಯಿತು. ನೇಟಾಲ್‌ನಲ್ಲಿದ್ದ ಜವಾಬ್ದಾರಿ ಸರ್ಕಾರ, ಭಾರತ ಸರ್ಕಾರದೊಡನೆ ಸಂಧಾನ ನಡೆಸಿ ಕೂಲಿ ಕೆಲಸದಿಂದ ಬಿಡುಗಡೆ ಹೊಂದಿದ ಪ್ರತಿಯೊಬ್ಬ ಭಾರತೀಯ ವರ್ಷ ಒಂದಕ್ಕೆ ೨೫ ಪೌಂಡ್ ಅಥವಾ ೩೫ ರೂಪಾಯಿಗಳ ತಲೆಗಂದಾಯ ಕೊಡಬೇಕೆಂಬ ಸೂಚನೆ ತಂದಿತು. ಅಷ್ಟು ತಲೆಗಂದಾಯ ನೀಡಿ ಯಾವ ಭಾರತೀಯನೂ ನೇಟಾಲ್‌ನಲ್ಲಿ ವಾಸಮಾಡಲು ಸಾಧ್ಯವಾಗುತ್ತಿರಲಿಲ್ಲ. ಭಾರತದ ಗವರ್ನರ್‌ಜನರಲ್ ಆಗಿದ್ದ ಲಾರ್ಡ್ ಎಲ್ಗಿನ್ ಇದನ್ನು ೩ ಪೌಂಡುಗಳಿಗೆ ಇಳಿಸಿದನು. ಇದೂ ಕೂಡ ಅಲ್ಲಿಯ ಕೂಲಿಗಾರರಿಗೆ ಭಾರಿಯಾಗಿಯೇ ಇತ್ತು. ಈ ಕಂದಾಯ ಕೂಲಿಗಾರನಿಗೆ ಮಾತ್ರವಲ್ಲ, ಅವನ ಹೆಂಡತಿ, ೧೩ ವರ್ಷಕ್ಕೆ ಮೇಲ್ಪಟ್ಟ ಹೆಣ್ಣು ಮಕ್ಕಳು, ೧೬ ವರ್ಷಕ್ಕೆ ಮೇಲ್ಪಟ್ಟ ಗಂಡುಮಕ್ಕಳಿಗೂ ಅನ್ವಯಿಸುತ್ತಿತ್ತು. ಈ ಕಂದಾಯದ ಹೊರೆ ಸಹಿಸಲಸಾಧ್ಯ ವಾಗಿತ್ತು. ಅದಕ್ಕೆ ಹೋರಾಟ ಅನಿವಾರ್ಯವಾಗಿತ್ತು. ಬ್ರಿಟಿಷರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಜವಾಬ್ದಾರಿ ಸರ್ಕಾರ ಬಂದೊಡನೆ, ನೇಟಾಲ್ ಸರಕಾರ ಕೈಗೊಂಡ ಪ್ರಥಮ ಕಾರ್ಯವೆಂದರೆ ಆ ಮೊದಲಿನ ವೋಟರ್ಸ್ ಪಟ್ಟಿಯಲ್ಲಿನ ಭಾರತೀಯರ ಹೊರತು, ಉಳಿದೆಲ್ಲಾ ಸ್ವತಂತ್ರ ಭಾರತೀಯರು ಓಟು ಮಾಡಲು ಅನರ್ಹರೆಂದು ತೀರ್ಮಾನಿಸಿತು. ಭಾರತೀಯರು ಇದನ್ನು ಉಗ್ರವಾಗಿ ಪ್ರತಿಭಟಿಸಬೇಕಾಗಿತ್ತು. ಇಲ್ಲದಿದ್ದರೆ ಬಹಳಷ್ಟು ಭಾರತೀಯರು ನೇಟಾಲ್ ಬಿಟ್ಟು ಭಾರತಕ್ಕೆ ಹೋಗಬೇಕಾಗುತ್ತಿತ್ತು. ಇಷ್ಟೇ ಅಲ್ಲದೆ ವಲಸೆ ಬಂದು ನೆಲೆಸಿದ್ದ ಭಾರತೀಯರಿಗೆ ಮತ್ತಷ್ಟು ಉಪಟಳ ಕೊಡಲು ಸರ್ಕಾರ ಮುಂದಾಗಿತ್ತು. ಭಾರತೀಯರು ಸರಕಾರದಿಂದ ರಹದಾರಿ ಪಡೆಯದೆ ವ್ಯಾಪಾರ ಮಾಡುವುದನ್ನು ನಿಷೇಧಿಸಿತು. ಮತ್ತೆ ಹೊಸ ಶಾಸನ ರೀತ್ಯಾ ಯಾವುದಾದರೂ ಒಂದು ಯೂರೋಪಿಯನ್ ಭಾಷೆಯನ್ನು ಕಲಿತಿರದ ಯಾರೂ ನೇಟಾಲ್‌ಗೆ ಬರಲು ನಿಷೇಧಿಸಿತ್ತು. ಇದರಿಂದ ಲಕ್ಷಾಂತರ ಭಾರತೀಯರಿಗೆ ನೇಟಾಲ್‌ನ ದಾರಿ ಮುಚ್ಚಿದಂತಾಯ್ತು. ಹೀಗೆ ನೇಟಾಲ್‌ನಲ್ಲಿ ಭಾರತೀಯರ ಪರಿಸ್ಥಿತಿ ದಿನೇ ದಿನೇ ದುಸ್ತರಗೊಳ್ಳತೊಡಗಿತ್ತು. ಭಾರತೀಯರಿಗೆ ಇದನ್ನು ಎದುರಿಸುವುದು

ಅನಿವಾರ್ಯವಾಗಿತ್ತು. ಆಗಲೇ ಗಾಂಧಿ ನೇಟಾಲ್‌ಗೆ ಆಗಮಿಸಿದ್ದುದು.

ಬಿಳಿಯ ಐರೋಪ್ಯರ ದೃಷ್ಟಿಯಲ್ಲಿ ಎಲ್ಲಾ ಭಾರತೀಯರೂ 'ಕೂಲಿ'ಗಳೇ ಆಗಿದ್ದರು. ಎಲ್ಲಾ ಭಾರತೀಯರನ್ನು 'ಗಿರಿಮಿಟಿಯಾ' (ಪರ್ಮಿಟ್ ಪದದ ವಿಕಾರ ರೂಪ). 'ಸಾಮಿ' (ಸ್ವಾಮಿ ಪದದ ವಿಕಾರರೂಪ) ಎಂದೇ ಸಂಬೋಧಿಸುತ್ತಿದ್ದರು. ಅಲ್ಲಿ ಗಾಂಧೀಜಿ 'ಬ್ಯಾರಿಸ್ಟರ್ ಕೂಲಿ' ಆಗಿದ್ದರು.

◆ ◆ ◆

ಬಡ್ತಿ ಸಿಕ್ಕಿದೆ !

ಗಾಂಧಿ ನೇಟಾಲ್‌ನಲ್ಲಿದ್ದಾಗ ಅಲ್ಲಿಯ ಸರ್ಕಾರ ಕಪ್ಪು ಜನರ ಮೇಲೆ ವರ್ಷಕ್ಕೆ ಮೂರು ಪೌಂಡ್ ತೆರಿಗೆ ವಿಧಿಸಿತ್ತು. ಅದನ್ನು ಪ್ರತಿಭಟಿಸಲು ಚಳುವಳಿ ಪ್ರಾರಂಭವಾಯಿತು. ಗಾಂಧೀಜಿಯವರನ್ನು ಬಂಧಿಸಲು ಸ್ವತಃ ಮ್ಯಾಜಿಸ್ಟ್ರೇಟರು ಬಂದರು. ಅವರನ್ನು ನೋಡಿ ಬಾಪೂಜಿಗೆ ಆಶ್ಚರ್ಯ ! ಒಡನೆಯೇ ಅವರು "ಓಹೋ ! ನನ್ನ ಸ್ಥಾನಕ್ಕೆ ಬಡ್ತಿ ಸಿಕ್ಕಿದೆ ಎಂದು ಕಾಣಿಸುತ್ತಿದೆಯಲ್ಲಾ ? ಇದುವರೆಗೆ ನನ್ನನ್ನು ಕರೆದೊಯ್ಯಲು ಕೇವಲ ಪೊಲೀಸ್ ಅಧಿಕಾರಿಗಳು ಬರುತ್ತಿದ್ದರು" ಎಂದು ಗಾಂಧೀಜಿ ನುಡಿದಾಗ ಮ್ಯಾಜಿಸ್ಟ್ರೇಟ್ ಅವರ ಮುಖದಲ್ಲಿಯೂ ಮಂದಹಾಸದ ಲಹರಿ ಮಿಂಚಿ ಹೋಯಿತು.

('ಹೀಗಿದ್ದರು ಬಾಪೂ' – ಸಂಗ್ರಾಹಕ : ಟಿ.ವಿ. ವೆಂಕಟರಮಣಯ್ಯ)

೫. ಚಳುವಳಿಗೆ ವಾತಾವರಣ ನಿರ್ಮಾಣ

ಅಬ್ದುಲ್ಲಾರ ಕೇಸು ಪ್ರಿಟೋರಿಯಾದ ಕೋರ್ಟಿನಲ್ಲಿ ನಡೆಯುತ್ತಿದ್ದುದರಿಂದ ಅಬ್ದುಲ್ಲಾರವರು ಗಾಂಧಿಯನ್ನು ಅಲ್ಲಿಗೆ ಕಳುಹಿಸಲು ಏರ್ಪಾಡು ಮಾಡಿದರು. ಮೊದಲನೆ ದರ್ಜೆ ರೈಲ್ವೆ ಬೋಗಿಯಲ್ಲಿ ಪ್ರಯಾಣಿಸಲು ಟಿಕೆಟ್ ಕೊಂಡು ಅವರನ್ನು ಡರ್ಬಾನ್‌ನಿಂದ ಕಳುಹಿಸಿಕೊಟ್ಟರು. ಟ್ರೈನ್ ರಾತ್ರಿ ಸುಮಾರು ೯ ಗಂಟೆ ಹೊತ್ತಿಗೆ ನೇಟಾಲ್‌ನ ರಾಜಧಾನಿ 'ಮೆರಿಸ್‌ಬರ್ಗ್' ರೈಲ್ವೆ ನಿಲ್ದಾಣ ಸೇರಿತು. ಅಲ್ಲಿ ಒಬ್ಬ ಬ್ರಿಟಿಷ್ ಅಧಿಕಾರಿ ಇವರ ಬೋಗಿಗೇ ಹತ್ತಿದ. ಬೋಗಿಯಲ್ಲಿದ್ದ ಗಾಂಧಿಯನ್ನು ನೋಡಿ "ಏ ! ಇಂಡಿಯಾ ಕೂಲಿ, ಕೊನೆ ಬೋಗಿಗೆ ಹೋಗಿ ಕುಳಿತಿಕೊ. ಇದು ನೀನು ಪ್ರಯಾಣಿಸುವ ಬೋಗಿಯಲ್ಲ" ಎಂದು ಅಬ್ಬರಿಸಿದ.

"ನಾನು ಕೂಲಿಯಲ್ಲ, ಬ್ಯಾರಿಸ್ಟರ್ !" ಎಂದು ನುಡಿದರು ಗಾಂಧಿ.

"ಅಹ್ಹಹಾ ! ಕೂಲಿ ಬ್ಯಾರಿಸ್ಟರ್ !!" ನಗಾಡಿದ ಆತ. ಗಾಂಧಿ ಆತನ ಉದ್ಧಟತನವನ್ನು ನಿರ್ಲಕ್ಷಿಸಿದರು. ಅಬ್ದುಲ್ಲಾನ ಕೇಸನ್ನು ಓದುವುದರಲ್ಲಿ ನಿರತರಾದರು. ಆ ಬ್ರಿಟಿಷ್ ಅಧಿಕಾರಿ ಕೆಳಗೆ ಇಳಿದು ಹೋಗಿ ಸ್ಟೇಷನ್ ಮಾಸ್ಟರ್ ಹಾಗೂ ಒಬ್ಬ ಪೋರ್ಟರನ್ನು ಕರೆತಂದ. ಸ್ಟೇಷನ್ ಮಾಸ್ಟರ್ ನುಡಿದರು.

"ನೀನು ಬೇರೆ ಬೋಗಿಯಲ್ಲಿ ಕುಳಿತು ಪ್ರಯಾಣ ಮಾಡು"

"ನನ್ನ ಬಳಿ ಪ್ರಥಮ ದರ್ಜೆ ಟಿಕೆಟ್ ಇದೆ"

"ಇರಬಹುದು, ಆದರೆ ನೀನು ಈ ಬೋಗಿಯೊಳಗೆ ಪ್ರಯಾಣಿಸುವಂತಿಲ್ಲ. ಕೆಳಗಿಳಿ" ಗಾಂಧಿಗೆ ಆದೇಶಿಸಿದರು.

"ನಾನು ಇಳಿಯುವುದಿಲ್ಲ"

"ಪೊಲೀಸರನ್ನು ಕರೆಸಿ ಹೊರಗೆ ಎಳೆಸಿ ಹಾಕಬೇಕಾಗುತ್ತದೆ"

"ನಾನಾಗಿ ಇಳಿಯುವುದಿಲ್ಲ. ನಿಮ್ಮ ಕಾನೂನು ಒಪ್ಪುವುದಾದರೆ ನನ್ನನ್ನು ಹೊರಗೆ ಎಳೆಸಿ ಹಾಕಿ" ಶಾಂತಿಯಿಂದಲೇ ನುಡಿದರು ಗಾಂಧಿ.

ಪೋರ್ಟರ್ ಗಾಂಧಿಯ ಸೂಟ್‌ಕೇಸ್, ಹೋಲ್ಡಾಲನ್ನು ಹೊರಗೆ ಎಸೆದ. ಪೊಲೀಸ್ ಗಾಂಧಿಯನ್ನು ಹೊರಗೆ ಎಳೆದು ಹಾಕಿದ. ಗಾಂಧಿಯವರ ಮುಖ ಅವಮಾನದಿಂದ ಕಳೆಗುಂದಿದ್ದರೂ ಕಣ್ಣಿನಲ್ಲಿ ಕೋಪ ಹಿಣಿಕಿತ್ತು. ಬಹು ಕಷ್ಟಪಟ್ಟು ಸಮಾಧಾನವನ್ನು ತಂದುಕೊಂಡರು. ಪ್ಲಾಟ್‌ಫಾರಂನ ಬೆಂಚಿನ ಮೇಲೆ ಸಾಮಾನಿನೊಡನೆ ಸುಮ್ಮನೆ ಕುಳಿತರು. ಈ ಘಟನೆಯ ಬಗ್ಗೆ ಅಬ್ದುಲ್ಲಾ ಮತ್ತು ರೈಲ್ವೆ ಜನರಲ್ ಮೆನೇಜರ್‌ಗೆ ಟೆಲಿಗ್ರಾಂ ಮೂಲಕ ದೂರಿತ್ತರು. ಅಬ್ದುಲ್ಲಾನ ವ್ಯಾಪಾರಿ ಸ್ನೇಹಿತರು ಸ್ಟೇಷನ್‌ಗೆ ಬಂದು ಈ ತರಹ ಘಟನೆಗಳು ಜರಗುವುದು ಇಲ್ಲಿ ಸಾಮಾನ್ಯವೆಂದೂ, ಎಲ್ಲಾ ಭಾರತೀಯರಿಗೆ ಇದಾಗಲೇ ರೂಢಿಯಾಗಿ ಹೋಗಿದೆಯೆಂದೂ, ತಾವು ಈ ಬಗ್ಗೆ ಬೇಸರಪಟ್ಟುಕೊಳ್ಳಬಾರದೆಂದೂ ಗಾಂಧಿಗೆ ಸಮಾಧಾನ ಹೇಳಿದರು. ರೈಲ್ವೆ ಜನರಲ್ ಮೇನೆಜರ್ ಇಷ್ಟು ಹೊತ್ತಿಗೆ, ಸ್ಟೇಷನ್ ಮಾಸ್ತರಿಗೆ ಗಾಂಧಿಯನ್ನು ನಿಗದಿತ ಸ್ಥಳಕ್ಕೆ ಸುರಕ್ಷಿತವಾಗಿ ಕಳುಹಿಸಿ ಕೊಡಲು ಸೂಕ್ತ ಏರ್ಪಾಡುಮಾಡಬೇಕೆಂದು ಸೂಚನೆ ಇತ್ತಿದ್ದರು.

ಗಾಂಧಿ ಬೇರೆ ಟ್ರೈನಿನಲ್ಲಿ ಪ್ರಥಮ ದರ್ಜೆ ಬೋಗಿಯಲ್ಲೇ ಪಯಣ ಮುಂದುವರಿಸಿದರು. ಚಾಲ್ಸ್‌ಟೌನ್‌ನಲ್ಲಿ ಇಳಿದರು. ಆ ದಿನಗಳಲ್ಲಿ ಜೋಹಾನ್ಸ್ ಬರ್ಗ್‌ಗೆ ಟ್ರೈನ್ ಇರಲಿಲ್ಲ. ಕೋಚ್ ಗಾಡಿಯಲ್ಲೇ ಹೋಗಬೇಕಾಗಿತ್ತು. ಕೋಚ್‌ಗಾಡಿಯಲ್ಲಿ ಭಾರತೀಯರು ಗಾಡಿಯೊಳಗೆ ಕುಳಿತು ಪಯಣಿಸು ವಂತಿರಲಿಲ್ಲ. ಕೋಚ್‌ವಾಲ ಜೊತೆಗೆ ಹೊರಗೆ ಕುಳಿತು ಪಯಣಿಸಬೇಕಾಗಿತ್ತು. ಈ ಪ್ರಯಾಣದಲ್ಲೂ ಗಾಂಧಿಗೆ ಅವಮಾನವಾಗುವ ಪ್ರಸಂಗವೊಂದು ಜರುಗಿತು. ಗಾಡಿಯೊಳಗೆ ಕುಳಿತಿದ್ದ ಇಂಗ್ಲಿಷ್‌ನವನಿಗೆ ಸಿಗರೇಟ್ ಸೇದಬೇಕೆನಿಸಿದಾಗ ಹೊರಗೆ ಕುಳಿತುಕೊಳ್ಳುವ ಮನಸ್ಸಾಯಿತು. ಗಾಂಧಿಗೆ ಮುಂದೆ ಸರಿದು ಆತನ ಕಾಲ ಬಳಿ ಕುಳಿತುಕೊಳ್ಳಲು ಸೂಚಿಸಿದ. ಗಾಂಧಿ ಒಪ್ಪದಿದ್ದಾಗ ಅವರನ್ನು ಕೆಳಗೆ ತಳ್ಳಿ ಥಳಿಸಿದ. ಇದರಿಂದ ಕೋಪಗೊಂಡ ಗಾಂಧಿ ಕೋಚ್ ಕಂಪನಿಗೆ ದೂರಿತ್ತರು.

ಜೋಹಾನ್ಸ್‌ಬರ್ಗ್‌ನಲ್ಲಿ ಅಬ್ದುಲ್ಲಾನ ಆಫೀಸಿನ ಮಿತ್ರರು ಬಂದು ಗಾಂಧಿಯನ್ನು ಸ್ವಾಗತಿಸಿದರು. ಗಾಂಧಿಯಿಂದ ನಡೆದ ಪ್ರಕರಣದ ವಿವರ ಕೇಳಿ ಹೀಗೆ ನುಡಿದರು : "ನಾವು ವ್ಯಾಪಾರಿಗಳು, ಹಣ ಗಳಿಸುವುದೇ ನಮ್ಮ ಉದ್ದೇಶ. ಇಂತಹ ಸಣ್ಣಪುಟ್ಟ ಪ್ರಕರಣಗಳು ಇಲ್ಲಿ ದಿನನಿತ್ಯವೂ ನಡೆಯುತ್ತಲೇ ಇರುತ್ತವೆ.

ನಮಗೆ ಇವೆಲ್ಲಾ ರೂಢಿಯಾಗಿ ಹೋಗಿವೆ. ಇವೆಲ್ಲಾ ಅವಮಾನಪಡುವ ವಿಷಯವೆಂದೇ ನಮಗನಿಸುವುದಿಲ್ಲ. ನಿಮಗೆ ಹೊಸದು, ಇಲ್ಲಿ ಇರಬೇಕಾದರೆ ಇಂತಹ ಸಣ್ಣಪುಟ್ಟ ಅವಮಾನಕರ ಪ್ರಸಂಗಗಳನ್ನು ಸಹಿಸಿಕೊಳ್ಳಲೇಬೇಕಾಗುತ್ತದೆ. ಈಗ ನೀವು ಪ್ರಿಟೋರಿಯಾಕ್ಕೆ ಹೋಗಬೇಕಾಗಿದೆ. ಇಲ್ಲಿಂದ ಪ್ರಿಟೋರಿಯಾಗೆ ಹೋಗಲು ಭಾರತೀಯರಿಗೆ ಮೊದಲದರ್ಜೆ ಟಿಕೆಟೇ ಕೊಡುವುದಿಲ್ಲ. ಮೂರನೇ ದರ್ಜೆ ಬೋಗಿಯಲ್ಲೇ ನೀವು ಪಯಣಿಸಬೇಕಾಗುತ್ತದೆ." ಗಾಂಧಿ ಇದಕ್ಕೆ ಒಪ್ಪಲಿಲ್ಲ. ಇಂಗ್ಲಿಷ್‌ರವರಂತೆಯೇ ಫ್ರಾಕ್‌ಕೋಟ್, ನೆಕ್‌ಟೈ ಮುಂತಾದವನ್ನು ಧರಿಸಿಕೊಂಡು ಹೋಗಿ ರೈಲ್ವೆಸ್ಟೇಷನ್‌ಮಾಸ್ತರನ್ನು ಕಂಡರು, ಸ್ಟೇಷನ್‌ಮಾಸ್ತರು. ಹಾಲೆಂಡ್‌ನವರಾಗಿದ್ದುದರಿಂದ ಇವರ ಮೇಲೆ ಅನುಕಂಪಗೊಂಡು ನುಡಿದರು. 'ನಾನೇನೋ ಫಸ್ಟ್‌ಕ್ಲಾಸ್ ಟಿಕೇಟ್ ಕೊಡುತ್ತೇನೆ. ಆದರೆ ದಾರಿಯಲ್ಲಿ ಪೊಲೀಸರು ಎಳೆದು ಹೊರಗೆ ಹಾಕಿದರೆ ನಾನು ಜವಾಬ್ದಾರನಲ್ಲ".

ಫಸ್ಟ್‌ಕ್ಲಾಸ್ ಬೋಗಿಯಲ್ಲಿ ಪಯಣಿಸುತ್ತಿದ್ದ ಇವರನ್ನು ಗಾರ್ಡ್ ಹೊರಗೆ ದಬ್ಬುವ ಪ್ರಸಂಗ ಎದುರಾಯಿತು. ಆದರೆ ಒಳಗಿದ್ದ ಯೂರೋಪಿಯನ್ ಸಹ ಪ್ರಯಾಣಿಕ ಆಧುನಿಕ ಉಡುಪಿನಲ್ಲಿದ್ದ ಗಾಂಧಿಯನ್ನು ನೋಡಿ ಗಾರ್ಡಿಗೆ ಆತ ಸೂಚಿಸಿದ. "ಅವರು ನನ್ನ ಜೊತೆ ಪ್ರಯಾಣಿಸಲು ನನ್ನದೇನೂ ಅಭ್ಯಂತರವಿಲ್ಲ. ಈ ಸಭ್ಯರಿಗೆ ತೊಂದರೆ ಕೊಡಬೇಡಿ. ಅವರ ಬಳಿ ಫಸ್ಟ್‌ಕ್ಲಾಸ್ ಟಿಕೆಟ್ ಇದೆ. ಇಲ್ಲೇ ಕುಳಿತಿರಲು ಬಿಡಿ". ದಕ್ಷಿಣ ಆಫ್ರಿಕಾದಲ್ಲೂ ಭಾರತೀಯರ ಮೇಲೆ ಸಹಾನುಭೂತಿ ತೋರುವ ಕೆಲ ಐರೋಪ್ಯರಿದ್ದಾರೆಂದು ಗಾಂಧಿಗೆ ತುಸು ಸಂತಸವಾಯಿತು. ಆದರೆ ಟ್ರಾನ್ಸ್‌ವಾಲ್‌ನಲ್ಲಿ ಭಾರತೀಯರ ಸ್ಥಿತಿ ಉತ್ತಮವಾಗಿರಲಿಲ್ಲ. ಟ್ರಾನ್ಸ್‌ವಾಲ್ ಪ್ರಾಂತ ರಿಪಬ್ಲಿಕ್‌ರಾಷ್ಟ್ರವಾಗಿದ್ದುದರಿಂದ ಭಾರತೀಯರು ಬ್ರಿಟಿಷ್ ಪ್ರಜೆಗಳೆಂದು ಹೇಳಿಕೊಳ್ಳುವಂತಿರಲಿಲ್ಲ ಹಾಗೂ ಯಾವ ವಿಶೇಷ ಸೌಲಭ್ಯಕ್ಕೂ ಇವರು ಅರ್ಹರಾಗಿರಲಿಲ್ಲ. ೧೮೮೫ರಲ್ಲಿ ಈ ರಿಪಬ್ಲಿಕ್ ತಂದ ಒಂದು ಶಾಸನ ರೀತ್ಯ ವ್ಯಾಪಾರ ನಡೆಸುತ್ತಿದ್ದ ಪ್ರತಿಯೊಬ್ಬ ಭಾರತೀಯ ೨೫ ಪೌಂಡ್ ಶುಲ್ಕ ಕೊಟ್ಟು ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿತ್ತು. ೧೮೮೬ರಲ್ಲಿ ತಿದ್ದುಪಡಿಯಾಗಿ ಈ ಶುಲ್ಕ ೩ ಪೌಂಡ್‌ಗೆ ಇಳಿಸಲಾಗಿತ್ತು. ಇದನ್ನು ಸಲ್ಲಿಸದಿದ್ದರೆ ಆತ ಅನೇಕ ದಂಡಗಳಿಗೆ ಗುರಿಯಾಗಬೇಕಾಗುತ್ತಿತ್ತು. ಅಲ್ಲಿ ಭಾರತೀಯರು ಜಮೀನುಕೊಳ್ಳಲು

ನಿಷೇಧವಿತ್ತು. ಭಾರತೀಯರು ವಾಸಿಸಲು ಪ್ರತ್ಯೇಕ ಒಂದು ಸ್ಥಳವನ್ನು ಗುರ್ತಿಸಲಾಗಿತ್ತು. ಅವರು ಅಲ್ಲಿ ಮಾತ್ರ ವಾಸಿಸಬೇಕಾಗಿತ್ತು. ರಿಪಬ್ಲಿಕ್ ಆದ ನಂತರ ವಲಸೆ ಬಂದಿರುವ ಭಾರತೀಯರಿಗೆ ಓಟಿನ ಹಕ್ಕನ್ನು ಕಸಿದುಕೊಳ್ಳಲಾಗಿತ್ತು. ಏಷ್ಯನ್ ಮೂಲದವರು ಇಂಗ್ಲಿಷ್ ಸ್ಕೂಲ್‌ಗಳಿಗೆ ಮಕ್ಕಳನ್ನು ಸೇರಿಸುವಂತಿರಲಿಲ್ಲ. ಆದರೆ ಅರಬ್ ಮೂಲದವರಿಗೆ ಈ ಎಲ್ಲಾ ಕಾನೂನುಗಳಿಂದ ವಿನಾಯಿತಿ ನೀಡಲಾಗಿತ್ತು.

ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಈ ದುಃಸ್ಥಿತಿ ಕಂಡು ಗಾಂಧಿಯವರ ಮನಸ್ಸು ವಿಕ್ಷುಬ್ಧಗೊಂಡಿತು. ಇದನ್ನು ಸುಧಾರಿಸಲು ಏನಾದರೂ ಕ್ರಮಕೈಗೊಳ್ಳಬೇಕೆಂದು ನಿಶ್ಚಯಿಸಿದರು.

ನೇಟಾಲ್‌ನಲ್ಲಿ ದಾದಾ ಅಬ್ದುಲ್ಲಾ ಯಾವ ಗೌರವಯುತ ಸ್ಥಾನ ಗಳಿಸಿದ್ದರೋ ಅದರಂತೆಯೇ ಪ್ರಿಟೋರಿಯಾದಲ್ಲಿ ಸೇಠ್ ತೈಯಬ್ ಹಾಜಿಖಾನ್‌ಮಹಮದ್ ಗಳಿಸಿದ್ದರು. ಅಲ್ಲಿ ಅವರನ್ನು ಬಿಟ್ಟು ಯಾವ ಮಹತ್ ಕೆಲಸಗಳೂ ನಡೆಯುತ್ತಿರಲಿಲ್ಲ. ಗಾಂಧಿ ಪ್ರಿಟೋರಿಯಾದಲ್ಲಿದ್ದ ಮೊದಲನೇ ವಾರವೇ ಸೇಠ್ ತೈಯಬ್‌ರವರನ್ನು ಭೇಟಿಯಾಗಿ ತಮ್ಮ ಪರಿಚಯವನ್ನು ಮಾಡಿಕೊಟ್ಟರು. ತಾನು ಪ್ರಿಟೋರಿಯಾದಲ್ಲಿರುವ ಎಲ್ಲಾ ಹಿಂದೂಸ್ತಾನಿಯರನ್ನು ಭೇಟಿ ಮಾಡಬೇಕಾಗಿದೆಯೆಂದೂ ಇದಕ್ಕೆ ಸಹಕರಿಸಬೇಕೆಂದೂ ಅವರಲ್ಲಿ ವಿನಂತಿಸಿಕೊಂಡರು.

ಸೇಠ್ ಎಲ್ಲಾ ರೀತಿಯ ಸಹಕಾರ ನೀಡಲು ಮುಂದಾದರು. ಒಂದು ದಿನ ಅಲ್ಲಿ ಮಹಾಸಭೆಯನ್ನು ಸೇರಿಸಲು ಆಯೋಜಿಸಿದರು. ಗಾಂಧಿ ಭಾರತೀಯರ ಶೋಚನೀಯ ಸ್ಥಿತಿಯನ್ನು ಅವರಿಗೆ ಮನದಟ್ಟಾಗುವಂತೆ ವರ್ಣಿಸಿ ಹೇಳಿದರು. ಅದೇ ಅವರು ತಮ್ಮ ಜೀವಮಾನದಲ್ಲಿ ಮಾಡಿದ ಮೊದಲ ಸಾರ್ವಜನಿಕ ಭಾಷಣವಾಗಿತ್ತು. ಸತ್ಯವನ್ನು ಪ್ರತಿಪಾದಿಸುವುದೇ ಅವರ ಮುಖ್ಯ ಧ್ಯೇಯವಾಗಿತ್ತು. ಜೀವನದ ಎಲ್ಲಾ ಮಜಲುಗಳಲ್ಲಿ ಅದು ವ್ಯಾಪಾರವಾಗಲಿ, ಕೃಷಿಯಾಗಲಿ, ಸರ್ಕಾರಿ ಅಥವಾ ಖಾಸಗಿ ಸೇವೆಯಾಗಲಿ, ಸತ್ಯವಂತರಾಗಿ, ನಿಸ್ಪೃಹವಾಗಿ ಕರ್ತವ್ಯವನ್ನು ನೆರವೇರಿಸಬೇಕು. ಮೋಸ ಮಾಡಬಾರದು. ಅನ್ಯಾಯವನ್ನು ಎದುರಿಸುವ ಎದೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು. ಭಾರತದಿಂದ ವಲಸೆ ಬಂದಿರುವ ಭಾರತೀಯರಲ್ಲಿ ಈ ಸತ್ಯಸಂಧತೆ, ಧರ್ಮನಿಷ್ಠೆ ಜೀವನ

ಕ್ರಮ ಉಜ್ವಲವಾಗಿರಬೇಕು. ಇಲ್ಲದೇ ಇದ್ದರೆ ಮಾತೃಭೂಮಿಗೆ ಅವಮಾನ ಮಾಡಿದಂತಾಗುತ್ತದೆ. ಭಾರತದ ಕೋಟ್ಯಂತರ ಜನರ ಮೇಲೆ ಇದು ಪ್ರತಿಕೂಲ ಪರಿಣಾಮಬೀರುತ್ತದೆ. ಹೊರದೇಶಕ್ಕೆ ವಲಸೆ ಬಂದಿರುವ ಜನ, ಈ ದೇಶದಲ್ಲಿ ಬಂದೆರಗುವ ಎಡರು-ತೊಡರುಗಳು, ಕಾನೂನು ತೊಡಕುಗಳನ್ನು ಪರಿಹರಿಸಿಕೊಳ್ಳಲು ಸರಕಾರದ ಅಧಿಕಾರಿಗಳ ಭೇಟಿಮಾಡಿ ಚರ್ಚಿಸಿ, ಪತ್ರಮುಖೇನ ಅಹವಾಲು ಸಲ್ಲಿಸಿ ಶಾಂತರೀತಿಯಿಂದಲೇ, ಸಂಯಮ ವಹಿಸಿಯೇ ವ್ಯವಹರಿಸಬೇಕು. ಈ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ತಾನು ಪೂರ್ಣರೀತಿಯಲ್ಲಿ ಇಲ್ಲಿರುವಷ್ಟು ದಿನವೂ ಸಹಕರಿಸುವ ಆಶ್ವಾಸನೆಯನ್ನು ನೀಡಿದರು.

ಗಾಂಧಿಯ ಈ ಮಾತುಗಳು ಅಲ್ಲಿಯ ಭಾರತೀಯರಿಗೆ ಬಹಳ ಹಿಡಿಸಿತು. ಎಲ್ಲರೂ ಜಯಘೋಷ ಮಾಡಿ ಗಾಂಧಿಯ ಮಾತುಗಳನ್ನು ಅನುಮೋದಿಸಿದರು. ಆಗಾಗ್ಗೆ ಇಂತಹ ಸಭೆಯನ್ನು ನಡೆಸುತ್ತಿರಬೇಕೆಂದು ಸೂಚಿಸಿದರು. ಗಾಂಧಿ ಪ್ರಿಟೋರಿಯಾದಲ್ಲಿದ್ದ ಒಂದು ವರ್ಷದಲ್ಲಿ ಇಂತಹ ಹಲವಾರು ಸಭೆಗಳು ನಡೆದವು. ಗಾಂಧೀಜಿ ಅಲ್ಲಿ ಹಲವು ಸಭೆಗಳನ್ನು ನಡೆಸಿ ವಿಚಾರ ವಿನಿಮಯ ಮುಂದುವರಿಸಿದರು. ಬ್ರಿಟಿಷ್ ಏಜೆಂಟ್‌ರವರನ್ನು ಈ ಬಗ್ಗೆ ಭೇಟಿ ಮಾಡಿದರು. ಅವರೂ ಎಲ್ಲಾ ರೀತಿಯ ಸಹಾಯ ಮಾಡುವುದಾಗಿ ಆಶ್ವಾಸನೆ ನೀಡಿದರು.

ರೈಲ್ವೆ ಅಧಿಕಾರಿಗಳೊಡನೆ ಚರ್ಚಿಸಿದ ಫಲಸ್ವರೂಪವಾಗಿ ಒಳ್ಳೆಯ ಪೋಷಾಕುಧರಿಸಿದ ಭಾರತೀಯರು ಪ್ರಥಮದರ್ಜೆ ಬೋಗಿಯಲ್ಲಿ ಪ್ರಯಾಣಿಸ ಬಹುದೆಂಬ ಅನುಮತಿ ಪ್ರಾಪ್ತವಾಯಿತು.

ಗಾಂಧೀಜಿ ಅಲ್ಲಿನ ಭಾರತೀಯರ ಬಗ್ಗೆ ಸುದೀರ್ಘ ಅಧ್ಯಯನ ನಡೆಸಿ, ಇವರ ಜೀವನಮಟ್ಟ, ಅವರಿಗೆ ಲಭಿಸುತ್ತಿರುವ ಸೌಲಭ್ಯಗಳನ್ನು ಸುಧಾರಿಸಲು ಶೀಘ್ರವೇ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿದರು. ಪ್ರಸ್ತುತ, ಆಗ ಅವರನ್ನು ಸೇಠ್ ಅಬ್ದುಲ್ಲಾನ ಕೇಸ್ ಕಾಡುತ್ತಿತ್ತು. ಈ ಕೇಸಿಗೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು ಪರಿಶೀಲಿಸಿದರು. ಜೊತೆಯ ಬ್ಯಾರಿಸ್ಟರ್‌ಗಳ ಸಂಗಡ ಚರ್ಚಿಸಿದರು. ಯಾವೊಂದು ತೀರ್ಮಾನಕ್ಕೂ ಬಾರದೆ, ಈ ಕೇಸು ಬಹಳ ಕಾಲ ಮುಂದುವರಿಯುವ ಸಂಭವವಿದ್ದು ಎರಡೂ ಕಡೆಯ

ಕಕ್ಷಿದಾರರಿಗೆ ಅಪಾರ ಹಣವ್ಯಯವಾಗುವುದರಲ್ಲಿ ಸಂದೇಹವಿರಲಿಲ್ಲ. ಆದ್ದರಿಂದ ಗಾಂಧೀಜಿ ಪ್ರತಿಪಕ್ಷದ ತೈಯಾಬ್ ಸೇಠ್‌ರವರನ್ನು ಭೇಟಿ ಮಾಡಿ ಕೇಸಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿವರಿಸಿ, ಇಬ್ಬರ ದೃಷ್ಟಿಯಿಂದಲೂ ರಾಜಿ ಮಾಡಿಕೊಳ್ಳುವುದೇ ಸೂಕ್ತವೆಂದು ಸೂಚಿಸಿದರು. ಇದರಿಂದಾಗಿ ಇಬ್ಬರೂ ಕೇಸ್‌ಗಾಗಿ ಮಾಡುತ್ತಿರುವ ಅಪಾರ ಖರ್ಚು ಉಳಿಯುತ್ತದೆ. ಸಮಯ ವ್ಯಯ ತಪ್ಪುತ್ತದೆ. ತಮ್ಮ ತಮ್ಮ ವ್ಯಾಪಾರೋದ್ಯಮವನ್ನು ರೂಢಿಸಿಕೊಳ್ಳಲೂ ಅನುಕೂಲವಾಗುತ್ತದೆ. ಹೀಗೆ ಮಾಡುವುದರಿಂದ ಕೇಸ್ ಸಹ ಬೇಗ ಮುಗಿದು ಇಬ್ಬರಿಗೂ ಮಾನಸಿಕ ಶಾಂತಿ ಸಿಕ್ಕಿದಂತಾಗುತ್ತದೆ ಎಂದೆಲ್ಲಾ ಇಬ್ಬರು ಕಕ್ಷಿದಾರರುಗಳಿಗೂ ಹೇಳಿದ ಮೇಲೆ ಇಬ್ಬರೂ ರಾಜಿಗೆ ಒಪ್ಪಿಕೊಂಡರು. ರಾಜಿಯಲ್ಲಿ ಕೇಸು ದಾದಾ ಅಬ್ದುಲ್ಲಾ ಪರವೇ ಆಯಿತು. ಹೇರಳ ಹಣವನ್ನು ತೈಯಾಬ್ ಸೇಠ್ ದಾದಾ ಅಬ್ದುಲ್ಲಾಗೆ ಕೊಡಬೇಕಾಯಿತು. ಈ ಬಗ್ಗೆಯೂ ಗಾಂಧಿ ರಾಜೀ ಸೂತ್ರ ಮುಂದಿಟ್ಟರು. ತೈಯಾಬ್ ಸೇಠ್‌ರವರಿಂದ ಬರಬೇಕಾಗಿರುವ ೩೭೦೦೦ ಪೌಂಡನ್ನು ಸುಲಭ ಕಂತುಗಳಲ್ಲಿ ಪಡೆಯುವಂತೆ ಸೇಠ್ ಅಬ್ದುಲ್ಲಾರ ಮನ ಒಲಿಸಿ ಒಪ್ಪಿಸಿದರು. ಅಂದಿನಿಂದ ಇಬ್ಬರು ಸೇಠ್‌ಗಳೂ ಮಿತ್ರರಾದರು. ಬಹುದಿನದ ವ್ಯಾಜ್ಯ ಹೀಗೆ ಸುಖಾಂತದಲ್ಲಿ ಪರ್ಯಾವಸಾನಗೊಂಡಿತು.

ಇಬ್ಬರೂ ಕಕ್ಷಿದಾರರು ಗಾಂಧಿಯವರ ಈ ಮುತ್ಸದ್ದಿತನವನ್ನು ಮೆಚ್ಚಿಕೊಂಡರು. ಇಬ್ಬರಿಗೂ ಸಂತೋಷವಾಗಿತ್ತು.

ಗಾಂಧೀಜಿ ದಕ್ಷಿಣ ಆಫ್ರಿಕಾಗೆ ಬಂದಿದ್ದ ಕಾರ್ಯ ಮುಗಿದುಹೋದುದರಿಂದ ಭಾರತಕ್ಕೆ ಹಿಂತಿರುಗಲು ನಿರ್ಧರಿಸಿದರು. ಸೇಠ್ ಅಬ್ದುಲ್ಲಾ ಹಾಗೂ ಭಾರತೀಯ ಮಿತ್ರರು ಇವರಿಗೆ ಡರ್ಬಾನ್‌ನಲ್ಲಿ ಭಾರಿ ಬೀಳ್ಕೊಡಿಗೆ ಸಮಾರಂಭವನ್ನು ಏರ್ಪಡಿಸಿದರು. ಆ ಸಮಾರಂಭದಲ್ಲಿ ಗಾಂಧಿ ಇಂಡಿಯನ್ ಫ್ರಾನ್‌ಚೈಸ್ (Indian Franchise) ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದಾಗ ಪತ್ರಿಕೆಯ ಕೊನೆಯಲ್ಲಿದ್ದ ಕೆಲಸಾಲುಗಳು ಇವರ ಆಸಕ್ತಿಯನ್ನು ಕೆರಳಿಸಿದವು. ನೇಟಾಲ್ ವಿಧಾನಸಭೆಯ ಮುಂದೆ ಶೀಘ್ರವೇ ಒಂದು ಮಸೂದೆ ಮಂಡಿಸಲಾಗುತ್ತಿತ್ತು. ಅದರ ರೀತ್ಯ ವಿಧಾನಸಭೆಗೆ ಸದಸ್ಯರನ್ನು ಆರಿಸುವ ಹಕ್ಕನ್ನು ಭಾರತೀಯರು ಕಳೆದುಕೊಳ್ಳುತ್ತಿದ್ದರು. ಈ ಬಗ್ಗೆ ಅಲ್ಲಿ ಸೇರಿದ್ದ ಯಾರಿಗೂ ಕಿಂಚಿತ್ತೂ ಮಾಹಿತಿ ಇರಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಯಾವ

ಭಾರತೀಯರೂ ಇಂಗ್ಲಿಷ್ ಪತ್ರಿಕೆಗಳನ್ನು ಓದುತ್ತಿರಲಿಲ್ಲ. ಈ ವಿಷಯವೂ ಸಹ ಅಕಸ್ಮಾತ್ ಗಾಂಧಿಯ ಕಣ್ಣಿಗೆ ಬೀಳದೆ ಹೋಗಿದ್ದರೆ ಮಸೂದೆ ವಿಧಾನಸಭೆಯಲ್ಲಿ ಪಾಸಾಗಿ ಕಾನೂನು ಆಗಿ ಬಿಡುತ್ತಿತ್ತು. ಸರ್ಕಾರದ ಈ ಭಾರತಜನವಿರೋಧಿ ಚಟುವಟಿಕೆಯಿಂದಾಗುವ ದುಷ್ಪರಿಣಾಮಗಳನ್ನು ಗಾಂಧಿ ಜನರ ಮುಂದೆ ವಿವರಿಸಿದರು. ಆಗ ಅವರೆಲ್ಲಾ ವಿಹ್ವಲಗೊಂಡರು. ಇದನ್ನು ಹೇಗಾದರೂ ಮಾಡಿ ವಿರೋಧಿಸಬೇಕೆಂದು ಒಮ್ಮತದಿಂದ ಎಲ್ಲರೂ ತೀರ್ಮಾನಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಗಾಂಧಿಯನ್ನೇ ಪ್ರಾರ್ಥಿಸಿದರು. ಸೇಠ್‌ಅಬ್ದುಲ್ಲಾ ಸಹ ಗಾಂಧಿಯವರಿಗೆ ಅಲ್ಲೇ ಉಳಿದು ಕಾರ್ಯಪ್ರವೃತ್ತರಾಗಲು ಸೂಚಿಸಿದರು. ಈ ಬಗ್ಗೆ ಕೆಲಸ ಮಾಡಲು ಇದ್ದಷ್ಟು ದಿನವೂ ಅವರ ವಸತಿ, ಊಟ, ಉಪಚಾರ, ಇತರೇ ಖರ್ಚು ಎಲ್ಲವನ್ನೂ ಭರಿಸಲು ಅಲ್ಲಿ ಸೇರಿದ್ದ ಜನ ಒಪ್ಪಿಕೊಂಡರು.

ಗಾಂಧೀಜಿ ಜನರ ಪ್ರೀತಿ, ವಿಶ್ವಾಸಕ್ಕೆ ಮಣಿದು ಇನ್ನೊಂದು ತಿಂಗಳು ದಕ್ಷಿಣ ಆಫ್ರಿಕಾದಲ್ಲೇ ಉಳಿಯಲು ಮನಸ್ಸು ಮಾಡಿದರು.

ಹೀಗೆ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಆತ್ಮಾಭಿಮಾನ ಕುದುರಿಸುವ ಹಾಗೂ ಬ್ರಿಟಿಷ್ ಸರ್ಕಾರದ ದಮನ ನೀತಿಯನ್ನು ಎದುರಿಸುವ ವೇದಿಕೆ ಸಿದ್ಧವಾಯಿತು. ಗಾಂಧೀಜಿ ಈ ಚಳವಳಿಯ ಅಧ್ವರ್ಯುವಾಗಿ ರೂಪುಗೊಂಡರು.

◆ ◆ ◆

'ಗಾಂಧೀಜಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ಆದರೆ ಬೇರೆ ಯಾವ ಕಾರ್ಯವೂ, ಸ್ವಾತಂತ್ರ್ಯ ಸಾಧನೆಯೂ ಸಹ ಅವರು ಕಲ್ಕತ್ತೆಯಲ್ಲಿ ಕೆಡುಕಿನ ಮೇಲೆ ಸಾಧಿಸಿದ ವಿಜಯಕ್ಕೆ ಸಮಾನವಾಗಲಾರದು.'

ರಾಜಾಜಿ

೬ 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಉದಯ

ಸೇಠ್ ಹಾಜಿ ಮಹಮದ್ ಹಾಜಿದಾದಾ ಅವರು ನೇಟಾಲ್ ಪ್ರಾಂತದ ಭಾರತೀಯರ ಪ್ರಮುಖ ಹಾಗೂ ಪ್ರಭಾವಿ ನಾಯಕರಾಗಿದ್ದರು. ಸೇಠ್ ಅಬ್ದುಲ್ಲಾ ಆರ್ಥಿಕ ಬೆನ್ನೆಲುಬಾಗಿದ್ದರು. ಸಾರ್ವಜನಿಕವಾದ ಯಾವುದೇ ಕೆಲಸ ಕಾರ್ಯಗಳು ನಡೆಯಬೇಕಾದರೂ ಮಹಮದ್ ಹಾಜಿದಾದಾರವರೇ ನೇತೃತ್ವ ವಹಿಸುತ್ತಿದ್ದರು. ಆದ್ದರಿಂದ ಗಾಂಧಿಯವರು ತಮ್ಮೆಲ್ಲ ಚಟುವಟಿಕೆಗೆ ಅವರ ಸಹಾಯವನ್ನು ಬಯಸಿ ಅವರನ್ನು ಮೊದಲು ಭೇಟಿ ಮಾಡಿ, ಅವರ ಅಧ್ಯಕ್ಷತೆಯಲ್ಲೇ ಸೇಠ್ ಅಬ್ದುಲ್ಲಾರವರ ಮನೆಯಲ್ಲೇ ಸರ್ಕಾರವು ತರಬಯಸಿರುವ ಮಸೂದೆಯ ಬಗ್ಗೆ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮದ ರೂಪರೇಷೆಗಳನ್ನು ತೀರ್ಮಾನಿಸಲು ಒಂದು ಸಭೆಯನ್ನು ಆಯೋಜಿಸಿದರು. ಅಧಿಕ ಸಂಖ್ಯೆಯಲ್ಲಿ ಮುಂದೆ ಬಂದ ಕಾರ್ಯಕರ್ತರುಗಳು ನೇಟಾಲ್‌ನಲ್ಲಿ ಜನ್ಮ ತಾಳಿದ್ದ ಬಹಳಷ್ಟು ಭಾರತೀಯರನ್ನು ಸಂಘಟಿಸುವಲ್ಲಿ ಯಶಸ್ವಿ ಯಾಗಿದ್ದರು.

ಗಾಂಧಿಯವರು ಮಸೂದೆಯ ಬಗ್ಗೆ ಸಭಿಕರಿಗೆ ವಿವರಣೆ ನೀಡಿ ಅದನ್ನು ವಿರೋಧಿಸುವ ಅರ್ಜಿಯನ್ನು ಶೀಘ್ರುವೇ ವಿಧಾನಸಭೆಯ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳಿಗೆ ಕಳುಹಿಸುತ್ತಿರುವ ಬಗ್ಗೆ ವಿವರಣೆ ನೀಡಿದರು. ಅರ್ಜಿಯ ಪ್ರತಿಯನ್ನು ಎಲ್ಲಾ ದೇಶೀಯ ಪತ್ರಿಕೆಗಳಿಗೆ ಹಾಗೂ ಇಂಗ್ಲೆಂಡಿನ ಪ್ರಮುಖ ಪತ್ರಿಕೆಗಳಿಗೆ ಪ್ರಕಟಣೆಗಾಗಿ ಕಳುಹಿಸಿಕೊಟ್ಟರು. ಎಲ್ಲಾ ಪತ್ರಿಕೆಗಳು ಭಾರತೀಯರ ನ್ಯಾಯಯುತ ಬೇಡಿಕೆಗಳಿಗೆ ಬೆಂಬಲ ನೀಡಿ ಅರ್ಜಿಯ ಪ್ರತಿಯೊಡನೆ ತಮ್ಮ ಪ್ರತಿಕ್ರಿಯೆಯನ್ನು ಪ್ರಕಟಿಸಿದವು. ಆದರೂ ವಿಧಾನಸಭೆಯಲ್ಲಿ ಮಸೂದೆ ಮಂಜೂರಾಗಿ ಹೋಯಿತು. ನೇಟಾಲ್‌ನಲ್ಲಿದ್ದ ಭಾರತೀಯರಿಗೆ ಆಘಾತ ಉಂಟು ಮಾಡಿತು. ಉಗ್ರ ಹೋರಾಟಕ್ಕೆ ಎಲ್ಲರೂ ಸಿದ್ಧರಾದರು.

ಲಾರ್ಡ್‌ರಿಪ್ಪನ್‌ರವರು ಬ್ರಿಟಿಷ್‌ಕಾಲೋನಿಗಳ ಉಸ್ತುವಾರಿ ಕಾರ್ಯದರ್ಶಿ ಯಾಗಿದ್ದರು. ಸಭೆ ಅವರಿಗೆ ಮನವಿ ಸಲ್ಲಿಸಲು ನಿರ್ಧರಿಸಿತು ಹಾಗೂ ಈ , ಬಗ್ಗೆ ವಿರೋಧಿಸುವ ಸಹಸ್ರಾರು ಭಾರತೀಯರ ಸಹಿ ಸಂಗ್ರಹಣೆಗೆ ಮುಂದಾದರು.

೧೫ ದಿನಗಳಲ್ಲಿ ಸುಮಾರು ಹತ್ತು ಸಾವಿರ ಸಹಿಗಳನ್ನು ಸಂಗ್ರಹಿಸಿ ಮಸೂದೆಯನ್ನು ಉಗ್ರವಾಗಿ ಖಂಡಿಸಿ ಅದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂಬ ಮನವಿಯನ್ನು ಸಲ್ಲಿಸಿ, ಸಾವಿರಾರು ಪ್ರತಿಗಳನ್ನು ದಕ್ಷಿಣ ಆಫ್ರಿಕಾ, ಭಾರತ, ಇಂಗ್ಲೆಂಡ್ ಎಲ್ಲೆಡೆ ಕಳುಹಿಸಿ ಕೊಡಲಾಯಿತು. ಹೀಗೆ ವ್ಯಾಪಕ ಪ್ರಚಾರ ಮಾಡಲಾಯಿತು.

ಇವೆಲ್ಲಾ ಕೆಲಸದಲ್ಲಿ ತೊಡಗಿಕೊಂಡ ಗಾಂಧಿ, ನೇಟಾಲ್ ಬಿಡುವುದು ಸಾಧ್ಯವಿರಲಿಲ್ಲ. ಅಲ್ಲಿನ ಭಾರತೀಯರೆಲ್ಲಾ ಗಾಂಧಿ ಅಲ್ಲೇ ನೆಲಸಬೇಕೆಂದು ಒತ್ತಾಯಿಸುತ್ತಿದ್ದರು.

ಗಾಂಧಿ ಅಲ್ಲಿನ ಸುಪ್ರೀಂಕೋರ್ಟಿನಲ್ಲಿ ಅಡ್ವೊಕೇಟ್ ಆಗಿ ಕೆಲಸ ಮಾಡಲು ಹೆಸರು ನೊಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದರು. ಕರಿಯ ಜನ ಅಲ್ಲಿ ಅಡ್ವೊಕೇಟಾಗಿರುವುದು ಬ್ರಿಟಿಷರಿಗೆ ಇಷ್ಟವಿರಲಿಲ್ಲ. ಹಲವಾರು ತಕರಾರು ತೆಗೆದರು. ಪ್ರಸಿದ್ಧ ನ್ಯಾಯವಾದಿಗಳು, ಅನಂತರ ಅಡ್ವೋಕೇಟ್‌ಜನರಲ್ ಆಗಿದ್ದ ಎಸ್ಕಾಮ್‌ರವರು ಗಾಂಧಿ ಪರವಾಗಿ ವಕಾಲತ್ತು ವಹಿಸಿ ನ್ಯಾಯವಾದಿ ಸಂಘದ ಆಕ್ಷೇಪಣೆಯನ್ನೆಲ್ಲಾ ಖಂಡಿಸಿದರು. ಸುಪ್ರೀಂಕೋರ್ಟ್, ಕೊನೆಗೆ ಗಾಂಧಿಯವರ ಹೆಸರನ್ನು ಅಂಗೀಕರಿಸಿ ಕೋರ್ಟಿನಲ್ಲಿ ವಾದಿಸಲು ಒಪ್ಪಿಗೆ ನೀಡಿತು.

ನೇಟಾಲ್‌ನಲ್ಲಿ ಸರ್ಕಾರದ ವಿರುದ್ಧ ಹೋರಾಡಲು ಸ್ಥಾಪಿಸಿದ್ದ ಹಂಗಾಮಿ ಪಕ್ಷಕ್ಕೆ ಖಾಯಂ ಸ್ಥಾನಮಾನ ಕೊಡುವುದು ಒಳಿತೆಂದು ಅಲ್ಲಿನ ಎಲ್ಲರಿಗೂ ಅನಿಸಿತು. ಗಾಂಧಿಯೂ ಈ ಬಗ್ಗೆಯೇ ಯೋಚಿಸುತ್ತಿದ್ದರು. ದಾದಾಭಾಯಿ ನವರೋಜಿ ಹೆಸರಿನೊಂದಿಗೆ 'ಕಾಂಗ್ರೆಸ್' ಎಂಬ ಪದವೂ ಗಾಂಧಿಯವರ ಮನಸ್ಸಿನಲ್ಲಿ ಬಹಳ ದಿನಗಳಿಂದ ನೆಲೆಸಿ ಒಂದು ತರಹ ಭಕ್ತಿಭಾವ ಉದ್ಭವಿಸಿತ್ತು. ಆದ್ದರಿಂದ ಅವರು ಸ್ಥಾಪಿಸಿದ್ದ ಸಂಸ್ಥೆಗೆ 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಎಂದು ಹೆಸರಿಡಲು ಸೂಚಿಸಿದರು. ಸಭೆಯಲ್ಲಿ ಇದೂ ಸರ್ವಾನುಮತ ದಿಂದ ಅಂಗೀಕಾರಗೊಂಡಿತು.

ನೇಟಾಲ್‌ನಲ್ಲಿ ದಿನಾಂಕ ೨೨ ಮೇ ೧೮೯೪ ರಂದು 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಅಸ್ತಿತ್ವಕ್ಕೆ ಬಂತು. ಅಂದಿನಿಂದ ಪೂರ್ಣರೂಪದಲ್ಲಿ ನೇಟಾಲ್‌ನಲ್ಲಿ ರಾಜಕೀಯ ಚಟುವಟಿಕೆಗಳು ಈ ಸಂಸ್ಥೆಯುಡಿ ನಡೆಯತೊಡಗಿದವು. ಚಂದಾ ಹಣ ತಿಂಗಳಿಗೆ ಐದು ಷಿಲಿಂಗ್ ಎಂದೂ,

ಹಣವಂತರು ಹೆಚ್ಚಿಗೆ ಬೇಕಾದರೂ ಕೊಡಬಹುದೆಂದೂ ತೀರ್ಮಾನಿಸಲಾಯಿತು. ಸೇಠ್ ಅಬ್ದುಲ್ಲಾ ಮುಂತಾದವರು ತಿಂಗಳಿಗೆ ೨ ಪೌಂಡ್ ಚಂದಾ ಕೊಡಲು ಪ್ರಾರಂಭಿಸಿದರು. ಗಾಂಧಿ ತಿಂಗಳಿಗೆ ೧ ಪೌಂಡ್ ಚಂದಾ ಕೊಡಲು ಸಿದ್ಧರಾದರು. ಪ್ರತೀ ತಿಂಗಳೂ ಈ ಚಂದಾಹಣವನ್ನು ವಸೂಲು ಮಾಡುವುದು ಕಷ್ಟಕರವಾದುದೆಂದು ಅವರಿಗೆ ಮನದಟ್ಟಾದಾಗ ವಾರ್ಷಿಕ ಚಂದಾ ಹಣ ಮೂರು ಪೌಂಡ್‌ಗಳಿರಬೇಕೆಂದು ನಿರ್ಧರಿಸಿದರು. ಇದೇ ಸಂಸ್ಥೆಯಡಿಯಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕಲ್ಪಿಸುವ ಸಲುವಾಗಿ 'ಇಂಡಿಯನ್ ಎಜುಕೇಷನಲ್ ಅಸೋಸಿಯೇಷನ್' ಸ್ಥಾಪಿತಗೊಂಡಿತು. ಹಾಗೇ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಗ್ರಂಥಾಲಯ ವನ್ನೂ ಸಹ ತೆರೆಯಲಾಯಿತು. ಜನರಿಗೆ ಅವರ ಹಕ್ಕುಬಾಧ್ಯತೆಯ ಬಗ್ಗೆ ತಿಳುವಳಿಕೆ ನೀಡುವ ಸಲುವಾಗಿ ಗಾಂಧಿ ಕೆಲವು ಕರಪತ್ರಗಳನ್ನು ಮುದ್ರಿಸಿ ನೇಟಾಲ್ ಪ್ರಾಂತ್ಯಾದ್ಯಂತಾ ಹಂಚಿಸಿದರು. ಇದರಿಂದ ಗಾಂಧಿಯವರ ಹೆಸರು ಎಲ್ಲರ ನಾಲಿಗೆಯ ಮೇಲೂ ನಲಿದಾಡತೊಡಗಿತು. ಹಾಗೇ ಗಾಂಧಿಯವರ ಮಿತ್ರವೃಂದ ವೃದ್ಧಿಸಿತು. ಭಾರತೀಯರ ಬಗ್ಗೆ ಸಹಾನುಭೂತಿ ಎಲ್ಲೆಡೆ ಹೆಚ್ಚಿತು. ಇದೇ ದಿನದಲ್ಲಿ ನೇಟಾಲ್ ವಿಧಾನಸಭೆ ಅಂಗೀಕರಿಸಿದ್ದ ಭಾರತೀಯರ ಓಟಿನ ಹಕ್ಕನ್ನು ಕಸಿದುಕೊಳ್ಳುವ ಮಸೂದೆಯನ್ನು ಭಾರತದಲ್ಲಿದ್ದ ಲಾರ್ಡ್‌ರಿಪ್ಪನ್ ತಿರಸ್ಕರಿಸಿದ್ದರು. ಇದು ದಕ್ಷಿಣ ಆಫ್ರಿಕಾದಲ್ಲಿದ್ದ ಅದರಲ್ಲೂ ನೇಟಾಲಿನಲ್ಲಿದ್ದ ಭಾರತೀಯರಿಗೆ ಸಂತಸ ತಂದಿತ್ತು. ಗಾಂಧಿಗೂ ತನ್ನ ಶ್ರಮ ಸಾರ್ಥಕವಾದುದಕ್ಕೆ ಸಮಾಧಾನವಾಗಿತ್ತು. ಆದ್ದರಿಂದ ಗಾಂಧಿ ಭಾರತಕ್ಕೆ ಹಿಂತಿರುಗಲು ಸಿದ್ಧರಾದರು.

ಗಾಂಧೀಜಿ ಭಾರತಕ್ಕೆ ಹಿಂತಿರುಗಲು ನಿಶ್ಚಯಿಸಿದೊಡನೆಯೇ 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಸಂಸ್ಥೆಯ ಕಾರ್ಯದರ್ಶಿ ಸ್ಥಾನಕ್ಕೆ ನೇಟಾಲಿನ ಪ್ರಸಿದ್ಧ ವ್ಯಾಪಾರಿ ಶ್ರೀ ಆದಂಜಿ ಮಿಯಾನ್‌ಖಾನ್ ಎಂಬುವರನ್ನು ನೇಮಿಸಿ ೧೮೯೬ರ ಮಧ್ಯದಲ್ಲಿ ಡರ್ಬಾನಿಂದ ಹೊರಟು ಕಲ್ಕತ್ತಾ ಸೇರಿದರು. ೨೪ ದಿನಗಳ ಈ ಹಡಗಿನಲ್ಲಿನ ಪ್ರಯಾಣದಲ್ಲಿ ಗಾಂಧೀಜಿ, ಹಡಗಿನ ಡಾಕ್ಟರಿಂದ ಪಡೆದ ಪುಸ್ತಕ 'ತಮಿಳ್ ಸೆಲ್ಫ್ ಟೀಚರ್' ಓದಿ ವ್ಯವಹಾರಕ್ಕೆ ಸಾಕಾಗುವಷ್ಟು ತಮಿಳನ್ನು ಕಲಿತರು. ಗಾಂಧೀಜಿ ವೇಳೆಯನ್ನು ಎಂದೂ ವೃಥಾ ವ್ಯಯಮಾಡುತ್ತಿರಲಿಲ್ಲ ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆಯಾಗಿದೆ.

ಕಲ್ಕತ್ತಾ ಬಂದರನ್ನು ತಲುಪಿದ ದಿನವೇ ಗಾಂಧಿ ಮುಂಬಯಿ ರೈಲು ಹಿಡಿದರು. ದಾರಿಯಲ್ಲಿ ಅಲಹಾಬಾದ್‌ನಲ್ಲಿ ಇಳಿದು 'ಪಯನೀರ್' ಪತ್ರಿಕೆಯ ಸಂಪಾದಕರನ್ನು ಭೇಟಿಯಾದರು. ಇವರ ಅಭಿಪ್ರಾಯಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿ, ಸಹಕರಿಸಲು ಕೋರಿದರು. ಅಲ್ಲಿಂದ ಹೊರಟು ರಾಜ್‌ಕೋಟ್ ಸೇರಿ ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಸ್ಥಿತಿಗತಿಯ ಬಗ್ಗೆ 'ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಸ್ಥಿತಿ' ಎಂಬ ಸುದೀರ್ಘ ಲೇಖನವನ್ನು ಸಿದ್ಧಪಡಿಸಿ, ಹಸಿರು ಕಾಗದದಲ್ಲಿ ಸಹಸ್ರಾರು ಪತ್ರಿಕೆಗಳನ್ನು ಮುದ್ರಿಸಿ ಎಲ್ಲಾ ಪತ್ರಿಕೆಗಳಿಗೂ ಹಾಗೂ ಭಾರತದಲ್ಲಿನ ಎಲ್ಲಾ ರಾಜಕೀಯ ಮುಖ್ಯಸ್ಥರಿಗೂ ಕಳುಹಿಸಿಕೊಟ್ಟರು. ಇದರ ಸಂಕ್ಷಿಪ್ತ ವಿವರ ಇಂಗ್ಲೆಂಡಿನ 'ರಾಯಿಟರ್' ಹಾಗೂ ನೇಟಾಲ್‌ನಲ್ಲಿನ ಎಲ್ಲಾ ಪತ್ರಿಕೆಗಳಿಗೂ ಕಳುಹಿಸಿಕೊಟ್ಟರು. ಇವರು ಬರೆದ ಆ ಪ್ರಮುಖ ಲೇಖನ 'ಹಸಿರುಕರಪತ್ರ'ವೆಂದು ಹೆಸರು ಪಡೆದು ಎಲ್ಲೆಡೆ ಇವರ ಹೆಸರನ್ನು ಪ್ರಚುರಪಡಿಸಿತು. ನೇಟಾಲ್‌ನಲ್ಲಿ ಈ ಪತ್ರ ಅಪಪ್ರಚಾರಕ್ಕೆ ಕಾರಣವಾಗಿ ಗಾಂಧಿಯವರಿಗೆ ಮುಂದೆ ಬಹಳ ತೊಂದರೆಯನ್ನೂ ತಂದಿತು. ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಕುಂದುಕೊರತೆಗಳನ್ನು ಬಹಳ ವೈಭವೀಕರಿಸಿ, ಬ್ರಿಟಿಷರು ಭಾರತೀಯರಿಗೆ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಕೊಡುತ್ತಿದ್ದ ತೊಂದರೆಗಳನ್ನು ಉತ್ಪ್ರೇಕ್ಷೆ ಮಾಡಿ ಬರೆದಿದ್ದಾರೆಂದು ನೇಟಾಲ್ ನಲ್ಲಿ ಅಸಮಾಧಾನದ ಹೊಗೆ ಎಬ್ಬಿಸಿತ್ತು. ಮುಂದೆ ಗಾಂಧಿ ನೇಟಾಲ್‌ಗೆ ಹಿಂತಿರುಗಿದಾಗ ಬ್ರಿಟಿಷರ ಕೋಪಕ್ಕೆ ತುತ್ತಾಗಬೇಕಾಯಿತು. ಗಾಂಧೀಜಿಯವರ ಗಮನಕ್ಕೂ ಬಾರದ, ಯಾವ ವಿಧದಲ್ಲೂ ಅವರಿಗೆ ಸಂಬಂಧವಿಲ್ಲದ ಇನ್ನೊಂದು ಘಟನೆ ಯೂರೋಪಿಯನ್ನರ ಕೋಪಕ್ಕೆ ಆಜ್ಯ ಹುಯ್ದಿತ್ತು. ಗಾಂಧೀಜಿ ಭಾರತದಲ್ಲಿದ್ದಾಗ ಕೂಡಲೇ ಹಿಂತಿರುಗಿ ಬರಬೇಕೆಂದು ನೇಟಾಲ್ ನಿಂದ ತಂತಿಸುದ್ದಿ ಬಂದಾಗ ಜರುಗಿದ ಅನಿರೀಕ್ಷಿತ ಘಟನೆ ಅಲ್ಲಿನ ಜನರ ಕೋಪಕ್ಕೆ ಎರಡನೆಯ ಕಾರಣವಾಗಿತ್ತು. ಗಾಂಧೀಜಿಯಿದ್ದ ಭಾರತದಿಂದ ನೇಟಾಲ್‌ಗೆ ಮುಂಬಯಿಂದ ಹೊರಟ ಹಡಗು 'ಕೋರ್ಲೆಂಡ್'ನಲ್ಲಿ ೩೦೦-೪೦೦ ಜನ ಭಾರತೀಯರು, ಪ್ರಮುಖವಾಗಿ ಕೂಲಿಯವರು ಹಾಗೂ ದಕ್ಷಿಣ ಆಫ್ರಿಕಾದ ಹಳೆಯ ನಿವಾಸಿಗಳು ಇದ್ದರು. ಅದೇ ದಿನ ಅಲ್ಲಿಂದ ನೇಟಾಲ್‌ಗೆ ಹೊರಟ ಇನ್ನೊಂದು ಹಡಗು 'ನಾವೇರಿ' ಯಲ್ಲೂ ಸುಮಾರು ೩೦೦-೪೦೦

ಭಾರತೀಯರು ಇದ್ದರು. ಭಾರತೀಯರು ಗಾಂಧಿ ನೇತೃತ್ವದಲ್ಲಿ ನೇಟಾಲ್‌ಗೆ ಮುತ್ತಿಗೆ ಹಾಕಲು ಬರುತ್ತಿದ್ದಾರೆಂಬ ತಪ್ಪು ವದಂತಿ ಯೂರೋಪಿಯನ್ನರ ಕೋಪಕ್ಕೆ ಇನ್ನೊಂದು ಕಾರಣವಾಗಿತ್ತು.

ಮುಂಬಯಿಗೆ ಬಂದ ಗಾಂಧಿ ಅಲ್ಲಿ ಫಿರೋಜ್‌ಷಾ ಮೆಹತಾ, ನ್ಯಾಯಮೂರ್ತಿ ಬದ್ರುದೀನ್‌ತೇಬ್ಜಿ, ಮಹಾದೇವ ಗೋವಿಂದರಾನಡೆ ಮುಂತಾದವರನ್ನು ಕಂಡರು. ಅಲ್ಲೂ ಪ್ರಚಂಡಸಭೆಯಲ್ಲಿ ಭಾಷಣ ಮಾಡಿದರು. ತಿಲಕರು, ಭಂಡಾರ್‌ಕರ್, ಗೋಪಾಲಕೃಷ್ಣ ಗೋಖಲೆಯವರನ್ನು ಕಂಡು ಮಾತನಾಡಿದರು. ಪ್ರೊಫೆಸರ್ ಭಂಡಾರ್‌ಕರ್ ಅವರ ಅಧ್ಯಕ್ಷತೆಯಲ್ಲಿ ಸೇರಿಸಿದ್ದ ಸಭೆಯಲ್ಲಿ ಗಾಂಧಿ ಮಾತನಾಡಿ ನೇಟಾಲ್‌ನಲ್ಲಿನ ಭಾರತೀಯರ ಸ್ಥಿತಿಗತಿಗಳನ್ನು ವಿವರಿಸಿದರು. ಅಲ್ಲಿಂದ ಮದ್ರಾಸಿಗೆ ಹೋಗಿ ಅಲ್ಲಿ ನ್ಯಾಯವಾದಿ ಸರ್ ಸುಬ್ರಹ್ಮಣ್ಯಅಯ್ಯರ್, 'ಹಿಂದೂ' ಪತ್ರಿಕೆಯ ಸಂಪಾದಕ ಜಿ. ಸುಬ್ರಹ್ಮಣ್ಯಂ; 'ಮದ್ರಾಸ್ ಸ್ಟ್ಯಾಂಡರ್ಡ್' ಪತ್ರಿಕೆಯ ಸಂಪಾದಕ ಪರಮೇಶ್ವರ ಪಿಳ್ಳೆ ಮುಂತಾದವರನ್ನು ಭೇಟಿ ಮಾಡಿ, ಒಂದು ದೊಡ್ಡ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅಲ್ಲಿಂದ ಕಲ್ಕತ್ತಾಗೆ ಹೋಗಿ ಸುರೇಂದ್ರನಾಥ ಬ್ಯಾನರ್ಜಿ, ಜೋತೀಂದ್ರ ಮೋಹನ ಠಾಕೂರ್, 'ಇಂಗ್ಲಿಷ್‌ಮನ್' ಪತ್ರಿಕೆಯ ಸಂಪಾದಕರಾದ 'ಸಾಂಡರ್ಸ್' ಮುಂತಾದವರನ್ನು ಭೇಟಿ ಮಾಡಿದರು.

ಇದೇ ದಿನದಲ್ಲಿ ಮುಂಬಯಿಯಲ್ಲಿ ಪ್ಲೇಗ್ ಮಾರಿ ಹರಡಿತ್ತು. ಗಾಂಧಿಯವರು ಈ ಸಂದರ್ಭದಲ್ಲಿ ಜನ ಸೇವೆಗೆ ತಮ್ಮನ್ನು ತೊಡಗಿಸಿ ಕೊಂಡರು. ಹಲವೆಡೆ ಸಂಚರಿಸಿ ಜನರ ಮನೆಯಲ್ಲಿನ ನೈರ್ಮಲ್ಯಕ್ಕೆ ಆದ್ಯತೆ ಕೊಡಲು ಶ್ರಮಿಸಿದರು. ವನಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಖುದ್ದಾಗಿ ನೂರಾರು ಗಿಡಗಳನ್ನು ನೆಟ್ಟರು. ಹಲವು ದಿನ ನೀರು ಹಾಕಿ ಸಲುಹಿದರು. ಪ್ರಚಾರಕ್ಕಾಗಿ ಯಾರೂ ಸೇವಾ ಕಾರ್ಯದಲ್ಲಿ ತೊಡಗಿಕೊಳ್ಳ ಬಾರದೆಂದು ಹೋದೆಡೆಯಲ್ಲೆಲ್ಲಾ ಸಾರಿ ಹೇಳಿದರು. ಹೇಳಿದಂತೆ ಮಾಡಿ ಆದರ್ಶಕ್ಕೆ ಒತ್ತು ನೀಡಿದರು.

ಗಾಂಧಿಯವರು ಕಲ್ಕತ್ತಾದಲ್ಲಿದ್ದಾಗ ನೇಟಾಲ್‌ಗೆ ತಕ್ಷಣ ಬರಬೇಕೆಂದು ಕೇಬಲ್ ಬಂತು. ಕೂಡಲೇ ಅವರು ಮುಂಬಯಿಯಲ್ಲಿದ್ದ ದಾದಾ ಅಬ್ದುಲ್ಲಾನ ಏಜೆಂಟರನ್ನು ಸಂಪರ್ಕಿಸಿ ನೇಟಾಲ್‌ಗೆ ಹಿಂತಿರುಗಲು ಹಡಗಿನ ವ್ಯವಸ್ಥೆ

ಮಾಡಬೇಕೆಂದು ವಿನಂತಿಸಿಕೊಂಡರು. ದಾದಾ ಅಬ್ದುಲ್ಲಾ 'ಕೋರ್ಲೆಂಡ್' ಎಂಬ ಹಡಗನ್ನು ಕೊಂಡುಕೊಂಡಿದ್ದರು. ಗಾಂಧಿ ಹೆಂಡತಿ ಮತ್ತು ಮಕ್ಕಳನ್ನು ತಮ್ಮ ಹಡಗಿನಲ್ಲೇ ಪುಕ್ಕಟೆ ಕರೆದೊಯ್ಯುವುದಾಗಿ ತಿಳಿಸಿದ್ದರು.

ಗಾಂಧಿ ಹೆಂಡತಿ ಮತ್ತು ಇಬ್ಬರು ಗಂಡುಮಕ್ಕಳನ್ನು ಕರೆದುಕೊಂಡು ನೇಟಾಲ್‌ನತ್ತ ಡಿಸೆಂಬರ್ ತಿಂಗಳ ಮೊದಲನೆ ವಾರದಲ್ಲಿ ಪಯಣ ಬೆಳೆಸಿದರು.

ನೇಟಾಲ್‌ನಲ್ಲಿದ್ದ ಯೂರೋಪಿಯನ್ನರು ಗಾಂಧಿಯ ವಿರುದ್ಧ ಬೆಂಕಿ ಕಾರುತ್ತಿದ್ದರು. ಅವರು ನೇಟಾಲ್‌ನಲ್ಲಿ ಕಾಲಿರಿಸದಂತೆ ನೋಡಿಕೊಳ್ಳಲು ಅವರು ಭಾರಿಸಿದ್ಧತೆಯನ್ನು ಮಾಡಿಕೊಂಡಿದ್ದರು. ಸರಕಾರಕ್ಕೂ ಈ ಬಗ್ಗೆ ಅವರು ಎಚ್ಚರಿಕೆಯನ್ನು ನೀಡಿದ್ದರು. 'ಕೋರ್ಲೆಂಡ್' ಮತ್ತು 'ನಾವೇರಿ' ಎರಡೂ ಹಡಗಿನಿಂದ ಬರುತ್ತಿದ್ದ ಭಾರತೀಯರನ್ನು ನೇಟಾಲ್‌ನೊಳಗೆ ಕಾಲಿಡದಂತೆ ಮಾಡಲು ಯುವಕಗೂಂಡಾಗಳ ಒಂದು ದಳವನ್ನು ಯೂರೋಪಿಯನ್ ಜನಾಂಗ ಸಂಘಟಿಸಿದ್ದರು. ಈ ವಿಕ್ಷುಬ್ಧ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದ ನೇಟಾಲ್ ಸರ್ಕಾರ, ಕೆಲದಿನ ಹಡಗುಗಳಲ್ಲಿನ ಜನ ಹಾಗೂ ಗಾಂಧಿ ನೇಟಾಲ್ ಪ್ರವೇಶಿಸದಂತೆ ಮಾಡಲು 'ಇಮಿಗ್ರೇಷನ್ ರೆಸ್ಟ್ರಿಕ್ಷನ್ ಆಕ್ಟ್' (ಅಂಟು ಜಾಡ್ಯ ಇದ್ದವರು ನಗರವನ್ನು ಪ್ರವೇಶಿಸಲು ನಿರ್ಬಂಧ) ದಕ್ಷಿಣ ಆಫ್ರಿಕಾದಲ್ಲಿ ಜಾರಿಯಲ್ಲಿ ಇಲ್ಲದೇ ಇದ್ದರೂ, ಹಡಗುಗಳು ಬೊಂಬಾಯಿ ಬಿಟ್ಟಾಗ ಅಲ್ಲಿ ಪ್ಲೇಗ್ ಮಾರಿ ಇದ್ದುದರಿಂದ ನೇಟಾಲ್ ಸರ್ಕಾರ ಅನಧಿಕೃತ ಈ ಕಾನೂನನ್ನು 'ಜನಗಳ ಹಿತದೃಷ್ಟಿ' ಕಾರಣದಡಿ ಜಾರಿಗೆ ತಂದು, ೨೦ ದಿನ ಹಡಗಿನ ಯಾವ ಪ್ರಯಾಣಿಕರೂ ನೇಟಾಲ್‌ನಲ್ಲಿ ಕಾಲಿರಿಸದಂತೆ ನಿರ್ಬಂಧಿಸಿತು.

ಇಪ್ಪತ್ತು ದಿನ ಕಳೆದ ಮೇಲೆ ಎಲ್ಲಾ ಪ್ರಯಾಣಿಕರೂ ನೇಟಾಲ್ ಪ್ರವೇಶಿಸಿದರು. ಗಾಂಧಿ ಮತ್ತು ಕುಟುಂಬ ಪ್ರತ್ಯೇಕವಾಗಿ ಹೊರಗೆ ಬರಬೇಕೆಂದು ಸರಕಾರ ಸೂಚಿಸಿತ್ತು.

ಗಾಂಧಿ ಹಡಗಿನಿಂದ ಹೊರ ಬಂದಾಗ, ಅಪಾರ ಸಂಖ್ಯೆಯ ಯೂರೋಪಿಯನ್ ಯುವಕದಂಡು ಇವರನ್ನು ತಡೆಹಾಕಿತು. ಹಲವು ಯುವಕರು ಮುಂದೆ ಬಂದು ಗಾಂಧಿಯನ್ನು ಹಳಿದು ಥಳಿಸಿದರು. ಕಲ್ಲು ಬೀರಿದರು. ರುಮಾಲನ್ನು ಕಿತ್ತು ಬಿಸುಟರು, ಅಷ್ಟು ಹೊತ್ತಿಗೆ ಇವರ ರಕ್ಷಣೆಗೆ ಪೊಲೀಸ್ ಸಿಬ್ಬಂದಿ ಬಂದುದರಿಂದ ಇವರು ಸುರಕ್ಷಿತವಾಗಿ ಅನಂತರ ಮನೆಯನ್ನು

ಸೇರಿದರು. ಈ ಅನಾಗರಿಕ ವಿದ್ಯಮಾನ ವಲಸೆ ಕಾರ್ಯದರ್ಶಿಗಳಾದ ಚೇಂಬರ್ಲಿನ್‌ರವರಿಗೆ ತಿಳಿದು ಅವರು ನೇಟಾಲ್ ಸರ್ಕಾರಕ್ಕೆ ಈ ಬಗ್ಗೆ ಸೂಕ್ತ ಕ್ರಮತೆಗೆದುಕೊಳ್ಳಲು ತಿಳಿಸಿದರು. ಪೊಲೀಸ್ ಸೂಪರಿಂಟೆಂಡೆಂಟರು ಗಾಂಧಿಯನ್ನು ಥಳಿಸಿದ ಗೂಂಡಾಗಳ ಮೇಲೆ ಕೇಸನ್ನು ದಾಖಲಿಸಲು ಮುಂದಾದರು. ಆದರೆ ಗಾಂಧಿ ಇದಕ್ಕೆ ಒಪ್ಪಲಿಲ್ಲ. ಗಾಂಧಿ ಈ ಬಗ್ಗೆ ತೆಗೆದುಕೊಂಡ ನಿಲುವನ್ನು ಎಲ್ಲಾ ವೃತ್ತಪತ್ರಿಕೆಗಳೂ ಶ್ಲಾಘಿಸಿದವು. ಗಾಂಧಿಯವರ ಈ ಕ್ಷಮಾಶೀಲ ನಿಲುವು ಸಮಸ್ತ ಭಾರತೀಯರ ಮೇಲಿನ ಗೌರವವನ್ನು ವೃದ್ಧಿಸಿತು. ಗಾಂಧಿ ಮತ್ತಷ್ಟು ಪ್ರಸಿದ್ಧಿ ಪಡೆದರು.

ಡಚ್ಚರೂ, ಇಂಗ್ಲಿಷರೂ ಇಬ್ಬರೂ ದಕ್ಷಿಣ ಆಫ್ರಿಕಾಗೆ ವಲಸೆ ಬಂದು ಒಂದೊಂದು ಪ್ರಾಂತದಲ್ಲಿ ನೆಲೆಸಿದ್ದರು. ಇಬ್ಬರೂ ಸ್ವಾರ್ಥಿಗಳು. ಇಬ್ಬರೂ ದಕ್ಷಿಣ ಆಫ್ರಿಕಾದಲ್ಲಿ ಶಾಶ್ವತವಾಗಿ ನೆಲೆಯೂರಿ ತಮ್ಮ ತಮ್ಮ ಸಾಮ್ರಾಜ್ಯಗಳನ್ನು ನೆಲೆಗೊಳಿಸಲು ಸತತ ಪ್ರಯತ್ನ ನಡೆಸಿದ್ದರು. ಇಂಗ್ಲಿಷರು ಭೂಮಾಲೀಕರು, ಗಣಿ ಮಾಲೀಕರು, ವ್ಯಾಪಾರಿಗಳಾಗಿ ಆರ್ಥಿಕವಾಗಿ ಸದೃಢರಾಗಿದ್ದರು. ಡಚ್ಚರು ಹೆಚ್ಚಾಗಿ ಕೃಷಿಕರಾಗಿದ್ದರು. ಈ ಎರಡು ಜನಾಂಗದವರೂ ನೀಗ್ರೋಗಳನ್ನು ಹಾಗೂ ವಲಸೆ ಬಂದ ಭಾರತೀಯರನ್ನು ಕೂಲಿಗಳಾಗಿ ನೇಮಿಸಿಕೊಂಡು ಶೋಷಣೆ ಮಾಡುತ್ತಿದ್ದರು. ಇಂಗ್ಲಿಷ್ ಮತ್ತು ಡಚ್ಚರು (ಮುಂದೆ ಡಚ್ಚರಿಗೆ ಬೋಅರ್ ಎಂದು ಹೆಸರಾಯಿತು) ಇವರ ಮಧ್ಯೆ ಸಣ್ಣಪುಟ್ಟ ವ್ಯಾಜ್ಯಗಳಾಗಿ ಕೊನೆಗೆ ಯುದ್ಧಗಳು ನಡೆದು ಹೋದವು. ಡಚ್ಚರಿಗೆ ೧೮೯೯ರಲ್ಲಿ ಈ ವೈಮನಸ್ಸು ವಿಕೋಪಕ್ಕೆ ಹೋಗಿ ಯುದ್ಧದಲ್ಲೇ ಪರ್ಯಾವಸಾನಗೊಂಡಿತು.

ಈ ಯುದ್ಧ ಸಂದರ್ಭದಲ್ಲಿ ಭಾರತೀಯರ ಪಾತ್ರವೇನು ? ಯಾರಿಗೆ ಸಹಾಯ ಮಾಡಬೇಕು ಎಂಬ ಪ್ರಶ್ನೆ ಎಲ್ಲಾ ಭಾರತೀಯರನ್ನು ಕಾಡುತ್ತಿತ್ತು. ಅಲ್ಪಸಂಖ್ಯಾತರಾದ ಬೋಅರ್ ಜನಾಂಗ ತಮ್ಮ ಉಳಿವಿಗಾಗಿ ಹೋರಾಡುತ್ತಿರುವಾಗ ಅವರ ವಿನಾಶಕ್ಕೆ ಭಾರತೀಯರು ಕಾರಣರಾಗಬೇಕೆ ? ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಾಗಿರುವ ನಾವು ಈ ಸಮಯದಲ್ಲಿ ಅವರಿಗೆ ಸಹಾಯ ಮಾಡದೆ ಕುಳಿತರೆ ನಾವು ಕೃತಘ್ನರಾಗುವುದಿಲ್ಲವೇ ? ನಾವು ಸಾಮ್ರಾಜ್ಯದ ಅಸ್ಪೃಶ್ಯರಾಗಿರಬಹುದು. ನಮ್ಮ ಏಳಿಗೆಯನ್ನು ಅವರು ಸಹಿಸದೇ ಇರಬಹುದು.

ಆದರೂ ನಾವು ಸಾಮ್ರಾಜ್ಯದ ಪ್ರಜೆಗಳಾಗಿಯೇ ನಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂಬುದು ಭಾರತದ ಮುಖಂಡರ ನೀತಿಯಾಗಿಲ್ಲವೇ? ಬ್ರಿಟಿಷರ ಕಷ್ಟಕಾಲದಲ್ಲಿ ಅವರಿಗೆ ಸಹಾಯಮಾಡಿದರೆ ಸ್ವಾತಂತ್ರ್ಯದ ಬೇಡಿಕೆಗೆ ಬಲಬರುವುದು' ಎಂದು ಮುಂತಾಗಿ ಯೋಚಿಸಿದ ಗಾಂಧೀಜಿ ಬ್ರಿಟಿಷ್ ಸರಕಾರಕ್ಕೆ ಯಾವುದಾದರೂ ವಿಧದಲ್ಲಿ ಸಹಾಯಮಾಡಬೇಕೆಂದು ನಿರ್ಧರಿಸಿದರು. ಈ ನಿರ್ಧಾರಕ್ಕೆ ಅನೇಕರು ಕಟು ವಿರೋಧ ವ್ಯಕ್ತಪಡಿಸಿದರು. ಆದರೆ ಬಹುಸಂಖ್ಯೆಯ ಭಾರತೀಯರು ಗಾಂಧಿಯ ವಾದ ಸರಣಿಯನ್ನು ಮೆಚ್ಚಿ ಬ್ರಿಟಿಷ್ ಸರಕಾರಕ್ಕೆ ಸಹಾಯ ಮಾಡಲು ಮುಂದಾದರು.

ಗಾಂಧೀಜಿ ತಮ್ಮ ಅಭಿಮತವನ್ನು ಸರಕಾರದ ಮುಂದಿರಿಸಿದರು. ಸರಕಾರ ಗಾಂಧಿಯನ್ನು ಅಭಿನಂದಿಸಿ ಸಹಾಯ ಬೇಕಿಲ್ಲವೆಂದು ತಿರಸ್ಕರಿಸಿತು. ಅಷ್ಟು ಹೊತ್ತಿಗೆ ಬೋಅರ್‌ರು ಪ್ರವಾಹೋಪಾದಿಯಲ್ಲಿ ಮುನ್ನುಗ್ಗಿ ಡರ್ಬಾನ್ ಹತ್ತಿರ ಬಂದಿದ್ದರು. ಬ್ರಿಟಿಷರ ಸೈನ್ಯದಲ್ಲಿ ಅಪಾರ ಜನ ಗಾಯಗೊಂಡಿದ್ದರು. ಚಿಕಿತ್ಸೆ ಪಡೆಯುವ ಅವಶ್ಯಕತೆ ಅವರಿಗೆ ಕಾಣಿಸಿತು. ಆದ್ದರಿಂದ ಸರಕಾರ ಗಾಂಧಿಗೆ ಚಿಕಿತ್ಸಾಪಡೆಯೊಂದನ್ನು ರಚಿಸಿ ಸಹಾಯಕ್ಕೆ ಬಂದರೆ ಸ್ವಾಗತಿಸುವುದಾಗಿ ತಿಳಿಸಿತು.

ಗಾಂಧೀಜಿ ಶೀಘ್ರುವೇ ಸುಮಾರು ಒಂದು ಸಾವಿರ ಸ್ವಯಂಸೇವಕರ ಪಡೆಯನ್ನು ಕೂಡಿಸಿದರು. ಯುದ್ಧದಲ್ಲಿ ಗಾಯಗೊಂಡವರ ಶುಶ್ರೂಷೆಗೆ ಗಾಂಧೀಜಿಯ ಚಿಕಿತ್ಸಾಪಡೆ ಯುದ್ಧರಂಗಕ್ಕೆ ಧಾವಿಸಿತು. ನಿಸ್ಪೃಹ ಸೇವೆ ಸಲ್ಲಿಸಿ ಈ ಪಡೆ ಬ್ರಿಟಿಷರು ಮಾತ್ರವಲ್ಲದೆ ಪತ್ರಿಕೆಗಳು ಹಾಗೂ ನಾಗರಿಕರ ಪ್ರಶಂಸೆಗೆ ಪಾತ್ರವಾಯಿತು. ಬ್ರಿಟಿಷರಿಗೂ ಭಾರತೀಯರ ಮೇಲೆ ಒಳ್ಳೆಯ ಅಭಿಪ್ರಾಯ ಮೂಡಿತು.

ಈ ಬೋಅರ್ ಯುದ್ಧದಲ್ಲಿ ಬ್ರಿಟಿಷರು ವಿಜಯಿಗಳಾದ ನಂತರ ಗಾಂಧೀಜಿ ಮತ್ತು ಸ್ವಯಂಸೇವಕರು ತಮ್ಮ ಮಾಮೂಲು ಕೆಲಸಗಳಿಗೆ ಹಿಂತಿರುಗಿದರು. ತಮ್ಮ ಕೆಲಸದಿಂದ ಸಂತೃಪ್ತರಾಗಿದ್ದ ಗಾಂಧೀಜಿ ಭಾರತಕ್ಕೆ ಹೋಗಿ ಅಲ್ಲಿ ಸಾರ್ವಜನಿಕ ಸೇವಾಕಾರ್ಯದಲ್ಲಿ ತೊಡಗಿಕೊಳ್ಳಲು ಉತ್ಸುಕ ರಾಗಿದ್ದರು. ಗಾಂಧೀಜಿ ಸ್ಥಾಪಿಸಿದ್ದ ಕಾಂಗ್ರೆಸ್ ಸಂಸ್ಥೆ ಬಹಳ ಚೆನ್ನಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗುತ್ತಿತ್ತು. ಹಲವು ಭಾರತೀಯರು ಇಂಗ್ಲೆಂಡ್‌ಗೆ ಹೋಗಿ ಬ್ಯಾರಿಸ್ಟರಾಗಿ ಹಿಂತಿರುಗಿ ಎಲ್ಲಾ ತರಹ ಜವಾಬ್ದಾರಿಯನ್ನೂ ಹೊರಲು ಸಿದ್ಧರಾಗಿದ್ದರು.

ಅಗತ್ಯ ಬಿದ್ದರೆ ಮತ್ತೆ ಬರುವುದಾಗಿ ನೇಟಾಲ್ ಭಾರತೀಯರಿಗೆ ಆಶ್ವಾಸನವಿತ್ತು ಗಾಂಧೀಜಿ ಭಾರತಕ್ಕೆ ಹಿಂತಿರುಗಲು ಸಿದ್ಧರಾಗ ತೊಡಗಿದರು.

ಗಾಂಧೀಜಿಗೆ ಬೀಳ್ಕೊಡುಗೆಯ ಸಮಾರಂಭಗಳು ಏರ್ಪಟ್ಟವು. ಅನೇಕ ಸಂಘ ಸಂಸ್ಥೆಗಳು, ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಪ್ರೀತಿಯಿಂದ ಕೊಡುಗೆಗಳನ್ನು ನೀಡಿದರು. ಇವುಗಳಲ್ಲಿ ಬಹು ಬೆಲೆಬಾಳುವ ವಸ್ತುಗಳಿದ್ದವು. ಒಂದು ಕಂಠಾಹಾರವಂತೂ ಅತ್ಯಂತ ಬೆಲೆಯುಳ್ಳದ್ದಾಗಿತ್ತು. ಗಾಂಧೀಜಿ ಮಕ್ಕಳೊಡನೆ ಪರಾಮರ್ಶಿಸಿ ತನಗೆ ಬಂದಿದ್ದ ಎಲ್ಲಾ ಉಡುಗೊರೆಗಳನ್ನು ಭಾರತೀಯ ಜನಾಂಗದ ಏಳಿಗೆಗಾಗಿ ಒಂದು ಟ್ರಸ್ಟ್ ಸ್ಥಾಪಿಸಿ ಅವುಗಳನ್ನೆಲ್ಲಾ ಅಲ್ಲಿಗೆ ಕೊಡಲು ನಿರ್ಧರಿಸಿದರು. ಮಕ್ಕಳು ತಂದೆಯ ಆಶಯಕ್ಕೆ ಸಮ್ಮತಿಸಿದರು. ಹೆಂಡತಿ ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದರೂ ಕೊನೆಗೆ ಆಕೆಯೂ ಒಪ್ಪಿಗೆ ಸೂಚಿಸಿದಳು. ಗಾಂಧೀಜಿ, ಪಾರಸಿ ರುಸ್ತುಂಜೀ ಮತ್ತು ಕೆಲವರನ್ನು ಟ್ರಸ್ಟಿಗಳಾಗಿ ನೇಮಿಸಿ ಈ ಟ್ರಸ್ಟಿಗೆ ಎಲ್ಲಾ ಒಡವೆ ಮತ್ತು ಇತರ ಉಡುಗೊರೆಗಳನ್ನು ಒಪ್ಪಿಸಿದರು.

'ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡಿದ್ದವರು ಎಂದೂ ಉಡುಗೊರೆಗಳನ್ನು ಸ್ವೀಕರಿಸಬಾರದು' ಎಂಬ ಈ ನಿಲುವನ್ನು ಗಾಂಧೀಜಿ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದರು.

ಹಡಗಿನಲ್ಲಿ ಹೊರಟ ಗಾಂಧೀಜಿ ದಾರಿಯಲ್ಲಿ ಸಿಕ್ಕುವ ಮ್ಯೂರಿಟಿಸ್‌ನಲ್ಲಿ ಒಂದು ದಿನ ಸರ್ ಚಾರ್ಲ್ಸ್‌ಬ್ರೂಸ್‌ರವರ ಅತಿಥಿಯಾಗಿದ್ದು ಮುಂಬಯಿಗೆ ಬಂದರು. ೧೯೦೧ರಲ್ಲಿ ಕಲ್ಕತ್ತಾದಲ್ಲಿ ಕಾಂಗ್ರೆಸ್‌ನ ಮಹಾಧಿವೇಶನ ನಡೆಯುತ್ತಿತ್ತು. ಅದರಲ್ಲಿ ಭಾಗವಹಿಸಲು ಅಲ್ಲಿಗೆ ಹೊರಟರು. ಟ್ರೈನಿನಲ್ಲಿ ಸರ್ ಫಿರೋಜ್ ಷಾ ಮೆಹತಾರವರ ಪರಿಚಯವಾಯಿತು. ತಾವು ಈ ಅಧಿವೇಶನದಲ್ಲಿ ಮಂಡಿಸಬೇಕೆಂದಿರುವ ಮಸೂದೆಯ ಬಗ್ಗೆ ತಿಳಿಸಿದರು.

'ಮಸೂದೆಯನ್ನು ಮಂಡಿಸುವ ಮುನ್ನ ಸಭಾಧ್ಯಕ್ಷ ಶ್ರೀ ದಿನ್‌ಷಾ ವಾಛಾ ರವರಿಗೆ ತೋರಿಸಿ' ಎಂದು ಹೇಳಿದರು.

ಗಾಂಧಿಯವರ ಈ ಮಸೂದೆ ಯಾವೊಂದು ತಕರಾರೂ ಇಲ್ಲದೆ ಅನಂತರ ಸಭೆಯಲ್ಲಿ ಪಾಸಾಯಿತು.

ಇದೇ ಮಹಾಧಿವೇಶನದಲ್ಲಿ ಗಾಂಧಿಯವರಿಗೆ ಲೋಕಮಾನ್ಯ ತಿಲಕರು, ಬಾಬು ಭೂಪೇಂದ್ರನಾಥ ಬಸು ; ಸುರೇಂದ್ರನಾಥ್; ಘೋಶಾಲ್, ಡಾ. ಪಿ. ಸಿ. ರಾಯ್ ಮುಂತಾದ ಹಿರಿಯ ನಾಯಕರ ಪರಿಚಯವಾಯಿತು.

ಗಾಂಧೀಜಿ ಆ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಹಗಲು ರಾತ್ರಿ ಶ್ರಮಿಸಿದರು. ಚೊಕ್ಕಟವಾಗಿಲ್ಲದ ಕಕ್ಕಸ್ಸು, ಮೂತ್ರಿಗಳನ್ನು ಗುಡಿಸಿ, ನೀರು ಹೊಯ್ದು ಶುದ್ಧಗೊಳಿಸಿದರು.

ಗಾಂಧಿ ಕಲ್ಕತ್ತಾದಲ್ಲಿ ಇದ್ದಷ್ಟು ದಿನವೂ ತಮ್ಮೊಡನೆಯೇ ಇರಲು ಗೋಖಲೆ ಆಹ್ವಾನಿಸಿದಾಗ ಗಾಂಧೀಜಿ, ಗೋಖಲೆಯುವರ ಹೃದಯ ವೈಶಾಲ್ಯತೆಯನ್ನು ಬಹಳ ಮೆಚ್ಚಿಕೊಂಡರು. ಆದರ್ಶ ವ್ಯಕ್ತಿತ್ವದ ಅವರನ್ನು ತಮ್ಮ ಪೂಜ್ಯ ಗುರುಗಳೆಂದು ಅಂಗೀಕರಿಸಿದರು.

ಗಾಂಧೀಜಿ ಕಲ್ಕತ್ತಾದ ಕಾಳಿ ದೇವಾಲಯದ ಬಗ್ಗೆ ಬಹಳ ಕೇಳಿದ್ದರು. ಜಸ್ಟೀಸ್ ಮಿಟ್ಟರ್‌ರವರ ಮನೆಯೂ ಕಾಳಿದೇವಾಲಯುದ ಬಳಿಯೇ ಇದ್ದುದರಿಂದ ಅವರನ್ನು ಭೇಟಿ ಮಾಡಿ ನೇಟಾಲ್ ಭಾರತೀಯರ ಬಗ್ಗೆ ಅವರೊಡನೆ ಮಾತನಾಡಿ ಕಾಳಿ ದೇವಾಲಯವನ್ನು ನೋಡಲು ಹೋದರು. ಅಲ್ಲಿ ನೂರಾರು ಕುರಿಗಳನ್ನು ಬಲಿಕೊಡುತ್ತಿರುವುದನ್ನು ನೋಡಿ ಇವರ ಹೃದಯ ದ್ರವಿಸಿತು. ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಕ್ರೌರ್ಯ ಇವರ ಮನಸ್ಸಿಗೆ ಬಹಳ ನೋವು ಉಂಟು ಮಾಡಿತು. ಮನದಲ್ಲಿದ್ದ ಅಹಿಂಸೆಯ ಬೀಜಾಣು ಅಂದೇ ಜೀವ ತಳೆದು ಜೀವಾಣುವಾಯಿತು.

ಕಲ್ಕತ್ತಾದಲ್ಲಿದ್ದು ಸ್ವಾಮಿ ವಿವೇಕಾನಂದರನ್ನು ನೋಡದೆ ಹೋಗುವುದು ಸರಿಯಲ್ಲವೆಂದುಕೊಂಡು ಗಾಂಧೀಜಿ, ಅವರನ್ನು ಕಾಣಲು ಬೇಲೂರು ಮಠಕ್ಕೆ ಹೋದರು. ಆದರೆ ಸ್ವಾಮಿ ವಿವೇಕಾನಂದರ ಆರೋಗ್ಯ ಸರಿಯಿಲ್ಲದಿದ್ದುದರಿಂದ ಕಲ್ಕತ್ತಾದ ಮನೆಗೆ ಹೋಗಿದ್ದಾರೆಂದು ತಿಳಿದಾಗ ಇವರಿಗೆ ಬಹು ನಿರಾಶೆ ಯಾಯಿತು. ಅನಂತರ ಇವರು ಚೌರಂಗಿ ಮಹಲ್‌ನಲ್ಲಿದ್ದ ಸಿಸ್ಟರ್ ನಿವೇದಿತಾ ರವರನ್ನು ಭೇಟಿಯಾದರು. ಅವರ ಪ್ರತಿಮಾತಿನಲ್ಲೂ ಹೊರಹೊಮ್ಮುತ್ತಿದ್ದ ಹಿಂದೂ ಧರ್ಮದ ಮೇಲಿನ ಪ್ರೇಮ ಗಾಂಧಿಯನ್ನು ಅಚ್ಚರಿಪಡಿಸಿತು. ಆಕೆಯ ನಿಸ್ವಾರ್ಥಸೇವಾಬುದ್ಧಿ ಬಹುಮೆಚ್ಚುಗೆ ಆಯಿತು. ಅವರ ಮೇಲೆ ಅಪಾರ ಗೌರವ ಮೂಡಿತು.

ಕಲ್ಕತ್ತಾದಲ್ಲಿ ಡಾ. ಮಲ್ಲಿಕ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಒಂದು ಬೃಹತ್ ಸಾರ್ವಜನಿಕ ಸಭೆಯುನ್ನು ಉದ್ದೇಶಿಸಿ ಮಾತನಾಡುತ್ತಾ ನೇಟಾಲ್‌ನಲ್ಲಿ ಬೋಲಿರ್ ಯುದ್ಧದಲ್ಲಿ ಅಲ್ಲಿಯ ಭಾರತೀಯರು ಮಾಡಿದ ಸೇವೆಯ ಬಗ್ಗೆ ಪೂರ್ಣಮಾಹಿತಿ ನೀಡಿದರು.

ಅಲ್ಲಿಂದ ಗಾಂಧೀಜಿ ಕೆಲದಿನಗಳ ಮಟ್ಟಿಗೆ ಬರ್ಮಾಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ಅಲ್ಲೂ ಕೂಡ ಇಂಗ್ಲಿಷರ ಪ್ರಾಬಲ್ಯ ಹಾಗೂ ಅವರ ಪ್ರಭಾವ ಬರ್ಮೀಯರ ಮೇಲೆ, ಇಂಡಿಯಾದಲ್ಲಿ ಇದ್ದಂತೆಯೇ ಪ್ರಬಲವಾಗಿತ್ತು.

ಕಲ್ಕತ್ತಾಗೆ ಮತ್ತೆ ಬಂದು ಗೋಖಲೆಯವರ ಅಪ್ಪಣೆ ಪಡೆದು ಭಾರತದ ಕೆಲಪ್ರದೇಶಗಳನ್ನು ನೋಡಲು ಹೊರಟರು. ಮೂರನೇ ದರ್ಜೆ ರೈಲ್ವೆ ಬೋಗಿಯಲ್ಲೇ ಪ್ರಯಾಣ ಮಾಡುವುದಾಗಿ ಗಾಂಧಿ ತಿಳಿಸಿದಾಗ ಗೋಖಲೆ ಮೊದಲು ಇದು ಹುಚ್ಚುತನವೆಂದು ವಿರೋಧಿಸಿದರು. ಅನಂತರ ಗಾಂಧಿ ಬಡಜನರ ಜೀವನಕ್ರಮ, ಅವರು ಅನುಭವಿಸುತ್ತಿರುವ ತೊಂದರೆಗಳು ಮುಂತಾದವುಗಳನ್ನು ಅಭ್ಯಸಿಸಲು ಅವರ ಒಡನಾಟ ಅತಿಮುಖ್ಯವೆಂದು ವಿವರಿಸಿದಾಗ ಗೋಖಲೆ, ಗಾಂಧಿಯ ಮನಸ್ಸನ್ನು ಅರ್ಥಮಾಡಿಕೊಂಡು ಒಪ್ಪಿಗೆ ನೀಡಿದರು ಹಾಗೂ ದಾರಿಯಲ್ಲಿ ಊಟಕ್ಕೆ ಅನುಕೂಲವಾಗಲೆಂದು ಒಂದು ಟಿಫನ್ ಬಾಕ್ಸ್‌ನಲ್ಲಿ ಸಿಹಿತಿಂಡಿ, ಪೂರಿಯನ್ನು ತುಂಬಿಸಿ, ಪ್ರಯಾಣಕ್ಕೆ ಶುಭ ಹಾರೈಸಿ ಬೀಳ್ಕೊಟ್ಟರು. ಹೀಗೆ ಬೀಳ್ಕೊಡುವಾಗ ಡಾ. ಪಿ. ಸಿ. ರೇ ಸಹ ಜೊತೆಗಿದ್ದರು.

ಇದೊಂದು ಪ್ರೀತಿ ವಾತ್ಸಲ್ಯ ಭರಿತ ಆತ್ಮೀಯ ಬೀಳ್ಕೊಡುಗೆಯಾಗಿತ್ತು.

ಗಾಂಧಿಯವರು ಕಲ್ಕತ್ತಾದಿಂದ ಹೊರಟು ರಾಜ್‌ಕೋಟ್ ತಲುಪುವ ಮಾರ್ಗ ಮಧ್ಯದಲ್ಲಿ ಕಾಶಿ, ಆಗ್ರಾ, ಜೈಪುರ ಮುಂತಾದವುಗಳನ್ನು ನೋಡಿಕೊಂಡು ಹೋಗಲು ಬಯಸಿದ್ದರು. ಆದ್ದರಿಂದ ಅವರು ಈ ಸ್ಥಳಗಳಲ್ಲೆಲ್ಲಾ ಒಂದೊಂದು ದಿನ ಧರ್ಮಶಾಲೆಗಳಲ್ಲಿ ಇಳಿದುಕೊಂಡು, ಊರುಗಳನ್ನು ನೋಡಿಕೊಂಡು ಪ್ರಯಾಣ ಮುಂದುವರಿಸಿದರು. ಭಾರತದ ಟ್ರೈನಿನಲ್ಲಿನ ೩ನೇ ದರ್ಜೆ ಬೋಗಿಯನಲ್ಲಿನ ಸೌಕರ್ಯಗಳನ್ನು ದಕ್ಷಿಣ ಆಫ್ರಿಕಾದ ಟ್ರೈನಿನೊಡನೆ ಹೋಲಿಸಿದರೆ ಬಹಳ ಕಳಪೆ, ಶುಚಿತ್ವದಲ್ಲಂತೂ ಇನ್ನೂ ಹೊಲಸು, ಅದೂ ಅಲ್ಲದೆ ಇಲ್ಲಿನ ಟ್ರೈನಿನಲ್ಲಿನ ನೂಕು ನುಗ್ಗಲು ಅಲ್ಲಿಲ್ಲವೆಂದು ಕೊಂಚ

ಸಮಾಧಾನವಾಯಿತು. ಕಾಶಿಯ ವಿಶ್ವನಾಥನ ದರ್ಶನ ಪಡೆದು ರಾಜ್‌ಕೋಟ್‌ನತ್ತ ಹೊರಟರು.

ಗಾಂಧಿ ಮುಂಬಯಿಯಲ್ಲೇ ನೆಲೆಸಿ ವಕೀಲಿ ವೃತ್ತಿಯನ್ನು ಮುಂದುವರಿಸಿಕೊಂಡು, ಕಾಂಗ್ರೆಸ್ ಕೆಲಸಗಳಿಗೂ ಸಹಾಯಹಸ್ತ ನೀಡುತ್ತಿರಲಿ ಎಂದು ಗೋಖಲೆ ಆಶಿಸಿದ್ದರು. ಆದರೆ ಗಾಂಧೀಜಿಗೆ ವಕೀಲಿವೃತ್ತಿಯಲ್ಲಿ ಮುಂದುವರಿಯುವ ಬಗ್ಗೆ ಆಶಂಕೆಯಿತ್ತು. ತಮ್ಮ ಸಾಮರ್ಥ್ಯದಲ್ಲೇ ಅವರಿಗೆ ನಂಬಿಕೆ ಇರಲಿಲ್ಲ. ಆದ್ದರಿಂದ ರಾಜ್‌ಕೋಟ್‌ನಲ್ಲೇ ಹಿತೈಷಿ ಕೇವಲ್‌ರಾಮ್ ಮಾವ್ಜಿದಾವೆಯೊಡನೆ ವಕೀಲಿ ವೃತ್ತಿಯನ್ನು ಕೈಗೊಂಡರು. ಸ್ವಂತವಾಗಿ ನಡೆಸಿದ ಹಲವು ಕೇಸುಗಳಲ್ಲಿ ಜಯಗಳಿಸಿದಾಗ ಗಾಂಧಿಗೆ ತಮ್ಮ ವೃತ್ತಿಯಲ್ಲಿ ಮುಂದುವರಿಯಲು ಧೈರ್ಯ ಬಂತು. ಕೇವಲ್‌ರಾವ್‌ಗೆ ಗಾಂಧಿಯ ಸಾಮರ್ಥ್ಯ ಮೆಚ್ಚುಗೆಯಾಗಿತ್ತು. ಮುಂಬಯಿಗೆ ಹೋದರೆ ಚೆನ್ನಾಗಿ ಮುಂದುವರಿಯ ಬಹುದೆಂದು ಅಲ್ಲಿಗೆ ಹೋಗಿ ವಕೀಲಿ ವೃತ್ತಿಯನ್ನು ಮುಂದುವರಿಸಲು ಸಲಹೆ ನೀಡಿ, ಇವರು ಅಲ್ಲಿ ನೆಲೆಸಲು ಎಲ್ಲಾ ಏರ್ಪಾಡುಗಳನ್ನೂ ಮಾಡಿದರು.

ಗಾಂಧಿ ಮುಂಬಯಿಗೆ ಸಂಸಾರ ಸಮೇತ ತೆರಳಿ ಪೋರ್ಟ್‌ನಲ್ಲಿ ಕಛೇರಿ, ಗಿರಿಗಾಂನಲ್ಲಿ ಮನೆಯನ್ನು ಮಾಡಿದರು. ದಿನದಿನಕ್ಕೆ ವೃತ್ತಿ ಕುದುರಿ ಸಾಕಷ್ಟು ಹಣವೂ ಬರಹತ್ತಿತು. ಅಷ್ಟರಲ್ಲಿ ನೇಟಾಲ್‌ನಿಂದ ಒಂದು ತುರ್ತು ತಂತಿ ಸಂದೇಶ ಬಂತು. "ಛೇಂಬರ್‌ಲೀನ್‌ರವರು ಆಗಮಿಸಲಿದ್ದಾರೆ. ದಯವಿಟ್ಟು ಶೀಘ್ರವೇ ಬರುವುದು".

ಗಾಂಧಿಯವರು ಇಲ್ಲಿಗೆ ಬರುವ ಮುನ್ನವೇ ನೇಟಾಲ್ ಭಾರತ ಬಂಧುಗಳಿಗೆ ಹೇಳಿ ಬಂದಿದ್ದಂತೆ, ಈಗ ಅವರು ಅಲ್ಲಿಗೆ ಹೋಗುವುದು ಅನಿವಾರ್ಯವಾಗಿತ್ತು. ಆದ್ದರಿಂದ ಮುಂಬಯಿಯ ಆಫೀಸನ್ನು ಮಾತ್ರ ಮುಚ್ಚಿ, ಮನೆಯಲ್ಲೇ ಹೆಂಡತಿ ಮಕ್ಕಳನ್ನು ಬಿಟ್ಟು ನೇಟಾಲ್‌ಗೆ ಹೋಗಲು ಸಿದ್ಧವಾದರು.

ನೇಟಾಲ್‌ನಿಂದ ಪ್ರಯಾಣಕ್ಕೆ ಹಣ ಬಂದೊಡನೆ ೪-೫ ಯುವಕರನ್ನು ಕರೆದುಕೊಂಡು ಅಲ್ಲಿಗೆ ಪ್ರಯಾಣ ಬೆಳೆಸಿದರು.

ಹೆಂಡತಿ ಮಕ್ಕಳನ್ನು ಬಿಟ್ಟು ಹೋಗುವುದು ಗಾಂಧಿಯವರಿಗೆ ನೋವುಂಟುಮಾಡಿತ್ತು.

ಕರ್ತವ್ಯ ನಿರ್ವಹಣೆಯಲ್ಲಿ ಇಂತಹ ವೈಯಕ್ತಿಕ ಆಸೆ, ಅಭಿಲಾಷೆಗಳ ತ್ಯಾಗ ಅನಿವಾರ್ಯ ಎಂಬ ಅರಿವಿತ್ತು. ಅದಕ್ಕೇ ಗಾಂಧಿ ಸಂತಸದಿಂದಲೇ ನೇಟಾಲ್‌ನತ್ತ ಪಯಣ ಬೆಳೆಸಿದರು.

ಛೇಂಬರ್‌ಲೀನ್‌ರವರು ದಕ್ಷಿಣ ಆಫ್ರಿಕಾಕ್ಕೆ ಬ್ರಿಟಿಷ್ ಸಾರ್ವಭೌಮ ಸರಕಾರಕ್ಕೆ ನೀಡಲಿದ್ದ ದೇಣಿಗೆ ೩೫ ಸಾವಿರ ಮಿಲಿಯನ್ ಪೌಂಡ್ ಹಣವನ್ನು ತೆಗೆದುಕೊಂಡು ಹೋಗಲು ಹಾಗೂ ಬ್ರಿಟಿಷರ ಮನಸ್ಸನ್ನು ಗೆಲ್ಲಲು ಬಂದಿದ್ದರು. ಭಾರತೀಯರ ಅಥವಾ ಏಷ್ಯನ್ನರ ಯಾವುದೇ ಕುಂದುಕೊರತೆಗಳನ್ನು ಪರಿಹರಿಸುವಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ.

"ಬ್ರಿಟಿಷ್ ಸಾರ್ವಭೌಮ ಸರ್ಕಾರ ತನ್ನ ಕಾಲೋನಿಗಳ ಮೇಲೆ ಯಾವುದೇ ನಿಯಂತ್ರಣವನ್ನು ಹೊಂದಿಲ್ಲ. ನೀವು ಅನುಭವಿಸುತ್ತಿರುವ ತೊಂದರೆಗಳು ನಿಜವೇ ಇರಬಹುದು. ಅವನ್ನು ನೀವೇ ಇಲ್ಲಿನ ಸರಕಾರದೊಡನೆ ಚರ್ಚಿಸಿ, ಸಹಕಾರ ನೀಡಿ ಪರಿಹರಿಸಿಕೊಳ್ಳಬೇಕು. ಆಗಲೇ ನೀವು ಇಲ್ಲಿ ಇರಲು ಸಾಧ್ಯ" ಎಂದು ಹೇಳಿ ಅವರು ನೇಟಾಲ್‌ನಿಂದ ಟ್ರಾನ್ಸ್‌ವಾಲ್ ಸ್ಟೇಟಿಗೆ ಹೊರಟು ಹೋದರು.

ಟ್ರಾನ್ಸ್‌ವಾಲಿನಲ್ಲಿದ್ದ ಭಾರತೀಯರ ಸ್ಥಿತಿಯೂ ಉತ್ತಮವಾಗಿರಲಿಲ್ಲ. ಅವರನ್ನು ವಿಚಿತ್ರಪರಿಸ್ಥಿತಿ, ಹೊಸ ಕಾನೂನು ಕಾಡಿಸುತ್ತಿತ್ತು. ಬೋಅರ್ ಯುದ್ಧದ ನಂತರ ರೂಪುಗೊಂಡಿದ್ದ 'ಏಷ್ಯಾಟಿಕ್ ಇಲಾಖೆ' ಏಷ್ಯನ್ನರ ಕುಂದುಕೊರತೆಗಳನ್ನು ನಿವಾರಿಸುವ ಸದುದ್ದೇಶದಿಂದ ರೂಪುಗೊಂಡಿದ್ದರೂ ಭ್ರಷ್ಟಾಚಾರಿಗಳು, ಲಂಚಕೋರರು ಅದರಲ್ಲೂ ತುಂಬಿದ್ದು, ಏಷ್ಯನ್ನರಿಗೆ ಅದರಲ್ಲೂ ಭಾರತೀಯರಿಗೆ ಅವರಿಂದ ತೊಂದರೆಯೇ ಆಗುತ್ತಿತ್ತು. ಯುದ್ಧಕ್ಕೆ ಪೂರ್ವದಲ್ಲಿ ಯಾವ ಭಾರತೀಯನಾದರೂ ಸುಲಭವಾಗಿ ಟ್ರಾನ್ಸ್‌ವಾಲ್ ಸ್ಟೇಟ್ ಪ್ರವೇಶಿಸಬಹುದಾಗಿತ್ತು. ಟ್ರಾನ್ಸ್‌ವಾಲ್ ಬ್ರಿಟಿಷ್ ವಲಸೆ ರಾಷ್ಟ್ರವಾದೊಡನೆ ಹಿಂದಿದ್ದ ಕಾನೂನುಗಳು ಬದಲಾದವು. ರಹದಾರಿ ಇಲ್ಲದೆ ಯಾರೂ ಟ್ರಾನ್ಸ್‌ವಾಲ್ ಪ್ರವೇಶಿಸುವಂತಿರಲಿಲ್ಲ. ಈ ಬಗ್ಗೆ ಯೂರೋಪಿಯನ್ನರು ಹಾಗೂ ಭಾರತೀಯರು ಅನುಸರಿಸಬೇಕಾದ ಕಾನೂನಿನಲ್ಲಿ ವ್ಯತ್ಯಾಸವಿದ್ದು ಭಾರತೀಯರ ಶೋಷಣೆ ಅವ್ಯಾಹತವಾಗಿ ನಡೆಯತೊಡಗಿತ್ತು.

ಟ್ರಾನ್ಸ್‌ವಾಲ್‌ಗೆ ಹೊಸದಾಗಿ ವಲಸೆ ಬರುವ ಭಾರತೀಯರನ್ನು ತಡೆಯುವ ಸಲುವಾಗಿ ಅಲ್ಲಿನ ಸರಕಾರ ಒಂದು ಹೊಸ ಕಾನೂನನ್ನು ತಂದಿತ್ತು. ಅದರ ಪ್ರಕಾರ ದಕ್ಷಿಣ ಆಫ್ರಿಕಾಕ್ಕೆ ಹಿಂದೆಯೇ ಬಂದು ನೆಲೆಸಿದ್ದ ಎಲ್ಲಾ ಏಷ್ಯನ್ನರೂ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಇದಕ್ಕೆ ರಹದಾರಿ ಪಡೆಯುವವನ ರುಜು ಅಥವಾ ಹೆಬ್ಬೆಟ್ಟಿನ ಗುರುತು ಇರಬೇಕು. ಕೆಲವೇ ದಿನಗಳಲ್ಲಿ ಈ ಕಾನೂನು ಮಾರ್ಪಾಡಾಗಿ ಈ ರಹದಾರಿ ಪತ್ರಕ್ಕೆ ರಹದಾರಿ ಪಡೆಯುವವನ ಭಾವಚಿತ್ರ ಇರಬೇಕೆಂಬುದೂ ಅನಿವಾರ್ಯವಾಯಿತು. ಗಾಂಧಿ ಇದನ್ನು ಕಟುವಾಗಿ ವಿರೋಧಿಸಿದರು. ತಮ್ಮ ಧರ್ಮಕ್ಕೆ ವಿರುದ್ಧವೆಂದು ಮುಸಲ್ಮಾನರು ಈ ಭಾವಚಿತ್ರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಈ ಪ್ರತಿರೋಧಗಳಿಂದಾಗಿ ಕಾನೂನು ಪುನಃ ಮಾರ್ಪಾಡಾಯಿತು. ಅದರ ಪ್ರಕಾರ ಎಲ್ಲಾ ಭಾರತೀಯರೂ ಹಳೆಯ ರಹದಾರಿಗಳಿಗೆ ಬದಲಾಗಿ ಹೊಸ ರಹದಾರಿಗಳನ್ನು ಪಡೆಯಬೇಕೆಂದೂ, ಹೊಸದಾಗಿ ವಲಸೆ ಬರುವವರು ಹೊಸ ನಮೂನೆಯಲ್ಲಿ ರಹದಾರಿ ಪಡೆಯಬೇಕಾಯಿತು.

ಗಾಂಧೀಜಿ ಈ ಹೊಸ ಮಾರ್ಪಾಡಾದ ಕಾನೂನನ್ನು ಅನುಮೋದಿಸಿ ಅದರಂತೆ ಎಲ್ಲಾ ಭಾರತೀಯರೂ ಹೊಸದಾದ ರಹದಾರಿ ಪಡೆಯಬೇಕೆಂದು ಸಲಹೆ ಮಾಡಿದರು.

ಛೇಂಬರ್‌ಲೀನ್‌ರವರನ್ನು ನೋಡಲೆಂದೇ ಭಾರತದಿಂದ ಬಂದಿದ್ದ ಗಾಂಧಿಯವರಿಗೆ ಈ ರಹದಾರಿ ಕಾನೂನು ಬಹಳ ತೊಂದರೆಯನ್ನು ನೀಡಿತು. ನೇಟಾಲ್‌ನಿಂದ ಟ್ರಾನ್ಸ್‌ವಾಲ್‌ಗೆ ಹೋಗಿ ಛೇಂಬರ್‌ಲೀನ್‌ರವರನ್ನು ಭೇಟಿ ಮಾಡಲು ಈ ರಹದಾರಿ ಅವಶ್ಯವಾಗಿತ್ತು. ಅಲ್ಲಿನ ಭಾರತೀಯರು ಈ ರಹದಾರಿದಾರಿಯನ್ನು ಗಾಂಧೀಜಿಗೆ ಒದಗಿಸಿಕೊಡಲು ಅಸಮರ್ಥರಾಗಿದ್ದರು.

ಸೇಠ್ ಅಬ್ದುಲ್ಲಾನ ಕೇಸಿನ ಸಂದರ್ಭದಲ್ಲಿ ಗಾಂಧೀಜಿ ಟ್ರಾನ್ಸ್‌ವಾಲ್ ಸಂಸ್ಥಾನದ ಪ್ರಿಟೋರಿಯಾದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಇರಬೇಕಾಗಿ ಬಂದಿತ್ತು. ಟ್ರಾನ್ಸ್‌ವಾಲ್‌ಗೆ ಹೋಗುವ ಮುಂಚೆ ಡರ್ಬಾನ್‌ನಲ್ಲಿದ್ದಾಗ ಅಲ್ಲಿನ ಪೊಲೀಸ್ ಸೂಪರಿಂಟೆಂಡೆಂಟ್ ಅವರ ಪರಿಚಯ ಚೆನ್ನಾಗಿ ಆಗಿತ್ತು. ರಹದಾರಿಗಾಗಿ ಅವರ ಸಹಕಾರ ಪಡೆಯುವುದು ಅನಿವಾರ್ಯವಾಗಿದ್ದುದರಿಂದ ಅವರನ್ನು ರಹದಾರಿ ಕಛೇರಿಗೆ ಕರೆದುಕೊಂಡು ಹೋಗಿ ಅವರ ಶಿಫಾರಸ್ಸಿನ

ಮೇಲೆ ಸುಲಭವಾಗಿ ರಹದಾರಿಯನ್ನು ಪಡೆದರು. ಆದರೆ ಏಷ್ಯಾಟಿಕ್ ಇಲಾಖೆ ಗಾಂಧಿಯವರ ರಹದಾರಿಯನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಅದಕ್ಕೇ ಅವರಿಗೆ ಛೇಂಬರ್‌ಲೀನ್‌ರವರನ್ನು ಭೇಟಿ ಮಾಡುವ ನಿಯೋಗದಲ್ಲಿ ಸೇರಿಸಿಕೊಳ್ಳಲು ಅನುಮತಿಯನ್ನು ನೀಡಲಿಲ್ಲ. ಇದು ಗಾಂಧಿಗಲ್ಲದೆ ಭಾರತೀಯ ಸಮುದಾಯಕ್ಕೇ ಅವಮಾನವಾಗಿತ್ತು. ಇದನ್ನು ಉಗ್ರವಾಗಿ ವಿರೋಧಿಸಲು ಭಾರತೀಯರು ಸಿದ್ಧರಾದರು. ಆದರೆ ಗಾಂಧಿ ಅವರನ್ನು ಸಮಾಧಾನಪಡಿಸಿ ಈ ಅವಮಾನವನ್ನು ಸಹಿಸಿಕೊಂಡರು. ತಾವು ತಯಾರಿಸಿದ್ದ ಮನವಿಯನ್ನು ಭಾರತದ ಇನ್ನೊಬ್ಬ ಅಲ್ಲಿಯ ನಿವಾಸಿ ಜಾರ್ಜ್‌ಗಾಡ್‌ಫ್ರೆರವರು ಛೇಂಬರ್‌ಲೀನ್‌ರವರಿಗೆ ಸಲ್ಲಿಸುವ ಸಲಹೆ ಮಾಡಿದರು.

ಟ್ರಾನ್ಸ್‌ವಾಲ್‌ಗೆ ಬಂದು ಮಾಡಿದ ಕೆಲಸ ಗಾಂಧೀಜಿಗೆ ವೈಯಕ್ತಿಕವಾಗಿ ತೃಪ್ತಿಯನ್ನು ತಾರದೆ ಇದ್ದರೂ ಛೇಂಬರ್‌ಲೀನ್‌ರವರಿಗೆ ಅವರು ತಯಾರಿಸಿದ ಮನವಿಯನ್ನು ತಲುಪಿಸಲಾಗಿತ್ತು. ಇದು ಕೊಂಚ ಸಮಾಧಾನವನ್ನು ತಂದಿತ್ತು. ಭಾರತೀಯರು ಟ್ರಾನ್ಸ್‌ವಾಲ್ ಪ್ರಾಂತದಲ್ಲಿ ಅನುಭವಿಸುತ್ತಿದ್ದ ತೊಂದರೆಗಳು, ಬ್ರಿಟಿಷರು ಭಾರತಿಯರನ್ನು ನೋಡಿಕೊಳ್ಳುತ್ತಿದ್ದ ರೀತಿ, ನೀತಿಗಳು ಗಾಂಧೀಜಿಗೆ ಬಹು ಬೇಸರತಂದಿತ್ತು. ಆದ್ದರಿಂದ ಇವನ್ನು ಸರಿಪಡಿಸುವತನಕ ಭಾರತಕ್ಕೆ ಹಿಂತಿರುಗದಿರಲು ನಿರ್ಧರಿಸಿ ಟ್ರಾನ್ಸ್‌ವಾಲ್ ಸುಪ್ರೀಂಕೋರ್ಟಿನಲ್ಲಿ ಅಡ್ವೋಕೇಟಾಗಿರಲು ಅರ್ಜಿಯನ್ನು ಸಲ್ಲಿಸಿದರು. ಅಲ್ಲಿನ ಲಾ ಸೊಸೈಟಿ ಇದನ್ನು ವಿರೋಧಿಸಬಹುದೆಂದು ಅಂದುಕೊಂಡಿದ್ದರು. ಆದರೆ ಹಾಗಾಗಲಿಲ್ಲ. ಕೋರ್ಟ್ ಇವರ ಅರ್ಜಿಯನ್ನು ಪುರಸ್ಕರಿಸಿತು.

ಜೋಹಾನ್ಸ್‌ಬರ್ಗ್‌ನ ಖ್ಯಾತ ಉದ್ಯಮಿ ಶ್ರೀ ರಿಚ್‌ರವರ ಸಹಕಾರದಿಂದ ಇವರಿಗೆ ಜೋಹಾನ್ಸ್‌ಬರ್ಗ್‌ನ ಮುಖ್ಯ ಬಡಾವಣೆಯಲ್ಲೇ ಆಫೀಸು ತೆರೆಯಲು ಸ್ಥಳ ದೊರೆಯಿತು. ಅಲ್ಲೇ ವೃತ್ತಿಯನ್ನು ಪ್ರಾರಂಭಿಸಿದರು. ತಕ್ಷಣವೇ ಏಷ್ಯಾಟಿಕ್ ಇಲಾಖೆಯಲ್ಲಿ ನಡೆಯುತ್ತಿದ್ದ ಲಂಚಗುಳಿತನ, ಭ್ರಷ್ಟಾಚಾರ, ತಾರತಮ್ಯನೀತಿಯನ್ನು ಬಯಲಿಗೆಳೆದು ಸಂಬಂಧಪಟ್ಟವರನ್ನು ಹಿಡಿದು ಶಿಕ್ಷೆಗೆ ಒಳಪಡಿಸಲು ಕಾರ್ಯಮಗ್ನರಾದರು. ಕೆಲವೇ ದಿನಗಳಲ್ಲಿ ಇಲಾಖೆಯನ್ನೂ ಇಂತಹವರಿಂದ ಮುಕ್ತಗೊಳಿಸಲು ಶಕ್ತರಾದರು. ಇದರಿಂದ ಇವರು ಟ್ರಾನ್ಸ್‌ವಾಲ್‌ನಲ್ಲೂ ಪ್ರಸಿದ್ಧಿಗೆ ಬಂದರು. ಎಲ್ಲರಲ್ಲೂ ಇವರ ಬಗ್ಗೆ ಗೌರವ

ಅಭಿಮಾನ ವೃದ್ಧಿಸಿತು. ಹೆಚ್ಚು ಹೆಚ್ಚು ಕಕ್ಷಿಗಾರರೂ ಬರಲಾರಂಭಿಸಿದರು. ಆದಾಯವೂ ವೃದ್ಧಿಸಿತು.

◆ ◆ ◆

೧೯೧೯ರ ಮಹಾ ಹರತಾಳ

ಮಹಾಯುದ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಬೆಂಬಲ ಕೊಟ್ಟಿದ್ದಕ್ಕಾಗಿ, ಭಾರತೀಯ ಸೈನಿಕರ ಸಾಹಸಮಯ ಹೋರಾಟಕ್ಕಾಗಿ, ಬ್ರಿಟನ್ ಭಾರತಕ್ಕೆ ಸ್ವಲ್ಪವಾದರೂ ಸ್ವರಾಜ್ಯವನ್ನು ನೀಡಬಹುದೆಂದು ಭಾರತೀಯ ಮುಖಂಡರು ನಿರೀಕ್ಷಿಸಿದರು. ಅದಕ್ಕೆ ಬದಲು ನಮಗೆ ಸಿಕ್ಕಿದುದು 'ರೌಲತ್ ಕಾನೂನು'. ಇದು ಭಾರತ ಸರ್ಕಾರಕ್ಕೆ ಸರ್ವಾಧಿಕಾರದ ದಮನ ಶಕ್ತಿ ಕೊಟ್ಟು ಭಾರತೀಯರನ್ನು ಹಿಂಸಿಸಲು ಅವಕಾಶ ಮಾಡಿತು. ದೆಹಲಿಯ ಶಾಸನ ಸಭೆಯಲ್ಲಿ ಕಾನೂನಿನ ವಿರುದ್ಧವಾಗಿ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು, ವಿಠಲಬಾಯಿ ಪಟೇಲರೂ ಕಳಕಳಿಯಿಂದ ಮಾಡಿದ ಮನವಿಗಳಿಗೆ ಬೆಲೆಯಿಲ್ಲದೆ ಹೋಯಿತು. ಕಾಂಗ್ರೆಸ್ ಮುಖಂಡರ ವಿರೋಧವನ್ನೂ ಸರ್ಕಾರ ಗಮನಿಸಲಿಲ್ಲ.

ಈ ಕಾಯಿದೆ ಗೆಜೆಟ್ಟಿನಲ್ಲಿ ಪ್ರಕಟವಾಗಿ ಜಾರಿಗೆ ಬಂದಾಗ ಗಾಂಧೀಜಿ ಮದರಾಸಿನಲ್ಲಿದ್ದರು. ಮರುದಿನ ಬೆಳಿಗ್ಗೆ ಗಾಂಧೀಜಿ ರಾಜ ಗೋಪಾಲಾಚಾರಿಯವರಿಗೆ ಹೇಳಿದರು.

'ರಾತ್ರಿ ನನಗೆ ಕನಸಿನಲ್ಲಿ ಒಂದು ಸಂದೇಶ ದೊರೆಯಿತು. ನಾವು ದೇಶಕ್ಕೆ ಕರೆಕೊಟ್ಟು ಒಂದು ದಿನದ ಹರತಾಳವನ್ನು ಆಚರಿಸಬೇಕು. ಸತ್ಯಾಗ್ರಹ ಆತ್ಮ ಶುದ್ಧೀಕರಣದೊಡನೆ ಆರಂಭಿಸುವುದು ಸೂಕ್ತ ಎಂದು ನನಗೆ ತೋರುತ್ತದೆ. ಆದುದರಿಂದ ಅಂದು ಎಲ್ಲರೂ ತಮ್ಮ ಕಾರ್ಯವನ್ನು ನಿಲ್ಲಿಸಿ ಆ ದಿನ ಉಪವಾಸ, ಪ್ರಾರ್ಥನೆ ನಡೆಸಲಿ....' ರಾಜಾಜಿ ಒಪ್ಪಿದರು.

೩೦ ಮಾರ್ಚ್ ೧೯೧೯ ರಂದು ಹರತಾಳ ನಿಶ್ಚಯವಾಯಿತು. ತರುವಾಯ ಅದು ಏಪ್ರಿಲ್ ೬ ಕ್ಕೆ ಮುಂದೆ ಹೋಯಿತು. ಜನರಿಗೆ ಹೆಚ್ಚು ಕಾಲಾವಕಾಶ ಇರಲಿಲ್ಲ. ಸುದ್ದಿ ಹರಡಿತು: ಇಡೀ ಭಾರತ, ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ನಗರಗಳು, ಹಳ್ಳಿಗಳಲ್ಲೆಲ್ಲಾ ಅಂದು ಸಂಪೂರ್ಣ ಹರತಾಳ ಆಚರಿಸಿತು. ಅದೊಂದು ಅದ್ಭುತ ಘಟನೆ.

ಅಮೃತಸರದಲ್ಲಿ ೩೦ ಮಾರ್ಚ್ ಮತ್ತು ೬ ಏಪ್ರಿಲ್ ಎರಡು ದಿನ ಹರತಾಳ ಆಚರಿಸಲಾಯಿತು. ಆಮೇಲೆ ಪೊಲೀಸ್ ಗುಂಡಿನ ಸುರಿಮಳೆ, ಹತ್ಯೆಗಳು ನಡೆದವು. ೧೩ ನೇ ಏಪ್ರಿಲ್ ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡ, ಅದು ದೇಶವನ್ನೇ ತಲ್ಲಣಗೊಳಿಸಿತು.

ಗಾಂಧೀಜಿ 'ದ. ಆಫ್ರಿಕಾದಲ್ಲಿ ಸತ್ಯಾಗ್ರಹ'ದಲ್ಲಿ ಬರೆದಿದ್ದಾರೆ.

ರೌಲತ್ ಕಾಯ್ದೆ ಅದನ್ನು ಜಾರಿಗೆ ತಂದಾಗಲೇ ಮೃತಪತ್ರವಾಗಿದ್ದಿತು. ಕೊನೆಗೆ ಆ ಕರಾಳ ಶಾಸನವನ್ನು ರದ್ದು ಮಾಡಿದರು. ಆ ಹೋರಾಟ ನಮಗೊಂದು ಉತ್ತಮ ಪಾಠವಾಯಿತು.

('ವಿಜ್ಞಾನ ಯುಗದ ಮಹಾಪ್ರಾಜ್ಞ' – 'ಮಹಾತ್ಮ', ಪ್ರೊ. ಎನ್. ಕೃಷ್ಣಸ್ವಾಮಿ)

೭ 'ಇಂಡಿಯನ್ ಒಪಿನಿಯನ್' ಪತ್ರಿಕೆ

ಗಾಂಧಿಯವರು ಆಗಾಗ್ಗೆ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಕಳುಹಿಸುತ್ತಿದ್ದರು. ಭಾರತೀಯರಿಗೆ ಅಗತ್ಯವಾಗಿ ಕೆಲ ವಿಷಯಗಳನ್ನು ತುರ್ತಾಗಿ ತಿಳಿಸಬೇಕಾದರೆ ಪತ್ರಿಕಾಮಾಧ್ಯಮ ಬಿಟ್ಟು ಬೇರಾವ ಮಾಧ್ಯಮವೂ ಸುಲಭವಲ್ಲ ಎಂದೆನಿಸಿತ್ತು. ಅದೇ ವೇಳೆಗೆ ಮದನ್‌ಜಿತ್ ಎಂಬ ಪ್ರೆಸ್ ಮಾಲೀಕರೊಬ್ಬರು ಗಾಂಧಿಯವರ ಮುಂದೆ ಪತ್ರಿಕೆಯೊಂದನ್ನು ಪ್ರಾರಂಭಿಸುವ ವಿಷಯವನ್ನು ಮುಂದಿಟ್ಟರು. ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ ಎಂಬಂತಾಯಿತು. ಗಾಂಧಿ ಈ ಯೋಜನೆಯನ್ನು ಕೂಡಲೇ ಒಪ್ಪಿ ಪೂರ್ಣ ಸಹಕಾರ ನೀಡುವ ಆಶ್ವಾಸನವಿತ್ತರು.

ಮನ್ಸುಖಲಾಲ್ ನಜರ್ ಎಂಬುವವರು 'ಇಂಡಿಯನ್ ಒಪಿನಿಯನ್' ಪತ್ರಿಕೆಯ (೧೯೦೪) ಸಂಪಾದಕರಾಗಿ ನೇಮಕಗೊಂಡರು. ಮನ್ಸುಖಲಾಲ್ ನಜರ್‌ರವರಿಗೆ ಭಾರತದಲ್ಲಿ ಪತ್ರಿಕೆಯನ್ನು ನಡೆಸಿದ ಅನುಭವವಿದ್ದರೂ ದಕ್ಷಿಣ ಆಫ್ರಿಕಾಕ್ಕೆ ಸಂಬಂಧಿಸಿದ ವಿಷಯ ಅಷ್ಟಾಗಿ ಪರಿಚಯವಿಲ್ಲದ್ದರಿಂದ ಈ ಜವಾಬ್ದಾರಿ ಗಾಂಧಿಯವರ ಹೆಗಲೇರಿತು. ಗಾಂಧಿ ಇದನ್ನು ಸಂತೋಷದಿಂದಲೇ ಸ್ವೀಕರಿಸಿ ಕಾರ್ಯಪ್ರವೃತ್ತರಾದರು. ಮೊದಲು ಈ ಪತ್ರಿಕೆಯನ್ನು ಗುಜರಾತಿ, ಹಿಂದಿ, ತಮಿಳು ಮತ್ತು ಇಂಗ್ಲಿಷಿನಲ್ಲಿ ಮುದ್ರಿಸುತ್ತಿದ್ದರು. ಆದರೆ ತಮಿಳು ಮತ್ತು ಹಿಂದಿ ಪ್ರತಿಗಳಿಗೆ ಹೆಚ್ಚು ಬೇಡಿಕೆ ಇಲ್ಲದ್ದನ್ನು ಗಮನಿಸಿದ ಇವರು ಪತ್ರಿಕೆಯನ್ನು ಗುಜರಾತಿ ಮತ್ತು ಇಂಗ್ಲಿಷಿನಲ್ಲಿ ಮಾತ್ರ ಪ್ರಕಟಿಸಲು ಪ್ರಾರಂಭಿಸಿದರು.

ಗಾಂಧಿ ಈ ಪತ್ರಿಕೆ ಪ್ರಾರಂಭವಾದಂದಿನಿಂದ ಅದು ನಿಲ್ಲುವವರೆಗೂ ಒಂದು ದಿನವೂ ತಮ್ಮ ಲೇಖನವನ್ನು ಪ್ರಕಟಿಸದೆ ಇರುತ್ತಿರಲಿಲ್ಲ. ಆರ್ಥಿಕವಾಗಿ ಇದನ್ನು ಪ್ರಕಟಿಸುವಾಗ ಅನೇಕ ತೊಂದರೆಗಳು ಎದುರಾಗುತ್ತಿದ್ದವು. ಗಾಂಧೀಜಿ ಇದನ್ನು ತಮ್ಮ ಘನತೆ ಗೌರವದ ಪ್ರಶ್ನೆ ಎಂದು ಪರಿಗಣಿಸಿದ್ದುದರಿಂದ ಇದಕ್ಕಾಗಿ ತಮ್ಮೆಲ್ಲಾ ದುಡಿಮೆಯ ಹಣವನ್ನು ಖರ್ಚು ಮಾಡುತ್ತಿದ್ದರು.

ಗಾಂಧಿಯವರಿಗೆ ಈ ಪತ್ರಿಕೆ ಭಾರತೀಯ ಸಮುದಾಯಕ್ಕೆ ಸೇವೆ ಸಲ್ಲಿಸುತ್ತಿದೆ. ಸಮಯ ಸಮಯಕ್ಕೆ ಸರಿಯಾಗಿ ಅವರಿಗೆ ಬೇಕಾದ ಮಾಹಿತಿ ನೀಡಿ, ಎಚ್ಚರಿಕೆ ನೀಡಿ, ಉಪಕರಿಸುತ್ತಿದೆ ಎಂಬ ತೃಪ್ತಿಯಿತ್ತು. ಇದರಿಂದಾಗಿಯೇ ಅವರು ತಮ್ಮ ತನುಮನ ಧನ ಎಲ್ಲವನ್ನೂ ಇದಕ್ಕಾಗಿ ವ್ಯಯಿಸಲು ಸಿದ್ಧವಾಗಿದ್ದರು. 'ಪತ್ರಿಕಾ ವೃತ್ತಿಯ ಮುಖ್ಯ ಧ್ಯೇಯ ಸೇವೆ ಎಂಬುದು ಅವರ ಅಚಲ ನಂಬಿಕೆಯಾಗಿತ್ತು.

ಯೂರೋಪಿಯನ್ನರು ಅದರಲ್ಲೂ ಮುಖ್ಯವಾಗಿ ಬ್ರಿಟಿಷರು ಆಫ್ರಿಕಾದಲ್ಲಿನ ಭಾರತೀಯರನ್ನು ಬಹಳ ಕೀಳಾಗಿ ಕಾಣುತ್ತಿದ್ದರು. ಅವರಿಗೆ ಒಂದಲ್ಲ ಒಂದು ವಿಧದಲ್ಲಿ ಅವಮಾನ ಮಾಡಿ, ಶೋಷಿಸಿ, ಅವರ ಬಾಳನ್ನು ದುರ್ಭರಗೊಳಿಸಲು ಹೊಸ ಹೊಸ ಕಾರ್ಯಯೋಜನೆಗಳನ್ನು ಸಿದ್ಧಪಡಿಸುತ್ತಿದ್ದರು. ಭಾರತೀಯರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಇವರು ವಾಸಿಸಲು ಪ್ರತ್ಯೇಕ ಕಾಲೋನಿಯನ್ನೇ ನಿರ್ಮಿಸಿದ್ದರು. ಇಲ್ಲಿ ಪೌರಸೌಲಭ್ಯಗಳನ್ನು ಒದಗಿಸಲು ಅವರು ಯಾವ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ. ಪರಿಸರ ನೈರ್ಮಲ್ಯದ ಬಗ್ಗೆಯೂ ಕಿಂಚಿತ್ತೂ ಕಾಳಜಿ ವಹಿಸುತ್ತಿರಲಿಲ್ಲ. ಹೊಲಸು ವಾತಾವರಣದಲ್ಲೇ ಅವರು ಇರಬೇಕಾಗಿದ್ದುದರಿಂದ ಅಲ್ಲಿ ಆಗಾಗ್ಗೆ ಅಂಟು ಜಾಡ್ಯಗಳು ಕಾಣಿಸಿಕೊಳ್ಳುತ್ತಿದ್ದವು. ಜೋಹಾನ್ಸ್‌ಬರ್ಗ್ ಬಳಿಯಲ್ಲೂ ಇಂತಹದೇ ಒಂದು ಬಡಾವಣೆ ಇತ್ತು. ಅಲ್ಲಿ ಒಮ್ಮೆ ಪ್ಲೇಗ್ ಕಾಣಿಸಿಕೊಂಡಾಗ ಗಾಂಧಿ ತನ್ನ ಕೆಲ ಸಹಚರರೊಂದಿಗೆ ಆ ಕಾಲೋನಿಯನ್ನು ಗುಡಿಸಿ, ಕಕ್ಕಸು ತೊಳೆದು, ಮನೆಗಳನ್ನೂ ಶುದ್ಧಗೊಳಿಸಿ ರೋಗಿಗಳಿಗೆ ಆರೈಕೆ ನೀಡಿದರು.

ಜಾತಿ ಮತ ಪರಿಗಣಿಸದೆ ಮಾಡಿದ ಈ ನಿಸ್ವಾರ್ಥ, ನಿಸ್ಪೃಹ ಸೇವೆ ಭಾರತೀಯರಲ್ಲದೆ ಯೂರೋಪಿಯನ್ನರ ಪ್ರಶಂಸೆಗೂ ಪಾತ್ರವಾಯಿತು.

'ಇಂಡಿಯನ್ ಒಪಿನಿಯನ್' ದಕ್ಷಿಣ ಆಫ್ರಿಕಾದಲ್ಲಿನ ಎಲ್ಲ ಜನರ ಮೆಚ್ಚುಗೆ ಪಡೆದುದಲ್ಲದೆ ಹೊರ ದೇಶದಲ್ಲೂ ಬಹು ಜನರ ಪ್ರಶಂಸೆಗೆ ಪಾತ್ರವಾಗಿತ್ತು. ದಿನೇದಿನೇ ಅದರ ಪ್ರಸರಣ ಸಂಖ್ಯೆಯೂ ವೃದ್ಧಿಸತೊಡಗಿತ್ತು. ಪ್ರಸ್ತುತ ಇದ್ದ ಪ್ರೆಸ್ ಆವರಣ ಸಾಲದೆನ್ನಿಸಿತ್ತು. ಅದಕ್ಕಾಗಿ ಗಾಂಧಿ ಇದನ್ನು ಬೇರೆ ವಿಶಾಲ ಸ್ಥಳವೊಂದಕ್ಕೆ ವರ್ಗಾಯಿಸಿ ಆಧುನಿಕಗೊಳಿಸಲು ಇಚ್ಛಿಸುತ್ತಿದ್ದರು. ಇಷ್ಟೇ ಅಲ್ಲದೆ ಕೆಲಸಗಾರರಿಗೂ ಅಲ್ಲೇ ವಸತಿ ಸೌಕರ್ಯ ಸಹ ಒದಗಿಸಿ,

ಬಿಡುವಿನ ವೇಳೆಯಲ್ಲಿ ಅವರು ಕೃಷಿ ಅಥವಾ ಇನ್ಯಾವುದಾದರೂ ಕೈಕಸುಬನ್ನು ಕೈಗೊಳ್ಳಲಿ ಎಂಬುದು ಅವರ ಆಶಯವಾಗಿತ್ತು. ಅದಕ್ಕಾಗಿಯೇ ಒಂದು ವಿಶಾಲ ಫಾರಂಹೌಸ್‌ನಲ್ಲಿ ಈ ಪ್ರೆಸ್ ಸ್ಥಾಪಿಸಲು ಯೋಚಿಸುತ್ತಿದ್ದರು. ಈ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಸಹ ನೀಡಿದರು. ಡರ್ಬಾನ್ ಬಳಿಯ ಫೀನಿಕ್ಸ್‌ನಲ್ಲಿನ ಒಂದು ಸ್ಥಳದ ಬಗ್ಗೆ ಮಾಹಿತಿ ದೊರೆಯಿತು. ಗಾಂಧಿಯವರು ಅಲ್ಲಿಗೆ ಹೋಗಿ ನೋಡಿ ಒಪ್ಪಿ ೨೦ ಎಕರೆಯ ಸ್ಥಳವನ್ನು ಕೂಡಲೇ ಕೊಂಡುಕೊಳ್ಳಲು ನಿರ್ಧರಿಸಿದರು. ಈ ಸ್ಥಳದ ಬಳಿಯಲ್ಲೇ ಇದ್ದ ಎಂಟು ಎಕರೆಯ ತೋಟ ಸಹ ಇವರ ಯೋಜನೆಗೆ ಅನುಕೂಲಕರವಾಗಿ ಕಂಡುದರಿಂದ ಅದನ್ನೂ ಸೇರಿಸಿ ಒಟ್ಟು ಆ ಪ್ರದೇಶವನ್ನು ಒಂದು ಸಾವಿರ ಪೌಂಡ್ ಬೆಲೆಗೆ ಕೊಂಡುಕೊಂಡರು. ಅಲ್ಲೇ ಕೂಡಲೇ ತಾತ್ಕಾಲಿಕ ಶೆಡ್ ನಿರ್ಮಿಸಿ, ಪ್ರೆಸ್ ಸ್ಥಾಪಿಸಿ ಪತ್ರಿಕೆಯ ಪ್ರಕಟಣೆಯನ್ನು ಅಲ್ಲಿಂದಲೇ ಮುಂದುವರಿಸಿದರು.

ಟ್ರಾನ್ಸ್‌ವಾಲಿನಲ್ಲಿ ಭಾರತೀಯರ ಮೇಲೆ ವಿಶೇಷ ನಿರ್ಬಂಧ ವಿಧಿಸುವ ಪ್ರಯತ್ನ ನಡೆಯುತ್ತಿದ್ದಾಗಲೇ ನೇಟಾಲ್‌ನಲ್ಲಿ ಜುಲು ದಂಗೆ ನಡೆದಿದೆ ಎಂಬ ವದಂತಿ ಗಾಂಧೀಜಿಗೆ ತಲುಪಿತು. ಬೋಅರ್ ಯುದ್ಧಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಹಾಯ ಮಾಡಿದ್ದಂತೆ ಈಗಲೂ ಕಷ್ಟಕಾಲ ಎದುರಿಸುತ್ತಿರುವ ಬ್ರಿಟಿಷರಿಗೆ, ಬ್ರಿಟಿಷ್ ಪ್ರಜೆಯಾದ ತಾವು, ಸಹಾಯ ಮಾಡುವುದು ತಮ್ಮ ಕರ್ತವ್ಯ ಎಂದು ಭಾವಿಸಿದ್ದ ಗಾಂಧಿ ಸರಕಾರಕ್ಕೆ ಪತ್ರ ಬರೆದು ತಾವು ಹಾಗೂ ಸಂಗಡಿಗರು ಸಹಾಯ ಮಾಡಲು ಸಿದ್ಧವೆಂದು ತಿಳಿಸಿದರು. ಸರಕಾರ ಈ ಬೇಡಿಕೆಗೆ ಒಪ್ಪಿಗೆ ನೀಡಿ 'ಸ್ಟ್ರೆಚರ್ ಬೇರರ್' ಪಡೆಯೊಂದನ್ನು ರಚಿಸಲು ಇವರಿಗೆ ಸೈನಿಕ ಅಧಿಕಾರಿಗಳ ನೆರವು ನೀಡಿತು. ತರಬೇತಿ ನೀಡಿತು.

ಗಾಂಧೀಜಿಗೆ ಜುಲು ಜನಗಳ ಶಾಂತ ಸ್ವಭಾವ, ಸ್ನೇಹಪರತೆ ಇಷ್ಟ ವಾಗಿತ್ತು. ತೆರಿಗೆ ಪಾವತಿ ವಿಷಯದಲ್ಲಿ ಅವರಿಗೂ ಬ್ರಿಟಿಷರಿಗೂ ವೈಮನಸ್ಸು ಬೆಳೆದು ಬಂದು ಬ್ರಿಟಿಷರು ಅವರ ಮೇಲೆ ಗುಂಡು ಹಾರಿಸಿ ಹಲವರನ್ನು ಗಾಯಗೊಳಿಸಿದ್ದರು. ಬ್ರಿಟಿಷರಿಗೆ ಜುಲು ಜನಗಳ ಶುಶ್ರೂಷೆ ಮಾಡಲು ಇಷ್ಟವಿರಲಿಲ್ಲ. ಅದಕ್ಕೇ ಸಹಾಯ ಮಾಡಲು ಮುಂದಾದ ಗಾಂಧಿ ಮತ್ತು ಸಂಗಡಿಗರನ್ನು ಆದರದಿಂದ ಸ್ವಾಗತಿಸಿದರು. ಒಂದು ತಿಂಗಳಲ್ಲಿ ಈ ದಂಗೆ

ಸಂಪೂರ್ಣವಾಗಿ ಹತೋಟಿಗೆ ಬಂತು. ಗಾಂಧಿ ಮತ್ತು ಸಂಗಡಿಗರನ್ನು ಬ್ರಿಟಿಷ್ ಸರಕಾರ ಅಭಿನಂದಿಸಿ ಅವರಿಗೆ ಬಹುಮಾನ, ಪದಕಗಳನ್ನೂ ನೀಡಿದರು. ಅದೇ ಸಮಯಕ್ಕೆ ಸರಿಯಾಗಿ ಟ್ರಾನ್ಸ್‌ವಾಲ್‌ನಿಂದ ಕೂಡಲೇ ಬರಬೇಕೆಂದು ತಂತಿ ಸಂದೇಶ ಬಂತು. ಗಾಂಧಿ ಫೀನಿಕ್ಸ್‌ನಲ್ಲಿ ಸ್ನೇಹಿತರನ್ನು ಭೇಟಿ ಮಾಡಿ ಕೂಡಲೇ ಅಲ್ಲಿಗೆ ಧಾವಿಸಿದರು. ಅಲ್ಲಿ ಅವರಿಗೆ ಆಶ್ಚರ್ಯ ಕಾದಿತ್ತು. ಭಾರತೀಯರು ಬ್ರಿಟಿಷರಿಗೆ ಮಾಡಿದ ಉಪಕಾರಕ್ಕೆ ಪ್ರತ್ಯುತ್ತರವಾಗಿ ಭಾರತೀಯರಿಗೆ ಆಘಾತವನ್ನುಂಟು ಮಾಡುವ ಕ್ರೂರ ಶಾಸನವೊಂದನ್ನು ಜಾರಿಗೆ ತರಲು ಟ್ರಾನ್ಸ್‌ವಾಲ್ ಸರ್ಕಾರ ಸಿದ್ಧವಾಗಿತ್ತು. ಇದಕ್ಕಾಗಿಯೇ 'ಏಷ್ಯಾಟಿಕ್ ಬಿಲ್' ಮಸೂದೆ ರಚಿಸಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಯಾವ ಒಂದು ಸ್ಥಳದಲ್ಲಿ ಭಾರತೀಯರಿಗೆ ಶಾಶ್ವತವಾಗಿ ನೆಲೆಸಲು ಅವಕಾಶ ಕೊಟ್ಟರೆ ಟ್ರಾನ್ಸ್‌ವಾಲ್‌ಗೂ ಅಪಾಯ ತಪ್ಪಿದ್ದಲ್ಲವೆಂದು ಅವರು ಭಾವಿಸಿದ್ದರು.

ಸರಕಾರ ತರಬೇಕೆಂದಿದ್ದ ಮಸೂದೆಯ ಮುಖ್ಯಾಂಶ ಹೀಗಿತ್ತು :

> *'ಟ್ರಾನ್ಸ್‌ವಾಲಿನಲ್ಲಿ ವಾಸ ಮಾಡಲು ಅಧಿಕಾರವಿರುವ, ಎಂಟು ವರ್ಷಕ್ಕೆ ಮೀರಿದ ಪ್ರತಿಯೊಬ್ಬ ಭಾರತೀಯ ಹೆಂಗಸು, ಗಂಡಸು ಅಥವಾ ಮಗು ಆಕೆಯ ಅಥವಾ ಆತನ ಹೆಸರನ್ನು ಏಷ್ಯಾಟಿಕ್ ರಿಜಿಸ್ಟರ್‌ನಲ್ಲಿ ರಿಜಿಸ್ಟರ್ ಮಾಡಿಸಿ ರಿಜಿಸ್ಟ್ರೇಷನ್ ಪತ್ರವನ್ನು ಸದಾ ಹತ್ತಿರದಲ್ಲಿಟ್ಟುಕೊಂಡಿರತಕ್ಕದ್ದು. ಸರಕಾರಿ ಅಧಿಕಾರಿಗಳಿಗೆ ಯಾವಾಗ ಕೇಳಿದರೂ ಇದನ್ನು ತೋರಿಸಬೇಕು. ರಿಜಿಸ್ಟ್ರೇಷನ್‌ಗೆ ಬರುವ ಅರ್ಜಿದಾರರು ತಮ್ಮ ಹಳೆಯ ರಹದಾರಿಯನ್ನು ರಿಜಿಸ್ಟ್ರಾರಲ್ಲಿ ಒಪ್ಪಿಸಿ, ಹೊಸ ಅರ್ಜಿಯನ್ನು ಭರ್ತಿಮಾಡಿಕೊಡಬೇಕು. ಹಾಗೇ ಕೈ ಬೆರಳುಗಳ ಮತ್ತು ಹೆಬ್ಬೆಟ್ಟಿನ ಗುರುತನ್ನೂ ಒಪ್ಪಿಸಬೇಕು. ನಿಗದಿಯಾದ ತಾರೀಖಿನೊಳಗೆ ಅರ್ಜಿ ಕೊಡದ ಭಾರತೀಯನಿಗೆ ಟ್ರಾನ್ಸ್‌ವಾಲ್‌ನೊಳಗಿರುವ ಹಕ್ಕಿರುವುದಿಲ್ಲ. ಆತನನ್ನು ಟ್ರಾನ್ಸ್‌ವಾಲ್‌ನಿಂದ ಹೊರಗಟ್ಟಲಾಗುವುದು. ಅಷ್ಟೇ ಅಲ್ಲದೆ, ಕಾನೂನು ಪ್ರಕಾರ ಅದು ಅಪರಾಧವಾಗುವುದರಿಂದ ಆತ/ಅವಳು ಶಿಕ್ಷೆಗೂ ಗುರಿಯಾಗಬೇಕಾಗುತ್ತದೆ......"*

ಗಾಂಧೀಜಿ ಈ ಬರ್ಬರ ಮಸೂದೆಯ ಪ್ರತಿಯನ್ನು ತಮ್ಮ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಮುದ್ರಿಸಿ ಎಲ್ಲಾ ಭಾರತೀಯರನ್ನೂ ಒಂದೆಡೆ ಕರೆಯಿಸಿ ಈ ಮಸೂದೆ ಕಾನೂನಾಗಿ ಬಂದಾಗ ಭಾರತೀಯರು ಅನುಭವಿಸಬೇಕಾಗುವ ಬವಣೆಯನ್ನು ಬಣ್ಣಿಸಿದರು. ಈ ಭಾಷಣದಿಂದ ಪ್ರಭಾವಿತರಾದ ಭಾರತೀಯರು ಒಕ್ಕೊರಲಿನಿಂದ ಈ ಕೆಳಕಂಡ ನಿರ್ಣಯವನ್ನು ಕೈಗೊಂಡರು. ದೇವರ ಸಾಕ್ಷಿಯಾಗಿ ಇದನ್ನು ಪಾಲಿಸುವುದಾಗಿ ಎಲ್ಲರೂ ಪ್ರಮಾಣ ಮಾಡಿದರು.

"ನಾವೆಲ್ಲಾ ಭಾರತೀಯರು, ಈ ಮಸೂದೆಯನ್ನು ಉಗ್ರವಾಗಿ ವಿರೋಧಿಸುತ್ತೇವೆ. ಒಂದು ವೇಳೆ ಈ ಮಸೂದೆ ಶಾಸನವಾಗಿ ಹೊರಟಿದ್ದಾದರೆ ಅದಕ್ಕೆ ನಾವು ಕಿಂಚಿತ್ತೂ ಮನ್ನಣೆಯನ್ನು ಕೊಡುವುದಿಲ್ಲ. ಆ ಶಾಸನದಂತೆ ಎಂದೂ ನಡೆಯುವುದಿಲ್ಲ. ಈ ರೀತಿ ಶಾಸನಭಂಗ ಮಾಡುವುದರಲ್ಲಿ ಬರುವ ಎಲ್ಲಾ ಶಿಕ್ಷೆ ಮತ್ತು ಕಷ್ಟವನ್ನೂ ಅನುಭವಿಸಲು ಸಿದ್ಧರಿರುತ್ತೇವೆ."

ಗಾಂಧಿ ಈ ಪ್ರಮಾಣ ವಚನದ ಬಗ್ಗೆ ಮೆಚ್ಚುಗೆ ಸೂಚಿಸಿ ಎಲ್ಲರಿಗೂ ಅಭಿನಂದನೆ ಸಲ್ಲಿಸಿ ನುಡಿಬರು. "ಇಂತಹ ಕ್ರೂರ ಶಾಸನಕ್ಕೆ ತಲೆಬಾಗುವುದಕ್ಕಿಂತ ಪ್ರಾಣವನ್ನು ಒಪ್ಪಿಸುವೆನು. ಎಲ್ಲರೂ ಹೆದರಿ ಹಿಂಜರಿದು ನಾನೊಬ್ಬನೇ ಉಳಿದರೂ, ಪ್ರಾಯಶಃ ಇಂತಹ ಸಂದರ್ಭ ಬರಲಾರದು. ನನ್ನ ಜನರಲ್ಲಿ, ನನಗೆ ದೇವರಲ್ಲಿ ಇರುವಷ್ಟೇ ನಂಬಿಕೆ ಇದೆ. ಎಂದಿಗೂ ನಾನಂತೂ ಪ್ರತಿಜ್ಞಾ ಭಂಗ ಮಾಡಲಾರೆ. ಹಾಗೆಯೇ ತಾವುಗಳೂ ಕೂಡ ಈ ಪ್ರತಿಜ್ಞೆಯನ್ನು ದೃಢಮನಸ್ಸಿನಿಂದ ಪಾಲಿಸಬೇಕು."

ಹೀಗೆ ಸಾಮೂಹಿಕ ಪ್ರತಿಜ್ಞಾವಿಧಿಯನ್ನು ತೆಗೆದುಕೊಂಡ ಗಾಂಧೀಜಿ ವಲಸೆ ರಾಷ್ಟ್ರಮಂತ್ರಿಯಾದ ಡಂಕನ್‌ರವರನ್ನು ಕಂಡು ಸಭೆಯ ನಿರ್ಣಯ ಹಾಗೂ ಪ್ರತಿಜ್ಞೆಯನ್ನು ತಿಳಿಸಿದರು. ಆಗ ನಿಯೋಗದಲ್ಲಿದ್ದ ಸೇಠ್ ಹಾಜಿ ಹಬೀಬರು 'ಯಾವನಾದರೂ ಅಧಿಕಾರಿ ಬಂದು ನನ್ನ ಪತ್ನಿಯ ಬೆರಳು ಗುರುತುಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರೆ ನಾನು ಅವನನ್ನು ಕೊಲ್ಲಲು ಹಿಂಜರಿಯುವುದಿಲ್ಲ' ಎಂದು ಗರ್ಜಿಸಿದರು.

ಆಗ ಡಂಕನ್‌ರವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಮಾಧಾನ ಪಡಿಸುವ ಧ್ವನಿಯಲ್ಲಿ ನುಡಿದರು. "ಸರಕಾರ ಅಮಾನುಷವಾಗಿ ಹೆಂಗಸರ ಬಗ್ಗೆ ವರ್ತಿಸುವುದಿಲ್ಲ. ಅವರನ್ನು ಈ ಮಸೂದೆಯ ಪರಿಧಿಯಿಂದ ಹೊರಗಿಡ

ಬಯಸುತ್ತೇವೆ. ಆದರೆ ಇತರೇ ವಿಧಿಗಳ ವಿಚಾರದಲ್ಲಿ ಸರಕಾರ ಮರುಚಿಂತನೆ ಮಾಡುವುದಿಲ್ಲ. ನಿಮ್ಮ ಹಿತ ದೃಷ್ಟಿಯಿಂದ ಈ ಕಾನೂನನ್ನು ನೀವು ಒಪ್ಪಿಕೊಳ್ಳುವುದೇ ಒಳ್ಳೆಯದು".

ಸರಕಾರ ಸ್ತ್ರೀಯರ ಬಗ್ಗೆ ಅನುಕಂಪಗೊಂಡು ವಿನಾಯಿತಿ ಘೋಷಿಸಿದ್ದಕ್ಕಾಗಿ ನಿಯೋಗ ಮಂತ್ರಿಗಳಿಗೆ ವಂದಿಸಿತು. 'ಭಾರತೀಯರು ತಮ್ಮ ಪ್ರತಿಜ್ಞೆಗೆ ಬದ್ಧರಾಗುತ್ತಾರೆ' ಎಂದು ಸ್ಪಷ್ಟವಾಗಿ ತಿಳಿಸಿ ನಿಯೋಗದವರು ಹೊರಬಂದರು.

◆ ◆ ◆

ಗಾಂಧೀಜಿ, ನಿಮಗೆ ಕೋಪಬರುವುದುಂಟೆ ?

"ಗಾಂಧೀಜಿ, ನಿಮಗೆ ಕೋಪಬರುವುದುಂಟೆ ?" ಗಾಂಧೀಜಿ ಲಂಡನ್ನಿನಲ್ಲಿದ್ದಾಗ ಒಬ್ಬ ಮಹಿಳೆ ಪ್ರಶ್ನಿಸಿದಳು.

"ನನ್ನ ಪತ್ನಿಯನ್ನು ಕೇಳಿ ; ಎಲ್ಲರೊಡನೆಯೂ ಸಂತಸವಾಗಿರುತ್ತೇನೆ. ಆದರೆ ಪತ್ನಿಯೊಡನೆ ಮಾತ್ರ ಇಲ್ಲ !" ಎಂದರು.

ಎದುರಿಗಿದ್ದ ಮಹಿಳೆ "ನನ್ನ ಪತಿ ಮಾತ್ರ ನನ್ನೊಡನೆ ಒಂದು ದಿನವೂ ಕೋಪ ಮಾಡಿಕೊಳ್ಳುವುದಿಲ್ಲ". ಎಂದಳು.

"ಓಹೋ ! ನಿಮ್ಮ ಪತಿ ನಿಮಗೆ ತುಂಬಾ ಲಂಚ ಕೊಟ್ಟಿರಬೇಕು."

ಗಾಂಧೀಜಿಯ ಮಾತು ಎಲ್ಲರಿಗೂ ನಗು ತರಿಸಿತು.

೮. ಸತ್ಯಾಗ್ರಹದ ಜನನ

ಈ ಚಳುವಳಿಯನ್ನು ಯಾವ ಹೆಸರಿನಿಂದ ಕರೆಯಬೇಕೆಂಬ ಸಲಹೆ ಬಂದಾಗ ಗಾಂಧೀಜಿ ಇದನ್ನು 'ಪ್ಯಾಸಿವ್ ರೆಸಿಸ್ಟೆನ್ಸ್' ಎಂದು ಕರೆದರು. ಆದರೆ ಅವರಿಗೇ ಈ ಹೆಸರು ಸರಿಕಾಣಲಿಲ್ಲ. ಆದ್ದರಿಂದ ಗಾಂಧೀಜಿ ತಮ್ಮ ಪತ್ರಿಕೆಯಲ್ಲಿ ಈ ಚಳುವಳಿಗೆ ಒಂದು ಸೂಕ್ತ ಹೆಸರನ್ನು ಸೂಚಿಸಿದವರಿಗೆ ಬಹುಮಾನ ಕೊಡುವುದಾಗಿ ಪ್ರಕಟಿಸಿದರು. ನೂರಾರು ಹೆಸರುಗಳ ಸೂಚನೆಗಳು ಬಂದವು. ಮಗನ್‌ಲಾಲ್ ಗಾಂಧಿ ಸೂಚಿಸಿದ್ದ 'ಸದಾಗ್ರಹ' ಬಹುಮಾನಕ್ಕೆ ಪಾತ್ರವಾಯಿತು. ಆದರೂ ಇದು ಗಾಂಧಿಯವರಿಗೆ ಸೂಕ್ತ ಪದವಾಗಿ ಕಾಣಿಸಲಿಲ್ಲ. ಇದನ್ನು ಅವರು 'ಸತ್ಯಾಗ್ರಹ' ವೆಂದು ಮಾರ್ಪಡಿಸಿದರು. ಹೀಗೆ 'ಸತ್ಯಾಗ್ರಹ' ಉದಯಿಸಿ ಚಳುವಳಿಗೆ ಹೊಸ ಹೆಸರು ನೀಡಿತು.

ಈ ಚಳುವಳಿ ಪ್ರಾರಂಭವಾದಾಗ ಟ್ರಾನ್ಸ್‌ವಾಲ್ ಇನ್ನೂ ವಲಸೆ ರಾಷ್ಟ್ರ (ಕ್ರೌನ್ ಕಾಲೋನಿ) ವಾಗಿತ್ತು. ಆದ್ದರಿಂದ ರಾಜ್ಯಾಡಳಿತದ ಜವಾಬ್ದಾರಿ ಬ್ರಿಟಿಷ್ ಸಾಮ್ರಾಜ್ಯ ಸರಕಾರಕ್ಕೆ ಸೇರಿದುದಾಗಿತ್ತು. ಶಾಸನ ಸಭೆಯಲ್ಲಾದ ನಿರ್ಣಯಕ್ಕೆ ರಾಜಮುದ್ರೆ ಬಿದ್ದಮೇಲೇ ಒಂದು ಶಾಸನವಾಗುತ್ತಿತ್ತು. ಆದ್ದರಿಂದ ತಮ್ಮ ಅಹವಾಲನ್ನು ಒಂದು ನಿಯೋಗದ ಮೂಲಕ ಬ್ರಿಟನ್‌ಗೆ ಒಯ್ದು ವಲಸೆ ಮತ್ತು ಭಾರತದ ಕಾರ್ಯದರ್ಶಿಗಳಿಗೆ ಮುಟ್ಟಿಸಲು ಎಂಪೈರ್ ನಾಟ್ಯಶಾಲೆಯಲ್ಲಿ ಸೇರಿದ್ದ ಬೃಹತ್ ಸಭೆ ಅಭಿಪ್ರಾಯಪಟ್ಟಿತು. ಈ ನಿಯೋಗಕ್ಕೆ ಯಾರು ಯಾರನ್ನು ಕಳುಹಿಸಬೇಕೆಂಬ ಬಗ್ಗೆ ಬಹಳ ಚರ್ಚೆಯಾಗಿ ಎಚ್.ಓ.ಅಲಿ ಮತ್ತು ಗಾಂಧಿಯವರನ್ನು ಕಳುಹಿಸಲು ನಿರ್ಣಯಿಸಲಾಯಿತು. ತಕ್ಷಣವೇ ಬಿನ್ನವತ್ತಳೆ ಸಿದ್ಧವಾಯಿತು.

ಈ ಇಬ್ಬರೂ ಹಡಗಿನಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಇಂಗ್ಲೆಂಡಿನಲ್ಲಿ ದಾದಾಭಾಯಿ ನವರೋಜಿಯವರನ್ನು ಕಂಡು ಅವರ ಸಹಾಯದಿಂದ ವಲಸೆ ರಾಷ್ಟ್ರಗಳ ಕಾರ್ಯದರ್ಶಿ ಲಾರ್ಡ್ ಎಲ್ಗಿನ್‌ರೂ, ಭಾರತದ ಕಾರ್ಯದರ್ಶಿ ಲಾರ್ಡ್ ಮಾರ್ಲೆಯವರನ್ನು ಕಂಡು ಬಿನ್ನವತ್ತಳೆಯನ್ನು

ಅರ್ಪಿಸಿ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಅನುಭವಿಸುತ್ತಿರುವ ದಾರುಣ ಬವಣೆಗಳನ್ನು ಬಣ್ಣಿಸಿ ಹೇಳಿದರು. ಸಮಾಧಾನದಿಂದಲೇ ಅಹವಾಲನ್ನು ಆಲಿಸಿದ ಇಬ್ಬರೂ ಈ ಬಗ್ಗೆ ಸಹಾಯ ಮಾಡುವುದಾಗಿ ಭರವಸೆ ನೀಡಿದರು.

ನಿಯೋಗ ಆರು ವಾರಗಳ ನಂತರ ದಕ್ಷಿಣ ಆಫ್ರಿಕಾಗೆ ಹಿಂತಿರುಗಿದಾಗ ಸಾರ್ವಭೌಮ ಸರ್ಕಾರ ಟ್ರಾನ್ಸ್‌ವಾಲ್ ಸರಕಾರದ ಮಸೂದೆಗೆ ಅಂಗೀಕಾರ ನೀಡಿಲ್ಲವೆಂಬ ತಂತಿ ಸುದ್ದಿ ಬಂದಿತ್ತು. ಇದರಿಂದ ಭಾರತೀಯರಿಗೆಲ್ಲಾ ಸಂತೋಷವಾಯಿತು. ಆದರೆ ಈ ಸಂತೋಷ ಬಹು ಕ್ಷಣಿಕದ್ದಾಗಿತ್ತು. ಟ್ರಾನ್ಸ್‌ವಾಲ್‌ಗೆ ಜವಾಬ್ದಾರಿ ಸರ್ಕಾರ ಬಂದೊಡನೆ ಇದು ಕಳುಹಿಸಿದ 'ಏಷಿಯಾಟಿಕ್ ರಿಜಿಸ್ಟ್ರೇಷನ್' ಮಸೂದೆಯನ್ನು ಸಾರ್ವಭೌಮ ಸರ್ಕಾರ ಯಥಾವತ್ತಾಗಿ ಒಪ್ಪಿತ್ತು. ಕೂಡಲೇ ಆ ಕಾನೂನು ಜಾರಿಯಾಗಿ ಹೋಯಿತು. ಬ್ರಿಟನ್ ಮತ್ತು ರಾಜ್ಯ ಸರ್ಕಾರಗಳು ತಮಗೆ ಮೋಸ ಮಾಡಿದವೆಂದು ಭಾರತೀಯರೆಲ್ಲಾ ರೊಚ್ಚಿಗೆದ್ದರು. ಚಳುವಳಿ ಉಗ್ರರೂಪ ತಾಳಿತು. ರಹದಾರಿ ಪತ್ರವನ್ನು ನಾಯಿ ಕೊರಳಿನ ಪಟ್ಟಿಗೆ ಹೋಲಿಸಿ ಅದನ್ನು ಯಾರೂ ಪಡೆಯದೆ ಇರಲು ನಿರ್ಧರಿಸಿದರು. ಇದರಿಂದಾಗುವ ಎಲ್ಲಾ ತೊಂದರೆಗಳನ್ನು ಅನುಭವಿಸಲು ಸಿದ್ಧರಾದರು. ಆದರೆ ಟ್ರಾನ್ಸ್‌ವಾಲ್ ಸರ್ಕಾರ ಜನವರಿ ೧, ೧೯೦೭ರಿಂದಲೇ ಈ ಕಾನೂನನ್ನು ಜಾರಿಗೊಳಿಸಿ ಜುಲೈ ೩೧ ರೊಳಗೆ ಎಲ್ಲರೂ ರಹದಾರಿ ಪಡೆದಿರಬೇಕೆಂದು ಕಟ್ಟಾಜ್ಞೆ ಜಾರಿಗೊಳಿಸಿತು. ಆದರೆ ಈ ಆಜ್ಞೆ ಫಲಕಾರಿಯಾಗಲಿಲ್ಲ. ಈ ಕರಾಳ ಶಾಸನ ಭಾರತೀಯರಂತೆ ಚೀನೀಯರಿಗೂ ಅನ್ವಯಿಸುತ್ತಿದ್ದುದರಿಂದ ಚೀನೀಯರೂ ಚಳುವಳಿಯಲ್ಲಿ ಭಾಗಿಯಾಗ ತೊಡಗಿದರು. ದಿನದಿನಕ್ಕೆ ಚಳುವಳಿ ಉಗ್ರರೂಪ ತಳೆಯಿತು. ಕಾನೂನಿನ ಗಡುವು ಮುಗಿದೊಡನೆ ರಹದಾರಿ ಪಡೆಯದೆ ಇರುವವರೆಲ್ಲಾ ಟ್ರಾನ್ಸ್‌ವಾಲ್ ಬಿಟ್ಟುಹೋಗಬೇಕೆಂದು ಸರ್ಕಾರ ಆಜ್ಞೆ ಮಾಡಿತು. ಈ ಆಜ್ಞೆಯನ್ನು ಪಾಲಿಸದಿದ್ದಾಗ ಸಾವಿರಾರು ಜನರ ದಸ್ತಗಿರಿಯಾಯಿತು. ಗಾಂಧಿಯೂ ಶಿಕ್ಷೆಗೊಳಗಾಗಿ ಎರಡು ತಿಂಗಳು ಸೆರೆಮನೆ ವಾಸ ಅನುಭವಿಸಿದರು. ಸೆರೆಮನೆಯಲ್ಲಿ ಇವರನ್ನೆಲ್ಲಾ ಅಮಾನುಷ ರೀತಿಯಲ್ಲಿ ನಡೆಸಿಕೊಳ್ಳಲಾಯಿತು. ಆದರೂ ಯಾರೂ ಎದೆಗುಂದಲಿಲ್ಲ. ದಿನದಿನಕ್ಕೆ ಸೆರೆಯಾಳುಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಕೊನೆಗೆ ಸರಕಾರ ಒಂದು ರಾಜಿ ಸೂತ್ರವನ್ನು ಗಾಂಧಿಯವರ ಮುಂದಿಟ್ಟಿತು.

ಅದರ ಪ್ರಕಾರ ಭಾರತೀಯರು ಸ್ವಇಚ್ಛೆಯಿಂದ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಭಾರತೀಯರಲ್ಲಿ ಬಹುಸಂಖ್ಯೆಯಲ್ಲಿ ರಿಜಿಸ್ಟರ್ ಮಾಡಿಸಿಕೊಂಡರೆ ಶಾಸನ ರದ್ದಾಗುವುದು.

ಗಾಂಧೀಜಿ ಈ ಷರತ್ತನ್ನು ಜೈಲಿನಲ್ಲಿದ್ದ ಸಹೋದ್ಯೋಗಿಗಳೊಡನೆ ಚರ್ಚಿಸಿದರು. ಇದು ಮೋಸದ ಪ್ರಕರಣವಾಗುತ್ತದೆ. ಮತ್ತೆ ತೊಂದರೆ ಕಟ್ಟಿಟ್ಟ ಬುತ್ತಿ. ಇದನ್ನು ಒಪ್ಪಬಾರದೆಂದು ಹಲವರು ಸೂಚಿಸಿದರು. ಶಾಂತಿ ಸ್ವಭಾವದ ಗಾಂಧಿ ಅವರನ್ನು ಸಮಾಧಾನಪಡಿಸಿದರು. ಈ ಒಪ್ಪಂದಕ್ಕೆ ಒಂದು ತಿದ್ದುಪಡಿಯನ್ನು ಗಾಂಧಿ ಸೂಚಿಸಿದರು. 'ಹೊಸ ರಹದಾರಿಗಳಲ್ಲಿ ಕಾಣಿಸಬೇಕಾದ ವಿಷಯಗಳನ್ನು ಭಾರತೀಯರ ಸಲಹೆ ಪಡೆದು ಸರಕಾರ ನಿರ್ಧರಿಸಬೇಕು ಹಾಗೂ ಈ ಕರಾಳ ಶಾಸನ ರದ್ದುಪಡಿಸುವ ಬಗೆಗೆ ಪೂರ್ಣ ಭರವಸೆಯನ್ನು ನೀಡಬೇಕು'.

ಸರಕಾರ ಇದಕ್ಕೆ ಒಪ್ಪಿಗೆ ನೀಡಿ ಗಾಂಧಿಯನ್ನು ಬಿಡುಗಡೆ ಮಾಡಿ ಒಪ್ಪಂದಕ್ಕೆ ಸಹಿ ಬಿದ್ದೊಡನೆಯೇ ಇತರ ಕೈದಿಗಳನ್ನೂ ಬಿಡುಗಡೆ ಮಾಡುವುದಾಗಿ ತಿಳಿಸಿತು.

ಗಾಂಧಿ ಹೊರಗಿದ್ದ ಭಾರತೀಯರೊಡನೆ ಸಮಾಲೋಚನೆ ನಡೆಸಿದರು. ಅಲ್ಲೂ ಕೂಡ ಸರಕಾರದ ವಿರೋಧ ಮೂಡಿಬಂತು. 'ಮೊದಲು ಶಾಸನ ರದ್ದಾಗಲಿ ಅನಂತರ ನಾವೆಲ್ಲಾ ರಿಜಿಸ್ಟರ್ ಮಾಡಿಸಿಕೊಳ್ಳೋಣ' ಎಂದು ಬಹುಜನರು ಹಟಹಿಡಿದರು.

ಗಾಂಧಿ ಜನರಲ್ಲಿ ಉಕ್ಕುತ್ತಿದ್ದ ರೋಷ ಮತ್ತು ಅಸಮಾಧಾನವನ್ನು ಅರ್ಥಮಾಡಿಕೊಂಡು ಶಾಂತ ರೀತಿಯಿಂದಲೇ ಅವರನ್ನು ಹೀಗೆ ಸಮಾಧಾನ ಪಡಿಸಿದರು:

"ಸತ್ಯಾಗ್ರಹ ಅಸ್ತ್ರ ನಮ್ಮ ಕೈಯಲ್ಲಿರುವವರೆಗೂ ನಾವು ನಿರ್ಭೀತರು, ಸ್ವತಂತ್ರರು. ಸತ್ಯಾಗ್ರಹಿ ಶಿಕ್ಷೆಗೆ ಒಳಗಾಗುವುದು, ಸ್ವಂತ ಇಚ್ಛೆಯಿಂದ. ಭಯದಿಂದ ಅಲ್ಲ. ಈ ರೀತಿ ಶಿಕ್ಷೆಗೆ ಗುರಿಯಾಗುವುದು ಜನತೆಯ ಕಲ್ಯಾಣ ಸಾಧನೆಗೆ ಅವಶ್ಯವೆಂದು ನಂಬಿ. ಸರಕಾರ ಒಂದು ವೇಳೆ ವಚನ ಭ್ರಷ್ಟವಾದರೂ ನಾವು ತಪ್ಪುದಾರಿ ಹಿಡಿಯಬಾರದು. ಎಂತಹ ಪರಿಸ್ಥಿತಿಯನ್ನೂ ಸರಿಪಡಿಸಲು ನಾವು ಶಕ್ತರು. ಸರ್ಕಾರ ಕರಾಳ ಶಾಸನ ರದ್ದುಮಾಡಿ, ನಾವು ರಿಜಿಸ್ಟ್ರೇಷನ್

ಮಾಡಿಸಿಕೊಂಡ ಮೇಲೆ ಪುನಃ ಈ ಕರಾಳ ಶಾಸನವನ್ನು ಜಾರಿಗೆ ತಂದರೆ ಆಗೇನು ಮಾಡುವಿರಿ ? ಮಾನವ ಸಹಜ ನಮ್ಮ ಸದ್ಗುಣ, ನಮ್ರತೆ, ನ್ಯಾಯಪರತೆ ಎದುರಾಳಿಯ ಮನಸ್ಸನ್ನು ಖಂಡಿತಾ ಗೆಲ್ಲುತ್ತದೆ. ಬ್ರಿಟಿಷ್ ಪ್ರಭುತ್ವದಲ್ಲಿರುವ ನಾವು ಅವರನ್ನು ಸ್ವಲ್ಪಮಟ್ಟಿಗಾದರೂ ನಂಬೋಣ. ಮೋಸ ಮಾಡಿದರೆ ನಮ್ಮ ಕೊನೆಯ ಅಸ್ತ್ರ 'ಸತ್ಯಾಗ್ರಹ' ಇದ್ದೇ ಇದೆ. ಅದನ್ನೇ ಪ್ರಯೋಗಿಸೋಣ'.

ಗಾಂಧಿಯ ಮಾತಿಗೆ ಮಣಿದು ಭಾರತೀಯರೆಲ್ಲಾ ಸ್ವಇಚ್ಛೆಯಿಂದ ರಿಜಿಸ್ಟ್ರೇಷನ್ ಮಾಡಿಸಿಕೊಂಡರು. ಬೆರಳು ಗುರ್ತನ್ನು ಕೊಟ್ಟು ರಹದಾರಿ ಪಡೆದರು. ಬೆರಳು ಗುರ್ತನ್ನು ನೀಡುವ ಬಗ್ಗೆ ಹಲವರಿಗೆ ಅಸಮಾಧಾನವಿದ್ದುದರಿಂದ ಒಬ್ಬ ಪಠಾಣನಿಂದ ಗಾಂಧಿ ತಲೆಗೆ ಪೆಟ್ಟನ್ನೂ ತಿನ್ನಬೇಕಾಗಿ ಬಂದಿತ್ತು.

◆ ◆ ◆

ಶಿಷ್ಯ ವೃತ್ತಿ

ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ ನಡೆಸಿ ಕೀರ್ತಿಭಾಜನರಾಗಿ ಆಗ ತಾನೇ ಭಾರತಕ್ಕೆ ಹಿಂತಿರುಗಿದ್ದರು ಗಾಂಧೀಜಿ. ವಿನೋಬಾ, ಬಾಪೂಗೆ 'ನಿಮ್ಮಂಥ ಸತ್ಯವಂತ, ನಿರ್ಭೀತ ವ್ಯಕ್ತಿಯೊಬ್ಬರ ಶಿಷ್ಯನಾಗುವ ಆಶಯ ನನ್ನದು. ನಾನು ನಿಮ್ಮ ಬಳಿಗೆ ಬರಬಹುದೇ ?' ಎಂದು ಪತ್ರ ಬರೆದರು.

ಗಾಂಧೀಜಿ 'ಒಳ್ಳೆಯದು, ಕೆಲದಿನಗಳು ಬಂದು ನನ್ನ ಆಶ್ರಮದಲ್ಲಿರಬಹುದು. ಅಡ್ಡಿ ಇಲ್ಲ' ಎಂದು ಬರೆದರು.

ವಿನೋಬಾ ಗಾಂಧಿಯವರ ಆಶ್ರಮ ತಲುಪಿದರು. ಬಾಪೂ, ವಿನೋಬಾ ತಂದೆ ನರಹರಿ ಭಾವೆಯವರಿಗೆ 'ನಿಮ್ಮ ಹುಡುಗ ನಮ್ಮೊಡನಿದ್ದಾನೆ. ಈ ಚಿಕ್ಕ ವಯಸ್ಸಿನಲ್ಲಿ ಅವನಿಗೆ ವೈರಾಗ್ಯ ಮೈಗೂಡಿದೆ. ವಿನೋಬಾ ಒಳ್ಳೆ ವರ್ಚಸ್ವಿ ಇದ್ದಾನೆ' ಎಂದು ಪತ್ರ ಬರೆದರು.

('ವಿನೋಬಾ ಭಾವೆ', ಎಚ್. ಎಸ್. ದೊರೆಸ್ವಾಮಿ)

೯. ಒಪ್ಪಂದದ ಉಲ್ಲಂಘನೆ

ಒಪ್ಪಂದದಂತೆ ಭಾರತೀಯರೆಲ್ಲಾ ಸ್ವಇಚ್ಛೆಯಿಂದ ನೊಂದಣಿ ಮಾಡಿಸಿಕೊಂಡು ರಹದಾರಿ ಪತ್ರವನ್ನು ಪಡೆದುಕೊಂಡರು. ಆದರೆ ಒಪ್ಪಂದಕ್ಕೆ ಒಪ್ಪಿಗೆ ನೀಡಿದ್ದ ಬ್ರಿಟಿಷ್ ಅಧಿಕಾರಿ ಜನರಲ್ ಸ್ಮಟ್ಸ್‌ರವರಿಂದ ಒಪ್ಪಂದದ ಉಲ್ಲಂಘನೆಯಾಯಿತು. ಟ್ರಾನ್ಸ್‌ವಾಲ್ ಸರ್ಕಾರ ಕರಾಳ ಏಷಿಯಾಟಿಕ್ ಮಸೂದೆಯನ್ನು ಹಿಂದಕ್ಕೆ ಪಡೆಯಲೇ ಇಲ್ಲ. 'ಭಾರತೀಯರಲ್ಲಿ ಇನ್ನೂ ಹಲವರು ರಿಜಿಸ್ಟರ್ ಮಾಡಿಸಿಕೊಂಡಿಲ್ಲ. ಹೀಗೆ ರಿಜಿಸ್ಟರ್ ಮಾಡಿಸಿಕೊಳ್ಳದೆ ಇರುವ ಒಬ್ಬ ಭಾರತೀಯ ಉಳಿದರೂ ನಮ್ಮ ಮಾತಿನಂತೆ ಶಾಸನವನ್ನು ಹಿಂತೆಗೆದುಕೊಳ್ಳುವುದು ಸಾಧ್ಯವಿಲ್ಲ' ಎಂದು ಟ್ರಾನ್ಸ್‌ವಾಲ್ ಸರ್ಕಾರ, ಮುಖ್ಯವಾಗಿ ಜನರಲ್ ಸ್ಮಟ್ಸ್ ಮೊಂಡುವಾದ ಮುಂದಿಟ್ಟರು.

ಗಾಂಧಿ, ಭಾರತೀಯರ ಕೋಪಕ್ಕೆ ಗುರಿಯಾದುದಲ್ಲದೆ ಅವಹೇಳನಕ್ಕೂ ಗುರಿಯಾದರು. ಇದರಿಂದಾಗಿ ಗಾಂಧಿ ಬಹಳ ನೊಂದುಕೊಂಡರು. ಆದರೆ ಎದೆಗುಂದಲಿಲ್ಲ. ಸತ್ಯಕ್ಕೆ ಸೋಲಿಲ್ಲವೆಂಬ ದೃಢನಂಬಿಕೆಯಿಂದ ಹೊಸ ಹೋರಾಟಕ್ಕೆ ಸಿದ್ಧವಾದರು. ಸರ್ಕಾರಕ್ಕೆ ಕೊನೆ ಎಚ್ಚರಿಕೆ ನೀಡಿದರು :

"ಒಪ್ಪಂದದ ನಿಯಮಗಳಂತೆ 'ಏಷಿಯಾಟಿಕ್ ಶಾಸನ'ವನ್ನು ಶೀಘ್ರವೇ ರದ್ದುಗೊಳಿಸದೆ ಹೋದರೆ, ಭಾರತೀಯರು ಸಂಗ್ರಹಿಸಿರುವ ಎಲ್ಲಾ ರಿಜಿಸ್ಟ್ರೇಷನ್-ಪತ್ರಗಳನ್ನು ಸುಟ್ಟು ಬರುವ ಕಷ್ಟಗಳಿಗೆಲ್ಲಾ ಎದೆಗೊಡಲು ಸಿದ್ಧರಿದ್ದಾರೆ".

ಆಗಸ್ಟ್ ೧೬, ೧೯೦೮ರಂದು ಸಂಜೆ ನಾಲ್ಕು ಗಂಟೆಗೆ ಸತ್ಯಾಗ್ರಹ ಸಮಿತಿ ಜೋಹಾನ್ಸ್‌ಬರ್ಗ್‌ನ ಹಮೀದಿಯಾ ಮಸೀದಿಯ ಆವರಣದಲ್ಲಿ ಒಂದು ಬೃಹತ್ ಸಭೆಯನ್ನು ಆಯೋಜಿತಗೊಳಿಸಿ, ಸಮಿತಿಯು ಎಚ್ಚರಿಕೆಯ ನೋಟೀಸ್‌ಗೆ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸುತ್ತಿತ್ತು. ಆವರಣದ ಒಂದು ಮೂಲೆಯಲ್ಲಿ ಇರಿಸಿದ್ದ ಕಬ್ಬಿಣದ ಕಡಾಯಿಯಲ್ಲಿ ಬೆಂಕಿ ಉರಿಯುತ್ತಿತ್ತು. ನಿಗದಿತ ವೇಳೆ ಸಮೀಪಿಸುತ್ತಿದ್ದಂತೆ ಒಬ್ಬ ಸ್ವಯಂಸೇವಕ ಒಂದು ತಂತಿ ವರ್ತಮಾನವನ್ನು ತಂದುಕೊಟ್ಟ.

'ಭಾರತೀಯರ ತೀರ್ಮಾನಕ್ಕೆ ಸರಕಾರ ವ್ಯಸನಪಡುತ್ತದೆ. ಸರ್ಕಾರ ತನ್ನ ಕಾರ್ಯ ನೀತಿಯಲ್ಲಿ ಬದಲಾವಣೆ ಮಾಡಲು ರಾಷ್ಟ್ರದ ಹಿತದೃಷ್ಟಿಯಿಂದ ಸಾಧ್ಯವಿಲ್ಲ ಎಂದು ತಿಳಿಸಲು ವಿಷಾದಿಸುತ್ತದೆ'.

ಈ ವರ್ತಮಾನ ಜನರನ್ನು ಹತಾಶೆಗೊಳಿಸಲಿಲ್ಲ. ಹುರುಪಿನಿಂದ ಜನ ಜಯೋದ್ಘೋಷ ಮಾಡಿದರು.

ರಹದಾರಿ ಸುಡುವುದರಿಂದ, 'ಈ ಕರಾಳ ಶಾಸನಕ್ಕೆ ನಾವು ತಲೆಬಾಗುವುದಿಲ್ಲವೆಂಬ ನಮ್ಮ ದೃಢ ನಿಶ್ಚಯವನ್ನು ಸರಕಾರಕ್ಕೆ ಸಾರಿ ಹೇಳೋಣ'. ಗಾಂಧಿ ಭಾಷಣ ಮಾಡುತ್ತಿದ್ದಂತೆ ಕಡಾಯಿಯಲ್ಲಿ ಬಿದ್ದ ರಹದಾರಿಗಳು ಧಗಧಗಿಸಿ ಉರಿಯ ಹತ್ತಿದವು.

ಜಯಘೋಷ ಮುಗಿಲು ಮುಟ್ಟಿತು. ಉರಿ ಆಕಾಶವನ್ನು ಕೆಂಪಾಗಿಸಿತು. ದಕ್ಷಿಣ ಆಫ್ರಿಕಾದ ಈ ದಹನ ಕ್ರಿಯೆ - 'ರಹದಾರಿಯಜ್ಞ' ಮಾರನೆಯ ದಿನ ಪ್ರಪಂಚದ ಎಲ್ಲಾ ಪತ್ರಿಕೆಗಳಲ್ಲಿ ವಿರಾಜಿಸಿತು.

ದಕ್ಷಿಣ ಆಫ್ರಿಕಾದ ಈ ಶಾಂತಿ ಸತ್ಯಾಗ್ರಹ ಚಳುವಳಿಯಿಂದಾಗಿ ಬ್ರಿಟಿಷ್ ಸಾಮ್ರಾಜ್ಯ ತಲೆತಗ್ಗಿಸುವಂತಾಯಿತು. ಗಾಂಧಿಯ ಖ್ಯಾತಿ ವಿಶ್ವವ್ಯಾಪಿಯಾಯಿತು.

ಟ್ರಾನ್ಸ್‌ವಾಲ್ ಸರ್ಕಾರ ಹೊಸದಾಗಿ ತಂದ ಕಾನೂನು ಅಸಫಲವಾದುದರಿಂದ ಜನರಲ್ ಸ್ಮಟ್ಸ್‌ನು ಶಾಸನ ಸಭೆ ಮುಂದೆ 'ಟ್ರಾನ್ಸ್‌ವಾಲ್ ವಲಸೆಗಾರರ ಹತೋಟಿ ಮಸೂದೆ' ಎಂಬ ಇನ್ನೊಂದು ಮಸೂದೆ ತಂದನು. ಈ ಮಸೂದೆಯನ್ನು ವಿರೋಧಿಸಲು ಸತ್ಯಾಗ್ರಹ ಸಮಿತಿ ತೀರ್ಮಾನಿಸಿತು. ಬೀದಿಗಿಳಿದು ಈ ಮಸೂದೆಯನ್ನು ಪ್ರತಿಭಟಿಸುವ ಮೊದಲು ಸರಕಾರದೊಡನೆ ಪತ್ರ ವ್ಯವಹಾರವನ್ನು ಸತ್ಯಾಗ್ರಹ ಸಮಿತಿ ನಡೆಸಿತು. ಜನರಲ್ ಸ್ಮಟ್ಸ್ ಏಷಿಯಾಟಿಕ್ ಶಾಸನವನ್ನು ರದ್ದುಗೊಳಿಸುವುದಿಲ್ಲ. ಈ ಹೊಸ ಮಸೂದೆಯನ್ನು ಶಾಸನವಾಗಿ ಪರಿವರ್ತಿಸಿ ಭಾರತೀಯರನ್ನು ಟ್ರಾನ್ಸ್‌ವಾಲ್‌ನಿಂದ ಹೊರಗಟ್ಟುವುದಾಗಿ ಹಾಗೂ ಟ್ರಾನ್ಸ್‌ವಾಲ್‌ಗೆ ಭಾರತೀಯರು ಪ್ರವೇಶಿಸುವುದನ್ನು ಸಂಪೂರ್ಣವಾಗಿ ತಡೆಗಟ್ಟುವುದಾಗಿ ತಿಳಿಸಿದನು. ಹೇಳಿದಂತೇ ಈ ಮಸೂದೆಯನ್ನು ಶಾಸನವಾಗಿ ಪರಿವರ್ತಿಸಿದನು.

ಈ ಹೊಸ ಕಾನೂನಿನ ಪ್ರಕಾರ ಇಂಗ್ಲಿಷ್ ಬಾರದವರು ಟ್ರಾನ್ಸ್‌ವಾಲ್ ಪ್ರವೇಶಿಸುವಂತಿರಲಿಲ್ಲ. ಇಂತಹವರನ್ನು ಈ ಮಸೂದೆ 'ನಿಷೇದಿತ ವಲಸೆಗಾರ'

ಎಂದು ಹೆಸರಿಸಿತ್ತು. ಬೇರೆ ಪ್ರಾಂತದ ವ್ಯಾಪಾರಸ್ತರೂ ರಹದಾರಿ ಇಲ್ಲದೆ ಟ್ರಾನ್ಸ್‌ವಾಲ್‌ಗೆ ಬಂದು ವ್ಯಾಪಾರವನ್ನು ಪ್ರಾರಂಭಿಸುವಂತಿರಲಿಲ್ಲ. ರಹದಾರಿ ಪತ್ರವಿಲ್ಲದ ವಲಸೆ ಭಾರತೀಯರೂ ಟ್ರಾನ್ಸ್‌ವಾಲಿನೊಳಗೆ ಪ್ರವೇಶಿಸುವಂತಿರಲಿಲ್ಲ. ಇದನ್ನು ಉಲ್ಲಂಘಿಸಿದರೆ ಅದು ಅಪರಾಧವಾಗಿ ಅವರು ಶಿಕ್ಷೆಗೆ ಒಳಗಾಗಬೇಕಾಗುತ್ತಿತ್ತು. ಈ ಶಿಕ್ಷೆ ಮೂರು ವಿಧದಲ್ಲಿ ಇರುತ್ತಿದ್ದವು. ದಂಡ, ಸೆರೆಮನೆ, ಗಡಿಪಾರು. ಒಟ್ಟಿಗೇ ಈ ಶಿಕ್ಷೆಗಳನ್ನು ವಿಧಿಸಲು ಕಾಯಿದೆಯಲ್ಲಿ ಅವಕಾಶವಿತ್ತು.

ಸತ್ಯಾಗ್ರಹ ಸಮಿತಿ ಶಿಕ್ಷೆಗೆ ಅರ್ಹರಾಗುವ ಮೇಲ್ಕಂಡ ವಿಭಾಗದ ಜನರನ್ನು ಬಿಡಿಬಿಡಿಯಾಗಿ ಹಾಗೂ ಗುಂಪಾಗಿ ಕಳುಹಿಸಲು ಏರ್ಪಾಡುಮಾಡಿತು. ನೂರಾರು ಜನ ಜೈಲು ಸೇರಿದರು, ಗಡಿಪಾರು ಆದರು. ಜೈಲಿನಲ್ಲಿ ಅಮಾನುಷ ಶಿಕ್ಷೆ ಅನುಭವಿಸಿದರು. ಜೈಲಿಗೆ ಸೇರಿ ಶಿಕ್ಷೆ ಅನುಭವಿಸಲು ಹಾತೊರೆದು ಬರುವ ಸತ್ಯಾಗ್ರಹಿಗಳನ್ನು ನಿಯಂತ್ರಿಸುವುದು ಸರ್ಕಾರಕ್ಕೆ ತಲೆಭಾರವಾಯಿತು. ಇವರುಗಳಿಗಾಗಿ ಲಕ್ಷಾಂತರ ಪೌಂಡ್ ಖರ್ಚಾಗುತ್ತಿದ್ದುದಲ್ಲದೆ ಮತ್ತೆ ಮತ್ತೆ ಸಮುದ್ರದ ಅಲೆಯಂತೆ ಬರುತ್ತಿದ್ದ ಇವರನ್ನು ತಡೆಗಟ್ಟುವುದು ದುಸ್ಸಾಧ್ಯವಾಯಿತು. ಸೆರಮನೆಯಲ್ಲಿ ಶಿಕ್ಷೆಯ ತೀವ್ರತೆಯಿಂದ ಕೆಲವರು ಜೀವ ತೆತ್ತಾಗ ಭಾರತೀಯರ ಕ್ರೋಧ ಗಗನಕ್ಕೇರಿತು. ಅಹಿಂಸಾತ್ಮಕವಾಗಿ ಸಾಗುತ್ತಿದ್ದ ಚಳುವಳಿ ಹಿಂಸಾತ್ಮಕವಾಗುವ ಮಟ್ಟಮುಟ್ಟಿತು. ಸರಕಾರಕ್ಕೆ ದಿಕ್ಕು ತೋಚದಂತಾಯಿತು.

ಇದೇ ಸಮಯದಲ್ಲಿ ದೀರ್ಘಕಾಲ ನಡೆದ ಈ ಚಳುವಳಿಯಲ್ಲಿ ಭಾಗವಹಿಸಿದ ಕುಟುಂಬದವರು ಆರ್ಥಿಕ ತೊಂದರೆಯಿಂದ ಬಳಲಿ ಹೋಗಿದ್ದರು - ಸತ್ಯಾಗ್ರಹ ಸಮಿತಿ ಇವರಿಗೆ ಅತ್ಯಾವಶ್ಯಕವಾದಷ್ಟು ಮಾಸಾಶನ ಬಹುಕಾಲ ಕೊಡಲು ಆರ್ಥಿಕವಾಗಿ ಸಮರ್ಥವಾಗಿರಲಿಲ್ಲ. ಸತ್ಯಾಗ್ರಹಿಗಳ ಸಹಾಯಕ್ಕಾಗಿ ರತನ್‌ಜೀಜಾಮೆಷೆಡ್ಜಿತಾತಾ ರವರು ನೀಡಿದ್ದ ೨೫ ಸಾವಿರ ರೂಪಾಯಿ ಅವರ ಕುಟುಂಬಗಳ ಪೋಷಣೆಗಾಗಿ ಖರ್ಚಾಗಿ ಹೋಗಿತ್ತು. ಇದೇ ಸಮಯಕ್ಕೆ ಸರಿಯಾಗಿ ಕಾಲೆನ್‌ಬಾಕ್ ಎನ್ನುವ ಸಾಹುಕಾರರು ೧೧೦೦ ಎಕರೆಯ ಜಮೀನನ್ನು ಕೊಂಡು ಸತ್ಯಾಗ್ರಹಿಗಳ ಕುಟುಂಬಕ್ಕೆ ಸಾಮೂಹಿಕ ವಸತಿ ಸೌಕರ್ಯ ಹಾಗೂ ಊಟ ಉಪಚಾರ ಏರ್ಪಡಿಸಲು ನೀಡಿದರು. ಇದು ಜೋಹಾನ್ಸ್‌ಬರ್ಗ್‌ಗೆ

ಸುಮಾರು ೨೦ ಮೈಲಿ ದೂರದಲ್ಲಿದ್ದು ಹಲವು ವಸತಿ ಗೃಹ ನೂರಾರು ಫಲಪುಷ್ಪ ತುಂಬಿದ ವೃಕ್ಷಗಳಿಂದ ಆವೃತವಾಗಿತ್ತು. ಇದು ಫಲವತ್ತಾದ ಟಾಲ್ಸ್‌ಟಾಯ್ ಆಶ್ರಮವೆಂದು ಪ್ರಸಿದ್ಧಿ ಪಡೆಯಿತು.

ಈ ಆಶ್ರಮದಲ್ಲಿ ಕೃಷಿ, ಗೃಹಕೈಗಾರಿಕೆ, ಶಾಲೆ ಮುಂತಾದವುಗಳನ್ನು ನಡೆಸಲು ಸಕಲ ಸೌಕರ್ಯಗಳನ್ನು ಕಲ್ಪಿಸಿ ಸಂಪೂರ್ಣ ಸ್ವತಂತ್ರ ಅಸ್ತಿತ್ವವುಳ್ಳ ಕೇಂದ್ರವನ್ನಾಗಿಸಲು ಅಹರ್ನಿಶಿ ಶ್ರಮಿಸಿದರು. ಗಾಂಧಿಯೇ ಅಲ್ಲಿ ಉಪಾಧ್ಯಾಯರಾಗಿ, ಅಲ್ಲಿದ್ದ ವಿದ್ಯಾರ್ಥಿಗಳಿಗೆ ಪಾಠ ಬೋಧಿಸಿದರು. ಅಹಿಂಸೆ, ಸತ್ಯ, ಬ್ರಹ್ಮಚರ್ಯೆ, ಪ್ರಾರ್ಥನೆ ಮುಂತಾದವುಗಳ ಮಹತ್ವವನ್ನು ತಿಳಿಯ ಪಡಿಸಿದರು. "ಸತ್ಯಾಗ್ರಹ ಆಯುಧ ರಹಿತ ಮನುಷ್ಯ ಉಪಯೋಗಿಸಬಹುದಾದ ಒಂದು ದಿವ್ಯಾಸ್ತ್ರ. ಸತ್ಯಾಗ್ರಹವೆಂದರೆ ಸತ್ಯವಾದದ ಆಗ್ರಹವಲ್ಲ. ಸತ್ಯವನ್ನು ಕುರಿತು ಅಹಿಂಸಾಯುಕ್ತ ವಾದ ಅಥವಾ ಅಹಿಂಸಾಮಯವಾದ 'ಆಗ್ರಹ' ಅಥವಾ ಹಟ" ಎಂದು ವಿಶ್ಲೇಷಿಸಿದರು. ನಿರ್ವಸತಿಗರಾಗಿ ಆಶ್ರಮ ಸೇರಿದ್ದ ಸತ್ಯಾಗ್ರಹಿಗಳು ಮತ್ತು ಅವರ ಕುಟುಂಬದವರು ಅಲ್ಲೇ ದುಡಿದು ಸ್ವಾವಲಂಬಿಗಳಾಗಲು ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಅಲ್ಲಿ ಎಲ್ಲಾ ಧರ್ಮೀಯರಿಗೂ ಪ್ರವೇಶ ಕಲ್ಪಿಸಲಾಗಿತ್ತು. ಜಾತಿ, ಮತ, ಭಾಷೆಯ ಭೇದ ಭಾವವೇ ಅಲ್ಲಿರಲಿಲ್ಲ. ಆಗರ್ಭ ಶ್ರೀಮಂತರಾಗಿದ್ದ ಕೊಡುಗೈದಾನಿ ಕಾಲೆನ್‌ಬಾಕ್‌ರವರೂ ಸಹ ಆ ಆಶ್ರಮದಲ್ಲಿ ಸಾಮಾನ್ಯ ಮನುಷ್ಯರಂತೆ ಇದ್ದು ಎಲ್ಲರೊಡನೆ ಕಲೆತು, ನಲಿದು, ಆಡಿ, ದುಡಿದು ಆ ಬಡತನದ ಜೀವನದಲ್ಲೇ ಆನಂದ ಅನುಭವಿಸುತ್ತಿದ್ದರು.

ಈ ಟಾಲ್ಸ್‌ಟಾಯ್ ಆಶ್ರಮ ಗಾಂಧಿಯವರಿಗೆ ಅವರ ಅಂತಿಮ ಹೋರಾಟಕ್ಕೆ ಅಗತ್ಯವಾದ ಆತ್ಮಶುದ್ಧಿ, ಯಜ್ಞದೀಕ್ಷೆಗೆ ಕೇಂದ್ರವಾಗಿತ್ತು.

◆ ◆ ◆

೧೦. ದಕ್ಷಿಣ ಆಫ್ರಿಕಾದಲ್ಲಿ ಗೋಖಲೆ

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ನಡೆಸುತ್ತಿದ್ದ ಅನನ್ಯಸೇವೆ, ವೈಶಿಷ್ಟ್ಯಪೂರ್ಣ ಚಳವಳಿಯ ಬಗ್ಗೆ ಪೂರ್ಣ ಮಾಹಿತಿಯನ್ನು ಪಡೆದಿದ್ದ ಗೋಖಲೆಯವರಿಗೆ ಇವರ ಮೇಲೆ ಅಪಾರ ಪ್ರೀತಿ, ವಾತ್ಸಲ್ಯ ಹಾಗೂ ಗೌರವ ಉಂಟಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಪಡುತ್ತಿರುವ ಬವಣೆಗಳನ್ನು ಖುದ್ದಾಗಿ ಕಾಣುವ ತವಕವೂ ಕಾಡುತ್ತಿತ್ತು. ಇಂಗ್ಲೆಂಡಿನಲ್ಲಿ ಗಾಂಧಿಯವರನ್ನು ಭೇಟಿಯಾಗಿದ್ದಾಗಲೇ ದಕ್ಷಿಣ ಆಫ್ರಿಕಾಗೆ ಭೇಟಿ ನೀಡುವ ಆಶಯ ವ್ಯಕ್ತಪಡಿಸಿದ್ದರು. ಈಗ ಅದಕ್ಕೆ ಕಾಲ ಕೂಡಿ ಬಂದಿತ್ತು.

ಇಂಗ್ಲೆಂಡಿನಿಂದ ಈ ಬಗ್ಗೆ ಗೋಖಲೆಯವರು ಗಾಂಧಿಗೆ ವಾರ್ತೆಯನ್ನು ತಿಳಿಸಿದಾಗ ಗಾಂಧಿ ಮತ್ತು ಸಹಚರರಿಗೆ ಬಹಳ ಸಂತೋಷವಾಯಿತು. ಅವರಿಗೆ ಅದ್ಭುತ ಸ್ವಾಗತ ನೀಡಲು ಸಕಲ ಸಿದ್ಧತೆಗಳನ್ನು ಮಾಡತೊಡಗಿದರು. ಕಾಲೆನ್ ಬಾಕ್ ಮತ್ತು ಇತರ ಉದ್ಯಮಿಗಳು ಈ ಬಗ್ಗೆ ಪೂರ್ಣ ಸಹಕರಿಸಲು, ಸಹಾಯ ನೀಡಲು ಧಾವಿಸಿ ಬಂದರು.

ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಬರಲು ಅವರಿಗೆ ಹಡಗಿನಲ್ಲಿ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು. ಅಕ್ಟೋಬರ್ ೨೨, ೧೯೧೨ ರಂದು ಗೋಖಲೆ ಕೇಪ್ ಟೌನ್‌ನಲ್ಲಿ ಬಂದಿಳಿದರು. ಅವರ ಆರೋಗ್ಯ ಅಷ್ಟು ಚೆನ್ನಾಗಿಲ್ಲದೆ ಇದ್ದುದರಿಂದ ಅವರ ವಸತಿ, ಊಟ ಉಪಚಾರಕ್ಕೆ ಕಾಲೆನ್‌ಬಾಕ್‌ರವರು ಖುದ್ದಾಗಿ ನಿಂತು ವ್ಯವಸ್ಥೆ ಮಾಡಿದ್ದರು ಹಾಗೂ ಅವರ ಸಹಾಯಕ್ಕೆ ಸದಾ ಸಿದ್ಧವಿರಲು ಸ್ವಯಂ ಸೇವಕರ ಪಡೆಯನ್ನು ನೇಮಿಸಿದ್ದರು. ಯೂರೋಪಿಯನ್ನರೂ ಗೋಖಲೆಯವರ ಸ್ವಾಗತಕ್ಕೆ ಮುಂದಾಗಿದ್ದರು. ಸರಕಾರವೂ ಅವರ ಪ್ರವಾಸ ಹಾಗೂ ಎಲ್ಲಾ ಕಾರ್ಯಕ್ರಮಗಳಿಗೂ ಪೂರ್ಣ ಸಹಕಾರ, ಸಹಯೋಗ ಕೊಡಲು ಮುಂದಾಗಿತ್ತು.

ಗೋಖಲೆ ಹೋದೆಡೆಯಲ್ಲೆಲ್ಲಾ ಅವರಿಗೆ ಪೌರಸನ್ಮಾನಗಳನ್ನು ನೀಡಲಾಯಿತು ಹಾಗೂ ಅಮೂಲ್ಯ ನೆನಪಿನ ಕಾಣಿಕೆಗಳನ್ನು ನೀಡಲಾಯಿತು.

ಗೋಖಲೆಯವರನ್ನು ಗಾಂಧಿ ಮತ್ತು ಕಾಲೆನ್‌ಬಾಕ್‌ರವರು ಟಾಲ್‌ಸ್ಟಾಯ್ ಆಶ್ರಮಕ್ಕೂ ಕರೆದೊಯ್ದರು. ಗೋಖಲೆ, ಕಾಲೆನ್‌ಬಾಕ್‌ರವರ ಜೀವನದಲ್ಲಾಗಿದ್ದ ಅಪೂರ್ವ ಬದಲಾವಣೆಗಳನ್ನು ಕಂಡು ಅವರ ಸೇವಾಭಾವವನ್ನು ಮುಕ್ತವಾಗಿ ಪ್ರಶಂಸಿಸಿದರು. ಆಶ್ರಮಕ್ಕೆ ಹೊಸ ಹುಟ್ಟು ನೀಡಿದ್ದ ಗಾಂಧಿಯವರ ಶ್ರಮವನ್ನು ಶ್ಲಾಘಿಸಿದರು.

ಗೋಖಲೆಯವರು ಜೋಹಾನ್ಸ್‌ಬರ್ಗ್, ಡರ್ಬಾನ್, ಪ್ರೆಟೋರಿಯಾ, ಮಾರಿಷ್ ಬರ್ಗ್, ಕಿಂಬರ್ಲಿ, ಜಾಂಜಿಬಾರ್ ಮುಂತಾದ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಭಾರತೀಯರ ಸ್ಥಿತಿಗಳನ್ನು ಅವಲೋಕಿಸಿದರು. ಹಲವು ದೇಶೀಯ ಮುಖಂಡರು, ವ್ಯಾಪಾರಿಗಳು, ಧಾರ್ಮಿಕ ಮುಖಂಡರು, ರಾಜಕೀಯ ವ್ಯಕ್ತಿಗಳೊಡನೆ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿದರು.

ಟ್ರಾನ್ಸ್‌ವಾಲ್ ಸ್ಟೇಟಿಗೆ ಭೇಟಿ ನೀಡಿದಾಗ ಪ್ರೆಟೋರಿಯಾದಲ್ಲಿ ಜನರಲ್ ಬೋಥಾ, ಜನರಲ್ ಸ್ಮಟ್ಸ್ ಮುಂತಾದವರೊಡನೆ ರಾಜಕೀಯ ವಿಷಯಗಳನ್ನು ಚರ್ಚಿಸಿದರು. ಚಾಣಾಕ್ಯ ಸ್ಮಟ್ಸ್ ಆಂತರಿಕವಾಗಿ ಯೂರೋಪಿಯನ್ನರ ಪರವಾಗಿದ್ದರೂ, ಚರ್ಚೆಯಲ್ಲಿ ಭಾರತೀಯರ ಹಿತಾಸಕ್ತಿಯನ್ನು ಕಾಪಾಡುವ ಬಗ್ಗೆ ಗೋಖಲೆಯವರಿಗೆ ಪೂರ್ಣ ಭರವಸೆಯನ್ನು ನೀಡಿದನು. ಸುಮಾರು ಎರಡು ಗಂಟೆ ಅವರೊಡನೆ ಭಾರತೀಯರ ಬಗ್ಗೆ ಮಾತನಾಡಿ ಹೊರಗೆ ಬಂದ ಗೋಖಲೆ ಬಹಳ ಸಂತೃಪ್ತರಾಗಿದ್ದರು. ಸಂತಸದಿಂದ ಗಾಂಧಿ ಮತ್ತು ಸಂಗಡಿಗರನ್ನು ಕುರಿತು ನುಡಿದರು. "ಕರಾಳ ಶಾಸನ ರದ್ದಾಗುತ್ತದೆ. ವಲಸೆಗಾರರ ಶಾಸನಗಳ ವರ್ಣಭೇದ ತೆಗೆದು ಹಾಕಲಾಗುತ್ತದೆ. ಮೂರು ಪೌಂಡ್ ತಲೆಗಂದಾಯ ಸಹ ಹೋಗುತ್ತದೆ. ಈ ಬಗ್ಗೆ ಮಂತ್ರಿಗಳು ಆಶ್ವಾಸನೆ ನೀಡಿದ್ದಾರೆ. ನೀವು ಇನ್ನು ನಿಶ್ಚಿಂತೆಯಿಂದ ಇರಬಹುದು". ಗಾಂಧಿಯವರತ್ತ ತಿರುಗಿ ಮುಗುಳ್ನಗುತ್ತ ಮತ್ತೆ ನುಡಿದರು, "ಗಾಂಧಿ, ಇಲ್ಲಿ ನಿಮ್ಮ ಕೆಲಸ ಪೂರೈಸಲಿದೆ. ಇಲ್ಲಿನ ಈ ಸಮಸ್ಯೆಗಳಿಗೆ ಪೂರ್ಣ ಪರಿಹಾರ ದೊರೆತೊಡನೆ ನೀವು ಭಾರತಕ್ಕೆ ಹಿಂತಿರುಗಬೇಕು. ಅಲ್ಲಿ ನಿಮ್ಮ ಅಗತ್ಯ ಬಹಳ ಇದೆ".

ಗಾಂಧಿ, ಸ್ಮಟ್ಸ್‌ರವರನ್ನು ಚೆನ್ನಾಗಿ ಬಲ್ಲವರಾಗಿದ್ದುದರಿಂದ ಅವರ ಆಶ್ವಾಸನೆ ಬಗ್ಗೆ ನಂಬಿಕೆ ಬಾರದಾಗಿತ್ತು. ಗೋಖಲೆಯವರಿಗೆ ಕೃತಜ್ಞತೆ ಅರ್ಪಿಸಲು ಮುಖದಲ್ಲಿ ಸಂತಸತಂದುಕೊಂಡು ನುಡಿದರು "ಬಹಳ ವಂದನೆಗಳು,

ಇಷ್ಟಾದರೆ ತಮ್ಮ ದಯದಿಂದ ನಾವು ಕೃತಾರ್ಥರಾಗುತ್ತೇವೆ. ದಕ್ಷಿಣ ಆಫ್ರಿಕಾದ ಜನ ತಮಗೆ ಆಜನ್ಮ ಕೃತಜ್ಞರಾಗಿರುತ್ತಾರೆ."

ಗೋಖಲೆ ಜೋಹಾನ್ಸ್‌ಬರ್ಗ್‌ನಲ್ಲಿ ಭಾರಿ ಸಭೆಯನ್ನು ಉದ್ದೇಶಿಸಿ ಮರಾಠಿಯಲ್ಲಿ ಮಾತನಾಡಿದಾಗ, ಗಾಂಧಿ ಭಾಷಣದ ಅನುವಾದವನ್ನು ಹಿಂದಿಯಲ್ಲಿ ಮಾಡಿದರು.

ಈ ರೀತಿ ಭಾರತೀಯರ ಮತ್ತು ಯೂರೋಪಿಯನ್ನರ ಹೃದಯ ಸೂರೆಗೊಂಡು ಗೋಖಲೆಯವರು ನವಂಬರ್ ೧೭, ೧೯೧೨ ರಂದು ಭಾರತದತ್ತ ಪಯಣ ಬೆಳೆಸಿದರು. ಗಾಂಧಿ ಮತ್ತು ಕಾಲೆನ್‌ಬಾಕ್‌ರವರು ಜಾಂಜಿಬಾರ್‌ವರೆಗೆ ಅವರೊಡನೆ ಹೋದರು. ಹಡಗಿನಲ್ಲಿ ಗೋಖಲೆಯವರು ಗಾಂಧಿಯನ್ನು ಕುರಿತು ಮತ್ತೆ ನುಡಿದರು. "ದಕ್ಷಿಣ ಆಫ್ರಿಕಾ ಬಿಟ್ಟು ಬೇಗನೆ ಭಾರತಕ್ಕೆ ಬರಲು ಸಿದ್ಧತೆ ನಡೆಸಿ, ನಿಮ್ಮಂಥಾ ನಾಯಕರು ಭಾರತಕ್ಕೆ ಈಗ ಅಗತ್ಯ ಬೇಕಾಗಿದ್ದಾರೆ".

ಗಾಂಧಿ ಬೇಗನೆ ಭಾರತಕ್ಕೆ ಬರಲು ಪ್ರಯತ್ನಿಸುವುದಾಗಿ ಹೇಳಿ ಅವರಿಂದ ಜಾಂಜಿಬಾರ್‌ನಲ್ಲಿ ಬೀಳ್ಕೊಂಡು ಟ್ರಾನ್ಸ್‌ವಾಲ್‌ಗೆ ಹಿಂತಿರುಗಿದರು.

ಜನರಲ್ ಸ್ಮಟ್ಸ್ ಆಡಿದಂತೆ ನಡೆಯುವ ವ್ಯಕ್ತಿಯಲ್ಲವೆಂದು ಗಾಂಧಿಗೆ ಅನುಭವವಾಗಿತ್ತು. ಬ್ರಿಟಿಷರ ಉದ್ಧಾರಕ್ಕಾಗಿ ಮಾತ್ರ ದುಡಿಯುತ್ತಿದ್ದ ಸ್ಮಟ್ಸ್ ಇದನ್ನು ಸಾಧಿಸಲು ಎಂತಹ ಪಾಪ ಕೆಲಸವನ್ನಾದರೂ ಮಾಡಲು ಸಿದ್ಧರಿದ್ದರು. ವಚನ ಭಂಗಕ್ಕೆ ಅವರು ಯಾವ ಬೆಲೆಯನ್ನೂ ನೀಡುತ್ತಿರಲಿಲ್ಲ. ರಾಜಕೀಯದಲ್ಲಿ ಅದರ ಉಪಯೋಗ ಅನಿವಾರ್ಯವೆಂದೇ ಅವರು ನಂಬಿದ್ದರು. ಅದರಂತೆಯೇ ನಡೆಯುತ್ತಿದ್ದರು.

ಗೋಖಲೆ ಭಾರತಕ್ಕೆ ಹಿಂತಿರುಗುತ್ತಿದ್ದಂತೆಯೇ ಸ್ಮಟ್ಸ್ ಬಣ್ಣ ಬದಲಾಯಿಸಿದರು. ಯೂರೋಪಿಯನ್ನರ ಹಿತದೃಷ್ಟಿಯಿಂದ ಅವರಿಗೆ ಒಪ್ಪಿಗೆಯಾಗದ ಯಾವ ಕಾನೂನನ್ನು ಜಾರಿಗೊಳಿಸಲು ಸರಕಾರಕ್ಕೆ ಸಾಧ್ಯವಾಗದೆಂದು, ಆದ್ದರಿಂದ ಜಾರಿಯಲ್ಲಿರುವ ಶಾಸನವನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸದೆಂದು ಹೇಳಿದರು. ಇದರಿಂದ ದಕ್ಷಿಣ ಆಫ್ರಿಕಾದ ಭಾರತೀಯರಿಗೆ ಬಹಳ ನಿರಾಶೆಯಾಯಿತು. ನಿರಾಶೆಯ ಜೊತೆಯಲ್ಲೇ ಗೋಖಲೆಯವರಂಥಾ ಭಾರತದ ಹಿರಿಯ ನಾಯಕರಿಗೆ ಮಾಡಿದ್ದ ಈ

ಅವಮಾನ ದಕ್ಷಿಣ ಆಫ್ರಿಕಾದ ಭಾರತೀಯರು ಸಹಿಸದಾದರು. ಮತ್ತೆ ಸತ್ಯಾಗ್ರಹಕ್ಕೆ ಸಿದ್ಧವಾದರು.

ಗಾಂಧಿಯವರು ಈ ವಚನಭಂಗಪ್ರಸಂಗವನ್ನು ಗೋಖಲೆಯವರ ಗಮನಕ್ಕೆ ತಂದರು. ಅವರೂ ಈ ಬಗ್ಗೆ ಬಹಳ ನೊಂದುಕೊಂಡು 'ನನ್ನ ಪ್ರಾಣವಿರುವವರೆಗೂ ಕಾದಾಡಿ ನ್ಯಾಯ ದೊರಕಿಸಿ ಕೊಡುತ್ತೇನೆ' ಎಂದು ದಕ್ಷಿಣ ಆಫ್ರಿಕಾದ ಜನತೆಗೆ ಧೈರ್ಯ ಹೇಳಿದರು.

ವಿನಾಶ ಕಾಲ ಬಂದಾಗ ಮನುಷ್ಯನಲ್ಲಿ ದುರ್ಬುದ್ಧಿ ಹೆಚ್ಚುವುದಂತೆ. ಇದೇ ಮಾತು ಟ್ರಾನ್ಸ್‌ವಾಲ್ ಸರ್ಕಾರಕ್ಕೂ ಅನ್ವಯವಾಗುವ ಸಂದರ್ಭ ಒದಗಿ ಬಂತು.

ಮಾರ್ಚ್ ೧೪, ೧೯೧೩ ರಂದು ಕೇಪ್ ಸುಪ್ರೀಂಕೋರ್ಟಿನ ನ್ಯಾಯಮೂರ್ತಿ ಚಾರಿತ್ರಿಕ ತೀರ್ಪು ನೀಡಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ನಡೆಸುತ್ತಿದ್ದ ಚಳುವಳಿಗೆ ಹೊಸ ತಿರುವು ನೀಡಿದರು. ಸುಪ್ತವಾಗಿದ್ದ ಭಾರತೀಯರ ಚಳುವಳಿಯ ಮದ್ದಿನ ಕುಡುಕೆಗೆ ಒಮ್ಮೆಗೇ ಬೆಂಕಿಯನ್ನು ತಗುಲಿಸಿದಂತಾಯಿತು. ಬ್ರಿಟಿಷರ ಸಾಂಸ್ಕೃತಿಕ ನಿಲುವಿಗೆ ಒತ್ತುಕೊಡಲು ಅವರು ನೀಡಿದ ನಿರ್ಣಯ ಭಾರತೀಯರನ್ನು ಕೆರಳಿಸಿತು. ಅದರಲ್ಲೂ ಸಂಪ್ರದಾಯಸ್ಥ ಮಹಿಳೆಯರನ್ನು ಸಿಡಿದೇಳುವಂತೆ ಪ್ರೇರೇಪಿಸಿತು.

ಸಂಪ್ರದಾಯಬದ್ಧ ಭಾರತೀಯ ಸಮಾಜದಲ್ಲಿ ಅವರವರ ಮತಪದ್ಧತಿಯಂತೆ ಶಾಸ್ತ್ರೋಕ್ತವಾಗಿ ಗಂಡು ಹೆಣ್ಣಿನ ವಿವಾಹ ಜರುಗುತ್ತಿತ್ತು. ಇದನ್ನು ಭಾರತದಲ್ಲೇ ಆಗಲಿ ದಕ್ಷಿಣ ಆಫ್ರಿಕಾದಲ್ಲೇ ಆಗಲಿ ಯಾರೂ ಪ್ರಶ್ನಿಸಿರಲಿಲ್ಲ. ನಲವತ್ತು ವರ್ಷಕ್ಕೂ ಹಿಂದಿನಿಂದ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದ ಎಲ್ಲಾ ಮತೀಯ ಜನಾಂಗದವರೂ ಭಾರತದಲ್ಲಿ ಪ್ರಚಲಿತವಿರುವ ಧಾರ್ಮಿಕ ವಿಧಿಯನ್ನೇ ಈ ವಿವಾಹಗಳಿಗೆ ಅಳವಡಿಸಿಕೊಂಡಿದ್ದರು.

ಕೇಪ್ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಅನುಸಾರ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿರುವ ಎಲ್ಲರಿಗೂ ವಿವಾಹ ರಿಜಿಸ್ಟ್ರೇಷನ್ ಕಡ್ಡಾಯವಾಗಿ, ಹೀಗೆ ರಿಜಿಸ್ಟರ್‌ಗೊಳ್ಳದ ವಿವಾಹ ಕಾನೂನು ಬಾಹಿರಗೊಳ್ಳುವಂತಾಯಿತು. ಈ ವಿಚಿತ್ರ ತೀರ್ಪಿನಿಂದಾಗಿ ದಕ್ಷಿಣ ಆಫ್ರಿಕಾದಲ್ಲಿ ಹಿಂದೂ, ಮುಸಲ್ಮಾನ್, ಜೊರಾಸ್ಟರ್ ಮತ ಪದ್ಧತಿಗಳ ಪ್ರಕಾರ ನಡೆದಿರುವ ವಿವಾಹಗಳೆಲ್ಲಾ ಒಂದೇ

ಪಟ್ಟಿಗೆ ನ್ಯಾಯ ವಿರುದ್ಧವಾದವು. ಹೀಗೆ ಮದುವೆಯಾದ ಮಹಿಳೆಯರೆಲ್ಲಾ ಧರ್ಮಪತ್ನಿ ಸ್ಥಾನದಿಂದ ವೇಶ್ಯೆಯರ ಸ್ಥಾನಕ್ಕೆ ತಳ್ಳಲ್ಪಟ್ಟಂತಾಯಿತು. ಅವರ ಮಕ್ಕಳಿಗೆ ಆಸ್ತಿಯ ಹಕ್ಕಿಲ್ಲದಂತಾಯಿತು. ಇದರಿಂದ ಸಂಪೂರ್ಣ ಭಾರತೀಯ ಸಮುದಾಯ ಕಂಗೆಟ್ಟಿತು. ಮಹಿಳೆಯರು ರೊಚ್ಚಿಗೆದ್ದರು. ರಹದಾರಿ ಇಲ್ಲದೆ ಟ್ರಾನ್ಸ್‌ವಾಲ್ ಪ್ರವೇಶಿಸಿ ದಸ್ತಗಿರಿಯಾಗಿದ್ದ ಸತ್ಯಾಗ್ರಹಿಗಳ ಹೆಂಡತಿಯರು, ಹಾಗೆಯೇ ಅಲ್ಲಿ ವ್ಯಾಪಾರ ಮಾಡಿ ದಸ್ತಗಿರಿಯಾಗಿದ್ದ ಭಾರತೀಯರ ಹೆಂಡತಿಯರು ಗಂಡಂದಿರಿಗೆ ಪ್ರೋತ್ಸಾಹ ನೀಡುವ ದಿಸೆಯಲ್ಲಿ ತಾವೂ ಸತ್ಯಾಗ್ರಹದಲ್ಲಿ ಭಾಗವಹಿಸಿ ದಸ್ತಗಿರಿಯಾಗಲು ಮಾನಸಿಕವಾಗಿ ಸಿದ್ಧವಾಗಿದ್ದರು. ಮೊದಲ ಬಾರಿಗೆ ಕಸ್ತೂರಬಾ ಈ ಚಳುವಳಿಯ ಮುಂದಾಳತ್ವ ವಹಿಸಿ ಸೆರೆಮನೆ ವಾಸ ಅನುಭವಿಸಿದರು. ಈ ವಿವಾಹ ರಿಜಿಸ್ಟ್ರೇಷನ್ ಕಾನೂನು ಅವರು ಚಳವಳಿಯಲ್ಲಿ ಮುನ್ನುಗ್ಗಲು ಪ್ರೇರಣೆ ನೀಡಿತು. ಇದುವರೆಗೂ ನಡೆದ ಚಳುವಳಿಯಲ್ಲಿ ಹೆಂಗಸರು ಭಾಗವಹಿಸಿರಲಿಲ್ಲ. ಈಗ ಒಮ್ಮೆಗೇ ಸಿಡಿದೆದ್ದ ಈ ಸಮೂಹವನ್ನು ಎದುರಿಸುವುದು ಸರ್ಕಾರಕ್ಕೆ ತಲೆನೋವಾಯಿತು.

ಇದೇ ಸಮಯದಲ್ಲಿ ಕಾರ್ಮಿಕ ವರ್ಗ ಭಾರತೀಯರ ನ್ಯಾಯಯುತ ಚಳುವಳಿಗೆ ಆಂತರಿಕ ಸಹಾನುಭೂತಿಯನ್ನು ತೋರಿಸುತ್ತಿದ್ದರೂ ಚಳುವಳಿಯ ಅಖಾಡಕ್ಕೆ ನೇರವಾಗಿ ಇಳಿದಿರಲಿಲ್ಲ. ಸ್ಮಟ್ಸ್ ಸರ್ಕಾರ ಗೋಖಲೆಯವರೊಡನೆ-ಆದ ಒಪ್ಪಂದವನ್ನು ಮುರಿದು ದಕ್ಷಿಣ ಆಫ್ರಿಕಾದ ಭಾರತೀಯರಿಗೇ ಅಲ್ಲದೆ ಭಾರತಕ್ಕೂ ಅವಮಾನ ಮಾಡಿದುದರಿಂದ ಕೋಪ ಕಾರುತ್ತಿದ್ದ ಕಾರ್ಮಿಕರ ಸಮುದಾಯ ತಲೆಗಂದಾಯವನ್ನು ಹಿಂತೆಗೆದುಕೊಳ್ಳದಿದ್ದುದರಿಂದ ಮತ್ತಷ್ಟು ವಿಕ್ಷುಬ್ಧರಾದರು. ಚಳುವಳಿಯಲ್ಲಿ ನೇರವಾಗಿ ಭಾಗವಹಿಸಲು ಮುನ್ನುಗ್ಗಿದರು. ಇದೆಲ್ಲದರಿಂದಾಗಿ ಚಳುವಳಿಗೆ ಭೀಮ ಬಲ ಬಂದಾಯಿತು. ಒಟ್ಟು ಗಂಡು ಹೆಣ್ಣು ಆದಿಯಾಗಿ ಭಾರತೀಯ ಸಮುದಾಯವೇ ಸರ್ಕಾರದ ವಿರುದ್ಧ ತಿರುಗಿ ಬೀಳುವಂತಾಯಿತು. ಗಾಂಧಿಯ ಸಹಚರರು ನ್ಯೂಕ್ಯಾಸಲ್‌ಗೆ ಹೋಗಿ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಅವಧಿ ಕೂಲಿಗಾರರಿಗೆ ಚಳುವಳಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು.

ಕಸ್ತೂರಬಾ ಸಹ ಈ ಚಳುವಳಿಯಲ್ಲಿ ಭಾಗವಹಿಸಲು ಮುಂದಾದುದ್ದಲ್ಲದೆ ಮುಂಚೂಣಿಯಲ್ಲಿರಲು ಸಿದ್ಧವಾದರು. ಟ್ರಾನ್ಸ್‌ವಾಲ್, ಫೀನಿಕ್ಸ್, ನೇಟಾಲ್,

ನ್ಯೂಕ್ಯಾಸಲ್ ಎಲ್ಲೆಡೆ ಚಳುವಳಿ ವಿಸ್ತಾರಗೊಂಡಿತು. ನೂರಾರು ಹೆಂಗಸರು ಸೆರೆಮನೆ ಸೇರಿದರು. ಸಾಮಾನ್ಯ ಅಪರಾಧಿಗಳೊಡನೆ ಈ ಹೆಂಗಸರನ್ನೂ ಸೆರೆ ಇಟ್ಟು ಅಮಾನುಷವಾಗಿ ಅವರನ್ನು ನಡೆಸಿಕೊಳ್ಳುತ್ತಿರುವ ದುಷ್ಕೃತ್ಯ ವಿಶ್ವವ್ಯಾಪಿ ಹರಡಿ ದಕ್ಷಿಣ ಆಫ್ರಿಕಾ ಸರಕಾರದ ವಿನಾಶಕಾರಿ ಕ್ರಮ ಖಂಡನೆಗೆ ಒಳಗಾಯಿತು.

ಸ್ತ್ರೀಯರ ಬಂಧನ ಹಾಗೂ ಮಾರ್ಟ್ಸ್‌ಬರ್ಗ್ ಸೆರೆಮನೆಯಲ್ಲಿ ಈ ಹೆಂಗಸರಿಗೆ ಕೊಡಲಾಗುತ್ತಿದ್ದ ಅಮಾನುಷ ರೀತಿಯ ಶಿಕ್ಷೆಯ ವಿವರಗಳು ನ್ಯೂಕ್ಯಾಸಲ್ ಗಣಿ ಕಾರ್ಮಿಕರನ್ನೂ ರೊಚ್ಚಿಗೆಬ್ಬಿಸಿತು.

ಟ್ರಾನ್ಸ್‌ವಾಲ್‌ಗೆ ರಹದಾರಿ ಇಲ್ಲದ ಚಳವಳಿಗಾರರ ಭಾರಿ ಸಮೂಹವನ್ನು ನುಗ್ಗಿಸಲು ಸತ್ಯಾಗ್ರಹ ಸಮಿತಿ ನಿರ್ಧರಿಸಿತು. ಈ ಭಾರಿ ಸಮೂಹದ ನೇತೃತ್ವ ಗಾಂಧಿ ವಹಿಸಿದರು.

ಶಾಂತಿಪ್ರಿಯರಾದ ಗಾಂಧಿ ಕೊನೆಯ ಬಾರಿ ಸ್ಮಟ್ಸ್‌ರೊಡನೆ ಸಂಧಾನ ನಡೆಸಲು ಪ್ರಯತ್ನಿಸಿದರು. ಭಾರತೀಯರ ಮೇಲೆ ಹೇರಿರುವ ಮೂರು ಪೌಂಡ್‌ಗಳ ತಲೆಗಂದಾಯವನ್ನು ಹಿಂತೆಗೆದುಕೊಂಡರೆ ಚಳುವಳಿಯನ್ನು ಈಗಲೂ ನಿಲ್ಲಿಸಲು ಸಿದ್ಧವೆಂದು ಹೇಳಿ ಕಳುಹಿಸಿದರು.

"ನಿಮ್ಮೊಂದಿಗೆ ಯಾವ ವ್ಯವಹಾರಕ್ಕೂ ಜನರಲ್ ಸ್ಮಟ್ಸ್ ಸಿದ್ಧರಿಲ್ಲ. ನಿಮಗೆ ಇಷ್ಟ ಬಂದಂತೆ ಮಾಡಬಹುದು" ಎಂದು ಸರಕಾರ ಹೇಳಿ ಕಳುಹಿಸಿದಾಗ ಆ ಉದ್ಧಂಡತನದ ಉತ್ತರ ಕೇಳಿ ಭಾರತೀಯ ಸಮುದಾಯವೇ ದಿಗ್ಭ್ರಾಂತಗೊಂಡಿತು.

ಚಳುವಳಿ ಅನಿವಾರ್ಯವಾಯಿತು.

ಚಳುವಳಿಗಾರರ ಭಾರಿ ದಂಡನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಿ ಅವರೆಲ್ಲಾ ಟ್ರಾನ್ಸ್‌ವಾಲ್‌ಗೆ ಕಾಲ್ನಡಗೆಯಲ್ಲೇ ಹೋಗಿ ಸೆರೆಯಾಳಾಗಬೇಕೆಂದೂ ಚಳುವಳಿ ಸಂಪೂರ್ಣವಾಗಿ ಅಹಿಂಸಾತ್ಮಕವಾಗಿರಬೇಕೆಂದೂ ಇಂಗ್ಲಿಷ್ ಅಧಿಕಾರಿಗಳೊಡನೆ ಯಾವ ಕಾರಣಕ್ಕೂ ಕದನಕ್ಕಿಳಿಯಬಾರದೆಂದೂ ಅವರಿಗೆ ಸೂಚಿಸಲಾಗಿತ್ತು. ಗಾಂಧಿ, ಕಾಲೆನ್‌ಬಾಕ್, ಪೋಲಿಕ್, ಪಿ.ಕೆ.ನಾಯುಡು ಮುಂತಾದವರು ಒಂದೊಂದು ಗುಂಪಿನ ನಾಯಕತ್ವ ವಹಿಸಿದ್ದರು. ನಾಲ್ಕು ದಿನದ ಈ ಪ್ರಯಾಣದಲ್ಲಿ ಮೂರು ಬಾರಿ ಗಾಂಧಿ ದಸ್ತಗಿರಿಯಾಗಿ ಜಾಮೀನಿನ ಮೇಲೆ ಬಿಡುಗಡೆಗೊಂಡರು.

ದಕ್ಷಿಣ ಆಫ್ರಿಕಾದಲ್ಲಿ ಎಲ್ಲಾ ಸೆರೆಮನೆಗಳೂ ಚಳುವಳಿಗಾರರಿಂದ ಭರ್ತಿಯಾಗಿದ್ದು ಇವರನ್ನು ಸೆರೆಮನೆಗಳಲ್ಲಿ ಪೋಷಿಸುವುದು ಸರ್ಕಾರಕ್ಕೆ ಬಹಳ ದುಬಾರಿಯಾಗಿ ಕಾಣಹತ್ತಿದ್ದುದರಿಂದ ಸರಕಾರ ಈ ಚಳುವಳಿಗಾರರನ್ನು ಅಲ್ಲಲ್ಲಿ ದಸ್ತಗಿರಿ ಮಾಡಿ ಗಡಿಪಾರುಮಾಡಿ ಬಿಟ್ಟು ಬಿಡುತ್ತಿದ್ದರು. ಇವರು ಒಂದೆಡೆ ಬಿಡುಗಡೆಗೊಂಡರೆ ಇನ್ನೊಂದು ಪ್ರಾಂತಕ್ಕೆ ಹೋಗಿ ಅಲ್ಲಿ ಸೆರೆಯಾಳಾಗಲು ಧಾವಿಸುತ್ತಿದ್ದರು. ಇವರನ್ನು ತಡೆಯುವುದು ಸರಕಾರಕ್ಕೆ ಒಳ್ಳೆ ತಲೆಭಾರವಾಗಿತ್ತು. ಬೆನ್ನುಹತ್ತಿದ ಬೇತಾಳನಂತಾಗಿದ್ದರು. ಎಲ್ಲೂ ಎಷ್ಟೇ ಕ್ರೂರವಾಗಿ ವರ್ತಿಸಿದರೂ ಚಳವಳಿಗಾರರು ಪ್ರತಿಭಟಿಸುತ್ತಲೇ ಇರಲಿಲ್ಲ. ಈ ಸಂದರ್ಭದಲ್ಲಿ ಸ್ಮಟ್ಸ್‌ರ ಸಹೋದ್ಯೋಗಿಯೊಬ್ಬರು ಹೇಳಿದ ಮಾತು ಬಹು ಪ್ರಸ್ತುತ ಹಾಗೂ ಉಲ್ಲೇಖನೀಯ.

'ನಿಮ್ಮ ಜನರನ್ನು ಕಂಡರೆ ನನಗೆ ಆಗುವುದಿಲ್ಲ. ಅವರಿಗೆ ಸಹಾಯ ಮಾಡಲೂ ಇಷ್ಟವಿಲ್ಲ. ಆದರೆ ನಾನೇನು ಮಾಡಲಿ ? ಒಳ್ಳೆಯ ಸಂಕಟದಲ್ಲಿ ನಮಗೆ ಸಹಾಯ ಮಾಡುತ್ತೀರಿ. ನಿಮ್ಮ ಮೇಲೆ ಕೈಮಾಡುವುದಾದರೂ ಹೇಗೆ? ಇಂಗ್ಲಿಷ್ ಮುಷ್ಕರಕಾರರಂತೆ ನೀವೂ ಹಿಂಸಾಯುತರಾದರೆ ಒಂದು ನಿಮಿಷದಲ್ಲಿ ಮಟ್ಟ ಹಾಕಬಲ್ಲೆವು. ಆದರೆ ನಿಮ್ಮ ವೈರಿಯನ್ನೂ ಸಹ ನೀವು ಹಿಂಸಿಸುವುದಿಲ್ಲ. ಆತ್ಮ ಬಲಿದಾನದಿಂದ ಗೆಲ್ಲಲು ಹೊರಟಿದ್ದೀರಿ. ನಿಮ್ಮ ಶೌರ್ಯ ನಮ್ಮನ್ನು ಕೇವಲ ನಿಸ್ಸಹಾಯಕರನ್ನಾಗಿ ಮಾಡಿದೆ'. ಇದೇ ಅಭಿಪ್ರಾಯವನ್ನು ಭಾರತೀಯರ ಕಡು ವಿರೋಧಿ ಜನರಲ್ ಸ್ಮಟ್ಸ್ ಸಹ ಮುಂದೆ ಹಲವು ಬಾರಿ ವ್ಯಕ್ತಪಡಿಸಿದ್ದುಂಟು.

ಇದಕ್ಕೆ ಕಾರಣ ಗಾಂಧಿಯವರ ಚಾಣಕ್ಯ ಚಾಕಚಕ್ಯತೆ, ಅವರು ಅನುಸರಿಸುತ್ತಿದ್ದ ವೈಶಿಷ್ಟ್ಯಪೂರ್ಣ ಚಳುವಳಿಯ ಯುದ್ಧನೀತಿ.

ಬ್ರಿಟಿಷರ ಮನಸ್ಸನ್ನು ಒಲಿಸಲು ಗಾಂಧಿ ಪ್ರಯೋಗಿಸಿದ್ದ ಶಾಂತಿ ಸಮಾಧಾನಭರಿತ ಅಹಿಂಸಾ ಅಸ್ತ್ರ.

ಮೊದಲನೆಯದು ಬೋಅರ್ ಯುದ್ಧದಲ್ಲಿ ಬ್ರಿಟಿಷ್ ಸರಕಾರಕ್ಕೆ ಮಾಡಿದ್ದ ಸಹಾಯ. ಎರಡನೆಯದು ಜುಲು ದಂಗೆಯಲ್ಲಿ ಗಾಯಗೊಂಡ ಯೋಧರಿಗೆ ನೀಡಿದ ಪ್ರಥಮ ಚಿಕಿತ್ಸೆ. ಮುಖ್ಯವಾದ ಇತ್ತೀಚಿನ ಅಸ್ತ್ರ-ದಕ್ಷಿಣ ಆಫ್ರಿಕಾದ ರೈಲ್ವೆ ಇಲಾಖೆಯವರು ನಡೆಸಿದ ಮುಷ್ಕರದಲ್ಲಿ ಯೂರೋಪಿಯನ್

ಮುಷ್ಕರಕಾರರಿಗೆ ಭಾರತೀಯರು ಯಾವ ತರಹ ಸಹಾಯವನ್ನೂ ಮಾಡದೆ ಇದ್ದುದು.

ಚಳವಳಿಯ ಮೂಲ ಉದ್ದೇಶ ಬ್ರಿಟಿಷ್ ಸರಕಾರವನ್ನು ಉರುಳಿಸುವುದಾಗಲಿ ಅಥವಾ ಅವರ ರಾಜಕೀಯ ರೀತಿ, ನೀತಿಯನ್ನು ವಿನಾಕಾರಣ ಟೀಕಿಸುವುದಾಗಲಿ ಆಗಿರಲಿಲ್ಲ. ಅವರ ಕಷ್ಟಕಾಲದಲ್ಲಿ ಅವರಿಗೆ ನೆರವು ನೀಡಿ, ಅವರ ಮನ ಒಲಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದೇ ಗಾಂಧಿಯ ನೀತಿಯಾಗಿತ್ತು.

ಕೆಲಸ್ತರದ ಕೆಲ ಅಧಿಕಾರಿಗಳು ಚಳುವಳಿಗಾರರನ್ನು ಬರ್ಬರ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದರೂ ಇಂಗ್ಲೆಂಡಿನಲ್ಲಿನ ಯೂನಿಯನ್ ಸರ್ಕಾರ ಹಾಗೂ ಭಾರತದಲ್ಲಿದ್ದ ವೈಸ್‌ರಾಯ್ ಲಾರ್ಡ್‌ಹಾರ್ಡಿಂಜ್ ತನ್ನ ವಲಸೆ ರಾಜ್ಯಗಳಲ್ಲಿನ ಪ್ರಜೆಗಳ ಬಗ್ಗೆ ಇಂತಹ ಕಟು ಭಾವನೆಯನ್ನು ಹೊಂದಿರಲಿಲ್ಲ. ಸಾವಿರಾರು ನಿರಪರಾಧಿಗಳನ್ನು ಬಹಳ ಕಾಲ ಸೆರೆಮನೆಯಲ್ಲಿ ಇಟ್ಟುಕೊಂಡಿರುವ ಶಕ್ತಿ ಸಹ ದಕ್ಷಿಣ ಆಫ್ರಿಕಾದ ಸರಕಾರಕ್ಕೆ ಇರಲಿಲ್ಲ. ದಿನದಿನಕ್ಕೆ ಅವರ ಕಪಿಮುಷ್ಟಿ ಸಡಿಲವಾಗತೊಡಗಿತ್ತು. ಲಾರ್ಡ್‌ಹಾರ್ಡಿಂಜರು ಈ ಸಮಸ್ಯೆಯ ಬಗ್ಗೆ ಮಧ್ಯೆ ಪ್ರವೇಶಿಸಿ ಒಂದು ನಿಷ್ಪಕ್ಷಪಾತ ನ್ಯಾಯ ಸಮಿತಿಯನ್ನು ನೇಮಿಸಿದ್ದರು.

ಭಾರತದಲ್ಲೂ ಗೋಖಲೆಯವರು ವೈಸ್‌ರಾಯ್ ಲಾರ್ಡ್‌ಹಾರ್ಡಿಂಜ್‌ರ ಮೇಲೆ ದಕ್ಷಿಣ ಆಫ್ರಿಕಾದ ಭಾರತೀಯರ ಸಮಸ್ಯೆಯನ್ನು ನ್ಯಾಯಯುತವಾಗಿ ಪರಿಹರಿಸಲು ಒತ್ತಡ ತರುತ್ತಿದ್ದರು.

ಗಾಂಧಿ ನ್ಯಾಯಸಮಿತಿಯ ರಚನೆ ಬಗ್ಗೆ ಅಸಂತೋಷ ವ್ಯಕ್ತಪಡಿಸಿದರೂ ಅದನ್ನು ಬಹಿಷ್ಕರಿಸಲಿಲ್ಲ. ಅದೂ ಒಳ್ಳೆಯದೇ ಆಯಿತು. ಸಮಿತಿ ಸತ್ಯಾಗ್ರಹಿಗಳ ಹಿತವನ್ನು ಕಾಪಾಡಿತು. ಸತ್ಯಾಗ್ರಹಿಗಳನ್ನು ಸೆರೆಯಿಂದ ಬಂಧಮುಕ್ತಗೊಳಿಸಿತು. ಭಾರತದಲ್ಲಿ ಶಾಸನಸಮ್ಮತವಾದ ವಿವಾಹ, ದಕ್ಷಿಣ ಆಫ್ರಿಕಾದಲ್ಲೂ ಶಾಸನ ಸಮ್ಮತವೆಂದು ಒಪ್ಪಿತು. ವಾರ್ಷಿಕ ತಲೆಗಂದಾಯವನ್ನು ತೆಗೆದುಹಾಕಿತು. ದಕ್ಷಿಣ ಆಫ್ರಿಕಾದಲ್ಲಿ ಅವಧಿ ಮುಗಿಸಿದ ಕಾರ್ಮಿಕರು ಸ್ವತಂತ್ರವಾಗಿ ನೆಲೆಸಬಯಸಿದರೆ ಅವರು ರಹದಾರಿ ಪಡೆಯಬೇಕಾಗಿಲ್ಲ. ರಹದಾರಿ ಪಡೆದಿರುವ ನೇಟಾಲ್ ಭಾರತೀಯರು ದಕ್ಷಿಣ ಆಫ್ರಿಕಾದ ಯಾವುದೇ ಯೂನಿಯನ್ ರಾಜ್ಯದಲ್ಲಿ ಎಲ್ಲಿ ಬೇಕಾದರೂ ನೆಲಸಬಹುದು.

ಗೌರವಯುತವಾದ ಈ ಶಾಸನ ತಿದ್ದುಪಡಿ ಎಲ್ಲ ಭಾರತೀಯರಿಗೂ ತೃಪ್ತಿ ತಂದಿತು. ಎಂಟು ವರ್ಷಗಳ ಗಾಂಧೀಜಿಯ ದಕ್ಷಿಣ ಆಫ್ರಿಕಾದ ನ್ಯಾಯಯುತ ಹೋರಾಟ ಸುಖಾಂತ ಕಂಡಿತು.

ಅಲ್ಲಿಯ ಕೆಲಸ ಮುಗಿದಂತಾಗಿದ್ದುದರಿಂದ ಗಾಂಧಿಯವರಿಗೆ ಗೋಖಲೆಯವರು ಭಾರತಕ್ಕೆ ಬರಬೇಕೆಂದು ಸೂಚಿಸಿದರು. ಗಾಂಧೀಜಿ ಹೆಂಡತಿ ಮತ್ತು ಮಿತ್ರ ಕಾಲೆನ್‌ಬಾಕ್‌ರೊಡನೆ ಲಂಡನ್ ಮಾರ್ಗವಾಗಿ ಭಾರತಕ್ಕೆ ಹೊರಡಲು ಸಿದ್ಧತೆ ನಡೆಸಿದರು.

◆ ◆ ◆

ಅತ್ಯಂತ ಸೌಂದರ್ಯವತಿ ಯಾರು ?

ಸರೋಜಿನಿ ನಾಯ್ಡು ಒಬ್ಬ ಹೆಸರಾಂತ ಕವಯಿತ್ರಿ. ಸಹಸ್ರಾರು ಜನರನ್ನು ಮುಗ್ಧಗೊಳಿಸುವ ವಾಗ್ಮಿ, ಬರಹಗಾರ್ತಿ.

ಒಂದು ದಿನ ಸರೋಜಿನಿ ಗಾಂಧಿಯನ್ನು ಕೇಳಿದರು,

"ಬಾಪೂ, ಪ್ರಪಂಚದಲ್ಲಿ ಅತಿ ಸುಂದರಿಯಾದ ಹೆಂಗಸು ಯಾರು ?"

ಚಾತುರ್ಯದಲ್ಲಿ ಗಾಂಧೀಜಿ ಯಾರಿಗೂ ಹಿಂದೆ ಬಿದ್ದವರಲ್ಲ. ಥಟ್ಟನೆ ಉತ್ತರಿಸಿದರು. "ಇದರಲ್ಲಿ ಸಂಶಯವೇ ಇಲ್ಲ. ಕಸ್ತೂರಬಾ". ಸರೋಜಿನಿ ಇಲ್ಲಿಗೆ ಈ ವಿಷಯ ಬಿಡಲಿಲ್ಲ. ನಾರದನ ಹಾಗೆ ಆಕೆ ಕಸ್ತೂರಬಾ ಹತ್ತಿರ ಹೋದರು. "ಬಾ ! ಬಾಪೂನ ಕೇಳಿದೆ. 'ಪ್ರಪಂಚದಲ್ಲಿ ಅತಿ ಸೌಂದರ್ಯವತಿ ಯಾರು ?' ಎಂದು. ಬಾಪೂ ಹೇಳಿದರು 'ಕಸ್ತೂರಬಾ' ಎಂದು. ಇದಕ್ಕೆ ನೀವೇನು ಹೇಳುತ್ತೀರಿ ?"

ಬಾ ಹೆಚ್ಚು ಓದಿದವರಲ್ಲ. ಆದರೆ ಬುದ್ಧಿವಂತಿಕೆಗೇನೂ ಕೊರತೆ ಇರಲಿಲ್ಲ. ಆಕೆ ಸರೋಜಿನಿಗಿಂತ ಚತುರೆ. ಬಾ, ಹೇಳಿದರು "ನಿನಗೆ ಗೊತ್ತಿಲ್ಲವೆ ? ಬಾಪೂ ಎಂದೂ ಸುಳ್ಳು ಹೇಳುವುದಿಲ್ಲ ?"

(ಆಧಾರ : ಡಾ. ಪ್ರಭುಶಂಕರ – ಸಂಭಾಷಣೆಯಲ್ಲಿ)

೧೧. ಗಾಂಧೀಜಿ ಮರಳಿ ಭಾರತಕ್ಕೆ

ಇಪ್ಪತ್ತೊಂದು ವರ್ಷಗಳಷ್ಟು ದೀರ್ಘಕಾಲ ದಕ್ಷಿಣ ಆಫ್ರಿಕಾದಲ್ಲಿದ್ದು ಅಲ್ಲಿನ ಭಾರತೀಯರಿಗೆ ನ್ಯಾಯ ದೊರಕಿಸಿ ಕೊಟ್ಟ ಗಾಂಧೀಜಿ ದಿನಾಂಕ ೧೮ ಜುಲೈ ೧೯೧೪ ರಂದು ಭಾರತದತ್ತ ಹಡಗಿನಲ್ಲೇ ಪಯಣ ಬೆಳೆಸಿದರು. ಗೋಖಲೆಯವರ ನೇತೃತ್ವದಲ್ಲಿ ದೇಶಸೇವೆ ಮಾಡಲು ಕಾತುರರಾಗಿದ್ದರು.

ಗಾಂಧಿಯವರು ಪಯಣಿಸುತ್ತಿದ್ದ ಹಡಗು ಇಂಗ್ಲಿಷ್ ಕಾಲುವೆಯನ್ನು ಪ್ರವೇಶಿಸುತ್ತಿದ್ದಂತೆಯೇ ಮಹಾಯುದ್ಧ ಪ್ರಾರಂಭವಾಗಲಿದೆ ಎಂಬ ದುರ್ವಾರ್ತೆ ಹಡಗಿನಲ್ಲಿದ್ದವರನ್ನೆಲ್ಲಾ ತತ್ತರಗೊಳಿಸಿತು. ಇದರಿಂದಾಗಿ ಕೆಲದಿನ ಹಡಗು ಸಮುದ್ರ ಮಧ್ಯದಲ್ಲೇ ನಿಲ್ಲಬೇಕಾಯಿತು. ಮುಂದೆ ಪಯಣದುದ್ದಕ್ಕೂ ಹಡಗಿನಲ್ಲಿದ್ದವರನ್ನೆಲ್ಲಾ ಸಾಗರದಲ್ಲಿ ವೈರಿಗಳು ಹುದುಗಿಸಿದ್ದ ಮೈನ್‌ಗಳ ಭಯ ಕಾಡುತ್ತಿತ್ತು. ಅದೃಷ್ಟವಶಾತ್ ಯಾವ ಮೈನೂ ಸ್ಫೋಟಿಸಲಿಲ್ಲ. ಹಡಗು ಸುಖಕರವಾಗಿ ದಿನಾಂಕ ೬ ಆಗಸ್ಟ್ ೧೯೧೪ ರಂದು ಲಂಡನ್ ದಡ ಸೇರಿತು. ಮಹಾಯುದ್ಧ ಆಗಸ್ಟ್ ೪ ರಂದೇ ಪ್ರಾರಂಭವಾಗಿತ್ತು.

ಗಾಂಧೀಜಿ ಲಂಡನ್‌ಗೆ ಬಂದಾಗ ಗೋಖಲೆಯವರು ಆರೋಗ್ಯ ತಪಾಸಣೆಗಾಗಿ ಪ್ಯಾರೀಸ್‌ಗೆ ಹೋಗಿದ್ದವರು ಯುದ್ಧದ ಪ್ರಾರಂಭದಿಂದಾಗಿ ಲಂಡನ್‌ಗೆ ಬರಲಾಗಿಲ್ಲವೆಂದು ಗೊತ್ತಾಯಿತು. ಗೋಖಲೆಯವರನ್ನು ಕಾಣದೆ ಭಾರತಕ್ಕೆ ಹಿಂದಿರುಗಲು ಗಾಂಧೀಜಿಗೆ ಇಷ್ಟವಿರಲಿಲ್ಲ.

೧೯೧೪ರಲ್ಲಿ ಪ್ರಾರಂಭವಾಗಿದ್ದ ಮಹಾಯುದ್ಧದಲ್ಲಿ ಬ್ರಿಟಿಷರ ಸೈನ್ಯಕ್ಕೆ ಸಹಕಾರ ನೀಡಲು ಬ್ರಿಟಿಷ್ ವಿದ್ಯಾರ್ಥಿಗಳೆಲ್ಲಾ ಮುಂದೆ ಬಂದಿದ್ದರು. ಭಾರತೀಯ ವಿದ್ಯಾರ್ಥಿಗಳು ಈ ಬಗ್ಗೆ ಏನೂ ನಿರ್ಣಯ ತೆಗೆದುಕೊಂಡಿರಲಿಲ್ಲ. ಗಾಂಧೀಜಿ ಗ್ರೇಟ್ ಬ್ರಿಟನ್, ಐರ್ಲೆಂಡಿನಲ್ಲಿರುವ ಭಾರತೀಯರನ್ನೆಲ್ಲಾ ಒಂದೆಡೆ ಕರೆಸಿ ಕಷ್ಟದಲ್ಲಿರುವ ಇಂಗ್ಲಿಷಿನವರಿಗೆ ನಾವು ಸಹಾಯ ಮಾಡುವುದು ಧರ್ಮ. ಯುದ್ಧ ಮುಗಿದ ನಂತರ ನಮ್ಮ ಬೇಡಿಕೆಗಳನ್ನು ಅವರ ಮುಂದಿರಿಸಬಹುದು. ಇದೇ ರೀತಿಯಲ್ಲಿ ತಾವು ಆಫ್ರಿಕಾದಲ್ಲಿ ಮಾಡಿ ಜಯಗಳಿಸಿದ್ದೇವೆಂದು

ಹೇಳಿದರು. ಬಹಳ ಜನ, 'ಇಂಗ್ಲಿಷಿನವರು ನಮ್ಮ ಯಜಮಾನರು. ನಾವು ಅವರ ಗುಲಾಮರು. ಗುಲಾಮರು ಯಜಮಾನರೊಡನೆ ಇಂತಹ ಸಂದರ್ಭದಲ್ಲಿ ಸಹಕರಿಸುವುದಾಗಲಿ, ಸಹಾಯ ಮಾಡುವುದಾಗಲಿ ಬುದ್ಧಿವಂತಿಕೆಯ ತೀರ್ಮಾನವಾಗಲಾರದು. ಇಂತಹ ಸಂದರ್ಭದಲ್ಲೇ ನಮ್ಮ ಬೇಡಿಕೆಗಳನ್ನು ನಾವು ಪೂರೈಸಿಕೊಳ್ಳಬೇಕು. ಅದೇ ವ್ಯವಹಾರ ಧರ್ಮ' ಎಂದೆಲ್ಲಾ ಗಾಂಧಿಯವರ ಅಭಿಪ್ರಾಯವನ್ನು ವಿರೋಧಿಸಿದರು. ಕೊನೆಗೂ ತಮ್ಮ ವಾದಸರಣಿಯಿಂದ ಗಾಂಧೀಜಿ ಇಂಗ್ಲಿಷರಿಗೆ ಯಾವುದಾದರೂ ವಿಧದಲ್ಲಿ ಸಹಾಯ ಮಾಡಲು ಮುಂದಾಗಬೇಕೆಂಬ ಅಭಿಪ್ರಾಯವನ್ನು ಅನುಮೋದಿಸಲು ಮನ ಒಲಿಸಿದರು. ಬೋಅರ್ ಹಾಗೂ ಜುಲು ಯುದ್ಧದಲ್ಲಿ ಇವರು ರೆಡ್‌ಕ್ರಾಸ್ ಸಹಕಾರವನ್ನು ಯುದ್ಧರಂಗದಲ್ಲಿ ನೀಡಿದಂತೆ ಇಲ್ಲೂ ನೀಡಲು ಮುಂದಾದರು. ಇದೇ ವೇಳೆಗೆ ಇವರು ಪ್ಲೂರಸಿ ರೋಗಕ್ಕೆ ಒಳಗಾದರು. ಶ್ರೀಮತಿ ಸರೋಜಿನಿ ನಾಯ್ಡುರವರ ಪರಿಚಯವೂ ಲಂಡನ್ನಿನಲ್ಲೇ ಆಯಿತು. ಅವರು ಹಾಗೂ ಅವರ ಸ್ನೇಹಿತರು ಸೈನಿಕರಿಗಾಗಿ ತಯಾರಿಸಿದ್ದ ಪೋಷಾಕನ್ನು ಯುದ್ಧರಂಗದಲ್ಲಿದ್ದ ಸೈನಿಕ ತುಕಡಿಗೆ ಕಳುಹಿಸಲು ಸಹಕರಿಸಿದರು. ಪ್ಲೂರಸಿಗೆ ಔಷಧೋಪಚಾರ ಮಾಡುತ್ತಿದ್ದ ಡಾಕ್ಟರ್, ಗಾಂಧಿ ಭಾರತಕ್ಕೇ ಹಿಂತಿರುಗಿ ಅಲ್ಲೇ ಔಷಧವನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ಸೂಚಿಸಿದರು. ಫ್ರಾನ್ಸ್‌ನಿಂದ ಬಂದಿದ್ದ ಗೋಖಲೆಯವರೂ ಭಾರತಕ್ಕೆ ಹಿಂತಿರುಗಿ ಹೋಗಿದ್ದರು. ಗಾಂಧಿ ತಮ್ಮ ಸ್ನೇಹಿತ ಕಾಲೆನ್‌ಬಾಕ್‌ರವರನ್ನೂ ಭಾರತಕ್ಕೆ ಕರೆದೊಯ್ಯಲು ಆಶಿಸಿದ್ದರು. ಆದರೆ ಲಂಡನ್‌ನಲ್ಲಿ ಅವರಿಗೆ ಭಾರತಕ್ಕೆ ಹೋಗಲು ರಹದಾರಿ ಸಿಗಲಿಲ್ಲವಾಗಿ ಅವರು ದಕ್ಷಿಣ ಆಫ್ರಿಕಾಕ್ಕೇ ಹಿಂತಿರುಗಿ ಹೋಗಬೇಕಾಗಿಬಂದಿತ್ತು.

ಗಾಂಧೀಜಿ ಭಾರತಕ್ಕೆ ಹೊರಟ ಹಡಗಿನಲ್ಲಿ ೩ನೇ ದರ್ಜೆ ಪ್ರಯಾಣಿಕರಾಗಿ ಪಯಣಿಸ ಬಯಸಿದ್ದರು. ಆದರೆ ಆ ಹಡಗಿನಲ್ಲಿ ಆ ದರ್ಜೆ ಪ್ರಯಾಣ ವ್ಯವಸ್ಥೆ ಇಲ್ಲದ್ದರಿಂದ ೨ನೇ ದರ್ಜೆ ಪ್ರಯಾಣಿಕರಾಗಿಯೇ ಪ್ರಯಾಣ ಬೆಳೆಸಿದರು.

ಗಾಂಧೀಜಿ ಮತ್ತು ಕುಟುಂಬ ಬೊಂಬಾಯಿಯಲ್ಲಿ ಹಡಗಿನಿಂದ ಇಳಿದಾಗ ಇವರಿಗೆ ಭಾರಿ ಸ್ವಾಗತವನ್ನು ಗೋಖಲೆಯವರು ಏರ್ಪಡಿಸಿದ್ದರು. ಗೋಖಲೆಯವರ ಆರೋಗ್ಯ ಅಷ್ಟು ಚೆನ್ನಾಗಿಲ್ಲದೆ ಇದ್ದರೂ ಅವರೇ ಬಂದರಿಗೆ ಖುದ್ದಾಗಿ ಆಗಮಿಸಿ

ಇವರನ್ನು ಸ್ವಾಗತಿಸಿದರು. ಈ ಅಭೂತಪೂರ್ವ ಸನ್ನಿವೇಶವನ್ನು ಗಾಂಧಿ ತಮ್ಮ ಜೀವಮಾನದಲ್ಲಿ ಎಂದೂ ಮರೆಯದವರಾಗಿದ್ದರು.

ಗಾಂಧೀಜಿ ಬೊಂಬಾಯಿಯಲ್ಲಿ ಒಂದೆರಡು ದಿನ ಇದ್ದರು. ಗೋಖಲೆಯವರು ಪೂನಾಕ್ಕೆ ಹೋಗಿದ್ದರು. ಭಾರತದ ಗೌರ್ನರ್ ಲಾರ್ಡ್‌ವಿಲಿಂಗ್‌ಡನ್ ರವರು ಗಾಂಧಿಯವರನ್ನು ನೋಡಬಯಸಿದ್ದಾರೆಂದು, ಅವರನ್ನು ಭೇಟಿ ಮಾಡಿಯೇ ಪೂನಾಕ್ಕೆ ಬರಬೇಕೆಂದು ಸಮಾಚಾರ ಕಳುಹಿಸಿದರು. ಆದ್ದರಿಂದ ಗಾಂಧಿಯವರು ಗೌರ್ನರ್ ಅವರನ್ನು ಕೂಡಲೇ ಹೋಗಿ ಭೇಟಿ ಮಾಡಿದರು. ಆದರದಿಂದ ಬರಮಾಡಿಕೊಂಡ ಲಾರ್ಡ್ ವಿಲ್ಲಿಂಗ್‌ಡನ್ ಗಾಂಧಿಯವರ ಕೈ ಕುಲುಕಿ ನುಡಿದರು.

"ಗಾಂಧಿಯವರೆ, ನೀವು ಬೇಕೆಂದಾಗ ನನ್ನನ್ನು ಬಂದು ಕಾಣಬಹುದು. ಏನು ತೊಂದರೆಗಳಿದ್ದರೂ ನನಗೆ ಮೊದಲು ದಯವಿಟ್ಟು ತಿಳಿಸಿ. ನಮ್ಮ ಸರಕಾರ ಯಾರಿಗೂ ಕೆಡುಕನ್ನು ಮಾಡಲು ಬಯಸುವುದಿಲ್ಲ"

"ನಾನೊಬ್ಬ ಸತ್ಯಾಗ್ರಹಿ, ಎಂದೂ ದುಡುಕಿ ಏನೂ ಕೆಲಸವನ್ನು ಮಾಡುವುದಿಲ್ಲ. ಶಾಂತಿಯಿಂದ ಏನಾಗುವುದೋ ಅದನ್ನು ಮಾತುಕತೆಯ ಮೂಲಕ ಮಾಡಿಯೇ ಅದು ಅಸಫಲವಾದಾಗ ಮಾತ್ರ ಚಳವಳಿಗೆ ಇಳಿಯುವುದು. ದಕ್ಷಿಣ ಆಫ್ರಿಕಾದಲ್ಲೂ ಹೀಗೇ ಮಾಡಿದ್ದೇನೆ. ಖಂಡಿತಾ ಇಲ್ಲೂ ಹಾಗೇ ಮಾಡುತ್ತೇನೆ" ಎಂದು ಗಾಂಧಿ ನುಡಿದರು.

"ಇಬ್ಬರ ನಡುವೆ ಇರುವ ಈ ನಂಬಿಕೆ ಏನನ್ನು ಬೇಕಾದರೂ ಸಾಧಿಸುತ್ತದೆ" ಎಂದು ಹರ್ಷದಿಂದ ಮತ್ತೆ ಕೈಕುಲುಕಿ ಗಾಂಧೀಜಿಯವರನ್ನು ಬೀಳ್ಕೊಟ್ಟರು.

ಗಾಂಧೀಜಿ ಅಲ್ಲಿಂದ ಪೂನಾಕ್ಕೆ ಬಂದರು. ಗೋಖಲೆಯವರು ತಮ್ಮ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಪದಾಧಿಕಾರಿಗಳಿಗೆ ಗಾಂಧಿಯನ್ನು ಪರಿಚಯಿಸಿದರು. ಇಷ್ಟ ಬಂದರೆ ಸೊಸೈಟಿ ಸದಸ್ಯತ್ವವನ್ನು ಸ್ವೀಕರಿಸಬಹುದೆಂದು ಗಾಂಧೀಜಿಗೆ ಸೂಚಿಸಿದರು.

ಗಾಂಧಿಯವರು ದಕ್ಷಿಣ ಆಫ್ರಿಕಾ ಬಿಡುವ ಮುಂಚೆಯೇ ಫೀನಿಕ್ಸ್ ಆಶ್ರಮದ ಕೆಲವು ಸತ್ಯಾಗ್ರಹಿಗಳನ್ನು ಭಾರತಕ್ಕೆ ಬರಲು ತಿಳಿಸಿದ್ದರು. ಅವರುಗಳು ಶಾಂತಿನಿಕೇತನಕ್ಕೆ ಆಗಲೇ ಬಂದಿದ್ದುದರಿಂದ ಗಾಂಧೀಜಿ ಶಾಂತಿನಿಕೇತನಕ್ಕೆ ಹೋದರು. ಅಲ್ಲಿ ಕಾಕಾ ಸಾಹೇಬ್ - ಕಾಕಾ ಕಾಲೇಲ್‌ಕರ್ ಅವರನ್ನು ಭೇಟಿ

ಮಾಡಿದರು. ಫೀನಿಕ್ಸ್ ಆಶ್ರಮದ ಮಗನ್‌ಲಾಲ್ ಗಾಂಧಿಯವರಿಂದ ಇವರಿಗೆ ಶಾಂತಿನಿಕೇತನವತಿಯಿಂದ ಸಕಲ ಸೌಕರ್ಯಗಳೂ ಲಭಿಸಿವೆ ಎಂದು ತಿಳಿದು ಸಮಾಧಾನಗೊಂಡರು.

ಗಾಂಧಿ ಶಾಂತಿನಿಕೇತನದಲ್ಲಿ ಕೆಲದಿನ ಇರಬೇಕೆಂದಿದ್ದರು. ಆದರೆ ಗೋಖಲೆಯವರು ನಿಧನರಾದರೆಂಬ ತಂತಿ ವರ್ತಮಾನ ಬಂದು ಶಾಂತಿನಿಕೇತನ ದುಃಖದಲ್ಲಿ ಮುಳುಗಿತು. ಕೂಡಲೇ ಅಲ್ಲಿ ಶ್ರದ್ಧಾಂಜಲಿ ಸಭೆಯನ್ನು ಕರೆದು ಗೋಖಲೆಯವರ ದಿವ್ಯ ಆತ್ಮಕ್ಕೆ ಅಶ್ರುತರ್ಪಣವನ್ನು ಸಲ್ಲಿಸಲಾಯಿತು. ಮಗನ್‌ಲಾಲ್‌ರವರನ್ನು ಕರೆದುಕೊಂಡು ಗಾಂಧೀಜಿ ಕೂಡಲೇ ಪೂನಾದತ್ತ ಪಯಣ ಬೆಳೆಸಿದರು.

ಪೂನಾದಲ್ಲಿ ಗೋಖಲೆಯವರ ಶ್ರಾದ್ಧ ಕಾರ್ಯಕ್ರಮದಲ್ಲಿ ಭಾಗವಹಿಸಿ ರಂಗೂನ್‌ಗೆ ಹೋಗಿ ಅಲ್ಲಿ ಡಾ. ಮೆಹ್ತಾರವರನ್ನು ಭೇಟಿ ಮಾಡಿದರು.

ಹನ್ನೆರಡು ವರ್ಷಗಳಿಗೊಮ್ಮೆ ಹರಿದ್ವಾರದಲ್ಲಿ ನಡೆಯುವ ಕುಂಭಮೇಳ ೧೯೧೫ರಲ್ಲಿ ಸಂಯೋಜನೆಗೊಂಡಿತ್ತು. ಇದರಲ್ಲಿ ಭಾಗವಹಿಸುವ ಇಚ್ಛೆ ಇಲ್ಲದಿದ್ದರೂ ಅಲ್ಲಿನ ಗುರುಕುಲದ ಮಹಾತ್ಮಾ ಮುನ್ಷಿರಾಮ್ ಜೀಯವರನ್ನು ಗೋಖಲೆ ಸೊಸೈಟಿಯ ಪರವಾಗಿ ಭೇಟಿ ಮಾಡಬೇಕಿತ್ತು. ಅದೂ ಅಲ್ಲದೆ ಪೋನಿಕ್ಸ್‌ನಿಂದ ಬಂದಿದ್ದ ಒಂದು ತಂಡ ಮಗನ್‌ಲಾಲ್ ಗಾಂಧಿಯವರ ನೇತೃತ್ವದಲ್ಲಿ ಮುನ್ಷಿರಾಮ್‌ಜೀಯವರಿಗೆ ಸಹಾಯ ಮಾಡಲು ಅಲ್ಲಿಗೆ ಧಾವಿಸಿತ್ತು.

ಗಾಂಧೀಜಿ ಅಲ್ಲಿಂದ 'ರಾಜ್‌ಕೋಟ್‌ಗೆ ಹಿಂತಿರುಗುತ್ತಿದ್ದಾಗ ಅಹಮದಾಬಾದ್‌ಗೆ ಬಂದಾಗ ಅಲ್ಲಿ 'ಏಕೆ ಒಂದು ಪೋನಿಕ್ಸ್ ಮಾದರಿಯ ಆಶ್ರಮವನ್ನು ಸ್ಥಾಪಿಸಬಾರದು?" ಎಂದು ಸ್ನೇಹಿತರು ಸಲಹೆ ನೀಡಿದರು. ಅಹಮದಾಬಾದ್ ಕೈಮಗ್ಗದ ಬಟ್ಟೆ ತಯಾರಿಕೆಗೆ ಹೆಸರುವಾಸಿಯಾಗಿತ್ತು. ಗುಜರಾತ್ ರಾಜ್ಯದ ರಾಜಧಾನಿಯಾಗಿತ್ತು. ಕರಕುಶಲ ವಸ್ತುಗಳ ತಯಾರಿಕೆಗೆ ಅನುಕೂಲವಾದ ಸ್ಥಳವೂ ಆಗಿತ್ತು. ಆದ್ದರಿಂದ ಅಲ್ಲೇ ಆಶ್ರಮ ಸ್ಥಾಪಿಸಲು ನಿರ್ಧರಿಸಿದರು. ಅಹಮದಾಬಾದ್‌ನ ಬ್ಯಾರಿಸ್ಟರ್ ಶ್ರೀ ಜೀವನ್‌ಲಾಲ್ ದೇಸಾಯಿ ಆಶ್ರಮಕ್ಕೆ ಸ್ಥಳ ಒದಗಿಸಿಕೊಡಲು ಮುಂದೆ ಬಂದರು. ಆಶ್ರಮಕ್ಕೆ ಏನು ಹೆಸರಿಡಬೇಕೆಂಬ ಬಗ್ಗೆ ಮಿತ್ರರೊಡನೆ ಪರಾಮರ್ಶೆ ನಡೆಯಿತು. 'ಸೇವಾಶ್ರಮ', 'ತಪೋವನ' ಮುಂತಾದ ಹೆಸರುಗಳು ಸೂಚಿತವಾದವು. ಕೊನೆಗೆ ಗಾಂಧೀಜಿ 'ಸತ್ಯಾಗ್ರಹ

ಆಶ್ರಮ' ಎಂಬ ಹೆಸರನ್ನು ಸೂಚಿಸಿದರು. ಅದು ಎಲ್ಲರಿಗೂ ಒಪ್ಪಿಗೆಯಾಯಿತು. ಪ್ರಾರಂಭದಲ್ಲಿ ೨೫ ಅಭ್ಯರ್ಥಿಗಳನ್ನೊಳಗೊಂಡು ಈ ಆಶ್ರಮ ೧೯೧೫ ಮೇ ೨೫ ರಂದು ಪ್ರಾರಂಭಗೊಂಡಿತು. ಅಂದೇ ಗಾಂಧೀಜಿ ಸ್ನೇಹಿತರೊಡನೆ ಸೇರಿ ಆಡಳಿತಾತ್ಮಕ ರೂಪರೇಷೆಗಳನ್ನು ರೂಪಿಸಿದರು.

◆ ◆ ◆

ಗಾಂಧೀಜಿಯ ಬಹಿರಂಗ ತಪ್ಪೊಪ್ಪಿಗೆ

ಮಹಾವೀರ ತ್ಯಾಗಿ ಉತ್ತರ ಪ್ರದೇಶದ ವಿಧಾನ ಸಭೆ ಸದಸ್ಯರು. ಗಾಂಧೀಜಿ ಆರೋಗ್ಯ ವರ್ಧನೆಗಾಗಿ ೧೯೪೭ರಲ್ಲಿ ಮುಸ್ಸೂರಿಗೆ ಬಂದಾಗ ಅವರ ಸೇವೆ ಮಾಡಲು ತ್ಯಾಗಿ ಒಂದು ಸ್ವಯಂ ಸೇವಕರ ತಂಡವನ್ನು ನಿರ್ಮಿಸಿದರು.

ಇದನ್ನು ಕಂಡು ಕರುಬುವವರೊಬ್ಬರು ಗಾಂಧೀಜಿಗೆ ದೂರು ಕೊಟ್ಟರು. ತ್ಯಾಗಿಯ ಸ್ವಯಂ ಸೇವಕರು ಬಡ ಜನರನ್ನು ಅನಾದರಣೆ ಮಾಡಿ ಚೆನ್ನಾಗಿ ಬಟ್ಟೆ ಧರಿಸಿದವರನ್ನು ಮಾತ್ರ ಪ್ರಾರ್ಥನಾ ಸಭೆಗೆ ಸ್ವಾಗತಿಸುತ್ತಿದ್ದಾರೆ ಎಂದು. ಇದನ್ನು ಕೇಳಿ ನೊಂದುಕೊಂಡ ಗಾಂಧೀಜಿ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಈ ವಿಷಯವನ್ನು ಎತ್ತಿಕೊಂಡು ಸ್ವಯಂ ಸೇವಕರ ವರ್ತನೆಯನ್ನು ಖಂಡಿಸಿದರು. ತ್ಯಾಗಿ ಅಲ್ಲಿಯೇ ನಿಂತು ಪ್ರತಿಭಟಿಸಿದರು. 'ಗಾಂಧೀಜಿ ಯಾರದೋ ಮಾತು ಕೇಳಿ ವಿಚಾರಣೆ ಮಾಡದೆಯೇ ತಮ್ಮನ್ನು ದೂಷಿಸಿದ್ದಾರೆ. ಇದರಿಂದ ನಮಗೆ ದುಃಖ, ನೋವು ಉಂಟಾಗಿದೆ. ಗಾಂಧೀಜಿ ಹೀಗೆ ಮಾಡಬಾರದಾಗಿತ್ತು' ಎಂದರು. ಆಗ ಗಾಂಧೀಜಿಗೆ ತಮ್ಮ ತಪ್ಪಿನ ಅರಿವಾಯಿತು. ಗಾಂಧೀಜಿ ಪ್ಯಾರೇಲಾಲ್ ಮತ್ತು ಬ್ರಿಜಕೃಷ್ಣ ಚಂದೀವಾಲಾ ಇವರಿಗೆ ಈ ವಿಷಯವನ್ನು ವಿಚಾರಣೆ ಮಾಡಿರೆಂದು ನಿಯಮಿಸಿದರು. ಯಾರಿಂದಲೂ ತ್ಯಾಗಿ ಮತ್ತು ಸ್ವಯಂ ಸೇವಕರ ಮೇಲೆ ದೂರು ಇರಲಿಲ್ಲ. ಎಲ್ಲರೂ ಅವರ ಕಾರ್ಯವನ್ನು ಶ್ಲಾಘಿಸಿದರು. ಅಂದು ಸಂಜೆ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ತಮ್ಮ ತಪ್ಪು ಒಪ್ಪಿಕೊಂಡರು. "ನಿನ್ನೆ ನಾನು ತ್ಯಾಗಿಯವರನ್ನು ನಿಂದಿಸಿದೆ. ಅವರು ನನ್ನ ಮೇಲೆ ಸಿಟ್ಟುಗೊಂಡು ದೂರ ನಿಂತಿದ್ದಾರೆ. ಯಾರದೋ ಚಾಡಿಯ ಮಾತನ್ನು ವಿಚಾರಣೆ ಮಾಡದೆ ನಂಬಿದೆ. ಇದಕ್ಕೆ ನಾನು ಪ್ರಾಯಶ್ಚಿತ್ತ ಮಾಡಬೇಕಾಗಿದೆ. ಈಗ ನಾವೆಲ್ಲಾ ಸಂಕಲ್ಪ ಮಾಡೋಣ. ಚಾಡಿ ಮಾತು ಕೇಳಿ ನಿರ್ಧಾರ ತೆಗೆದುಕೊಳ್ಳುವುದಿಲ್ಲವೆಂದು. ಇದು ನನ್ನ ಪ್ರಾಯಶ್ಚಿತ್ತ." ಇದನ್ನು ಕೇಳಿ ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಸಭೆ ಮುಗಿದ ಮೇಲೆ ಗಾಂಧೀಜಿ ತ್ಯಾಗಿಯನ್ನು ಕರೆದರು. ಅವರ ಹೆಗಲ ಮೇಲೆ ಕೈ ಹಾಕಿಕೊಂಡು ಎಂದಿನಂತೆ ನಡೆದರು.

(ವಿಜ್ಞಾನ ಯುಗದ ಮಹಾಪ್ರಾಜ್ಞ - ಮಹಾತ್ಮ : ಪ್ರೊ. ಎಸ್. ಕೃಷ್ಣಸ್ವಾಮಿ)

೧೨. ಚಂಪಾರಣ ಸತ್ಯಾಗ್ರಹ

ಚಂಪಾರಣ ಬಹುಪುರಾತನ ಐತಿಹ್ಯವುಳ್ಳ ಒಂದು ಜಿಲ್ಲೆ. ಉತ್ತರ ಬಿಹಾರದಲ್ಲಿರುವ ಈ ಸ್ಥಳ ಹಿಂದೆ ಜನಕರಾಜನ ರಾಜ್ಯಕ್ಕೆ ಸೇರಿತ್ತೆಂದು ಚರಿತ್ರೆಕಾರರ ಅಂಬೋಣ. ಇಂದು ಅದು ಅತಿ ಹಿಂದುಳಿದ ಪ್ರದೇಶಗಳಲ್ಲಿ ಒಂದಾಗಿದೆ. ಇಲ್ಲಿನ ಎಲ್ಲ ರೈತರೂ ಕಡುಬಡವರು. ಕೃಷಿಯೇ ಅವರ ಮುಖ್ಯವೃತ್ತಿ. ಹೆಂಡತಿ, ಮಕ್ಕಳು ಆದಿಯಾಗಿ ಎಲ್ಲರೂ ಹೊಲಗಳಲ್ಲಿ ದುಡಿಯುತ್ತಾರೆ. ಒಬ್ಬ ಗಂಡಾಳಿಗೆ ೧೯೧೫-೧೬ರ ಸುಮಾರಿನಲ್ಲಿ ಎರಡು ಆಣೆ, ಹೆಣ್ಣಾಳಿಗೆ ಒಂದು ಆಣೆ, ಮಕ್ಕಳಿಗೆ ಆರು ಕಾಸು ದಿನಗೂಲಿ ಲಭಿಸುತ್ತಿತ್ತು. ಅಲ್ಲಿನ ಧನವಂತ ಜಮೀನುದಾರರುಗಳು ರೈತರನ್ನು ಶೋಷಿಸಿ ದಿನೇ ದಿನೇ ಮತ್ತಷ್ಟು ಐಶ್ವರ್ಯವಂತರಾಗುತ್ತಿದ್ದರು. ಆ ರಾಜ್ಯದಲ್ಲಿ ಅಂದು ಇದ್ದ ಕಾನೂನಿನ ರೀತ್ಯ ಪ್ರತಿ ಎಕರೆ ಜಮೀನಿನಲ್ಲಿ ೧/೩ ಭಾಗ ಜಮೀನನ್ನು ನೀಲಿ ಬೆಳೆಗೆ ಮೀಸಲಿರಿಸಬೇಕಾಗಿತ್ತು. ಈ ಶೋಷಣೆ ಬಹಳ ವರ್ಷಗಳಿಂದ ಅವಿರತವಾಗಿ ನಡೆದುಕೊಂಡು ಬರುತ್ತಿತ್ತು. ೧೯೧೬ರ ಕಾಂಗ್ರೆಸ್ ಅಧಿವೇಶನ ಲಕ್ನೋದಲ್ಲಿ ನಡೆಯುತ್ತಿದ್ದಾಗ ರಾಜಕುಮಾರ್ ಶುಕ್ಲಾ ಎಂಬ ಬಡರೈತ ಗಾಂಧಿಯವರನ್ನು ಚಂಪಾರಣದ ರೈತರ ಬವಣೆಯನ್ನು ವರ್ಣಿಸಿ ಹೇಳಿ, ಇವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ವಿನಂತಿಸಿಕೊಂಡ. ಗಾಂಧಿಯವರಿಗೆ ಆಗ ಈ ಜಿಲ್ಲೆಯ ಬಗ್ಗೆಯಾಗಲಿ, ನೀಲಿ ಬೆಳೆಯ ಬಗ್ಗೆಯಾಗಲಿ ಕಿಂಚಿತ್ತೂ ಅರಿವಿರಲಿಲ್ಲ. ರೈತರ ಬಗ್ಗೆ ತುಂಬಾ ಕಾಳಜಿಯಿದ್ದ ರಾಜಕುಮಾರ್ ಶುಕ್ಲಾಗೂ ಸಹ ಈ ನೀಲಿ ಬೆಳೆಯುವ ಪ್ರದೇಶಗಳ ಪೂರ್ಣ ವಿವರ ಗೊತ್ತಿರಲಿಲ್ಲ.

'ನಾನು ಆ ಪ್ರದೇಶಗಳನ್ನು ನೋಡದೆ, ರೈತರೊಡನೆ ಮಾತನಾಡದೆ ನಾನೇನೂ ಈ ಬಗ್ಗೆ ಕ್ರಮ ಕೈಗೊಳ್ಳಲಾರೆ' ಎಂದು ಗಾಂಧೀಜಿ ತಿಳಿಸಿ, ಆತನೊಡನೆ ಆ ಸ್ಥಳಗಳ ವೀಕ್ಷಣೆಗೆ ಹೊರಟರು. ಪಾಟ್ನಾದಲ್ಲಿ ಗಾಂಧಿಯವರ ಹಳೆಯ ಸ್ನೇಹಿತ ಮೌಲಾನಾ ಮಜಹರುಲ್ ಹಕ್‌ರವರ ಭೇಟಿಯಾಯಿತು. ಅವರು ನೀಲಿ ಬೆಳೆಯ ಮುಖ್ಯ ಕೇಂದ್ರ ಮುಜಾಫರ್‌ಪುರ್‌ಗೆ ಹೋಗಲು ತಿಳಿಸಿದರು.

ಅಲ್ಲಿ ಗಾಂಧಿಯವರಿಗೆ ಕೃಪಲಾನಿಯವರ ಪರಿಚಯವಾಯಿತು. ಆಗ ಅವರು ಅಲ್ಲಿನ ಸರ್ಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು. ಅವರು ಬಿಹಾರದ ಸ್ಥಿತಿಗತಿ ಹಾಗೂ ನೀಲಿ ಬೆಳೆಯುವ ಪ್ರದೇಶಗಳ ಬಗ್ಗೆ ಮಾಹಿತಿ ನೀಡಿದರು.

ಯೂರೋಪಿಯನ್ ಪ್ಲಾಂಟರ್‌ಗಳು ಗಾಂಧಿಯವರ ಈ ಕಾರ್ಯಕ್ರಮಗಳಿಗೆ ಹಲವು ವಿಧದಲ್ಲಿ ಅಡ್ಡಿ ಆತಂಕಗಳನ್ನು ಒಡ್ಡಲು ಪ್ರಯತ್ನಿಸಿದರು. ಈ ಪ್ಲಾಂಟರ್‌ಗಳಿಗೆ ಸರಕಾರ ಸಹ ಪ್ರೋತ್ಸಾಹ ನೀಡುತ್ತಿತ್ತು.

ಅಲ್ಲಿನ ಸ್ಥಿತಿಗತಿಗಳ ಪ್ರಾಥಮಿಕ ಅಧ್ಯಯನ ರೀತ್ಯ ಗಾಂಧಿಯವರಿಗೆ ರೈತರು ಹಾಗೂ ಜಮೀನುದಾರರನ್ನು ಮುಖತಃ ಭೇಟಿ ಮಾಡಿ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುವ ಆವಶ್ಯಕತೆ ಕಾಣಿಸಿತು. ಇವರು ರೈತರೊಡನೆ ಮಾತನಾಡುವುದನ್ನು ಸಹಿಸದ ಪ್ಲಾಂಟರ್‌ಗಳು ಸರಕಾರದ ಮೇಲೆ ಒತ್ತಡ ತಂದು ಗಾಂಧಿಯವರ ಮೇಲೆ ಗೂಂಡಾಗಳಿಂದ ಆಕ್ರಮಣ ಮಾಡಿಸಿದರು. ಚಂಪಾರಣಕ್ಕೆ ಹೋಗಬಾರದೆಂದೂ ತಾಕೀತು ಮಾಡಿದರು. ಗಾಂಧಿ ಅದನ್ನು ನಿರ್ಲಕ್ಷಿಸಿ ನೀಲಿ ಬೆಳೆಗಾರ ರೈತರನ್ನು ಸಂಪರ್ಕಿಸಲು ಪ್ರಾರಂಭಿಸಿದಾಗ ಅವರನ್ನು ಸರಕಾರ ದಸ್ತಗಿರಿ ಮಾಡಿತು. ನ್ಯಾಯಾಲಯದಲ್ಲಿ ಗಾಂಧೀಜಿ ಗೆದ್ದರು. ಸತ್ಯಾಗ್ರಹ ಆರಂಭಿಸಿದರು. ಆದರೆ ಬಿಹಾರದ ಉಪಗೌರ್ನರ್ ನ್ಯಾಯಪರರಾಗಿದ್ದರು. ಸರ್ಕಾರದವತಿಯಿಂದಲೇ ಈ ಪರಿಸ್ಥಿತಿ ಅಧ್ಯಯನಕ್ಕಾಗಿ ಒಂದು ಸಮಿತಿಯನ್ನು ನೇಮಿಸಿದರು. ಗಾಂಧಿಯೂ ಅದರಲ್ಲಿ ಒಬ್ಬ ಸದಸ್ಯರಾಗಿದ್ದು ಕೂಲಂಕಷವಾಗಿ ಎಲ್ಲಾ ಮಜಲುಗಳಿಂದಲೂ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಸಾವಿರಾರು ಜನರನ್ನು ಭೇಟಿ ಮಾಡಿ ವರದಿಯನ್ನು ಸಿದ್ಧಪಡಿಸಿ ಸರಕಾರಕ್ಕೆ ಒಪ್ಪಿಸಿದರು. ವರದಿ ರೈತರ ಪರವಾಗಿತ್ತು. ರೈತರ ದಾಸ್ಯವಿಮೋಚನೆಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡಿತು. ಸಾಗುವಳಿ ಜಮೀನಿನ ೧/೩ ಭಾಗದಲ್ಲಿ ಕಡ್ಡಾಯವಾಗಿ ನೀಲಿ ಬೆಳೆಯಬೇಕೆಂಬ ಕಾನೂನನ್ನು ರದ್ದುಪಡಿಸಿತು.

ಗಾಂಧಿ ಬಿಹಾರದಲ್ಲಿ ನಾಟ್ಯವಾಡುತ್ತಿದ್ದ ಕಡುಬಡತನದ ದರ್ಶನ ಪಡೆದರು. ಓದು ಬರಹ ಬಾರದೆ ಜನ ಅನಾಗರಿಕ ಜೀವನ ನಡೆಸುತ್ತಿದ್ದರು. ಗಾಂಧಿ ಹಳ್ಳಿಗಳಲ್ಲಿ ಶಾಲೆಗಳು ಹಾಗೂ ಗೋಶಾಲೆಗಳನ್ನು ಸ್ಥಾಪಿಸಿ ಶುಚಿತ್ವದ ಅಗತ್ಯದ ಬಗ್ಗೆ ತಿಳುವಳಿಕೆ ನೀಡಿದರು. ಈ ಗ್ರಾಮೋದ್ಧಾರ ಚಳವಳಿಯಲ್ಲಿ ಕಸ್ತೂರಬಾ ಸಹ ಭಾಗವಹಿಸಿದ್ದರು.

ಗಾಂಧೀಜಿ ಚಂಪಾರಣದಲ್ಲಿ ಕಂಡ ದಾರಿದ್ರ್ಯದರ್ಶನ ಅವರ ಮುಂದಿನ ಜೀವನದಲ್ಲಿ ಬಹಳ ಬದಲಾವಣೆಗಳನ್ನು ತಂದಿತು. ಚಿಂದಿಬಟ್ಟೆ ತೊಟ್ಟು ಅರೆನಗ್ನರಾಗಿದ್ದ ಅಲ್ಲಿನ ರೈತ ಕುಟುಂಬಗಳನ್ನು ನೋಡಿ ಗಾಂಧೀಜಿ ತಮ್ಮ ಉಡುಪಿನ ರೀತಿಯನ್ನು ಬದಲಾಯಿಸಿಕೊಂಡರು. ಭಾರತದ ಬಡಜನರನ್ನು ಪ್ರತಿಬಿಂಬಿಸುವಂತೆ ಮೋಟು ಪಂಚೆ ಮತ್ತು ಅಂಗವಸ್ತ್ರ ಹೊದ್ದೇ ಅವರು ತಮ್ಮೆಲ್ಲಾ ಜೀವನ ಕಳೆದರು. ಇಂಗ್ಲೆಂಡಿಗೆ ಹೋದಾಗಲೂ ತಮ್ಮ ಅರೆನಗ್ನ ಉಡುಪನ್ನು ಬದಲಾಯಿಸಲಿಲ್ಲ.

ಈ ಸುಧಾರಣಾ ಕಾರ್ಯಗಳಿಗಾಗಿ ಗಾಂಧಿ ಇನ್ನೂ ಕೆಲವರ್ಷಗಳ ಕಾಲ ಅಲ್ಲೇ ಇರಬಯಸಿದ್ದರು. ಆದರೆ ಕಾರ್ಯನಿಮಿತ್ತ ಅಹಮದಾಬಾದಿಗೆ ತುರ್ತಾಗಿ ಹೋಗಲೇಬೇಕಾಯಿತು.

ಗಾಂಧಿ ಅಹಮದಾಬಾದಿನಲ್ಲಿದ್ದ ಸತ್ಯಾಗ್ರಹ ಆಶ್ರಮಕ್ಕೆ ಬಂದಾಗ ಆಶ್ರಮದ ಸುತ್ತಮುತ್ತಲ ಕೆಲ ಪ್ರದೇಶದಲ್ಲಿ ಭೀಕರ ಪ್ಲೇಗು ಹರಡಿದೆ ಎಂದು ತಿಳಿದುಬಂತು. ಆಶ್ರಮ ಇದ್ದ ಕೋಚಾರ್ ಗ್ರಾಮದಲ್ಲೂ ಹಲವು ಜನ ಇದಕ್ಕೆ ತುತ್ತಾಗಿ ಪ್ರಾಣ ತೆತ್ತಿದ್ದರು. ಆಶ್ರಮದ ಜನರನ್ನು ಈ ಪ್ಲೇಗ್ ಮಾರಿಯಿಂದ ತಪ್ಪಿಸಬೇಕಾದರೆ ಆಶ್ರಮವನ್ನೇ ಬೇರೆಡೆಗೆ ಸಾಗಿಸಬೇಕೆಂದು ನಿಶ್ಚಯಿಸಿದರು. ಇದಕ್ಕೆ ಸೂಕ್ತವಾದ ಸ್ಥಳವನ್ನು ಹುಡುಕಲು ಅವರ ಮಿತ್ರರನ್ನು ವಿನಂತಿಸಿ ಕೊಂಡರು. ಪಂಜಾಬಿನ ಹೀರಾಚಂದ್ ಎಂಬುವವರು ಆಶ್ರಮದ ಹಿತಚಿಂತಕ ರಾಗಿದ್ದರು. ಅವರು ಖ್ಯಾತ ವ್ಯಾಪಾರಿಯೂ ಆಗಿದ್ದುದರಿಂದ ಅವರಿಗೆ ಸುತ್ತ ಮುತ್ತಲ ಪ್ರದೇಶಗಳು ಹಾಗೂ ಜನರ ಪೂರ್ಣ ಪರಿಚಯವಿತ್ತು. ಈ ವಿಷಯ ದಲ್ಲಿ ಅವರು ತುಂಬಾ ಆಸಕ್ತಿ ವಹಿಸಿ ಕೆಲವೇ ದಿನಗಳಲ್ಲಿ ಸಬರಮತಿ ನದೀ ತೀರದಲ್ಲಿ ಸಬರಮತಿ ಜೈಲಿನ ಬದಿಯಲ್ಲಿ ಒಂದು ಸ್ಥಳವನ್ನು ಆರಿಸಿದರು. ಅದು ಬಯಲು ಪ್ರದೇಶವಾಗಿದ್ದು ಚೊಕ್ಕಟವಾಗಿತ್ತು. ಅಹಮದಾಬಾದ್‌ನಿಂದ ಕೇವಲ ನಾಲ್ಕು ಮೈಲಿ ದೂರದಲ್ಲಿತ್ತು. ಗಾಂಧಿ ತನ್ನ ಕೆಲ ಆಪ್ತರೊಡನೆ ಆ ಸ್ಥಳವನ್ನು ಪರೀಕ್ಷಿಸಿ ಕೂಡಲೇ ಒಪ್ಪಿಗೆಯನ್ನೂ ಕೊಟ್ಟುಬಿಟ್ಟರು. ಎಂಟು ದಿನಗಳಲ್ಲಿ ಆ ಸ್ಥಳವನ್ನು ಕೊಂಡು ಕಾಗದ ಪತ್ರಗಳು ರಿಜಿಸ್ಟರ್ ಸಹ ಆಗಿ ಹೋಯಿತು.

ಬಹು ಶೀಘ್ರವಾಗಿ ಆಶ್ರಮವನ್ನು ಸ್ಥಳಾಂತರಿಸಬೇಕಾಗಿದ್ದುದರಿಂದ ಕಟ್ಟಡಕಟ್ಟಿ ಬರುವುದು ದುಸ್ಸಾಧ್ಯವಾಗಿತ್ತು. ಆದ್ದರಿಂದ ತಗಡಿನಲ್ಲಿ ಅಡಿಗೆ

ಮನೆಯನ್ನು ತುರ್ತಾಗಿ ನಿರ್ಮಿಸಿ, ತಟಿಕೆ ಮನೆಯನ್ನು ಆಶ್ರಮವಾಸಿಗಳಿಗೆ ಕಟ್ಟುವುದೆಂದು ತೀರ್ಮಾನಿಸಲಾಯಿತು. ಆಗ ಆಶ್ರಮದಲ್ಲಿ ಗಂಡು, ಹೆಣ್ಣು ಮಕ್ಕಳು ಎಲ್ಲರೂ ಸೇರಿ ನಲವತ್ತು ಜನರಿದ್ದರು. ಆಶ್ರಮವಾಸಿಗಳು, ಹಳ್ಳಿಗರ ಸಹಕಾರದಿಂದ ಮಗನ್‌ಲಾಲ್‌ರ ನೇತೃತ್ವದಲ್ಲಿ ವಸತಿ ಗೃಹಗಳನ್ನು ನಾಲ್ಕೇ ದಿನದಲ್ಲಿ ನಿರ್ಮಿಸಿದರು. ಕಸ್ತೂರಬಾ ಆಶ್ರಮದಲ್ಲಿ ಎಲ್ಲರಿಗೂ ತಾಯಿಯ ಮಮತೆ, ವಾತ್ಸಲ್ಯ ಉಣಿಸುತ್ತಿದ್ದರು. ಅಡಿಗೆ ಶಾಲೆಯ ಕೆಲಸ ಕಾರ್ಯಗಳನ್ನೆಲ್ಲಾ ಅವರೇ ನಿರ್ವಹಿಸುತ್ತಿದ್ದರು.

ನದಿಯ ತೀರದಲ್ಲಿದ್ದ ಈ ಆಶ್ರಮದ ಸುತ್ತ ಬಯಲು ಪ್ರದೇಶವಿದ್ದು, ಹುಲ್ಲು ಹಾಗೂ ಕುರುಚಲು ಗಿಡಗಳಿದ್ದವು. ಹಾವುಗಳೂ ವಾಸವಾಗಿದ್ದವು. ಯಾವ ಕಾರಣಕ್ಕೂ ಹಾವುಗಳನ್ನು ಕೊಲ್ಲಬಾರದೆಂಬ ನಿಯಮ ಆಶ್ರಮದಲ್ಲಿತ್ತು. ಆದ್ದರಿಂದ ಅಲ್ಲಿನ ಜನ ಭಯದಿಂದಲೇ ಇರಬೇಕಾಗಿತ್ತು.

ಆಫ್ರಿಕಾದಲ್ಲಿನ ಫೀನಿಕ್ಸ್ ಮತ್ತು ಟಾಲ್‌ಸ್ಟಾಯ್ ಆಶ್ರಮಗಳಲ್ಲಿದ್ದಂತೆ ಇಲ್ಲೂ ಸಹ ಕೈಮಗ್ಗ, ಕೈ ಕಸುಬು ಮತ್ತು ಮಾತೃಭಾಷೆಯಲ್ಲೇ ಶಾಲೆ ನಡೆಸಲು ಯೋಚಿಸಲಾಗಿತ್ತು.

ಅಹಮದಾಬಾದಿನ ಮಿಲ್ ಕಾರ್ಮಿಕರ ಮುಷ್ಕರ ಮುಕ್ತಾಯವಾದೊಡನೆ ಆಶ್ರಮದಲ್ಲಿ ಸ್ಥಿರ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಸಿದರು.

ಕೆಲವೇ ದಿನಗಳಲ್ಲಿ ಹೊಸ ಸತ್ಯಾಗ್ರಹ ಆಶ್ರಮ ಸಬರಮತಿ ನದೀತೀರದಲ್ಲಿ ನಿರ್ಮಾಣಗೊಂಡು ಇಂದಿಗೂ ಗಾಂಧಿಯವರ ಹೆಸರನ್ನು ಹಾಗೂ ಅವರ ಆದರ್ಶಗಳನ್ನು ಅಮರವಾಗುಳಿಸಿಕೊಂಡು ನಿಂತಿದೆ. ಅಹಮದಾಬಾದ್‌ನಲ್ಲಿ ಬಟ್ಟೆಗಿರಣಿ ಮಾಲೀಕರು ಹಾಗೂ ಕೂಲಿಗಾರರ ಮಧ್ಯೆ ವಿರಸ ಉಂಟಾಗಿದ್ದು ಅದು ವಿಕೋಪಕ್ಕೆ ಹೋಗಿತ್ತು. ಕೂಲಿಗಾರರು ಗಿರಣಿಗೆ ಹೋಗದೆ ೩-೪ ವಾರಗಳಿಂದ ಧರಣಿ ಕುಳಿತಿದ್ದರು. ಮಾಲೀಕರು ಕೂಲಿಗಾರರ ಬೇಡಿಕೆಗಳಿಗೆ ಮಣಿಯದೆ ಕೂಲಿಗಾರರನ್ನು ಮಣಿಸಲು ಎಲ್ಲಾ ತರಹ ಒತ್ತಡ ತರುತ್ತಿದ್ದರು. ಹಾಗೂ ರೌಡಿಗಳಿಂದ ಉಪಟಳ ಕೊಡಲು ಪ್ರಾರಂಭಿಸಿದ್ದರು. ಆಗ ಗಿರಣಿ ಕೂಲಿಗಾರರಲ್ಲಿದ್ದ ಉತ್ಸಾಹ, ಸ್ಥೈರ್ಯ, ಕುದಿಯುತ್ತಿದ್ದ ಮಾಲೀಕರ ಮೇಲಿನ ಕೋಪ, ತಣ್ಣಗಾಗಹತ್ತಿತ್ತು. ಕೂಲಿಗಾರರ ನೈಜ ಬೇಡಿಕೆಗಳಿಗೆ ಸೋಲುಂಟಾಗುವ ಸಂಭವ ಕಂಡು ಬಂದುದರಿಂದ ಗಾಂಧಿ, ಕಾರ್ಮಿಕರಿಗೆ ಮಾನಸಿಕ ಧೈರ್ಯ

ತುಂಬುವ ಸಲುವಾಗಿ ಆಮರಣಾಂತ ಉಪವಾಸ ಮಾಡುವುದಾಗಿ ಘೋಷಿಸಿದರು. ಮೂರು ದಿನ ಉಪವಾಸಸತ್ಯಾಗ್ರಹ ಮುಂದುವರಿಯುವಷ್ಟರಲ್ಲಿ ಮಿಲ್ ಮಾಲೀಕರು ಕಾರ್ಮಿಕರ ಬೇಡಿಕೆಗಳಿಗೆ ಒಪ್ಪಿಗೆಯನ್ನು ನೀಡಿದರು. ಚಳುವಳಿ ಅಂತ್ಯಗೊಂಡು ಕಾರ್ಮಿಕರು ಸಂತಸದಿಂದ ಕೆಲಸಕ್ಕೆ ಹಾಜರಾದರು.

ಭಾರತದ ನೆಲದಲ್ಲಿ ಗಾಂಧೀಜಿ ಮಾಡಿದ ಮೊದಲ ಉಪವಾಸ ಇದಾಗಿತ್ತು. ಅಹಿಂಸಾತ್ಮಕ ಈ ಉಪವಾಸಸತ್ಯಾಗ್ರಹ ಗಾಂಧೀಜಿಯವರ ಬತ್ತಳಿಕೆಯಲ್ಲಿನ ಬಹು ಉಪಯುಕ್ತ ಅಸ್ತ್ರವಾಗಿ ರೂಪುಗೊಂಡಿತ್ತು.

ಈ ಸತ್ಯಾಗ್ರಹ ಮುಗಿಯುತ್ತಿದ್ದಂತೆಯೇ ೧೯೧೮ರ ಮಾರ್ಚ್ ತಿಂಗಳಲ್ಲಿ ಗಾಂಧೀಜಿ ಖೇಡಾದಲ್ಲಿನ ರೈತರ ಸತ್ಯಾಗ್ರಹದಲ್ಲಿ ಭಾಗವಹಿಸಬೇಕಾಯಿತು.

ಖೇಡಾಪ್ರಾಂತದಲ್ಲಿ ಒಂದೆರಡು ವರ್ಷಗಳಿಂದ ಮಳೆಯಿಲ್ಲದೆ ರೈತರು ಬಹಳ ಬವಣೆ ಅನುಭವಿಸುತ್ತಿದ್ದರು. ಜನರಿಗೆ ಆಹಾರ, ದನಕರುಗಳಿಗೆ ಹುಲ್ಲು ನೀರಿಲ್ಲದೆ ಹಲವು ಸಾವುನೋವುಗಳುಂಟಾಗಿದ್ದವು. ಬರಗಾಲದ ಪರಿಸ್ಥಿತಿಯಲ್ಲಿ ಬೆಳೆಯು ನಾಲ್ಕು ಆಣೆಯ ಮಟ್ಟವನ್ನು ಮುಟ್ಟದಿದ್ದಾಗ ಲ್ಯಾಂಡ್‌ರೆವಿನ್ಯೂ ನಿಯಮದ ಪ್ರಕಾರ ನೆಲೆಗಂದಾಯಕ್ಕೆ ವಿನಾಯಿತಿ ನೀಡಬೇಕಾಗುತ್ತದೆ. ಖೇಡಾ ಪ್ರದೇಶಗಳಲ್ಲಿ ಮಳೆ ಇಲ್ಲದೆ ಬೆಳೆಯು ಮಟ್ಟ ನಾಲ್ಕು ಆಣೆಗೂ ಕಡಿಮೆಯಾಗಿತ್ತು. ಬಹಳಷ್ಟು ಸ್ಥಳಗಳಲ್ಲಿ ಬೆಳೆ ಬಿಸಿಲಿನಿಂದ ಸುಟ್ಟು ಕರಕಲಾಗಿತ್ತು. ಆದರೂ ಸರಕಾರಿ ಅಧಿಕಾರಿಗಳು ಬೆಳೆಯ ಮಟ್ಟ ನಾಲ್ಕು ಆಣೆಗೆ ಮೇಲ್ಮಟ್ಟದ್ದಿದೆ ಎಂದು ಸಾಧಿಸುತ್ತಾ ರೈತರಿಗೆ ಅಮಾನುಷ ರೀತಿಯಲ್ಲಿ ಕಿರುಕುಳ ಕೊಡತೊಡಗಿದ್ದರು. ಇದನ್ನು ಸಹಿಸದ ಗಾಂಧೀಜಿ ಮೊದಲು ರೆವಿನ್ಯೂ ಇಲಾಖೆಯ ಕಮೀಶನರೊಡನೆ ಈ ಬಗ್ಗೆ ಮಾತನಾಡಿದರು. ಅಲ್ಲೂ ಏನೂ ಪ್ರಯೋಜನವಾಗಲಿಲ್ಲ. ಇನ್ನೂ ಮೇಲಿನ ಅಧಿಕಾರಿಗಳಿಗೆ ಪತ್ರ ಬರೆದರೂ, ಅಲ್ಲಿಂದಲೂ ತೃಪ್ತಿಕರ ಪ್ರತ್ಯುತ್ತರ ಬರಲಿಲ್ಲ. ರೈತರ ಸ್ಥಿತಿ ದಿನದಿನಕ್ಕೆ ಶೋಚನೀಯವಾಗುತ್ತಿದ್ದುದರಿಂದ ಗಾಂಧಿ ಚಳುವಳಿ ನಡೆಸಲು ಸಜ್ಜಾದರು. ಈ ಸತ್ಯಾಗ್ರಹಕ್ಕೆ ವಲ್ಲಭಭಾಯಿಪಟೇಲ್, ಶ್ರೀಮತಿ ಅನಸೂಯ ಬಹೆನ್, ಮಹದೇವದೇಸಾಯಿ, ಇಂದುಲಾಲ್‌ಯಾಗ್ನಿಕ್ ಮುಂತಾದವರು ಗಾಂಧೀಜಿಗೆ ಸಹಯೋಗ ನೀಡಿದರು.

ನ್ಯಾಯಯುತವಾದ ಈ ಬೇಡಿಕೆಗೆ ಸರಕಾರ ಮಣಿಯಲೇಬೇಕಾಯಿತು.

ಭೂಕಂದಾಯ ಮನ್ನಾ ಆಯಿತು. ಗಾಂಧಿಯವರ ಚಳುವಳಿ ಜಯಗಳಿಸಿತು.

ಮೊದಲನೆ ಮಹಾಯುದ್ಧ ಸಮಯದಲ್ಲಿ ಭಾರತೀಯರು ಬ್ರಿಟಿಷ್ ಸರ್ಕಾರಕ್ಕೆ ನೀಡಿದ್ದ ಸಹಕಾರಕ್ಕೆ ಪ್ರತಿಯಾಗಿ ಬ್ರಿಟಿಷ್ ಪಾರ್ಲಿಮೆಂಟು ೧೯೧೯ರಲ್ಲಿ ಹೊಸ ಸುಧಾರಣೆಗಳನ್ನು ತರುವ ಕಾಯಿದೆಯನ್ನು ಪಾರ್ಲಿಮೆಂಟ್ ಅಂಗೀಕರಿಸಿ ೧೯೨೧ರಲ್ಲಿ ಅದು ಭಾರತದಲ್ಲಿ ಆಚರಣೆಗೆ ತಂದಿತು. ಇದರಿಂದ ಪ್ರಾಂತೀಯ ಸರಕಾರಗಳು ಪ್ರಜಾಪ್ರತಿನಿಧಿಗಳ ಆಡಳಿತಕ್ಕೆ ಒಳಪಡುವಂತಾಯಿತು. ಆದರೆ ಸರಕಾರದ ಪರಮಾಧಿಕಾರ ಗೌರ್ನರ್‌ಗಳ ಕೈಯಲ್ಲೇ ಇರುವಂತೆ ಕಾನೂನು ರೂಪಿಸಲಾಗಿತ್ತು.

ಗಾಂಧೀಜಿಯವರ ಅವಿರತ ಓಡಾಟ ಮತ್ತು ಅವಿಶ್ರಾಂತ ಶ್ರಮದಾನ ಕಾರ್ಯಕ್ರಮಗಳಿಂದಾಗಿ ಅವರು ತಮ್ಮ ಆರೋಗ್ಯದತ್ತ ಗಮನಕೊಡಲೇ ಆಗುತ್ತಿರಲಿಲ್ಲ. ಇದರಿಂದಾಗಿ ಅವರ ಆರೋಗ್ಯ ಚಂಪಾರಣದಿಂದ ಬಂದ ಮೇಲೆ ಕೆಟ್ಟಿತು. ರಕ್ತ ಭೇದಿ ಪ್ರಾರಂಭವಾಗಿ ಅವರ ಸಣಕಲು ಶರೀರ ಜರ್ಜರಿತಗೊಂಡಿತು. ವಲ್ಲಭಬಾಯಿ ಅವರ ಜೊತೆಯಲ್ಲಿ ಇವರೂ ನಾಡಿಯಾರ್‌ಗೆ ಹೋಗಲೇಬೇಕಾಗಿತ್ತು. ಅಲ್ಲಿ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಡಾಕ್ಟರು ಹಾಲು ಮತ್ತು ಮೊಟ್ಟೆಯನ್ನು ಸೇವಿಸಲೇಬೇಕೆಂದು ಹೇಳಿದರು. ಹಾಲು ಉಪಯುಕ್ತ ಆಹಾರವಲ್ಲವೆಂಬುದಾಗಿ ದಕ್ಷಿಣ ಆಫ್ರಿಕಾದಲ್ಲೇ ಅದನ್ನು ತ್ಯಜಿಸಿ ಬಂದಿದ್ದುದರಿಂದ ಅದನ್ನು ಸೇವಿಸಲು ನಿರಾಕರಿಸಿದರು. ಮೊಟ್ಟೆ ಮಾಂಸಾಹಾರ ಗುಂಪಿಗೆ ಸೇರುವುದಿಲ್ಲವೆಂದು ವೈಜ್ಞಾನಿಕವಾಗಿ ಸಮಜಾಯಿಸಿ ನೀಡಿದರೂ, ಡಾಕ್ಟರ ಮಾತನ್ನು ಒಪ್ಪಲು ಗಾಂಧಿ ಸಿದ್ಧರಿರಲಿಲ್ಲ. ಸಾಂಪ್ರದಾಯಿಕ ಮನೆತನದಿಂದ ಬಂದಿರುವ ತಾವು ಅದನ್ನು ಮುಟ್ಟಲು ಸಾಧ್ಯವಿಲ್ಲವೆಂದು ಹಟಹಿಡಿದರು. ಕೊನೆಗೆ ಡಾಕ್ಟರು ಮೇಕೆಯ ಹಾಲನ್ನು ಕುಡಿಯಲು ಒಪ್ಪಿಗೆ ನೀಡಿದರು. ಅಂದಿನಿಂದ ಜೀವನದ ಕೊನೆಯ ದಿನದವರೆಗೂ ಅವರು ಮೇಕೆಯ ಹಾಲು, ಕಡಲೆಕಾಯಿ ಬೀಜವನ್ನೇ ತಮ್ಮ ಮುಖ್ಯ ಆಹಾರವನ್ನಾಗಿ ಮಾಡಿಕೊಂಡರು. ಖ್ಯಾತ ವೈದ್ಯರಾದ ಡಾ. ದಲಾಲ್‌ರವರು ಇವರಿಗೆ ಫಿಶರ್‌ಗಾಗಿ ಆಪರೇಷನ್ ಮಾಡಿದರು. ಗುಣಮುಖ ರಾಗತೊಡಗಿದ್ದ ಗಾಂಧಿ ಒಂದು ದಿನ ವೃತ್ತಪತ್ರಿಕೆಯನ್ನು ನೋಡುತ್ತಿದ್ದಾಗ ರೌಲೆಟ್ ಕಮೀಷನ್ ವರದಿ ಅದರಲ್ಲಿ ಮುದ್ರಿತವಾಗಿತ್ತು. ಅದನ್ನು ಓದಿದೊಡನೆಯೇ ಗಾಂಧಿ ಗಾಬರಿಗೊಂಡರು. ಅದು ಕಾನೂನಾಗಿ

ಬಂದರೆ ಭಾರತಕ್ಕೆ ಬಹು ಕೆಡುಕುಂಟಾಗುತ್ತಿತ್ತು. ಈ ಶಾಸನದ ಆಧಾರದ ಮೇಲೆ ಸರಕಾರ ಯಾವ ಭಾರತೀಯನನ್ನಾದರೂ ರಾಜದ್ರೋಹಿ ಎಂಬ ಅನುಮಾನದ ಮೇಲೆ ಬಂಧಿಸಿ ಶಿಕ್ಷೆಗೆ ಒಳಪಡಿಸಬಹುದಿತ್ತು. ಈ ಶಿಕ್ಷೆಯ ವಿರುದ್ಧ ಅಪೀಲು ಮಾಡುವ ಹಕ್ಕು ಶಿಕ್ಷೆಗೆ ಒಳಗಾದವನಿಗಾಗಲಿ ಅಥವಾ ಅವನ ಪರವಾಗಿ ಯಾರಿಗೂ ಇರುವುದಿಲ್ಲ. ಇದರಂತೆ ಬ್ರಿಟಿಷ್ ಸರಕಾರ ದೇಶಾಭಿಮಾನಿಗಳನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು ರಾಜದ್ರೋಹಿಗಳೆಂದು ಕರೆದು ಸುಲಭವಾಗಿ ಶಿಕ್ಷೆ ವಿಧಿಸಬಹುದಿತ್ತು. ಗಾಂಧಿ ಇದನ್ನು ಓದಿದ ಕೂಡಲೇ ಶಂಕರಲಾಲ್ ಬನಕರ್; ಉಮರ್ ಸೊಬಾನಿ; ವಲ್ಲಭಬಾಯಿ; ಸರೋಜಿನಿ ನಾಯ್ಡು ; ಅನಸೂಯಬಹಿನ್ ಮುಂತಾದವರೊಡನೆ ಸಮಾಲೋಚಿಸಿದರು. ಎಲ್ಲರೂ ಕೂಡಲೇ ಇದನ್ನು ಉಗ್ರವಾಗಿ ಪ್ರತಿಭಟಿಸಲು ಸೂಚಿಸಿದರು. ಈ ಬಗ್ಗೆ ಎಲ್ಲರೂ ಪ್ರತಿಭಟನಾ ಕಾರ್ಯವನ್ನು ಕೈಗೊಳ್ಳುವ ಪ್ರಮಾಣ ವಚನ ಸ್ವೀಕರಿಸಿದರು. ಈ ಕಾರ್ಯವನ್ನು ಯಶಸ್ವಿಯಾಗಿ ನಡೆಸುವ ಸಲುವಾಗಿ 'ಸತ್ಯಾಗ್ರಹಸಭಾ' ಅಂದೇ ರೂಪುಗೊಂಡಿತು. ಗಾಂಧೀಜಿ ಅಧ್ಯಕ್ಷರಾಗಿ ಚುನಾಯಿತರಾದರು.

ಈ ಮಸೂದೆಯ ವಿರುದ್ಧ ಜನರ ಕ್ರೋಧ ಹೆಚ್ಚುತ್ತಿದ್ದಂತೆ ಚಳುವಳಿಯೂ ಉಗ್ರ ರೂಪ ತಾಳಿತು. ಹಲವೆಡೆ ಹರಡಿತು. ಈ ಚಳುವಳಿಯ ಕಾವು ಹೆಚ್ಚುತ್ತಿದ್ದಂತೆ ಸರಕಾರವೂ ಈ ಮಸೂದೆಯನ್ನು ಶೀಘ್ರವೇ ಕಾನೂನಾಗಿ ಪರಿವರ್ತಿಸಲು ಸನ್ನದ್ಧವಾಗುತ್ತಿತ್ತು.

ಗಾಂಧೀಜಿ ಈ ಮಸೂದೆಯ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿ ವೈಸ್‌ರಾಯರಿಗೂ ಒಂದು ಪತ್ರವನ್ನು ಬರೆದು, ಪತ್ರಿಕೆಗಳಿಗೂ ಇದನ್ನು ಬಿಡುಗಡೆ ಮಾಡಿದರು.

ಮದರಾಸಿನಲ್ಲಿದ್ದ ಕಸ್ತೂರಿರಂಗಐಯ್ಯಂಗಾರ್, ರಾಜಗೋಪಾಲಾಚಾರಿ ಮುಂತಾದವರೂ ಈ ಮಸೂದೆಯನ್ನು ವಿರೋಧಿಸಲು ಮುಂದಾದರು. ಗಾಂಧಿ ಮದರಾಸಿಗೆ ಹೋಗಿ ಇವರೊಡನೆಯೂ ಸಮಾಲೋಚಿಸಿ ರಾಷ್ಟ್ರಾದ್ಯಂತಾ ಹರತಾಳವನ್ನು ಘೋಷಿಸಲು ತೀರ್ಮಾನಿಸಿದರು. ಮಾರ್ಚ್ ೩೦, ೧೯೧೯ ಈ ಹರತಾಳ ನಡೆಸಲು ತೀರ್ಮಾನಿಸಿದರು. ರಾಷ್ಟ್ರಾದ್ಯಂತ ಈ ಬಗ್ಗೆ ತಿಳುವಳಿಕೆ ಕೊಡಲು ಸಮಯ ಸಾಲದೆಂದು ಕೆಲವರು

ಅಭಿಪ್ರಾಯಪಟ್ಟಿದ್ದರಿಂದ ಹರತಾಳದ ದಿನವನ್ನು ಏಪ್ರಿಲ್ ೬ಕ್ಕೆ ಮುಂದೂಡಿದರು. ವಿಸ್ತೃತ ಪ್ರಚಾರ ಕೈಗೊಂಡರು.

ರಾಷ್ಟ್ರಾದ್ಯಂತ ಈ ಹರತಾಳ ಬಹು ಯಶಸ್ವಿಯಾಗಿ ೨ ದಿನ ನಡೆದು ಸರಕಾರವನ್ನು ತಲ್ಲಣಗೊಳಿಸಿತು. ದೆಹಲಿಯಲ್ಲಿ ಈ ಹರತಾಳ ೩೦ನೇ ತಾರೀಖೇ ನಡೆದಿದ್ದರೆ ಇತರೆಡೆಗಳಲ್ಲಿ ನಿಗದಿತ ದಿನ ೬ನೇ ತಾರೀಖೇ ನಡೆದಿತ್ತು. ಈ ಹರತಾಳದ ಐತಿಹ್ಯವೆಂದರೆ ಹಿಂದೂ-ಮುಸ್ಲಿಂ ಆದಿಯಾಗಿ ಎಲ್ಲಾ ಜನಾಂಗದ ಜನರೂ ಒಟ್ಟಿಗೇ ಸೇರಿ ಇದನ್ನು ಯಶಸ್ವಿಗೊಳಿಸಿದ್ದರು. ಹಿಂದೂ-ಮುಸ್ಲಿಂ ಐಕ್ಯತೆಯ ಪ್ರಮಾಣ ವಚನವನ್ನು ಗಾಂಧಿಯೇ ಚೌಪಾತಿ ಸಮುದ್ರ ದಂಡೆಯಲ್ಲಿ ನೆರೆದಿದ್ದ ಜನಸಮೂಹಕ್ಕೆ ಬೋಧಿಸಿದ್ದರು. ಈ ಹರತಾಳದ ಜೊತೆಯಲ್ಲೇ ಕಾನೂನು ಉಲ್ಲಂಘನೆ ಚಳುವಳಿಯನ್ನು ಹಮ್ಮಿಕೊಂಡರೆ ಅದು ಹೆಚ್ಚು ಅರ್ಥವತ್ತಾಗುವುದೆಂದೂ, ಇದರ ಕಾವು ಸರಕಾರಕ್ಕೆ ಶೀಘ್ರವೇ ತಟ್ಟುವುದೆಂದೂ ಗಾಂಧಿ ಸೂಚಿಸಿ ಮೊದಲ ಹಂತವಾಗಿ ಉಪ್ಪಿನ ಮೇಲೆ ಹಾಕಿರುವ ತೆರಿಗೆಯನ್ನು ವಿರೋಧಿಸುವ, ಸಾಧ್ಯವಾದರೆ ಉಪ್ಪನ್ನು ಉತ್ಪಾದಿಸಿ ಸರಕಾರಕ್ಕೆ ಮುಖ ಭಂಗಮಾಡಬೇಕೆಂದೂ ಸೂಚಿಸಿದರು. ಹಾಗೆಯೇ ಸರಕಾರ ನಿಷೇಧಿಸಿರುವ ಪುಸ್ತಕಗಳನ್ನು ಮಾರಾಟ ಮಾಡಿ ಕಾನೂನು ಉಲ್ಲಂಘಿಸಬೇಕೆಂದು ಹೇಳಿ ನಿಷೇಧಕ್ಕೆ ಒಳಗಾಗಿದ್ದ ತಮ್ಮದೇ ಎರಡು ಪುಸ್ತಕಗಳನ್ನು ಮಾರಾಟಕ್ಕಿಟ್ಟರು. ಅದರ ಬೆಲೆ ಕೇವಲ ನಾಲ್ಕಾಣೆಯಾದರೆ ಬಹಳಷ್ಟು ಜನ ಹತ್ತು, ಇಪ್ಪತ್ತು, ಐವತ್ತು ರೂಪಾಯಿ ನೀಡಿ ಅದನ್ನು ಕೊಂಡರು. ಗಾಂಧಿ ಆ ಹಣವನ್ನೆಲ್ಲಾ 'ಕಾನೂನು ಉಲ್ಲಂಘನೆ' ಚಳುವಳಿಯ ಪ್ರಚಾರಕ್ಕಾಗಿ ಕಾದಿರಿಸಿದ್ದರು.

ಮೂರನೇ ದಿನ ಅಂದರೆ ೮ನೇ ತಾರೀಖು ಗಾಂಧಿ ಅಮೃತಸರ, ಮಥುರಾ, ಪಲ್‌ವಾಲ್ ಮುಂತಾದ ಸ್ಥಳಗಳಿಗೆ ಭೇಟಿ ನೀಡಿದರು. ಸರಕಾರ ಪಂಜಾಬ್ ಪ್ರಾಂತದೊಳಗೆ ಇವರು ಹೋಗುವುದನ್ನು ನಿಷೇಧಿಸಿತ್ತು. ಆದ್ದರಿಂದ ಪಲ್‌ವಾಲ್‌ಗೆ ಇವರು ಹೋದೊಡನೆಯೇ ಪೊಲೀಸರು ಇವರನ್ನು ದಸ್ತಗಿರಿ ಮಾಡಿ ಮುಂಬಯಿಗೆ ಇವರನ್ನು ಕಳುಹಿಸಲು ವ್ಯವಸ್ಥೆ ಮಾಡಿದರು.

ಮುಂಬಯಿಯಲ್ಲಿ ಗಾಂಧಿಯ ಬರುವನ್ನೇ ನಿರೀಕ್ಷಿಸುತ್ತಿದ್ದ ಅಗಾಧ ಜನಸ್ತೋಮ ಇವರನ್ನು ಕಂಡೊಡನೆಯೇ ಜಯಕಾರ ಮಾಡಿ 'ವಂದೇ ಮಾತರಂ, ಅಲ್ಲಾ ಹೋ ಅಕ್ಬರ್' ಎಂದು ಗಗನ ಮುಟ್ಟುವಂತೆ ಕೂಗಿದರು. ಈ

ಗುಂಪನ್ನು ಚದುರಿಸಲು ಪೊಲೀಸರ ಕುದುರೆ ದಂಡು ಬಂದು ಅಡ್ಡಾದಿಡ್ಡಿ ಜನಗಳತ್ತ ನುಗ್ಗಿಸಿದರು. ಹಲವು ಜನ ಕುದುರೆ ಕಾಲಿಗೆ ಸಿಕ್ಕಿ ಗಾಯಗೊಂಡರು. ನೂಕು ನುಗ್ಗಲಲ್ಲಿ ಸಿಲುಕಿ ನೂರಾರು ಜನ ನರಳಿದರು. ಜನರ ಆಕ್ರಂದನ ಕಿರುಚಾಟ ಗಗನ ಮುಟ್ಟುತ್ತಿತ್ತು.

ಈ ಗಲಾಟೆಯ ಮಧ್ಯೆ ತೂರಿ ಸಾಗಿದ ಗಾಂಧಿ ಕುಳಿತಿದ್ದ ಕಾರು, ಪೊಲೀಸ್ ಕಮೀಷನರ್‌ರವರ ಆಫೀಸಿನ ಬಳಿ ಬಂದಾಗ ಪೊಲೀಸರ ಅನಾಗರಿಕ ವರ್ತನೆ ಬಗ್ಗೆ ದೂರು ನೀಡಲು ಗಾಂಧಿ ಅಲ್ಲೇ ಇಳಿದರು.

ಕಮೀಷನರ್‌ರವರ ಆಫೀಸಿಗೆ ಹೋದಾಗ ಈ ಸತ್ಯಾಗ್ರಹ ಪಂಜಾಬ್ ಮತ್ತು ಅಹಮದಾಬಾದ್‌ನಲ್ಲಿ ಉಗ್ರ ರೂಪ ತಾಳಿ ನೂರಾರು ಜನ ತೊಂದರೆಗೆ ಒಳಗಾದರೆಂದೂ, ಹಲವು ಮಂದಿ ಪೊಲೀಸರೂ ಈ ಗಲಾಟೆಯಲ್ಲಿ ಗಾಯಗೊಂಡರೆಂದೂ, ಅದಕ್ಕೇ ಗಾಂಧಿ ಪಂಜಾಬ್‌ಗೆ ಹೋಗುವುದನ್ನು ನಿಷೇಧಿಸಬೇಕಾಯಿತೆಂದೂ ಕಮೀಷನರ್ ತಿಳಿಸಿದರು. ಗಾಂಧಿಯನ್ನು ಅತ್ಯಂತ ಆತ್ಮೀಯವಾಗಿ ಪ್ರೀತಿಸುತ್ತಿದ್ದ ಅಹಮದಾಬಾದ್‌ನಲ್ಲಿ ನಡೆದ ಗಲಾಟೆಯಲ್ಲಿ 'ನಾಡಿಯಾರ್ ರೈಲ್ವೆ ಸ್ಟೇಷನ್‌ನ ಮೇಲೆ ಕಾರ್ಮಿಕ ಚಳವಳಿಗಾರರು ಧಾಳಿ ನಡೆಸಿ ತುಂಬಾ ನಷ್ಟಮಾಡಿದ್ದುದು, ವಿರಾಮ್‌ಗಾಂ ನಗರದಲ್ಲಿ ಒಬ್ಬ ಸರಕಾರಿ ಅಧಿಕಾರಿ ಕೊಲೆಯಾಗಿದ್ದುದು ಹಾಗೂ ಚಳುವಳಿಗಾರರು ಬಹಳ ಉಗ್ರರೂಪ ತಾಳಿ ಉಪಟಳ ಕೊಡಹತ್ತಿದುದರಿಂದ ಮಾರ್ಷಲ್‌ಲಾ ಜಾರಿಗೊಳಿಸ ಬೇಕಾಯಿತೆಂದು ಗಾಂಧಿ ಅಹಮದಾಬಾದಿಗೆ ಹೋದಾಗ ತಿಳಿದುಬಂತು. ನಗರದ ತುಂಬಾ ಭಯದ ವಾತಾವರಣ ಆವರಿಸಿತ್ತು. ಅಹಿಂಸಾತ್ಮಕವಾಗಿ ನಡೆಸಬೇಕೆಂದಿದ್ದ ಚಳುವಳಿ ಹೀಗೆ ಹಿಂಸಾತ್ಮಕರೂಪ ತಾಳಿದುದು ಗಾಂಧಿಯವರ ಮನಸ್ಸಿಗೆ ಬಹು ಬೇಸರ ತಂದಿತು. ನೋವುಂಟು ಮಾಡಿತು.

ಗಾಂಧಿ ಜನಗಳ ಪರವಾಗಿ ಸರ್ಕಾರದ ಕ್ಷಮಾಪಣೆ ಕೇಳಿ, ಚಳುವಳಿ ಯನ್ನು ಹಿಂತೆಗೆದುಕೊಂಡರು. ಇದು ಗಾಂಧಿಯ ಹಲವು ಮಿತ್ರರಿಗೆ ಸರಿಕಾಣಿಸಲಿಲ್ಲ.

ಸತ್ಯಾಗ್ರಹಿಗಳ ಮನಸ್ಸಿನಲ್ಲಿ ಅಹಿಂಸೆಯ ತುಡಿತ ಇಲ್ಲದಿದ್ದರೆ ಅವರು ಕಾರ್ಯಾಚರಣೆಯಲ್ಲಿ ಸಂಯಮ ಸಾಧಿಸಲಾರರು. ವಿಕೋಪದಿಂದ ಕಾವೇರಿದ ಮನಸ್ಸು ಬೀಭತ್ಸ ಕಾರ್ಯಕ್ಕೆ ಮುಂದಾಗುತ್ತದೆ. ಮನಸ್ಸಿನ ಸಮತೋಲನ

ಆಗ ಹಾಳಾಗುತ್ತದೆ. ಸಹನೆ ಜಾರಿಹೋಗಿರುತ್ತದೆ. ಅಂತಹ ಸಮಯದಲ್ಲಿ ಅವರಿಗೆ ಒಳ್ಳೆಯ ಮಾರ್ಗದರ್ಶನ ಬೇಕಾಗುತ್ತದೆ. ಚಳುವಳಿ ಹರಡಿದ ಎಲ್ಲಾ ಸ್ಥಳಗಳಲ್ಲೂ ಇಂತಹ ಮಾರ್ಗದರ್ಶನ ಕೊಡಲಾಗದ ಅಸಹಾಯಕತೆ ಅಥವಾ ಅಸಫಲತೆಗೆ ತಾನೇ ಕಾರಣನೆಂದು ಮನವರಿಕೆಯಾದಾಗ ಗಾಂಧಿ ಚಳುವಳಿಯನ್ನು ಹಿಂದಕ್ಕೆ ಪಡೆದು ಶಾಂತಿ ನೆಲೆಸಲು ಅನುವು ಮಾಡಿಕೊಟ್ಟರು.

ಮುಂದಾಲೋಚನೆ ಇಲ್ಲದೆ ದುಡುಕಿ ಸತ್ಯಾಗ್ರಹವನ್ನು ಆರಂಭಿಸಿದ್ದು ಹಿಮಾಲಯದಂಥ ತಪ್ಪು ಲೆಕ್ಕಾಚಾರ ಎಂದು ಗಾಂಧಿ ಪರಿತಾಪಪಟ್ಟರು. ಜನತೆಗೆ ಈ ದಿಸೆಯಲ್ಲಿ ಹೆಚ್ಚಿನ ಶಿಕ್ಷಣ ನೀಡಬೇಕಾದ್ದು ಅವಶ್ಯಕ ಎಂದು ಮನಗಂಡರು.

ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದರ ಬಗ್ಗೆ ಗಾಂಧಿಯವರಿಗೆ ಎಷ್ಟು ಆಸಕ್ತಿ ಇತ್ತೋ, ಅಷ್ಟೇ ಆಸಕ್ತಿ ಪತ್ರಿಕೆ ನಡೆಸುವುದರಲ್ಲೂ ಅವರಿಗೆ ಇತ್ತು ಎಂಬುದು ಅವರ ದಕ್ಷಿಣ ಆಫ್ರಿಕಾದಲ್ಲಿನ ಜೀವನ ಕ್ರಮವನ್ನು ಅಭ್ಯಸಿಸಿದವರಿಗೆಲ್ಲಾ ಅರ್ಥವಾಗಿದೆ. ಬಹು ಸಮರ್ಥ ರೀತಿಯಲ್ಲಿ ಅವರು 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ನಡೆಸಿದ್ದೇ ಸಾಕ್ಷಿಯಾಗಿದೆ.

ಭಾರತದಲ್ಲಿನ ಹೆಸರಾಂತ ಕಂಪೆನಿಯೊಂದರ ವ್ಯವಸ್ಥಾಪಕರಾದ ಉಮರ್‌ಸೊಬಾನಿ ಮತ್ತು ಶಂಕರ್‌ಲಾಲ್ ಬೆನಕರ್‌ರವರು ತಮ್ಮ ಖ್ಯಾತ ಪತ್ರಿಕೆ 'ಬಾಂಬೆ ಕ್ರಾನಿಕಲ್'ನ ಸಂಪಾದಕರಾಗಿದ್ದ ಖ್ಯಾತ ಪತ್ರಿಕೋದ್ಯಮಿ ಶ್ರೀ ಹಾರ್ನಿಮನ್‌ರವರನ್ನು ಬದಲಿಸಿ ಗಾಂಧಿಯವರಿಗೆ ಆ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಟ್ಟರು. ಈ ಪತ್ರಿಕೆಯಲ್ಲಿನ ಲೇಖನಗಳಿಂದ ಅಸಂತೋಷಗೊಂಡಿದ್ದ ಭಾರತಸರ್ಕಾರ, ಆ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸುವಂತೆ ಆದೇಶ ಹೊರಡಿಸಿತು. ಇದೇ ಸಂಸ್ಥೆ 'ಯಂಗ್ ಇಂಡಿಯಾ' ಎಂಬ ಮಾಸಿಕ ಪತ್ರಿಕೆಯನ್ನು ನಡೆಸುತ್ತಿತ್ತು. ಗಾಂಧಿಯವರಿಗೆ ಈ ಸಂಸ್ಥೆ ಇದರ ಸಂಪಾದನೆಯ ಜವಾಬ್ದಾರಿಯನ್ನೂ ವಹಿಸಿತು. ಅಹಮದಾಬಾದಿನಿಂದ ಇದೇ ಸಂಸ್ಥೆಯ ಆಡಳಿತದಲ್ಲಿ ನಡೆಯುತ್ತಿದ್ದ ಗುಜರಾತಿ ಭಾಷೆಯ 'ನವಜೀವನ್' ಮಾಸಿಕ ಪತ್ರಿಕೆಯನ್ನು ನಡೆಸುವ ಜವಾಬ್ದಾರಿಯನ್ನು ಗಾಂಧಿಯವರಿಗೆ ವಹಿಸಿತು. 'ನವಜೀವನ್' ಅಹಮದಾಬಾದಿನಲ್ಲಿ 'ಯಂಗ್-ಇಂಡಿಯಾ' ಮುಂಬಯಿಯಲ್ಲಿದ್ದುದರಿಂದ ಗಾಂಧಿ 'ಯಂಗ್‌ಇಂಡಿಯಾ' ಪತ್ರಿಕಾ ನಿಲಯವನ್ನು

ಅಹಮದಾಬಾದಿಗೆ ವರ್ಗಾಯಿಸಲು ಸಂಸ್ಥೆಗೆ ಸೂಚಿಸಿದರು. ಎರಡೂ ಪತ್ರಿಕೆಗಳೂ ಅಹಮದಾಬಾದಿನಿಂದಲೇ ಪ್ರಕಟಗೊಳ್ಳಲು ಪ್ರಾರಂಭಗೊಂಡವು.

'ಸತ್ಯಾಗ್ರಹ' ತತ್ವ ಮತ್ತು ಸಿದ್ಧಾಂತಗಳ ಬಗ್ಗೆ ಜನರಿಗೆ ಮಾಹಿತಿ ಒದಗಿಸಲು ಹಾಗೂ ಸತ್ಯಾಗ್ರಹ ನಡೆಸುವ ಕಾಲದಲ್ಲಿ ಅನುಸರಿಸಬೇಕಾದ ನಡಾವಳಿ ತಿಳಿಸಲು ಕಾತುರರಾಗಿದ್ದ ಗಾಂಧಿಯವರಿಗೆ ಈ ಪತ್ರಿಕೆಗಳು ಸಿಕ್ಕಿದ್ದು ಬಹು ಸಂತೋಷವಾಯಿತು. ಪಂಜಾಬಿನಲ್ಲಿ ಮಾರ್ಷಲ್‌ಲಾ ಹೇರಿದ್ದ ಕಾಲದಲ್ಲಿ ನಡೆದಿದ್ದ ಅತ್ಯಾಚಾರಗಳ ಬಗ್ಗೆ ನಿಷ್ಪಕ್ಷಪಾತ ಚಿತ್ರಣವನ್ನು ನೀಡಲು ಪ್ರಾರಂಭಿಸಿ, ಬ್ರಿಟಿಷರು ನಡೆಸಿದ್ದ ನರಮೇಧ ಹಾಗೂ ಅತ್ಯಾಚಾರದ ನಗ್ನ ಪರಿಚಯವನ್ನು ಜನತೆಗೆ ಮಾಡಿಕೊಟ್ಟರು. ಜೊತೆ ಜೊತೆಯಲ್ಲೇ 'ಅಹಿಂಸೆ'ಯ ಮಹತ್ವವನ್ನು ತಿಳಿಯಪಡಿಸಿದರು.

◆ ◆ ◆

ಗಾಂಧೀ ಟೋಪಿ !

ಇಂದು ಜನಪ್ರಿಯವಾಗಿರುವ ಗಾಂಧೀ ಟೋಪಿಯನ್ನು ಮಹಾತ್ಮ ಗಾಂಧಿಯವರು ಧರಿಸುತ್ತಿದ್ದ ಸಮಯ. ಗಾಂಧೀಜಿ ಒಂದು ಸಮಾರಂಭದಲ್ಲಿ ತಮ್ಮ ತಲೆಗೆ ಟೋಪಿಯನ್ನು ಹಾಕಿಕೊಂಡು ಕುಳಿತಿದ್ದರಂತೆ ಚಪ್ಪರದೊಳಗೆ ಯಾವನೋ ಒಬ್ಬ ಬಂದುದನ್ನು ಕಂಡ ತಕ್ಷಣ ತಮ್ಮ ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ಕೆಳಗೆ ಇಟ್ಟು ಬಿಟ್ಟಾಗ ಪಕ್ಕದಲ್ಲಿದ್ದ ಅಧ್ಯಕ್ಷರು "ಗಾಂಧೀಜಿ, ನೀವು ಎಂದೂ ಟೋಪಿಯನ್ನು ತೆಗೆದವರಲ್ಲ; ಇಂದೇಕೆ ಇದನ್ನು ತೆಗೆದಿರಿ ?" ಎಂದು ಪ್ರಶ್ನಿಸಿದಾಗ ಗಾಂಧೀಜಿ ಉತ್ತರಿಸಿದರು. "ಈಗ ತಾನೇ ಒಬ್ಬ ಭ್ರಷ್ಟ ರಾಜಕಾರಣಿಯೊಬ್ಬ ಅದನ್ನು ತಲೆ ಮೇಲೆ ಧರಿಸಿದ್ದನ್ನು ನೋಡಿದೆ; ಹೀಗಾಗಿ ಇಂದಿನಿಂದ ಈ ಟೋಪಿಗೆ ನನ್ನ ತಲೆಯ ಮೇಲೆ ಸ್ಥಾನವಿಲ್ಲ !"

('ಹೀಗಿದ್ದರು ಬಾಪೂ' – ಸಂಗ್ರಾಹಕ : ಟಿ.ವಿ. ವೆಂಕಟರಮಣಯ್ಯ)

೧೩. ಜಲಿಯನ್‌ವಾಲಾಬಾಗ್ ಹತ್ಯಾಕಾಂಡ

ರೌಲೆಟ್ ಕಾಯಿದೆಯನ್ನು ಪ್ರತಿಭಟಿಸುವುದಕ್ಕಾಗಿ ಏಪ್ರಿಲ್ ೬, ೧೯೧೯ರಂದು ಪಂಜಾಬ್ ಪ್ರಾಂತದಾದ್ಯಂತ ಶಾಂತ ರೀತಿಯ ಚಳುವಳಿಗಳು ನಡೆದವು. ಹರತಾಳ ಆಚರಿಸಲ್ಪಟ್ಟಿತು. ಯಾವುದೇ ಗಲಭೆ, ಗೊಂದಲ ಎಲ್ಲೂ ನಡೆಯಲಿಲ್ಲ. ಏಪ್ರಿಲ್ ೯ ರಂದು ನಿಷೇಧಪರ ಸಭೆ ನಡೆದಾಗ ಡಾ. ಕಿಚಲೂ, ಡಾ. ಸತ್ಯಪಾಲ, ಡಾ. ಅನ್ಸಾರಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ ಅವರನ್ನೆಲ್ಲಾ ಬಂಧಿಸಲಾಯಿತು. ಇದನ್ನು ಜನ ವಿರೋಧಿಸಿದರು. ಪೊಲೀಸರು ಜನರನ್ನು ಚದುರಿಸಲು ಪ್ರಯತ್ನಿಸಿದಾಗ ಗಲಾಟೆ, ಗೊಂದಲ, ಕಲ್ಲುತೂರಾಟ ಪ್ರಾರಂಭವಾಯಿತು. ಇದಕ್ಕೆ ಪ್ರತಿಯಾಗಿ ಪೊಲೀಸರು ಗುಂಡು ಹಾರಿಸಿದರು. ಹತ್ತಾರು ಜನರು ಸತ್ತರು. ನೂರಾರು ಜನ ಗಾಯಗೊಂಡರು. ಇಬ್ಬರು ಇಂಗ್ಲಿಷರು ಈ ಗೊಂದಲದಲ್ಲಿ ಸತ್ತರು. ಸರಕಾರ ರೊಚ್ಚಿಗೆದ್ದು ಸೈನಿಕರ ಬೆಟಾಲಿಯನ್ನನ್ನೇ ಕರೆಸಿತು. ಜನಗಳು ಶಾಂತರಾಗಿಯೇ ಇದ್ದರು. ಪ್ರಚೋದನಕಾರಿ ಚಟುವಟಿಕೆಯನ್ನು ಕಿಂಚಿತ್ತೂ ನಡೆಸಲಿಲ್ಲ. ಏಪ್ರಿಲ್ ೧೩, ೧೯೧೯ ಭಾರತದ ಇತಿಹಾಸದಲ್ಲಿನ ದುರ್ದಿನ. ಜನರಲ್ ಡಾಯರ್ ಎಂಬ ಬ್ರಿಟಿಷ್ ಅಧಿಕಾರಿ ಅಂದು ಪಂಜಾಬಿಗೆ ಬಂದು ಸೈನಿಕ ಅಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದ. ಪಂಜಾಬಿನಲ್ಲಿನ ಅಸಹಕಾರ ಚಳುವಳಿಯನ್ನು ಹುಟ್ಟಡಗಿಸಿ, ಹರತಾಳ ಎಲ್ಲೂ ನಡೆಯದಂತೆ ನೋಡಿಕೊಳ್ಳುತ್ತೇನೆಂದು ಪ್ರತಿಜ್ಞೆ ಮಾಡಿ ಬಂದಿದ್ದ. ಅಮೃತಸರದಲ್ಲಿ ಕರ್ಫ್ಯೂ ಜಾರಿಗೊಳಿಸಿದ. ಈ ಬಗ್ಗೆ ಏನೊಂದೂ ತಿಳಿಯದ ಮುಗ್ಧಜನ ಸುತ್ತಮುತ್ತಲ ಪ್ರದೇಶಗಳಿಂದ ಬಂದು ಜಲಿಯನ್‌ವಾಲಾಬಾಗ್ ಎಂಬ ಪ್ರದೇಶದಲ್ಲಿ ಸರ್ಕಾರದ ದೌರ್ಜನ್ಯವನ್ನು ಖಂಡಿಸಲು ಅಮಿತ ಸಂಖ್ಯೆಯಲ್ಲಿ ಸೇರಿದ್ದರು. ಇವರಲ್ಲಿ ಹೆಂಗಸರೂ ಮಕ್ಕಳೂ ಇದ್ದರು.

ಜಲಿಯನ್‌ವಾಲಾಬಾಗ್‌ನ ಸುತ್ತಲೂ ಮನೆಗಳಿದ್ದು ಅದಕ್ಕೆ ಬಂದು ಹೋಗಲು ಒಂದೇ ಒಂದು ಇಕ್ಕಟ್ಟಾದ ಬಾಗಿಲಿತ್ತು. ಸಭೆ ನಡೆಯುತ್ತಿರುವ

ಸಮಾಚಾರವನ್ನು ಕೇಳಿದ ಡಾಯರ್ ತೋಪುಗಳಿಂದ ಸಜ್ಜಾಗಿದ್ದ ಭಾರಿ ಸೈನ್ಯದೊಡನೆ ಅಲ್ಲಿಗೆ ಬಂದ. ಜನರಿಗೆ ಏನೊಂದು ಎಚ್ಚರಿಕೆಯನ್ನು ಕೊಡದೆ ಸೈನಿಕರಿಗೆ ಗುಂಡು ಮುಗಿಯುವ ತನಕ ಮುಗ್ಧ ಜನರ ಮೇಲೆ ಗುಂಡು ಹಾರಿಸಲು ಆದೇಶಿಸಿದ. ಒಮ್ಮೆಗೇ ಪ್ರಾರಂಭವಾದ ಈ ಘೋರ ಮಾರಣ ಹೋಮ ಕಂಡು ಗಾಬರಿಯಾದರು. ಚೆಲ್ಲಾಪಿಲ್ಲಿಯಾಗಿ ಓಡಿದ ಜನ ಹೊರಗೆ ಹೋಗಲು ಇದ್ದ ಒಂದೇ ಬಾಗಿಲಿನತ್ತ ಧಾವಿಸಿದರು. ಕಾಲ್ತುಳಿತಕ್ಕೆ ಸಿಕ್ಕಿ ಹಲವು ಮಕ್ಕಳು ಹೆಂಗಸರು ಸತ್ತರು. ಗುಂಡಿನ ಮಳೆಯನ್ನು ತಪ್ಪಿಸಿಕೊಳ್ಳಲು ಕೆಲವರು ಏನೂ ಮಾಡಲು ತೋಚದೆ ಅಲ್ಲೇ ಇದ್ದ ಬಾವಿಯೊಳಗೆ ಹಾರಿದರು. ಓಡಿದ ಜನರ ಮೇಲೆ ಸೈನಿಕರು ಮೆಷಿನ್‌ಗನ್‌ನಿಂದ ಗುಂಡಿನ ಮಳೆಯನ್ನೇ ಸುರಿಸಿದರು. ಜನರ ಆಕ್ರೋಶ, ಆಕ್ರಂದನ ಗುಂಡಿನ ಸದ್ದಿನಲ್ಲೇ ಕೆಲವೇ ನಿಮಿಷಗಳಲ್ಲಿ ಅಡಗಿಹೋಯಿತು. ಸುಮಾರು ನಾಲ್ಕುನೂರು ಜನ ಸತ್ತರು. ೧೨೦೦ಕ್ಕೂ ಹೆಚ್ಚು ಮಂದಿ ಗಾಯಗೊಂಡು ನೆಲದ ಮೇಲೆ ಬಿದ್ದು ಹೊರಳಾಡಿದರು.

ನಗರಾದ್ಯಂತ ಕರ್ಫ್ಯೂ ಇದ್ದು ವೈದ್ಯಕೀಯ ನೆರವೂ ಸಹ ಅವರಿಗೆ ದೊರೆಯದಂತೆ ಮಾಡಿ ಡಾಯರ್ ದೌರ್ಜನ್ಯ ಮೆರೆದ.

ಈ ಹತ್ಯಾಕಾಂಡ ಬ್ರಿಟಿಷರ ವಿನಾಶಕ್ಕೆ ನಾಂದಿ ಆಯಿತು. ಈ ಹತ್ಯಾಕಾಂಡದಿಂದ ಪಂಜಾಬಿಗಳು ಕೆರಳಿದ ಸಿಂಹಗಳಾಗಿದ್ದರು. ಬ್ರಿಟಿಷರ ಮೇಲೆ ಸೇಡು ತೀರಿಸಿಕೊಳ್ಳಲು ಹಲವರು ಪ್ರತಿಜ್ಞೆ ಮಾಡಿದರು. ಈ ಪ್ರತಿಜ್ಞೆಯನ್ನು ಉಧಾವ್ ಸಿಂಗ್ ಎಂಬುವನು, ಡಾಯರ್ ನಡೆಸಿದ ಕಗ್ಗೊಲೆಗೆ ಪ್ರೇರಕನಾಗಿಲ್ಲದೆ ಇದ್ದರೂ, ಪೋಷಕನಾಗಿದ್ದ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಮೈಕೆಲ್ ಒಡ್ವೈಯರ್ ಎಂಬಾತನನ್ನು ಲಂಡನ್ನಿನಲ್ಲಿ ಕೊಂದು ಸ್ವಇಚ್ಛೆಯಿಂದಲೇ ಬಂಧಿತನಾದ. ಅನಂತರ ನಗುನಗುತ್ತಲೇ ಮರಣ ದಂಡನೆಗೆ ತಲೆಯನ್ನೊಪ್ಪಿಸಿ ಹುತಾತ್ಮನಾದ. ಭಾರತದ ಸ್ವಾತಂತ್ರ್ಯಸಂಗ್ರಾಮ ಚರಿತ್ರೆಯಲ್ಲಿ ಇಂದು ಅಮರವಾಗುಳಿದಿದ್ದಾನೆ.

ಇಂದು ಜಲಿಯನ್‌ವಾಲಾಬಾಗ್‌ನಲ್ಲಿ ಹುತಾತ್ಮರಿಗಾಗಿ ಒಂದು ಸ್ಮಾರಕ ಏರ್ಪಟ್ಟಿದೆ. ಏಪ್ರಿಲ್ ೧೩ನೇ ದಿನವನ್ನು ಪಂಜಾಬಿನಲ್ಲಿ ಹುತಾತ್ಮ ದಿನವನ್ನಾಗಿ ಆಚರಿಸಲಾಗುತ್ತದೆ. ಕವಿ ರವೀಂದ್ರನಾಥಠಾಕೂರರು ಈ ಜಲಿಯನ್‌ವಾಲಾ

ಬಾಗ್ ಘಟನೆಯಿಂದ ದುಃಖಿತರಾಗಿ ತಮ್ಮ 'ಸರ್' ಪದವಿಯನ್ನು ಬ್ರಿಟಿಷ್ ಸರಕಾರಕ್ಕೆ ಹಿಂತಿರುಗಿಸಿದರು. ಗಾಂಧಿಯವರೂ ತಮ್ಮ 'ಕೈಸರ್-ಇ-ಹಿಂದ್' ಬಿರುದು ಪದಕ ಹಿಂತಿರುಗಿಸಿದರು.

ಪಂಜಾಬಿನಲ್ಲಿ ಬ್ರಿಟಿಷರು ನಡೆಸಿದ ಈ ಮಾರಣಹೋಮ ಕಾಂಗ್ರೆಸ್ಸಿನ ಆವರೆಗಿನ ಸ್ವರೂಪವನ್ನೇ ಬದಲಾಯಿಸಿತು. ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಂಡಲ್ಲದೆ ಬ್ರಿಟಿಷ್ ಸರಕಾರದ ಮನೋಭಾವವನ್ನು ಬದಲಾಯಿಸುವುದು ಸಾಧ್ಯವಿಲ್ಲವೆಂದು ಭಾರತೀಯರಿಗೆ ಮನದಟ್ಟಾಯಿತು. ಗಾಂಧಿಯವರ ನೇತೃತ್ವದಲ್ಲಿ ಸರ್ಕಾರದೊಂದಿಗೆ ಪೂರ್ಣರೂಪದಲ್ಲಿ ಅಸಹಕಾರ ತೋರಬೇಕೆಂದು ದೇಶ ನಿರ್ಣಯಿಸಿತು.

೧೯೨೦-೨೨ರವರೆಗೆ ರಾಷ್ಟ್ರಾದ್ಯಂತ ಉಗ್ರ ಅಸಹಕಾರ ಚಳವಳಿ ನಡೆಯಿತು. ಶಾಲಾ-ಕಾಲೇಜುಗಳ ಬಹಿಷ್ಕಾರ, ನ್ಯಾಯಾಲಯಗಳ ಬಹಿಷ್ಕಾರ, ಶಾಸನಸಭೆಗಳ ಬಹಿಷ್ಕಾರ ನಡೆದವು. ಗಾಂಧಿ ರಾಜದ್ರೋಹದ ಆಪಾದನೆಗೆ ಗುರಿಯಾಗಿ ಸೆರೆವಾಸ ಅನುಭವಿಸಿದರು. ೧೯೨೨ ರಲ್ಲಿ ಮುಂಬಯಿಯಲ್ಲಿ ಹಿಂದೂ-ಮುಸ್ಲಿಂ ಘರ್ಷಣೆ ಪ್ರಾರಂಭವಾದಾಗ ಶಾಂತಿಯನ್ನು ಕಾಪಾಡಲು ತಮ್ಮ ಮಗ ದೇವದಾಸ್ ಗಾಂಧಿಯನ್ನು ಕಳುಹಿಸಿಕೊಟ್ಟರು.

◆ ◆ ◆

ಸ್ವಾವಲಂಬನೆ

ಗಾಂಧೀಜಿ ಆಶ್ರಮದಲ್ಲಿ ಸ್ವಾವಲಂಬನೆಗೆ ಬಹಳ ಪ್ರಾಮುಖ್ಯವಿತ್ತು. ಪ್ರತಿಯೊಬ್ಬ ಆಶ್ರಮವಾಸಿಯೂ ತನ್ನ ಪಾಲಿನ ಹಿಟ್ಟನ್ನು ತಾನೇ ಬೀಸಬೇಕಾಗಿತ್ತು. ಆದರೆ ಹೊತ್ತಿಗೆ ಸರಿಯಾಗಿ ಯಾರಿಗೂ ಆ ಕೆಲಸ ಮಾಡಲಾಗುತ್ತಿರಲಿಲ್ಲ.

ಒಂದು ದಿನ ಹಿಟ್ಟೆಲ್ಲವೂ ಮುಗಿದು ಹೋಗಿತ್ತು. ಆಗ ಗಾಂಧೀಜಿ ಅವರೇ ಬೀಸುವ ಕಲ್ಲಿನ ಮುಂದೆ ಕುಳಿತು ಬೀಸ ಹತ್ತಿದರು. ಆಶ್ರಮವಾಸಿಗಳಲ್ಲಿ ಗೊಂದಲವೆದ್ದಿತು. ಎಲ್ಲರೂ ಜಾಗೃತರಾದರು. ತಮ್ಮ ಕರ್ತವ್ಯ ಚ್ಯುತಿಯ ಬಗ್ಗೆ ಪಶ್ಚಾತ್ತಾಪಪಡುತ್ತಾ ಗಾಂಧಿಯವರಲ್ಲಿ ಕ್ಷಮೆ ಯಾಚಿಸಿದರು. ಇನ್ನು ಮುಂದೆ ಹೀಗೆ ಮಾಡುವುದಿಲ್ಲವೆಂದು ವಚನವಿತ್ತರು.

('ಹೀಗಿದ್ದರು ಬಾಪೂ' ಸಂಗ್ರಾಹಕ : ಟಿ.ವಿ. ವೆಂಕಟರಮಣಯ್ಯ)

೧೪. ಖಿಲಾಫತ್ ಚಳುವಳಿ

ಜಗತ್ತಿನ ಎಲ್ಲಾ ಮುಸಲ್ಮಾನರೂ ತುರ್ಕಿಯ ಸುಲ್ತಾನ ಖಲೀಫನನ್ನು ತಮ್ಮ ಧರ್ಮಗುರು ಎಂದು ಭಾವಿಸಿದ್ದರು. ಒಂದನೇ ಮಹಾಯುದ್ಧದಲ್ಲಿ ಈ ಖಲೀಫ್ ಜರ್ಮನ್ನರಿಗೆ ಸಹಾಯ ಮಾಡಿದ್ದನು. ಆದ್ದರಿಂದ ಈ ಮಹಾಯುದ್ಧ ಮುಗಿದ ಮೇಲೆ ಮಿತ್ರ ರಾಷ್ಟ್ರಗಳು ಖಲೀಫನ ಅಧಿಕಾರವನ್ನು ಮೊಟಕುಗೊಳಿಸಬಹುದೆಂದು ಊಹಿಸಿ ಭಾರತದ ಮುಸಲ್ಮಾನರೂ ಸೇರಿದಂತೆ ಹಲವು ದೇಶಗಳಲ್ಲಿನ ಮುಸಲ್ಮಾನರು ಬ್ರಿಟಿಷ್ ಮಿತ್ರರಾಷ್ಟ್ರಗಳ ವಿರುದ್ಧ ಆಂದೋಲನ ನಡೆಸಲು ಸಜ್ಜಾದರು. ಭಾರತದಲ್ಲಿ ಅಲಿ ಸಹೋದರರು ಇದಕ್ಕೆ ನೇತೃತ್ವ ವಹಿಸಿದ್ದರು. ಈ ಸಂಬಂಧದಲ್ಲಿ ಮುಸಲ್ಮಾನರಿಗೆ ಸಹಾಯ ಮಾಡಬೇಕೆಂದು ಭಾರತದಲ್ಲಿನ ಮುಸ್ಲಿಂ ನಾಯಕರು ಗಾಂಧಿಯನ್ನು ಪ್ರಾರ್ಥಿಸಿದಾಗ ಅವರಿಗೆ ಈ ಬಗ್ಗೆ ಸಹಾಯವನ್ನು ಮಾಡುವ ಮನಸ್ಸಾದರೂ ಕಾಂಗ್ರೆಸ್‌ನ ಒಪ್ಪಿಗೆ ಇದಕ್ಕೆ ಅಗತ್ಯವೆಂದು ಈ ಪ್ರಸ್ತಾಪವನ್ನು ಸಂಸ್ಥೆಯ ಮುಂದೆ ಮಂಡಿಸಿದರು. ೧೯೨೦ನೇ ಸೆಪ್ಟೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ವಿಶೇಷ ಮಹಾಧಿವೇಶನದಲ್ಲಿ ಇದು ವ್ಯಾಪಕ ಚರ್ಚೆಗೆ ಗುರಿಯಾಯಿತು. ಇದೇ ವರ್ಷ ನಡೆದ ಅಖಿಲ ಭಾರತ ಮುಸ್ಲೀಂಲೀಗ್ ಸಮ್ಮೇಳನದಲ್ಲಿ ಡಾ. ಅನ್ಸಾರಿ ಅಧ್ಯಕ್ಷರಾಗಿದ್ದರು. ಗಾಂಧೀಜಿಯ ಪರಮಮಿತ್ರರಾಗಿದ್ದ ಇವರು ಗಾಂಧೀಜಿಯ ಎಲ್ಲಾ ಆಶಯಗಳನ್ನೂ ಸದಾ ಬೆಂಬಲಿಸುತ್ತಿದ್ದರು. ಇವರೇ ಮುಂದೆ ೧೯೨೩ರಲ್ಲಿ ಗಯೆಯಲ್ಲಿ ನಡೆದ 'ಖಿಲಾಫತ್' ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದರು. ಅಲ್ಲಿ ಅವರು ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಕರೆ ನೀಡಿದರು. ೧೯೨೭ರಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷಪೀಠದಿಂದ 'ಸ್ವರಾಜ್ಯ ಸ್ಥಾಪನೆ ಮಾರ್ಗದಲ್ಲಿ ಜಾತೀಯತೆ ಸಲ್ಲದು' ಎಂದೂ ಘೋಷಿಸಿದರು. ೧೯೩೦ರಲ್ಲಿ ಕಾಂಗ್ರೆಸ್ಸನ್ನು 'ಅಕ್ರಮಸಂಸ್ಥೆ'ಯೆಂದು ಸರಕಾರ ಸಾರಿದ ಸಂದರ್ಭದಲ್ಲಿ ಇವರು ಬಂಧಿಯಾಗಿ ಆರು ತಿಂಗಳು ಸೆರೆವಾಸ ಸಹ ಅನುಭವಿಸಿದರು.

ಕೊಟ್ಟ ಭಾಷೆಗೆ ತಪ್ಪಿ ನಡೆಯುವುದು ಬ್ರಿಟಿಷರ ಪ್ರವೃತ್ತಿಯೇ ಆಗಿರುವುದನ್ನು ಮನಗಂಡಿದ್ದ ಗಾಂಧಿ ಮತ್ತು ಕಾಂಗ್ರೆಸ್ ನಾಯಕರು ಮುಸ್ಲಿಮರಿಗೆ ಈ ಸಂದರ್ಭದಲ್ಲಿ ಸಹಾಯ ಮಾಡುವುದು ಉಚಿತವೆಂದು ಭಾವಿಸಿದರು. ಈ ಖಿಲಾಫತ್ ನ್ಯಾಯಕ್ಕಾಗಿ ಮುಸ್ಲಿಮರಿಗೆ ಸಹಾಯ ಮಾಡುವುದರಿಂದ ಸ್ವಾತಂತ್ರ್ಯಸಂಗ್ರಾಮಕ್ಕೆ ಅವರಿಂದ ಪೂರ್ಣ ರೀತಿಯ ಬೆಂಬಲ ನಿರೀಕ್ಷಿಸಬಹುದೆಂದು ಸಭೆ ಅಭಿಪ್ರಾಯಪಟ್ಟಿತು.

ರೌಲೆಟ್ ಕಾಯಿದೆಯಿಂದ ಅಸಂತೋಷಗೊಂಡಿದ್ದ ಜನ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಕಂಡು ಕೆರಳಿ ನಿಂತಿದ್ದರು.

ನಂಬಿಕೆ ದ್ರೋಹ ಬಗೆಯುವ ಹಾಗೂ ಭಾರತೀಯರ ನ್ಯಾಯಪರ ಚಳುವಳಿಯಲ್ಲಿ ಅಮಾನುಷವಾಗಿ ವರ್ತಿಸುತ್ತಿರುವ ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿಯನ್ನು ಹೂಡಲು ಇದೇ ಸಮಯವೆಂಬ ಗಾಂಧೀಜಿಯ ಸೂಚನೆಯನ್ನು ನಾಗಪುರದಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನ ಅಂಗೀಕರಿಸಿತು. ಈ ನಿರ್ಣಯವನ್ನು ಸಾಮೂಹಿಕವಾಗಿ ಕಾರ್ಯಗತಗೊಳಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡಿರುವುದು ಅಗತ್ಯವೆಂದು ಗಾಂಧಿ ಸೂಚಿಸಿದರು.

೧.ಸರಕಾರ ನೀಡಿರುವ ಬಿರುದು ಬಾವಲಿಗಳನ್ನು ಹಿಂತಿರುಗಿಸಬೇಕು.

೨.ಸರಕಾರದ ಹುದ್ದೆಗಳನ್ನು ಯಾರೂ ಅಂಗೀಕರಿಸಬಾರದು.

೩.ಯಾವ ತರಹ ತೆರಿಗೆಯನ್ನು ಸರಕಾರಕ್ಕೆ ನೀಡಬಾರದು.

೪.ಸರಕಾರದಲ್ಲಿ ಇರುವವರು ತಮ್ಮ ತಮ್ಮ ಹುದ್ದೆಗಳನ್ನು ತ್ಯಜಿಸಿ ಈ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಬೇಕು.

೫.ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕು. ಸ್ವದೇಶಿ ವಸ್ತುಗಳನ್ನೇ ಉಪಯೋಗಿಸಬೇಕು.

ಈ ಎಲ್ಲಾ ಸೂಚನೆಗಳನ್ನು ಅನುಸರಿಸುವವರು ಸತ್ಯ-ಅಹಿಂಸೆಯ ಪಥದಲ್ಲೇ ನಡೆಯಬೇಕು. ಹೀಗೆ ಅಸಹಕಾರ ಚಳುವಳಿಗೆ ನೀತಿಸಂಹಿತೆಯನ್ನು ರೂಪಿಸಿದ ಗಾಂಧೀಜಿ ಸಾರ್ವಜನಿಕರಿಗೆ ಈ ಬಗ್ಗೆ ತಿಳುವಳಿಕೆ ನೀಡಲು ಹಲವಾರು ಲೇಖನಗಳನ್ನು ಪ್ರಕಟಿಸಿದರು. ಹಲವೆಡೆ ಭಾಷಣ ಮಾಡಿದರು. ಅದೇ ವರುಷ ನಾಗಪುರದಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನ ಇದನ್ನು ಸರ್ವಾನುಮತದಿಂದ ಅಂಗೀಕರಿಸಿ ಇದಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿತು.

ಇದೇ ಅಧಿವೇಶನದಲ್ಲಿ 'ಸ್ವರಾಜ್ಯ ಸ್ಥಾಪನೆ', 'ಅಸ್ಪೃಶ್ಯತಾ ನಿವಾರಣೆ', 'ಖಾದಿ ಬಳಕೆ' ಬಗ್ಗೆ ಸಹ ಗಾಂಧಿ ಮಂಡಿಸಿದ ಮಸೂದೆಯನ್ನು ಸಭೆ ಅಂಗೀಕರಿಸಿತು.

'ಕರನಿರಾಕರಣೆ' ಚಳುವಳಿಯಲ್ಲಿ ಕಾಂಗ್ರೆಸ್ ಅನುಸರಿಸಲಿರುವ ನೀತಿ-ನಿಯಮಗಳ ರೂಪರೇಷೆಗಳನ್ನು ವಿವರಿಸಿ ಗಾಂಧೀಜಿ ವೈಸ್‌ರಾಯ್ ಲಾರ್ಡ್‌ರೀಡಿಂಗ್‌ರವರಿಗೆ ಪತ್ರ ಬರೆದು ಈ ಕಾರ್ಯಕ್ರಮಗಳನ್ನು ಬರಡೋಲಿಯಿಂದ ಪ್ರಾರಂಭಿಸುವುದಾಗಿಯೂ ಮುನ್ನೆಚ್ಚರಿಕೆಯನ್ನು ನೀಡಿದರು. ವೈಸ್‌ರಾಯರಿಂದ ಸಮರ್ಪಕ ಉತ್ತರ ಬರಲಿಲ್ಲ.

ಖಿಲಾಫತ್ ಚಳುವಳಿಗೆ ಸಹಕಾರ ನೀಡುವುದರೊಂದಿಗೆ ಆರಂಭಗೊಂಡ ಈ ಅಸಹಕಾರ ಚಳುವಳಿ ಬಹುಬೇಗ ರಾಷ್ಟ್ರವ್ಯಾಪಿ ಹರಡಿತು. ವಿದ್ಯಾರ್ಥಿಗಳು ಶಾಲೆಗಳನ್ನು ಬಿಟ್ಟು ಹೊರಬಂದರು. ವಕೀಲರು ಕೋರ್ಟು-ಕಚೇರಿಗಳನ್ನು ಬಹಿಷ್ಕರಿಸಿದರು. ನೂರಾರು ಸರಕಾರಿ ಅಧಿಕಾರಿಗಳು ಕೆಲಸಕ್ಕೆ ರಾಜೀನಾಮೆ ನೀಡಿ ಚಳುವಳಿಗೆ ಧುಮುಕಿದರು. ಮುಸ್ಲಿಮರೂ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡರು. ಅದೇ ದಿನಗಳಲ್ಲಿ ಭಾರತಕ್ಕೆ ಬಂದಿದ್ದ ವೇಲ್ಸ್ ರಾಜಕುಮಾರ ಎಡ್ವರ್ಡ್‌ನ ಮೆರವಣಿಗೆ ಬಹಿಷ್ಕರಿಸಿದರು. ಇದರಿಂದಾಗಿ ಬ್ರಿಟಿಷರ ಕಣ್ಣು ಕೆಂಪಾಯಿತು. ಚಳುವಳಿ ನಡೆದೆಡೆಯೆಲ್ಲಾ ಚಳುವಳಿಗಾರರನ್ನು ಅಮಾನುಷವಾಗಿ ಬ್ರಿಟಿಷರು ನಡೆಸಿಕೊಂಡರು. ಸಾವಿರಾರು ಜನರನ್ನು ದಸ್ತಗಿರಿ ಮಾಡಿದರು. ಗಾಂಧಿಯವರ ಬಂಧನವೂ ನಡೆಯಿತು. ಕಲ್ಕತ್ತಾದಲ್ಲಿ ನಡೆದ ಈ ಬಹಿಷ್ಕಾರ-ಚಳುವಳಿಯಲ್ಲಿ ಸುಭಾಷ್‌ಚಂದ್ರ ಬೋಸ್, ದೇಶಬಂಧುದಾಸ್ ಮುಂತಾಗಿ ಸಾವಿರಾರು ಸ್ವಯಂಸೇವಕರನ್ನು ಸರ್ಕಾರ ಬಂಧಿಸಿತು. ಬೋಸರಿಗೆ ಇದೇ ಪ್ರಥಮ ಸೆರೆಮನೆ ವಾಸವಾಗಿತ್ತು.

ಉದ್ರೇಕಕಾರಿ ಲೇಖನಗಳನ್ನು ಬರೆದು ಜನರನ್ನು ಕ್ರಾಂತಿದಾರಿಗೆಳೆದು ರಾಜದ್ರೋಹ ಎಸಗಿದ್ದಾರೆಂಬ ಆರೋಪ ಹೊರಿಸಿ ಗಾಂಧಿಯವರಿಗೆ ಆರು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಸುಮಾರು ಎರಡು ವರ್ಷಗಳ ನಂತರ ಇವರ ಆರೋಗ್ಯ ತೀರಾ ಕೆಟ್ಟಿದ್ದರಿಂದ ಚಿಕಿತ್ಸೆಗಾಗಿ ಯರವಾಡ ಸೆರೆಮನೆಯಿಂದ ಬಿಡಬೇಕಾಯಿತು.

ದೇಶಾದ್ಯಂತ ಕಾಡ್ಗಿಚ್ಚಿನಂತೆ ಹರಡಿದ್ದ ಈ ಅಸಹಕಾರ ಚಳುವಳಿ ಉತ್ತರ ಪ್ರದೇಶದ ಚೌರಿಚೌರಾ ಎಂಬಲ್ಲಿ ವಿಕೋಪಕ್ಕೆ ಹೋಗಿ ಉದ್ರಿಕ್ತ ಜನ ಅಲ್ಲಿನ

ಪೊಲೀಸ್‌ಠಾಣೆಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಹಲವು ಪೊಲೀಸರು ಸತ್ತ ದುರಂತದಿಂದ ನೊಂದ ಗಾಂಧೀಜಿ ಅಸಹಕಾರ ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು. ಆದರೂ ಹಲವು ದಿನ ಈ ಚಳುವಳಿ ದೇಶದ ವಿವಿದೆಡೆ ನಡೆಯುತ್ತಲೇ ಇತ್ತು. ಸರ್ಕಾರದ ದಬ್ಬಾಳಿಕೆಯೂ ನಡೆದೇ ಇತ್ತು.

ಹಲವು ಕಾರಣಗಳಿಂದ ನಿಂತು ಹೋಗಿದ್ದ 'ಯಂಗ್‌ಇಂಡಿಯ' ಮತ್ತು 'ನವ ಜೀವನ' ಪತ್ರಿಕೆಗಳನ್ನು ಏಪ್ರಿಲ್ ೧೯೨೪ರಲ್ಲಿ ಮತ್ತೆ ಪ್ರಾರಂಭಿಸಿದರು.

ಜನರೂ ಚಳವಳಿಯನ್ನು ಮತ್ತೆ ಪ್ರಾರಂಭಿಸಲು ಗಾಂಧಿಯವರ ಮೇಲೆ ಒತ್ತಡ ತರುತ್ತಿದ್ದರೂ, ರಾಷ್ಟ್ರದ ರಾಜಕೀಯ ಸ್ಥಿತಿಯನ್ನು ಪರೀಕ್ಷಿಸುತ್ತಿದ್ದ ಇವರು, ಇತ್ತ ಗಮನಹರಿಸಲಿಲ್ಲ. ಮುಂದೆ ಸುಮಾರು ಆರುವರ್ಷ, ರಚನಾತ್ಮಕ ಕಾರ್ಯಕ್ರಮಗಳು, ಸಮಾಜ ಸುಧಾರಣಾ ಕಾರ್ಯಗಳತ್ತ ಗಮನಹರಿಸತೊಡಗಿದರು.

ಸ್ವದೇಶಿ ವಸ್ತುಗಳ ಉತ್ಪಾದನೆ ಮತ್ತು ಉಪಯೋಗ, ಗ್ರಾಮನೈರ್ಮಲ್ಯ; ಅಸ್ಪೃಶ್ಯತಾನಿವಾರಣೆ, ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿ ಉತ್ಪಾದನೆ ಮತ್ತು ಖಾದಿ ಧಾರಣೆ ; ಗೋಹತ್ಯ ನಿಷೇಧ, ಹಿಂದೂ-ಮುಸ್ಲಿಂ ಐಕ್ಯತೆ – ಮುಂತಾದವು ಅವರ ಆದ್ಯತೆಯ ಕಾರ್ಯಕ್ರಮಗಳಾಗಿದ್ದವು.

ಮದರಾಸು ಮತ್ತು ಲಾಹೋರ್ ಕಾಂಗ್ರೆಸ್ ಅಧಿವೇಶನಗಳಲ್ಲಿ 'ಪೂರ್ಣ ಸ್ವಾತಂತ್ರ್ಯ'ವೇ ನಮ್ಮ ಗುರಿ ಎಂದು ಗಾಂಧಿ ಘೋಷಿಸಿದರು.

೧೯೨೪ರಲ್ಲಿ ಕರ್ನಾಟಕದ ಬೆಳಗಾಂನಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಗಾಂಧಿ ಆಯ್ಕೆಗೊಂಡಿದ್ದರು. ಅದು ಡಿಸೆಂಬರ್‌ನಲ್ಲಿ ನಡೆಯಲಿತ್ತು. ಗಾಂಧಿ ಆ ಸಮ್ಮೇಳನಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾಗ ದೆಹಲಿ; ನಾಗಪುರ ; ಗುಲ್ಬರ್ಗಾ : ಲಕ್ನೋ ; ಅಲಹಾಬಾದ್ ; ಶಹಜಾನ್‌ಪುರ್ ; ಜಬ್ಬಲ್ ಪುರ್ ; ಕೋಹಟ್ ಮುಂತಾದೆಡೆ ಜರುಗಿದ ಕೋಮು ಗಲಭೆಯಿಂದಾಗಿ ಅಪಾರ ಸಂಖ್ಯೆಯ ಮನೆ ಮಠಗಳು ಧ್ವಂಸಗೊಂಡಿದ್ದವು. ನೂರಾರು ಜನರು ಗಾಯಗೊಂಡಿದ್ದರು. ಜನರು ಲಕ್ಷಾಂತರ ರೂಪಾಯಿ ನಷ್ಟಕ್ಕೊಳಗಾಗಿದ್ದರು. ಇವನ್ನೆಲ್ಲಾ ನೋಡಿ, ಸುದ್ದಿ ಕೇಳಿ ಬಹು ದುಃಖಿತರಾಗಿದ್ದ ಗಾಂಧಿ, ಪ್ರಾಯಶ್ಚಿತ್ತಾರ್ಥವಾಗಿ ದೆಹಲಿಯ ಮೌಲಾನಾ ಮಹಮದ್ ಅಲಿಯವರ ನಿವಾಸದ ಮುಂದೆ ೨೧ ದಿನಗಳು

ಉಪವಾಸ ಕುಳಿತರು. ಇದು ರಾಷ್ಟ್ರದ ಎಲ್ಲಾ ನಾಯಕರ ಗಮನ ಸೆಳೆಯಿತು. ಹಿಂದೂ-ಮುಸಲ್ಮಾನರ ಐಕ್ಯಕ್ಕೆ ನಿಸ್ಪೃಹವಾಗಿ ಶ್ರಮಿಸಿದ ಅಲಿ ಸಹೋದರರುಗಳಾದ ಮೌಲಾನಾ ಮಹಮದ್ ಅಲಿ ಮತ್ತು ಮೌಲಾನಾ ಷೌಕತ್ ಅಲಿ ಸಹೋದರರಲ್ಲಿ ಮೊದಲನೆಯವರು ಹಿರಿಯರು. ಇವರು ಒಳ್ಳೆಯ ವಾಗ್ಮಿ ಮತ್ತು ಲೇಖಕರೂ ಆಗಿದ್ದು 'ಕಾಮ್ರೇಡ್' ಎಂಬ ಪತ್ರಿಕೆಯನ್ನೂ ಸಹ ನಡೆಸುತ್ತಿದ್ದರು. ಖಿಲಾಫತ್ ಸಮಾವೇಶದ ಅಧ್ಯಕ್ಷಗಿರಿ ಹಾಗೂ ಅಖಿಲಭಾರತ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷರಾಗಿದ್ದ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಕಾಂಗ್ರೆಸ್ ಸಂಸ್ಥೆಯೊಳಗೇ ಗಾಂಧಿಯ ಅಸಹಕಾರ ಚಳವಳಿಯ ಕಾರ್ಯವ್ಯಾಪ್ತಿ ಹಾಗೂ ಅದರ ಬಳಕೆಯ ಬಗ್ಗೆ ಭಿನ್ನಾಭಿಪ್ರಾಯವಿತ್ತು. ಇವರಿಂದಾಗಿಯೇ ಕಾಂಗ್ರೆಸ್ ಚೌಕಟ್ಟಿನೊಳಗೇ 'ಸ್ವರಾಜ್ಯ ಪಾರ್ಟಿ' ಜನ್ಮತಾಳಿತ್ತು. ದೇಶಬಂಧು, ಸಿ.ಆರ್. ದಾಸ್ ಎಂಬ ಪ್ರಸಿದ್ಧ ವಕೀಲರು ೧೯೨೩ರಲ್ಲಿ ಸ್ಥಾಪಿತವಾದ ಈ ಪಾರ್ಟಿಯ ಅಧ್ಯಕ್ಷರಾಗಿದ್ದರು. ಪಂಡಿತ ಮೋತಿಲಾಲ್ ನೆಹರೂರವರು ಕಾರ್ಯದರ್ಶಿಗಳಾಗಿದ್ದರು. ಇವರಿಬ್ಬರೂ ಸರ್ಕಾರದ ಎಲ್ಲಾ ಕಾರ್ಯಚಟುವಟಿಕೆಗಳಿಗೂ ಅಸಹಕಾರ ತೋರುವುದನ್ನು ಒಪ್ಪುತ್ತಿರಲಿಲ್ಲ. ಕಲ್ಕತ್ತಾದ ಕೌನ್ಸಿಲ್‌ಗೆ ನಡೆದ ಚುನಾವಣೆಯಲ್ಲಿ ಈ ಪಾರ್ಟಿ ಬಹುಮತ ಗಳಿಸಿ ಸರಕಾರ ರಚಿಸುವ ಅರ್ಹತೆಯನ್ನು ಪಡೆದಿದ್ದಿತು. ೧೯೨೪ರಲ್ಲಿ ಪುರಸಭೆಗೆ ನಡೆದ ಚುನಾವಣೆಯಲ್ಲಿ ಗೆದ್ದ ದೇಶಬಂಧುದಾಸರು ಮೇಯರ್ ಆದರು. ಸುಭಾಷ್ ಆಡಳಿತಾಧಿಕಾರಿಗಳಾದರು. ಇವರಿಬ್ಬರೂ ಪುರಸಭೆಯಲ್ಲಿ ಕ್ರಾಂತಿಕಾರಕ ಆದರೆ ಜನಪರ ಬದಲಾವಣೆಗಳನ್ನು ತಂದು, ತುಂಬಾ ಜನಪ್ರಿಯರಾದರು. ಬ್ರಿಟಿಷರು ಇದನ್ನು ಸಹಿಸದೆ ಬೋಸರನ್ನು ಬಂಧಿಸಿ ಮಾಂಡಲೆ ಸೆರೆಮನೆಯಲ್ಲಿಟ್ಟರು. ಆಗ ಅದೇ ಜೈಲಿನಲ್ಲಿ ತಿಲಕರು ಹಾಗೂ ಲಾಲಾ ಲಜಪತರಾಯ್ ಸಹ ಇದ್ದರು.

ಸ್ವರಾಜ್ಯಪಾರ್ಟಿಯವರು ಸರಕಾರದೊಡನೆ ಸಹಭಾಗಿಯಾಗುವುದನ್ನು ಗಾಂಧೀಜಿ ವಿರೋಧಿಸಿದರು. ಈ ಬಗ್ಗೆ ಬೆಳಗಾಂನಲ್ಲಿ ನಡೆಯಲಿರುವ ಅಧಿವೇಶನದಲ್ಲಿ ದಾಸ್ ಮತ್ತು ಮೋತಿಲಾಲ್ ನೆಹರೂರವರೊಡನೆ ಸಮಾಲೋಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಗಾಂಧಿಯವರಿಗೆ ಸೂಚಿಸಿತ್ತು.

ಗಾಂಧಿಯವರೊಡನೆ ಪರಾಮರ್ಶಿಸಿದ ನಂತರ ದಾಸ್‌ರವರು ಕಲ್ಕತ್ತಾದಲ್ಲಿ ಸರಕಾರ ರಚಿಸಲು ಮುಂದಾಗಲಿಲ್ಲ. ಸರ್ಕಾರ ಪ್ರವೇಶಿಸಿ ಅಲ್ಲೇ ಅಸಹಕಾರ ತೋರಿಸುವುದನ್ನು ಕೈಬಿಟ್ಟರು.

ಮೋತಿಲಾಲ್ ನೆಹರೂ ಹಾಗೂ ದಾಸ್‌ರವರು ಕಾಂಗ್ರೆಸ್ಸನ್ನು ಸುಭದ್ರವಾಗಿ ಕಟ್ಟಿಬೆಳೆಸಿದ ನಿಷ್ಠಾವಂತ ನಾಯಕರು. ವೇಲ್ಸ್ ರಾಜಕುಮಾರ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆತನ ವಿರುದ್ಧ ರ್‍ಯಾಲಿ ನಡೆಸುವಲ್ಲಿ ಇವರಿಬ್ಬರೇ ಪ್ರಮುಖ ಪಾತ್ರ ವಹಿಸಿದ್ದುದು ಐತಿಹಾಸಿಕ ಘಟನೆಯಾಗುಳಿದಿದೆ. ದಿನದಿನಕ್ಕೆ ಸದೃಢವಾಗುತ್ತಿದ್ದ ಸ್ವರಾಜ್ಯಪಕ್ಷ ೧೯೨೩ರ ಚುನಾವಣೆಯಲ್ಲಿ ಬಹುಪ್ರಾಂತಗಳಲ್ಲಿ ಬಹುಮತಗಳಿಸಿ ಸರ್ಕಾರ ರಚಿಸಿತು. ಮೋತಿಲಾಲ್ ನೆಹರೂ ಕೇಂದ್ರ ಶಾಸನ ಸಭೆಗೆ ಆಯ್ಕೆಗೊಂಡು ವಿರೋಧಪಕ್ಷದ ನಾಯಕರಾದರು. ಹಾಗೂ ದಾಸ್‌ರವರ ಮರಣದ ನಂತರ ಸ್ವರಾಜ್ಯ ಪಕ್ಷದ ಅಧ್ಯಕ್ಷರಾದರು. ಸ್ವಲ್ಪಕಾಲದ ನಂತರ ಸ್ವರಾಜ್ಯಪಕ್ಷ ಕಾಂಗ್ರೆಸ್‌ನೊಂದಿಗೆ ವಿಲೀನಗೊಂಡಿತು.

ಗಾಂಧಿಯವರಿಗೆ ಕರ್ನಾಟಕ (ಮೈಸೂರು) ಕಂಡರೆ ಬಹಳ ಪ್ರೀತಿ. ಹಲವು ಬಾರಿ ೧೯೧೫, ೧೯೧೬, ೧೯೨೦, ೧೯೨೧, ೧೯೨೪, ೧೯೨೭, ೧೯೩೪, ೧೯೩೬, ೧೯೩೭ನೇ ವರ್ಷಗಳಲ್ಲಿ ಮೈಸೂರು ರಾಜ್ಯಕ್ಕೆ ಭೇಟಿ ನೀಡಿ ರಾಜ್ಯದ ಬಹಳಷ್ಟು ಪ್ರದೇಶಗಳನ್ನು ದರ್ಶಿಸಿದ್ದರು. ೧೯೩೬ರಲ್ಲಿ ಕಸ್ತೂರಬಾ ಜೊತೆಯಲ್ಲಿ ನಂದಿ ಬೆಟ್ಟದ ಮೇಲೆ ಇದ್ದ ನೆನಪಿಗಾಗಿ ಅಲ್ಲಿ ಗಾಂಧೀಭವನ ನಿರ್ಮಿತಗೊಂಡಿದೆ. ಅದೊಂದು ಪ್ರೇಕ್ಷಣೀಯ ಸ್ಥಳವಾಗಿದೆ.

'ಚರಖಾ' ದ ಬಗ್ಗೆ ಗಾಂಧೀಜಿಯವರಿಗೆ ಅಮಿತವಾದ ಮಮತೆ. 'ನೂಲುವ ರಾಟೆ' 'ಚರಖಾ' ವಾಣಿಜ್ಯ ಸಮರದ ಸಂಕೇತವಲ್ಲ. ವಾಣಿಜ್ಯ ಶಾಂತಿಯ ಚಿನ್ಹೆ. ಜಗತ್ತಿನ ಇತರ ರಾಷ್ಟ್ರಗಳೆಡೆಗೆ ಅದು ಬೀರುವುದು ದ್ವೇಷದ ಸಂದೇಶವಲ್ಲ. ಸದ್ಭಾವನೆ ಹಾಗೂ ಸ್ವಾವಲಂಬನೆಗಳ ಸಂದೇಶ. ರಾಟೆಯ ಪ್ರತಿಯೊಂದು ಭ್ರಮಣವೂ ಶಾಂತಿ, ಸದ್ಭಾವನೆ ಪ್ರೇಮಗಳನ್ನು ನೇಯುತ್ತದೆ". ಇವು ಚರಖಾದ ಮಹತ್ವವನ್ನು ಕುರಿತು ಗಾಂಧೀಜಿ ನುಡಿದಿರುವ ನುಡಿಮುತ್ತುಗಳು. ಭಾರತದ ಆರ್ಥಿಕ, ನೈತಿಕ ಪುನರುತ್ಥಾನಕ್ಕೆ ಪ್ರತಿಯೊಬ್ಬರೂ ಕೈಯಲ್ಲಿ ನೂಲುವುದು ಮತ್ತು ನೇಯುವುದು ಅಗತ್ಯವೆಂದು ಗಾಂಧಿ ನಂಬಿದ್ದರು. ಮೊತ್ತ ಮೊದಲಿಗೆ ಅವರು ಖಾದಿಯ ವ್ರತ ತೊಟ್ಟದ್ದು

೧೯೧೯ರಲ್ಲಿ. ೧೯೨೧ರಲ್ಲಿ ಕಾಂಗ್ರೆಸ್‌ನ ಕಾರ್ಯಕ್ರಮಗಳಲ್ಲಿ ಚರಖಾ ಸ್ಥಾನ ಪಡೆಯಿತು. ೧೯೨೪ರಲ್ಲಿ ಬೆಳಗಾಂ ಅಧಿವೇಶನದಲ್ಲಿ ಭಾಗವಹಿಸಲು ಬಂದಿದ್ದ ಗಾಂಧಿ, ವೇದಿಕೆಯ ಮೇಲೆ ಬರುವ ಮೊದಲು ಅರ್ಧಗಂಟೆ ಚರಖಾದಲ್ಲಿ ನೂಲನ್ನು ತೆಗೆದಿದ್ದರು. ಅದು ಅವರ ನಿತ್ಯಕರ್ಮಗಳಲ್ಲಿ ಒಂದಾಗಿ ಸೇರ್ಪಡೆಗೊಂಡಿತ್ತು. ಕಾಂಗ್ರೆಸ್ ಸದಸ್ಯರು ಚರಖಾ ಅಥವಾ ತಕಲಿಯಿಂದ ನೂತನೂಲನ್ನು ಕಾಂಗ್ರೆಸ್ ಸದಸ್ಯತ್ವದ ವಂತಿಕೆಯಾಗಿ ಕೊಡಬೇಕೆಂಬ ನಿಯಮ ಹಿಂದೆ ಇತ್ತು. ಕಾಂಗ್ರೆಸ್ ಧ್ವಜದ ಲಾಂಛನವಾಗಿ ಈ ಚರಖಾ ಸ್ವಾತಂತ್ರ್ಯ ಸಂಗ್ರಾಮದ ಸಂಕೇತವಾಗಿದೆ.

೧೯೨೮ರಲ್ಲಿ ಕಲ್ಕತ್ತೆಯಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ 'ಪೂರ್ಣಸ್ವಾತಂತ್ರ್ಯ ನಮ್ಮ ಗುರಿ' ಎಂಬ ಮಸೂದೆಯನ್ನು ಮಂಡಿಸಿದ್ದರು. ಬಹಳ ಚರ್ಚೆ ಆದನಂತರ 'ಒಂದು ವರ್ಷದಲ್ಲಿ ನಮ್ಮ ದೇಶದ ಒಳ ಆಡಳಿತವನ್ನು ನಮಗೆ ಒಪ್ಪಿಸಬೇಕು' ಎಂಬ ನಿರ್ಣಯ ಅಂಗೀಕಾರಗೊಂಡಿತು. ದಿನದಿನಕ್ಕೆ ರಾಷ್ಟ್ರಾದ್ಯಂತ ಆವರಿಸಹತ್ತಿದ್ದ ಸರಕಾರಿ ವಿರೋಧಿ ಚಟುವಟಿಕೆಗಳನ್ನೂ ಕೊಂಚ ಶಮನಗೊಳಿಸುವ ಉದ್ದೇಶದಿಂದ ಬ್ರಿಟಿಷ್ ಸರಕಾರ ೧೯೨೮ರಲ್ಲಿ ಸೈಮನ್ ಕಮೀಷನ್ ನೇಮಿಸಿ 'ರಾಜಕೀಯ ಸುಧಾರಣೆ ತಂದರೆ ಅವನ್ನು ಸ್ವೀಕರಿಸಲು ಭಾರತೀಯರು ಅರ್ಹರಾಗಿದ್ದಾರೆಯೇ? ಇಲ್ಲವೇ ? ಎಂಬ ಬಗ್ಗೆ ವರದಿ ತಯಾರಿಸಿ ನೀಡಲು ಆದೇಶಿಸಲಾಗಿತ್ತು. ಈ ಅವಮಾನಕಾರಿ ಆದೇಶದಿಂದ ದೇಶ ಭುಗಿಲೆದ್ದಿತು. ಈ ಆಯೋಗವನ್ನು ಎಲ್ಲೆಡೆ ಜನ ಬಹಿಷ್ಕರಿಸಿದ್ದರು.

◆ ◆ ◆

೧೫. ಸೈಮನ್ ಆಯೋಗ

ಈ ಆಯೋಗದಲ್ಲಿ ಮೂರು ಜನ ಪ್ರತಿಗಾಮಿ ಸದಸ್ಯರು, ಇಬ್ಬರು ಲಿಬರಲ್ ಪಕ್ಷದ ಸದಸ್ಯರುಗಳಿದ್ದರು. ಈ ಆಯೋಗ ಭಾರತಕ್ಕೆ ಬಂದು ಫೆಬ್ರವರಿ ೩, ೧೯೨೮ರಿಂದ ಏಪ್ರಿಲ್ ೧೯೨೯ರ ತನಕ ಭಾರತದಲ್ಲಿದ್ದು, ದೇಶಾದ್ಯಂತಾ ಸುತ್ತಾಡಿ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ೭-೮-೧೯೩೦ರಂದು ಈ ಆಯೋಗ ತನ್ನ ವರದಿಯನ್ನು ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಿತು.

ಭಾರತೀಯರು ಯಾವತ್ತೂ ಬ್ರಿಟಿಷರ ಪದತಳದಲ್ಲೇ ಇರಬೇಕು ಎಂಬ ಮೂಲೋದ್ದೇಶದಿಂದ ರಚಿಸಿದ್ದ ಈ ಸಲಹೆಗಳು ಭಾರತೀಯರಿಗೆ ಬಹಳ ಆತಂಕಕಾರಿಯಾಗಿದ್ದುದಲ್ಲದೆ ಅವಮಾನಕಾರಿ ಅಂಶಗಳನ್ನು ಒಳಗೊಂಡಿದ್ದವು. ಭಾರತೀಯರು ಸ್ವಯಂಮಾಡಳಿತಕ್ಕೆ ಅನರ್ಹರೆಂದೇ ಪರಿಗಣಿಸಿ ಸರಕಾರದ ಎಲ್ಲಾ ಹಂತಗಳಲ್ಲೂ ಬ್ರಿಟಿಷರಿಗೇ ಆದ್ಯತೆಯನ್ನು ನೀಡಲಾಗಿತ್ತು. ಪ್ರಾಂತೀಯ ಸರಕಾರಗಳಲ್ಲಿ ಗೌರ್ನರ್‌ರವರಿಗೆ, ಕೇಂದ್ರ ಆಡಳಿತವನ್ನು ವೈಸ್‌ರಾಯರಿಗೆ ಪೂರ್ಣ ಹಾಗೂ ಗರಿಷ್ಠ ಅಧಿಕಾರವನ್ನು ನೀಡಲಾಗಿತ್ತು.

ಈ ಅವಹೇಳನಕಾರಿ ವರದಿಗೆ ರಾಷ್ಟ್ರಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು. ಅಸಂತೋಷ ಎಲ್ಲೆಡೆ ಭುಗಿಲೆದ್ದಿತು. ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಈ ಆಯೋಗದ ಶಿಫಾರಸ್ಸುಗಳನ್ನು ಸಾರಾಸಗಟಾಗಿ ತಿರಸ್ಕರಿಸಿದವು.

* * *

ಭಾರತಾದ್ಯಂತ ಅವಿರತವಾಗಿ ಚಳುವಳಿ, ಹರತಾಳ, ಮುಷ್ಕರಗಳು ನಡೆಯುತ್ತಿದ್ದುದಕ್ಕೆ ಕಡಿವಾಣ ಹಾಕುವ ದಿಸೆಯಲ್ಲಿ ಬ್ರಿಟಿಷ್ ಸರಕಾರ ಕಾಂಗ್ರೆಸ್‌ಗೆ ವಿರುದ್ಧವಾಗಿ ಮುಸ್ಲಿಂಲೀಗ್ ರಾಜಕೀಯಕ್ಕೆ ಇಳಿಯುವಂತೆ ಪ್ರೇರೇಪಿಸಿತು. ೧೯೦೯ರಲ್ಲಿ ಸರಕಾರ ತಂದಿದ್ದ ಮಾರ್ಲೆ-ಮಿಂಟೊ ಸುಧಾರಣೆಗಳು ಹಿಂದೂ-ಮುಸಲ್ಮಾನರ ಮಧ್ಯೆ ವೈಮನಸ್ಯದ ವಿಷಬೀಜ ಬಿತ್ತಿದ್ದವು. ಈ ಬೀಜ ಮೊಳೆತು ಸಸಿಯಾಗಿ ದಿನದಿನಕ್ಕೆ ಬೆಳೆಯಹತ್ತಿತ್ತು. ಆದರೂ ಸ್ವಾತಂತ್ರ್ಯ

ಚಳುವಳಿಯನ್ನು ಕಾಂಗ್ರೆಸ್ ಮುಂದುವರಿಸಿಕೊಂಡೇ ನಡೆದಿತ್ತು. ೧೯೨೯ರ ಡಿಸೆಂಬರ್ ೩೧ರ ಒಳಗಾಗಿ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ (ಬ್ರಿಟಿಷ್ ಆಧಿಪತ್ಯದಲ್ಲಿ ಸ್ವತಂತ್ರ ರಾಷ್ಟ್ರವಾಗಿರುವುದು) ಕೊಡದಿದ್ದಲ್ಲಿ ತಾನು ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಅಸಹಕಾರ, ಕರನಿರಾಕರಣ ಚಳುವಳಿಯನ್ನು ಉಗ್ರರೂಪದಲ್ಲಿ ಪ್ರಾರಂಭಿಸುವುದೆಂದು ಕಾಂಗ್ರೆಸ್ ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆ ನೀಡಿತ್ತು. ಗಾಂಧಿಯೂ ಸಹ ಬೆಳಗಾಂನ ಕಾಂಗ್ರೆಸ್ ಅಧಿವೇಶನದಲ್ಲಿ 'ಪೂರ್ಣಸ್ವರಾಜ್ಯಗಳಿಕೆ' ಕಾಂಗ್ರೆಸ್‌ನ ಮುಖ್ಯ ಧ್ಯೇಯ. ಅದನ್ನು ಗಳಿಸಲು ನಾವು ಯಾವ ತ್ಯಾಗಕ್ಕೂ ಸಿದ್ಧ. ಇದನ್ನು ಅಹಿಂಸಾತ್ಮಕವಾಗಿಯೇ ಗಳಿಸುತ್ತೇವೆ ಎಂದು ಘೋಷಿಸಿದರು.

◆◆◆

ಚಂಪಾರಣದಲ್ಲಿ ದಾರಿದ್ರ್ಯ ದರ್ಶನ
ಗಾಂಧೀಜಿಯ ಉಡುಪಿನ ರೀತಿಯನ್ನೇ ಬದಲಾಯಿಸಿತು

ಗಾಂಧೀಜಿ ಸತ್ಯಾಗ್ರಹದಲ್ಲಿ ನಿರತರಾಗಿದ್ದಾಗ ಕಸ್ತೂರಬಾ ಹಳ್ಳಿಗಳಲ್ಲಿ ಸಾಕ್ಷರತೆ, ನೈರ್ಮಲ್ಯ ಪ್ರಚಾರಕಾರ್ಯ ಮಾಡುತ್ತಿದ್ದರು. ಒಮ್ಮೆ ಒಬ್ಬ ಹೆಂಗಸು ಕಸ್ತೂರಬಾರವರನ್ನು ತನ್ನ ಗುಡಿಸಲಿನೊಳಕ್ಕೆ ಕರೆದುಕೊಂಡು ಹೋದಳು. ಒಳಗೆ ಆ ಹೆಂಗಸಿನ ಇಬ್ಬರು ಸೋದರಿಯರಿದ್ದರು. ಅವರು ಅರೆ ನಗ್ನರಾಗಿದ್ದರು. 'ನಾವು ಮೂವರಿಗೆ ಸೇರಿ ಒಂದೇ ಗಟ್ಟಿಯಾದ ಸೀರೆ ಇದೆ. ಆಚೆ ಹೋಗುವವಳು ಅದನ್ನು ಉಡುತ್ತಾಳೆ. ಉಳಿದವರು ಆಚೆ ಬರುವಂತಿಲ್ಲ. ಇದು ನಮ್ಮ ದಟ್ಟ ದಾರಿದ್ರ್ಯದ ಬವಣೆ.' ಈ ವಿಷಯ ಪತ್ನಿಯಿಂದ ತಿಳಿದ ಗಾಂಧೀಜಿ ಆ ಸೋದರಿಯರಿಗೆ ಮೂರು ಸೀರೆಗಳನ್ನು ದಾನ ಮಾಡಿದರು. ಮುಂದೆ ಗಾಂಧೀಜಿ ತಮ್ಮ ಉಡುಪಿನ ರೀತಿಯನ್ನು ಬದಲಾಯಿಸಿದರು. ಬಡಜನರು ಉಪಯೋಗಿಸುವಂತೆ ಸ್ವಲ್ಪವೇ ಬಟ್ಟೆಯಿಂದ ತಮ್ಮ ಶರೀರವನ್ನು ಆಚ್ಛಾದಿಸಿಕೊಂಡರು. ಬಡ ಜನರಿಗೆ ಪ್ರತಿನಿಧಿಯಾದರು.

('ವಿಜ್ಞಾನ ಯುಗದ ಮಹಾಪ್ರಾಜ್ಞ' (ಮಹಾತ್ಮ) ಪ್ರೊ. ಎನ್. ಕೃಷ್ಣಸ್ವಾಮಿ)

೧೬. ದಂಡೀಯಾತ್ರೆ

ಸರಕಾರವು ಉಪ್ಪಿನ ಮೇಲೆ ಹೇರಿದ್ದ ತೆರಿಗೆಯ ವಿರುದ್ಧ ಪ್ರತಿಭಟಿಸಲು ಗಾಂಧೀಜಿ ದಂಡೀಯಾತ್ರೆ ಕಾರ್ಯಕ್ರಮವನ್ನು ರೂಪಿಸಿದರು. ಇದು ಕರನಿರಾಕರಣೆ ಹಾಗೂ ಸರಕಾರದೊಡನೆ ಅಸಹಕಾರ ಇವೆರಡಕ್ಕೂ ಈ ಕಾರ್ಯಕ್ರಮ ಪೂರಕವಾಗಿತ್ತು. ದಿನಾಂಕ ೧೨, ಮಾರ್ಚ್ ೧೯೩೦ ರಂದು ಗಾಂಧೀಜಿ ಸಬರಮತಿ ಆಶ್ರಮದಿಂದ ೭೮ ಸ್ವಯಂಸೇವಕರೊಡನೆ, ಪಶ್ಚಿಮ ಕರಾವಳಿಯಲ್ಲಿರುವ 'ದಂಡಿ' ಗ್ರಾಮದತ್ತ ಕಾಲ್ನಡಿಗೆಯಲ್ಲಿ ಪಯಣ ಬೆಳೆಸಿದರು. ಸ್ವಯಂಸೇವಕರಾಗಿ ಗಾಂಧಿಯವರ ಮಗ ಮಣಿಲಾಲಗಾಂಧಿಯೂ ಜೊತೆಗಿದ್ದರು. ಸಮುದ್ರದಂಡೆಯಲ್ಲಿ ಉಪ್ಪನ್ನು ತಯಾರಿಸಿ ಕಾನೂನು ಮುರಿಯುವುದೇ ಇವರ ಮೂಲ ಉದ್ದೇಶವಾಗಿತ್ತು.

ಗಾಂಧೀಜಿ ಮತ್ತು ಇತರ ಸ್ವಯಂಸೇವಕರು ೨೪೦ ಮೈಲಿ ದೂರವನ್ನು ನಡೆಯಲು ೨೪ ದಿನಗಳನ್ನು ತೆಗೆದುಕೊಂಡಿದ್ದರು. ದಾರಿಯುದ್ದಕ್ಕೂ ಸಿಕ್ಕಿದ ಹಳ್ಳಿ, ಊರುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಜನರು ಗಾಂಧಿಯ ಜೊತೆಗೂಡಿದರು. ಎಲ್ಲೆಡೆಯೂ ಇವರಿಗೆ ಭವ್ಯ ಸ್ವಾಗತವನ್ನು ನೀಡಲಾಗಿತ್ತು. ಏಪ್ರಿಲ್ ೬ಕ್ಕೆ ಗಾಂಧೀಜಿ ದಂಡಿ ಸಮುದ್ರದಂಡೆಯನ್ನು ಸೇರಿ ಉಪ್ಪನ್ನು ಶೇಖರಿಸಲು ಪ್ರಾರಂಭಿಸಿದರು. ಎಲ್ಲಾ ಸ್ವಯಂಸೇವಕರೂ ತಮಗೆ ಬೇಕಾದಷ್ಟು ಉಪ್ಪನ್ನು ತೆಗೆದುಕೊಂಡು ಹೋಗಬಹುದೆಂದು ಹೇಳಿದರು. ಅಲ್ಲಿಗೆ ಬಂದಿದ್ದ ಬ್ರಿಟಿಷ್‌ಸೇನೆ ಇದನ್ನು ವಿರೋಧಿಸಿತು. ನಿಷ್ಕರುಣೆಯಿಂದ ಹೆಂಗಸರು ಮಕ್ಕಳೆನ್ನದೆ ಲಾಠಿಯಿಂದ ಬಡಿಯತೊಡಗಿದರು. ಚಳುವಳಿ ಹತೋಟಿಗೆ ಬಾರದಾಗ ೨೦ ಸುತ್ತು ಗುಂಡು ಹಾರಿಸಿ ಸುಮಾರು ೧೦೦ ಜನರನ್ನು ಕೊಂದರು. ನಾಲ್ಕು ನೂರಕ್ಕೂ ಹೆಚ್ಚು ಜನ ಗಾಯಗೊಂಡರು. ೬೦೦೦ ಜನ ಬಂಧಿಸಲ್ಪಟ್ಟರು. ಗಾಂಧೀಜಿ ಸಹ ಬಂಧಿತರಾದರು. ಈ ಸತ್ಯಾಗ್ರಹ ರಾಷ್ಟ್ರಾದ್ಯಂತ ಹಬ್ಬಿಕೊಂಡು ಎಲ್ಲೆಲ್ಲೂ ಮುಷ್ಕರಗಳು ನಡೆದವು. ಸಮುದ್ರದಂಡೆ ಇರುವೆಡೆಯೆಲ್ಲಾ ಸಮುದ್ರದಿಂದ ಉಪ್ಪನ್ನು ತೆಗೆದರು. ಬೇರೆಡೆ ಸತ್ಯಾಗ್ರಹಿಗಳು ತಯಾರಿಸಿ

ತಂದಿದ್ದ ಉಪ್ಪನ್ನು ಮಾರಿ ಕಾನೂನನ್ನು ಮುರಿದರು. ಉಪ್ಪಿನ ಮಳಿಗೆಗಳಿಗೆ ಮುತ್ತಿಗೆ ಹಾಕಿದರು. ಸಾವಿರಾರು ಜನ ದಸ್ತಗಿರಿಯಾದರು, ಕಷ್ಟನಷ್ಟ ಅನುಭವಿಸಿದರು. ನೆಹರೂ ಹಾಗೂ ಅವರ ತಂದೆ ಮೋತಿಲಾಲ್‌ನೆಹರೂ ಸಹ ದಸ್ತಗಿರಿಯಾದರು.

ಗಾಂಧಿ ಎಂದೂ ಚಳುವಳಿಯನ್ನು ಆಚರಿಸುವ ಮುನ್ನ ಈ ಬಗ್ಗೆ ಸರಕಾರಕ್ಕೆ ಪತ್ರ ಬರೆದು ಅವರಿಂದ ಅನುಕೂಲಕರ ಪ್ರತಿಕ್ರಿಯೆ ಬಾರದಿದ್ದಾಗಲೇ ಚಳುವಳಿ ಆಚರಿಸಲು ಮುಂದಾಗುತ್ತಿದ್ದರು. ಈ ಸಾರಿಯೂ ಹಾಗೆಯೇ ಮಾಡಿದ್ದರು. ವೈಸ್‌ರಾಯ್ ಲಾರ್ಡ್ ಇರ್ವಿನ್ನರಿಂದ ಈ ಬಗ್ಗೆ ನಕಾರಾತ್ಮಕ ಉತ್ತರ ಬಂದ ಮೇಲೇ ಇವರು ಕಾರ್ಯಪ್ರವೃತ್ತರಾಗಿದ್ದುದು. ರಾಷ್ಟ್ರಾದ್ಯಂತ ಈ ಚಳುವಳಿಯ ಅಂಗವಾಗಿ ಒಂದು ಲಕ್ಷಕ್ಕೂ ಹೆಚ್ಚು ಜನರು ದಸ್ತಗಿರಿಯಾಗಿದ್ದರು.

ವ್ಯಾಪಕವಾಗಿ ನಡೆದ ಈ ಚಳುವಳಿಗೆ ಸರ್ಕಾರ ಮಣಿದು ೧೯೩೧ರ ಜನವರಿಯಲ್ಲಿ ಗಾಂಧಿ-ಇರ್ವಿನ್ ಒಪ್ಪಂದಕ್ಕೆ ಅಣಿಯಾಯಿತು.

ದಂಡಿಯಾತ್ರೆಯ ಹಿನ್ನೆಲೆಯಲ್ಲೇ ೧೯೩೦, ಜನವರಿ ೨೬ರಂದು 'ಪೂರ್ಣ ಸ್ವರಾಜ್ಯದಿನ' ವನ್ನು ಕಾಂಗ್ರೆಸ್ ಆಚರಿಸಿತ್ತು.

ಗಾಂಧಿ–ಇರ್ವಿನ್ ಒಪ್ಪಂದ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧಿ-ಇರ್ವಿನ್ ಒಪ್ಪಂದ ಒಂದು ಪ್ರಮುಖ ಘಟ್ಟ ಎನ್ನಬಹುದು. ದಿನಾಂಕ ೫, ಮಾರ್ಚ್ ೧೯೩೧ರಂದು ಈ ಒಪ್ಪಂದಕ್ಕೆ ಗಾಂಧಿ-ಇರ್ವಿನ್ ಸಹಿ ಮಾಡಿದರು. ಒಪ್ಪಂದದ ಮುಖ್ಯಾಂಶಗಳು:

(i) ಕಾಂಗ್ರೆಸ್ ಸವಿನಯ ಕಾಯಿದೆ ಭಂಗ ಚಳವಳಿಯನ್ನು ತಕ್ಷಣವೇ ನಿಲ್ಲಿಸಬೇಕು.

(ii) ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗವಹಿಸಬೇಕು.

ಇದಕ್ಕೆ ಪ್ರತಿಯಾಗಿ ಸರಕಾರ,

(i) ಸತ್ಯಾಗ್ರಹದಲ್ಲಿ ಬಂಧಿಸಿರುವ ಎಲ್ಲಾ ಸತ್ಯಾಗ್ರಹಿಗಳನ್ನು ಬಿಡಲು ಒಪ್ಪಿತು.

(ii) ಮುಟ್ಟುಗೋಲು ಹಾಕಿಕೊಂಡಿರುವ ಸತ್ಯಾಗ್ರಹಿಗಳ ಆಸ್ತಿಪಾಸ್ತಿಯನ್ನು ಹಿಂತಿರುಗಿಸಲು ಒಪ್ಪಿಗೆ ನೀಡಿತು.

(iii) ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆದು ಹಾಕಿತು ಹಾಗೂ ಕಾಂಗ್ರೆಸ್ ಮೇಲೆ ಹೂಡಿದ್ದ ಎಲ್ಲಾ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಿತು.

ಸೆಪ್ಟೆಂಬರ್ ೭, ೧೯೩೧ ರಂದು ಪ್ರಾರಂಭವಾದ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧೀಜಿ ಏಕೈಕ ಕಾಂಗ್ರೆಸ್ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅಷ್ಟು ಹೊತ್ತಿಗೆ ಬ್ರಿಟನ್‌ನಲ್ಲಿ ರಾಜಕೀಯ ಬದಲಾವಣೆ ಆಗಿತ್ತು, ಲೇಬರ್ ಸರಕಾರದ ಸ್ಥಾನದಲ್ಲಿ ಕನ್‌ಸರ್‌ವೇಟೀವ್ ಪಕ್ಷ ಅಧಿಕಾರಕ್ಕೇರಿತ್ತು.

ಭಾರತದಲ್ಲಿನ ಕೋಮು ಸಮಸ್ಯೆಗೆ ಒಂದು ನಿರ್ದಿಷ್ಟ, ಸರ್ವಸಮ್ಮತ ನಿಲುವನ್ನು ಕಂಡುಕೊಳ್ಳಲಾರದೆ ದುಂಡುಮೇಜಿನ ಪರಿಷತ್ತು ವಿಫಲವಾಯಿತು. ನಿರಾಶರಾಗಿ ಗಾಂಧಿ ಭಾರತಕ್ಕೆ ಹಿಂತಿರುಗಿದರು. 'ನಾನು ಬರಿಯ ಕೈಯಲ್ಲಿ ಹಿಂತಿರುಗಿದ್ದೇನೆ, ನಿಜ. ಆದರೆ ದೇಶದ ಮಾನವನ್ನು ನಾನು ಮಾರಿಲ್ಲ. ಪ್ರತಿಯಾಗಿ ಕಾಪಾಡಿದ್ದೇನೆ, ಎಂದು ನುಡಿದಿದ್ದುದು ಗಾಂಧೀಜಿಯವರ ಧೀರೋದಾತ್ತ ನಿಲುವನ್ನು ಪ್ರತಿಬಿಂಬಿಸುತ್ತದೆ.

ಅಷ್ಟು ಹೊತ್ತಿಗಾಗಲೇ ಸರಕಾರ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಮತ್ತೆ ದಬ್ಬಾಳಿಕೆ ಪ್ರಾರಂಭಿಸಿತ್ತು. ಇದರಿಂದಾಗಿ ಗಾಂಧಿ-ಇರ್ವಿನ್ ಒಪ್ಪಂದ ಮುರಿದು ಬಿದ್ದು ಕಾಂಗ್ರೆಸ್ ಹೊಸ ಹುರುಪಿನಿಂದ ಕಾನೂನುಭಂಗ ಚಳವಳಿ ಯನ್ನು ಕೈಗೆತ್ತಿಕೊಂಡಿತು ಹಾಗೂ ತೀವ್ರಗೊಳಿಸಿತು. ಈ ವೇಳೆಗೆ ಭಾರತದಲ್ಲಿ ವೆಲ್ಲಿಂಗ್‌ಡನ್ ವೈಸರಾಯರಾಗಿ ಬಂದಿದ್ದರು. ಚರ್ಚಿಲ್‌ರಂತೆ ಇವರೂ ಕಾಂಗ್ರೆಸ್ಸನ್ನು ಬಗ್ಗು ಬಡಿಯಲು ಆಶಿಸಿದ್ದರು. ಆದ್ದರಿಂದ ಇರ್ವಿನ್ ಆಳ್ವಿಕೆ ಮುಗಿದೊಡನೆ ಅವರು ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿದರು.

ಗಾಂಧೀಜಿ ಇಂಗ್ಲೆಂಡಿನಿಂದ ಹಿಂದಿರುಗುತ್ತಿದ್ದ ಹಾಗೆಯೇ ಅವರನ್ನು ಬಂಧಿಸಿ ಯರವಾಡ ಜೈಲಿನಲ್ಲಿರಿಸಿದರು. ಸೆಪ್ಟೆಂಬರ್ ೧೯೩೨ ರಲ್ಲಿ ಬ್ರಿಟಿಷ್ ಪ್ರಧಾನಿ ರೇಮ್ಸ್ ಮೆಕ್‌ಡೊನಾಲ್ಡ್ ಸವರ್ಣೀಯ ಹಿಂದೂಗಳನ್ನೂ, ಹರಿಜನರನ್ನೂ ಬೇರೆ ಬೇರೆ ಮತದಾರರ ಪಟ್ಟಿಗಳಲ್ಲಿರಿಸಿ ಹರಿಜನರಿಗೇ ಪ್ರತ್ಯೇಕ ಪ್ರಾತಿನಿಧ್ಯ ನೀಡುವ 'ವಿಭಜಿಸು ಮತ್ತು ಆಳು' ನೀತಿಯನ್ನು ಪ್ರತಿಪಾದಿಸುವ

ಕೋಮುವಾರು ತೀರ್ಪು ಬಿಡುಗಡೆ ಮಾಡಿದರು. ಬಾಪೂ ಜೈಲಿನಲ್ಲಿದ್ದೇ ಇದನ್ನು ವಿರೋಧಿಸಿದರು. ವಿರೋಧಕ್ಕೆ ಅನುಕೂಲಕರ ಪ್ರತಿಕ್ರಿಯೆ ಬಾರದ್ದರಿಂದ ಜೈಲಿನಲ್ಲೇ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಸರಕಾರದ ಘೋಷಣೆಯನ್ನು ಸ್ವಾಗತಿಸಿದ್ದ ಅಂಬೇಡ್ಕರ್ ಈ ಬಗ್ಗೆ ಗಾಂಧಿಯೊಡನೆ ವಾದವಿವಾದಕ್ಕಿಳಿದರು. ಗಾಂಧಿ ತಮ್ಮ ನಿಲುವನ್ನು ಬದಲಾಯಿಸಲಿಲ್ಲ. ಗಾಂಧೀಜಿಯ ನಿಲುವನ್ನು ಸ್ವಾಗತಿಸಿದ್ದ ರವೀಂದ್ರನಾಥ ಠಾಕೂರರು ಕಲ್ಕತ್ತಾದಿಂದ ಧಾವಿಸಿ ಬಂದು ಜೈಲಿನಲ್ಲಿ ಅವರ ದರ್ಶನ ಪಡೆದರು. ಗಾಂಧಿಯವರ ಆರೋಗ್ಯ ಕ್ಷೀಣಿಸುತ್ತಾ ಬಂದಿದ್ದುದರಿಂದ ಮಾಳವೀಯರು ನಿಮ್ನವರ್ಗದ ಪ್ರಮುಖ ನಾಯಕರಾದ ಡಾ. ಅಂಬೇಡ್ಕರ್ ಜೊತೆಯಲ್ಲಿ ಯರವಾಡಾ ಜೈಲಿಗೇ ಬಂದು ಗಾಂಧಿಯೊಡನೆ ಚರ್ಚಿಸಿ ಒಂದು ಚೌಕಾಶಿ ಒಪ್ಪಂದ ಮಾಡಿಕೊಂಡರು. ರವೀಂದ್ರನಾಥ ಠಾಕೂರರ ಎದುರಿಗೆ ಗಾಂಧೀಜಿ ದಿನಾಂಕ ೨೬ ಸೆಪ್ಟೆಂಬರ್ ೧೯೩೨ರಂದು ಉಪವಾಸವನ್ನು ಮುಕ್ತಾಯಗೊಳಿಸಿದರು.

'ಕಾಯಿದೆ ಭಂಗ' ಚಳುವಳಿ ಸಮಯದಲ್ಲಿ ಭಾರತದ ರಾಜಕೀಯ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಕುರಿತು ಒಂದು ಸ್ವತಂತ್ರ, ನಿಷ್ಪಕ್ಷಪಾತ ಹಾಗೂ ಅಧಿಕೃತ ಸಂಸ್ಥೆಯಿಂದ ವರದಿ ತರಿಸಲು ಲಂಡನ್ನಿನ ಇಂಡಿಯಾ ಲೀಗ್ ಸಂಸ್ಥೆಯು ಒಂದು ನಿಯೋಗವನ್ನು ಕಳುಹಿಸಿತು. ಈ ನಿಯೋಗ ಆಗಸ್ಟ್ ೧೭, ೧೯೩೨ ರಿಂದ ನವಂಬರ್ ೭, ೧೯೩೨ರ ವರೆಗೆ ಭಾರತದ ವಿವಿಧ ಪ್ರದೇಶಗಳನ್ನು ಸಂದರ್ಶಿಸಿ ವರದಿ ಪ್ರಕಟಿಸಿತು. 'ಕಾಯಿದೆ ಭಂಗ' ಎಂಬ ಹೆಸರಿನಲ್ಲಿ ನಡೆಯುತ್ತಿದ್ದ ಚಳುವಳಿಯನ್ನು ಹತ್ತಿಕ್ಕಲು ಸರ್ಕಾರ ನಡೆಸಿರುವ ಬರ್ಬರ ಪ್ರಯೋಗಗಳ ರೋಚಕ ಕಥಾನಕವನ್ನು ಆ ವರದಿ ಒಳಗೊಂಡಿತ್ತು.

ಆ ವರದಿಯಲ್ಲಿನ ಕೆಲ ಮಾತುಗಳನ್ನು ಉದ್ಧರಿಸಿದರೆ ಭಾರತದಲ್ಲಿ ಆಗ ಜಾರಿಯಲ್ಲಿದ್ದ ಪೋಲೀಸ್‌ರಾಜ್ಯದ ಚಿತ್ರಣ ಪ್ರತಿಬಿಂಬಿತವಾಗುತ್ತದೆ.

'ಪೋಲೀಸ್‌ರಾಜ್ಯ'ವೆಂಬ ಶಬ್ದವನ್ನು ನಾವು ಸಾಕಷ್ಟು ಬಾರಿ ಕೇಳಿದ್ದೆವಾದರೂ ನಮಗೆ ಅದರ ಅರ್ಥವ್ಯಾಪ್ತಿ ತಿಳಿದಿರಲಿಲ್ಲ. 'ಮೊದಲು ಬಡಿದು ಆಮೇಲೆ ವಿಚಾರಿಸು' ಎನ್ನುವುದೇ ಆ ಪೋಲೀಸ್ ರಾಜ್ಯದಲ್ಲಿ ನಾವು ಕಂಡ ಕಾರ್ಯವೈಖರಿ. ಪೋಲೀಸ್ ದುರ್ವರ್ತನೆ ಕೇವಲ ಕೆಳದರ್ಜೆಯವರಿಗೆ

ಸೀಮಿತವಾಗಿಲ್ಲ. ಎಲ್ಲಾ ವರ್ಗದ ದೇಶ ಪ್ರೇಮಿ ಸ್ವಯಂಸೇವಕರಿಗೂ ಇದರ ಬಿಸಿ ತಟ್ಟಿದೆ...... ಬಹುಮಟ್ಟಿಗೆ ಲಷ್ಕರಿ ಶಾಸನ ಜಾರಿಯಲ್ಲಿರುವಂತಿದೆ......'

ಈ ವರದಿ ಬಂದನಂತರ ಬ್ರಿಟಿಷ್ ಸರಕಾರ ದಿನಾಂಕ ೧೭ ನವಂಬರ್ ೧೯೩೨ರಲ್ಲಿ ಮೂರನೇ ದುಂಡುಮೇಜಿನಪರಿಷತ್ತನ್ನು ಆಯೋಜಿಸಿತು. ಬ್ರಿಟಿಷ್ ಸರಕಾರದ ಮಾತಿನಲ್ಲಿ ನಂಬಿಕೆಯನ್ನು ಕಳೆದುಕೊಂಡಿದ್ದ ಕಾಂಗ್ರೆಸ್ ಈ ಅಧಿವೇಶನವನ್ನು ಬಹಿಷ್ಕರಿಸಿತು.

ಗಾಂಧೀಜಿ ವೈಯಕ್ತಿಕ ಕಾಯಿದೆ ಭಂಗ ಚಳವಳಿಯನ್ನು ಪಾದಯಾತ್ರೆ ಮೂಲಕ ಆಗಸ್ಟ್ ೧, ೧೯೩೩ ರಂದು ಪ್ರಾರಂಭಿಸಲು ನಿರ್ಧರಿಸಿದ್ದರು. ಆದರೆ ಇದರ ಹಿಂದಿನ ದಿನವೇ ಗಾಂಧೀಜಿಯವರನ್ನು ಹಾಗೂ ಮೂವತ್ತನಾಲ್ಕು ಆಶ್ರಮವಾಸಿಗಳನ್ನು ಬಂಧಿಸಿ ಸೆರೆಮನೆಗೆ ಕಳುಹಿಸಲಾಗಿತ್ತು. ಅನಂತರ ಅವರ ವಿಚಾರಣೆ ನಾಟಕ ಆಡಿ ಒಂದು ವರ್ಷದ ಸೆರೆಶಿಕ್ಷೆ ವಿಧಿಸಲಾಯಿತು.

ಗಾಂಧಿ ಮೊದಲಿನಿಂದಲೂ ಸಾಧಿಸಲು ಪ್ರಯತ್ನಿಸುತ್ತಿದ್ದ ಹಿಂದೂ-ಮುಸ್ಲಿಂ ಐಕ್ಯತೆ ಮನೋಭಾವ ಎಲ್ಲೆಡೆ ಶಿಥಿಲಗೊಂಡಿತ್ತು. ಮಹಮದ್ ಅಲಿ ಅಖಿಲ ಭಾರತ ಮುಸ್ಲಿಂ ಸಮ್ಮೇಳನದ ಸಭೆಯಲ್ಲಿ 'ನಾವು ಗಾಂಧಿ (ಇನ್ನು ಮುಂದೆ ಮಹಾತ್ಮ ಅಲ್ಲ) ಯೊಡನೆ ಸೇರುವುದನ್ನು ನಿರಾಕರಿಸುತ್ತೇವೆ. ಏಕೆಂದರೆ ಆತನ ಚಳುವಳಿ ಭಾರತದ ಸಂಪೂರ್ಣ ಸ್ವಾತಂತ್ರ್ಯದ ಚಳವಳಿಯಾಗಿರದೆ. ಎಪ್ಪತ್ತು ಮಿಲಿಯನ್ ಭಾರತೀಯ ಮುಸ್ಲಿಮರನ್ನು ಹಿಂದೂ ಮಹಾಸಭೆಯ ಆಶ್ರಿತರನ್ನಾಗಿ ಮಾಡುವುದಾಗಿದೆ......' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದ್ದರು.

ಮುಸ್ಲಿಂಲೀಗ್‌ನ ಈ ಅಭಿಮತದ ಹಿನ್ನೆಲೆಯಲ್ಲೇ ಬ್ರಿಟಿಷ್ ಸರಕಾರ ಘೋಷಿಸಿತ್ತು "ಎರಡು ಪ್ರಮುಖ ಜಾತಿಗಳ ಅಂದರೆ ಹಿಂದೂ-ಮುಸ್ಲಿಮರ ನಡುವೆ ಸೌಹಾರ್ದದ' ಒಪ್ಪಂದ ಸಾಧ್ಯವಿಲ್ಲದಿದ್ದರೆ ಯಾವುದೇ ರಿಯಾಯಿತಿಯನ್ನು ಭಾರತಕ್ಕೆ ಕೊಡಲು ಸಾಧ್ಯವಿಲ್ಲ."

ಈ ರಾಜಕೀಯ ನಿರ್ಣಯ ಸರ್ಕಾರದ 'ಒಡೆದು ಆಳುವ' ನೀತಿಯನ್ನು ಪ್ರತಿಪಾದಿಸಿತ್ತು.

ಗಾಂಧಿ-ಇರ್ವಿನ್ ಒಪ್ಪಂದದ ನಂತರ 'ಕಾಯಿದೆ ಭಂಗ' ಚಳುವಳಿಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದ್ದರೂ ಅದು ಭಾರತದ ಹಲವೆಡೆ

ಸಚೇತನವಾಗೇ ಇತ್ತು. ಮುಷ್ಕರ, ದಂಗೆ, ಲೂಟಿ ಮುಂತಾದ ಚಟುವಟಿಕೆಗಳು ನಡೆಯುತ್ತಲೇ ಇದ್ದವು.

ದಿನಾಂಕ ೨೦, ಮೇ, ೧೯೩೪ ರಂದು ಸೇರಿದ್ದ ಅಖಿಲಭಾರತ ಕಾಂಗ್ರೆಸ್ ಸಮಿತಿ ಈ ರೋಗಗ್ರಸ್ತವಾಗಿದ್ದ 'ಕಾಯಿದೆಭಂಗ ಚಳುವಳಿ'ಯನ್ನು ಅಧಿಕೃತವಾಗಿ ಮುಕ್ತಾಯಗೊಳಿಸಿದ ಘೋಷಣೆ ಮಾಡಿತು. ಇದನ್ನು ಗಮನಿಸಿದ ಸರ್ಕಾರ ಕಾಂಗ್ರೆಸ್ ಸಂಸ್ಥೆಯ ಮೇಲೆ ಹೇರಿದ್ದ ನಿಷೇದಾಜ್ಞೆಯನ್ನು ಬಂಗಾಳ ಮತ್ತು ವಾಯುವ್ಯ ಗಡಿನಾಡು ಬಿಟ್ಟು ಇತರೆಲ್ಲೆಡೆ ಜೂನ್ ೧೨ ರಂದು ಹಿಂತೆಗೆದುಕೊಂಡಿತು ಮತ್ತು ಕಾಯಿದೆಭಂಗ ಚಳುವಳಿಗೆ ಸಂಬಂಧಿಸಿದಂತೆ ಸೆರೆಯಲ್ಲಿದ್ದ ಎಲ್ಲಾ ಸ್ವಯಂಸೇವಕರನ್ನು ಬಿಡುಗಡೆಮಾಡಿತು. ೧೯೩೫ರಲ್ಲಿ ಹೊಸದೊಂದು ಸರಕಾರ ಸ್ಥಾಪನೆಗೆ ಅವಕಾಶ ಕಲ್ಪಿಸಿ ಕೊಡಲಾಯಿತು. ಕೇಂದ್ರಾಡಳಿತದಲ್ಲೂ ಪ್ರಜಾಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು.

* * *

ಕಾಂಗ್ರೆಸ್‌ನ ರಾಜಕೀಯ ಸಮರ ಒಂದು ಹಂತಕ್ಕೆ ಬಂದು ನಿಂತಿದ್ದುದರಿಂದ ಅದು ಇತರ ಸಾಮಾಜಿಕ, ಜನಪರ, ಜನಹಿತ ಕಾರ್ಯಾಚರಣೆಯತ್ತ ಗಮನಹರಿಸತೊಡಗಿತು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಮುಖ್ಯ ಚಟುವಟಿಕೆಗಳಾದ ಪಾನ ನಿರೋಧ, ಖಾದಿ ಬಳಕೆಗೆ ಪ್ರೋತ್ಸಾಹ, ಕೃಷಿಕರಿಗೆ ಸಾಲ ನೀಡಿಕೆ, ಸ್ವದೇಶಿ ವಸ್ತುಗಳ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ, ಹರಿಜನ ಉದ್ಧಾರ, ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಧಾರ ಚಳವಳಿ, ಹಿಂದೂ-ಮುಸ್ಲಿಂ ಏಕತೆ, ಸರ್ವೋದಯ ಸಮಾಜ ನಿರ್ಮಾಣ ಮುಂತಾದವುಗಳಿಗೆ ಪ್ರೋತ್ಸಾಹ ನೀಡುವ ಕಾರ್ಯದಲ್ಲಿ ಕಾಂಗ್ರೆಸ್ ತೊಡಗಿತು.

ಗಾಂಧೀಜಿ ತಮ್ಮೆಲ್ಲ ಶಕ್ತಿ-ಗಮನವನ್ನು ಅಸ್ಪೃಶ್ಯತಾ ಸಮಸ್ಯೆಯತ್ತಲೇ ಕೇಂದ್ರೀಕರಿಸಿದರು.

ಗಾಂಧೀಜಿ ಅಸ್ಪೃಶ್ಯರನ್ನು 'ಹರಿಜನರು' ಭಗವಂತನಿಗೆ ಪ್ರಿಯರಾದ ಜನ ಎಂದು ಬಹುಪ್ರೀತಿಯಿಂದ ಸಂಬೋಧಿಸುತ್ತಿದ್ದರು. ಅವರ ಸೇವೆಗಾಗಿ 'ಹರಿಜನ'- 'ಹರಿಜನಸೇವಕ' - 'ಹರಿಜನಬಂಧು' ಎಂಬ ವಿಶೇಷ ಪತ್ರಿಕೆಗಳನ್ನು ಹೊರತಂದು ಭಾರತದಲ್ಲಿ ಅಸ್ಪೃಶ್ಯತೆ ಪೂರ್ಣವಾಗಿ ನಿರ್ನಾಮವಾಗುವವರೆಗೂ ತಮ್ಮ ಸಾಬರಮತಿ ಆಶ್ರಮಕ್ಕೆ ಕಾಲಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು.

ವಾರ್ಧಾ ಬಳಿ 'ಸೇವಾಗ್ರಾಮ' ಎಂಬ ಪ್ರತ್ಯೇಕ ಆಶ್ರಮವನ್ನು ಸ್ಥಾಪಿಸಿದರು. ಗಾಂಧೀಜಿಯವರ ಹತ್ಯೆ ಆಗುವತನಕ ಇದೇ ಅವರೆಲ್ಲ ಚಟುವಟಿಕೆಗಳ ಕೇಂದ್ರ ಸ್ಥಾನವಾಗಿತ್ತು. 'ಸೇಗಾಂವ್' ಹಳ್ಳಿಯನ್ನು ಮಾದರಿ ಗ್ರಾಮವಾಗಿ ರೂಪಿಸಿದ ಶ್ರೇಯಸ್ಸು ಗಾಂಧಿಯವರದು. ಇದನ್ನೇ ಅವರು 'ಸೇವಾಗ್ರಾಮ'ವೆಂದು ಕರೆದರು.

ಗಂಡನ ನೆರಳಾಗಿದ್ದ ಕಸ್ತೂರಬಾ, ಗಂಡ ಅರಸಿ ತಂದ ಹರಿಜನ ಹುಡುಗಿ ಲಕ್ಷ್ಮಿಯನ್ನು ತಮ್ಮ ಮಗಳಂತೆ ಬೆಳೆಸಿ 'ದತ್ತುಪುತ್ರಿ'ಯಾಗಿ ಸ್ವೀಕರಿಸುವ ಔದಾರ್ಯ ತೋರಿಸಿ, ಗಂಡನ ಆದರ್ಶವನ್ನು ಎತ್ತಿ ಹಿಡಿದು 'ಗಂಡನಿಗೆ ತಕ್ಕ ಸತಿ' ಎನಿಸಿಕೊಂಡರು.

೧೯೩೬-೩೭ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಜಯಗಳಿಸಿತು. ಆ ಪ್ರಾಂತಗಳಲ್ಲಿ ಮಂತ್ರಿ ಮಂಡಲಗಳನ್ನು ರಚಿಸುವ ಮಾತು ಬಂದಾಗ ಮುಸ್ಲಿಂಲೀಗ್ ಮುಂತಾದ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳನ್ನು ಸೇರಿಸಿಕೊಂಡು ಮಿಶ್ರ ಮಂಡಲಗಳನ್ನು ರಚಿಸಲು ಕಾಂಗ್ರೆಸ್ ನಿರಾಕರಿಸಿತು. ತನ್ನ ಪಕ್ಷದ ಸದಸ್ಯರೇ ಉಳ್ಳ ಮಂತ್ರಿಮಂಡಲಗಳನ್ನು ರಚಿಸಿತು.

ಮಹಮದೀಯರೂ, ಹಿಂದೂಗಳೂ ಬೇರೆಬೇರೆ ಜನಾಂಗಗಳೆಂದೂ, ಮಹಮದೀಯರಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂದೂ, ಮುಸ್ಲಿಂಲೀಗ್ ಅಧ್ಯಕ್ಷ ಜಿನ್ನಾ ವಾದಿಸತೊಡಗಿದರು. ಮುಂದೆ ಭಾರತ ಇಬ್ಭಾಗವಾಗಲು ಇದೇ ಬುನಾದಿಯಾಯಿತು.

ಬಹಳಷ್ಟು ಪ್ರಾಂತಗಳಲ್ಲಿ ಕಾಂಗ್ರೆಸ್ ಸರಕಾರಗಳು ಯಶಸ್ವಿಯಾಗಿಯೇ ಕೆಲಸ ನಿರ್ವಹಿಸಿದವು. ಇದರಿಂದಾಗಿ ಕಾಂಗ್ರೆಸ್ ಜನಪ್ರಿಯತೆ ಹೆಚ್ಚಿತು. ಆದರೆ ಗಾಂಧಿಯವರೊಡನೆ ಭಿನ್ನಾಭಿಪ್ರಾಯ ಬೆಳೆಸಿಕೊಂಡಿದ್ದ ಸುಭಾಷ್‌ಚಂದ್ರ ಬೋಸರು ಕಾಂಗ್ರೆಸ್ ಒಳಗೆ ತಮ್ಮದೇ ಆದ ಒಂದು ಪಕ್ಷ 'ಫಾರ್ವರ್ಡ್ ಬ್ಲಾಕ್' ಕಟ್ಟಿದರು.

ಬೋಸ್ ಮತ್ತು ಗಾಂಧಿ-ನೆಹರೂರವರ ಮಧ್ಯೆ ಇದ್ದ ವೈಮನಸ್ಸಿಗೆ ಕಾರಣ ಗಾಂಧಿ ಬ್ರಿಟಿಷರತ್ತ ತೋರುತ್ತಿದ್ದ ಒಲವು. ಜರ್ಮನಿ ಮತ್ತು ಬ್ರಿಟನ್ ಮಧ್ಯೆ ಯುದ್ಧವಾಗುತ್ತಿರುವ ಈ ಸುಸಮಯವನ್ನು ಉಪಯೋಗಿಸಿಕೊಂಡು ಭಾರತ ಸ್ವಾತಂತ್ರ್ಯ ಗಳಿಸಲು ತೀವ್ರ ಹೋರಾಟ ನಡೆಸಬೇಕೆನ್ನುವುದು ಬೋಸರ

ಅಭಿಪ್ರಾಯವಾಗಿತ್ತು. ಆದರೆ ಗಾಂಧೀಜಿ ಇದನ್ನು ಸ್ಪಷ್ಟವಾಗಿ ವಿರೋಧಿಸಿದರು. ಬ್ರಿಟನ್ ಕಷ್ಟದಲ್ಲಿರುವಾಗ ಅವರಿಗೆ ಸಹಾಯ ಮಾಡುವುದು ಮಾನವತಾ ಧರ್ಮ. ಹಾಗೆ ಮಾಡದೆ ಸಮಯ ಸಾಧಕರಾಗುವುದು ಅಧರ್ಮದ ಕೆಲಸವಾಗುತ್ತದೆ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಆ ದಿನಗಳಲ್ಲಿ ಕಾಂಗ್ರೆಸ್ ಸಂಸ್ಥೆಯೊಳಗೆ ಗಾಂಧಿಯವರ ಸ್ಥಾನ ಒಂದು ವಿಚಿತ್ರ ಸ್ಥಿತಿಯಲ್ಲಿತ್ತು. ಅವರು ೧೯೩೪ರಿಂದ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯರೇ ಆಗಿರಲಿಲ್ಲ. ಆದರೂ ಅವರು ಎಲ್ಲಾ ಎ.ಐ.ಸಿ.ಸಿ. ಮೀಟಿಂಗ್‌ಗಳಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸುತ್ತಿದ್ದರು. ಕಾಂಗ್ರೆಸ್ ಸಂಸ್ಥೆ ಇವರ ಸಲಹೆಯನ್ನು ಕೇಳದೆ ಯಾವ ತೀರ್ಮಾನವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಎಂದೂ ಇವರ ನಿರ್ಣಯವೇ ನಿರ್ಣಾಯಕವಾಗಿರುತ್ತಿತ್ತು.

ನೆಹರೂ ಇವರ ವಿಶೇಷ ಸ್ಥಾನಮಾನದ ಬಗ್ಗೆ ಹೀಗೆ ಹೇಳುತ್ತಿದ್ದರು: 'ಕಾಂಗ್ರೆಸ್‌ನ ಖಾಯಂ ಪರಮೋಚ್ಚ ಅಧ್ಯಕ್ಷರು ಗಾಂಧೀಜಿ'. ಮತ್ತೆ ಗೌರವದಿಂದ 'ಕಾಂಗ್ರೆಸ್ ಎಂದರೆ ಗಾಂಧೀಜಿ' ಎಂದೂ ಹೇಳುತ್ತಿದ್ದರು.

೧೯೩೯ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾದಾಗ ಸಾರ್ವಭೌಮರಾಗಿದ್ದ ಬ್ರಿಟಿಷರು, ಭಾರತೀಯ ಮುಖಂಡರನ್ನು ಔಪಚಾರಿಕವಾಗಿಯೂ ಈ ಬಗ್ಗೆ ಚರ್ಚಿಸದೆ ಭಾರತದ ಸೈನಿಕರನ್ನು ಯುದ್ಧರಂಗಕ್ಕೆ ದೂಡಿತು. ಈ ಸರ್ವಾಧಿಕಾರಿವರ್ತನೆಯನ್ನು ಕಾಂಗ್ರೆಸ್ ಉಗ್ರವಾಗಿ ಖಂಡಿಸಿತು.

ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲಾ ಮಂತ್ರಿಮಂಡಲಗಳೂ ರಾಜೀನಾಮೆ ನೀಡಿದವು. ಗಾಂಧೀಜಿ ಹಿಟ್ಲರನಿಗೂ ಯುದ್ಧ ನಿಲ್ಲಿಸುವಂತೆ ಪತ್ರ ಬರೆದರು. ಬ್ರಿಟಿಷ್ ಸರಕಾರವನ್ನು ಇಂತಹ ಸ್ಥಿತಿಯಲ್ಲಿ ಕಷ್ಟದಲ್ಲಿ ಕೆಡಹುವುದು ಗಾಂಧೀಜಿಗೆ ಸುತರಾಂ ಇಷ್ಟವಿರಲಿಲ್ಲ. ಆದರೂ ಯುದ್ಧ ಕಾರಣದಿಂದಾಗಿ ಭಾರತವನ್ನು ಸುಲಿಗೆ ಮಾಡುವುದೂ ಸಹನವಾಗಲಿಲ್ಲ. ಅಸಹಕಾರವನ್ನು 'ವ್ಯಕ್ತಿಸತ್ಯಾಗ್ರಹ' ದ ಮೂಲಕ ವ್ಯಕ್ತಪಡಿಸಿದರು. ಈ ಸತ್ಯಾಗ್ರಹ ಗಾಂಧೀ ಆರಿಸಿ ಒಪ್ಪಿಗೆ ಕೊಟ್ಟ ಕೆಲವರಿಂದ ಮಾತ್ರ ನಡೆಯಿತು. ಆ ವೇಳೆಗಾಗಲೇ ಸರ್ಕಾರ ನೆಹರೂರವರನ್ನು ಬಂಧಿಸಿತ್ತು. ಆಚಾರ್ಯ ವಿನೋಬಾಭಾವೇ ಸಹ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು. ವ್ಯಕ್ತಿಸತ್ಯಾಗ್ರಹಿಗಳ ಸಂಖ್ಯೆ ದಿನೇದಿನೇ ಹೆಚ್ಚಿತು. ಸರಕಾರವೂ ಅವರನ್ನೆಲ್ಲಾ ಸೆರೆ ಹಿಡಿಯಿತು.

ಬ್ರಿಟಿಷರು ಯುದ್ಧದಲ್ಲಿ ತೊಡಗಿರುವಾಗಲೇ ಸ್ವಾತಂತ್ರ್ಯ ಪಡೆಯುವ ಸುಸಮಯವೆಂದು ಭಾವಿಸಿದ್ದ ಸುಭಾಷ್‌ಚಂದ್ರಬೋಸರು ತಮ್ಮನ್ನು ಬಂಧನದಲ್ಲಿರಿಸಿದ್ದ ಬ್ರಿಟಿಷರ ಸೆರೆಮನೆಯಿಂದ ಪಾರಾಗಿ ಹೋಗಿ ೧೯೪೧ರಲ್ಲಿ ಜರ್ಮನಿ ಸೇರಿ ಭಾರತ ವಿಮೋಚನೆಗಾಗಿ 'ಆಜಾದ್‌ಹಿಂದು ಸೇನೆ' ಕಟ್ಟುವ ಪ್ರಯತ್ನ ನಡೆಸಿದರು. ಸುಭಾಷ್‌ಚಂದ್ರಬೋಸರು ೧೯೨೧ ರಿಂದ ೧೯೪೧ರವರೆಗೆ ಹನ್ನೊಂದು ಸಲ ಜೈಲುವಾಸ ಅನುಭವಿಸಿದ್ದರು ಎಂಬುದನ್ನು ನೆನೆಯಬಹುದು. ಈ ಸೇನೆಯ ಬಾವುಟದ ಲಾಂಛನ 'ಹುಲಿ'ಯಾಗಿತ್ತು. ಈ ಜಾಗತಿಕ ಯುದ್ಧದಲ್ಲಿ ಬ್ರಿಟಿಷರ ವಿರುದ್ಧ ಪಕ್ಷ ಸೇರಿದ್ದ ಜಪಾನ್ ಈ ಯುದ್ಧದಲ್ಲಿ ಭಾಗಿಯಾಯಿತು. ಜಪಾನ್‌ನಲ್ಲಿದ್ದ ಭಾರತದ ಕ್ರಾಂತಿಕಾರಿ ರಾಸ್‌ಬಿಹಾರಿ ಬೋಸ್ ಈ ಐ.ಎನ್.ಎ.ಗೆ ಜನರನ್ನು ಸೇರಿಸಿಕೊಳ್ಳತೊಡಗಿದರು. ಅಲ್ಲಿ ಸುತ್ತಮುತ್ತಲ ದೇಶಗಳಲ್ಲಿದ್ದ ಭಾರತೀಯರು ಹಾಗೂ ಜಪಾನ್‌ಗೆ ಸೆರೆಸಿಕ್ಕಿದ್ದ ಬ್ರಿಟಿಷ್ ಸೈನ್ಯದ ಭಾರತೀಯರು ಈ ಸೇನೆಗೆ ದೇಶಾಭಿಮಾನದಿಂದ ಅಧಿಕ ಸಂಖ್ಯೆಯಲ್ಲಿ ಸೇರಿಕೊಳ್ಳತೊಡಗಿದರು. ೧೯೪೩ರಲ್ಲಿ ಸುಭಾಷ್‌ಚಂದ್ರ ಬೋಸ್ ಸಿಂಗಪುರಕ್ಕೆ ಬಂದಾಗ ರಾಸ್‌ಬಿಹಾರಿಯವರು ಅವರಿಗೆ ಐ.ಎನ್.ಎ. ನಾಯಕತ್ವ ವಹಿಸಿಕೊಟ್ಟರು. ಬ್ರಿಟಿಷರ ವಿರುದ್ಧ ಯುದ್ಧ ಸಾರಿದರು. 'ದಿಲ್ಲಿ ಚಲೊ' ಘೋಷಿಸಿದರು. ಬರ್ಮಾ ಕಡೆಯಿಂದ ಭಾರತ ಗಡಿ ಪ್ರವೇಶಿಸಿದ ಈ ಸೈನ್ಯ ೧೫೦೦ ಚ.ಮೈಲಿಗೂ ಹೆಚ್ಚು ಪ್ರದೇಶವನ್ನು ಆಕ್ರಮಿಸಿಕೊಂಡು ಧ್ವಜ ಹಾರಿಸಿ ಸ್ವಾತಂತ್ರ್ಯ ಘೋಷಿಸಿತು. 'ಆಜಾದ್‌ಹಿಂದ್' ಸರಕಾರ ಸ್ಥಾಪಿತವಾಯಿತು.

ಜಪಾನ್ ಯುದ್ಧದಲ್ಲಿ ಸೋತಾಗ ಬ್ರಿಟಿಷ್ ಸರಕಾರ ಐ.ಎನ್.ಎ.ಯ ಕ್ಯಾಪ್ಟನ್ ಷಾನವಾಜ್ ಖಾನ್; ಕ್ಯಾಪ್ಟನ್ ಲಕ್ಷ್ಮಿ ; ಲೆಫ್ಟಿನೆಂಟ್ ಧಿಲ್ಲಾನ್ ಮುಂತಾದವರನ್ನು ಬಂಧಿಸಿ, ಅನಂತರ ಜನರ ಒತ್ತಾಯಕ್ಕೆ ಮಣಿದು ಕೆಲದಿನಗಳ ನಂತರ ಬಂಧಿತರನ್ನು ಬಿಡುಗಡೆ ಮಾಡಿತು.

* * *

ಕಾಂಗ್ರೆಸ್‌ನ ಎಲ್ಲಾ ಧ್ಯೇಯ ಧೋರಣೆ ಹಾಗೂ ಅದು ಅನುಸರಿಸುತ್ತಿದ್ದ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಒಪ್ಪದ ಒಂದು ಗುಂಪು ಕಾಂಗ್ರೆಸ್‌ನ ಒಳಗಿತ್ತು. ಆ ಗುಂಪಿನ ಪ್ರಮುಖರು ಜಯಪ್ರಕಾಶ್ ನಾರಾಯಣರು. ಅಶೋಕ ಮೆಹ್ತಾ, ಅಚ್ಯುತ ಪಟವರ್ಧನ್ ಮತ್ತು ಇ.ಎಂ.ಎಸ್. ನಂಬೂದರಿಪಾದ್

ಮುಂತಾದ ಕೆಲವರು ಜಯಪ್ರಕಾಶ್ ನಾರಾಯಣರವರ ಬೆಂಬಲಿಗರಾಗಿದ್ದರು. ಇವರೆಲ್ಲರೂ ಹುಟ್ಟು ಹಾಕಿದ ಸಂಸ್ಥೆ 'ಸಮಾಜವಾದಿ' ಪಕ್ಷ (ಸೋಷಲಿಸ್ಟ್ ಪಾರ್ಟಿ). ಆರಂಭದಲ್ಲಿ ಈ ಪಾರ್ಟಿ ಕಾಂಗ್ರೆಸ್‌ನೊಳಗಿನ ಸಹಪಾರ್ಟಿಯಾಗಿತ್ತು. ಕಾಂಗ್ರೆಸ್ ಸದಸ್ಯರು ಇದರ ಸದಸ್ಯರಾಗಿರುತ್ತಿದ್ದರು. ಈ ಎರಡು ಸಂಸ್ಥೆಗಳ ಮಧ್ಯೆ ಆಂತರಿಕವಾಗಿ ಹಲವು ಭಿನ್ನಾಭಿಪ್ರಾಯಗಳಿದ್ದರೂ ರಾಷ್ಟ್ರೀಯ ವಿಚಾರಗಳಲ್ಲಿ ಮಾತೃ ಸಂಸ್ಥೆಯಾದ ಕಾಂಗ್ರೆಸ್‌ನೊಡನೆ ಪೂರ್ಣರೀತಿಯಲ್ಲಿ ಸಹಕರಿಸುತ್ತಿತ್ತು. ಈ ಸಮಾಜವಾದಿ ಪಕ್ಷದತ್ತ ಹೆಚ್ಚುವಾಲಿದ್ದ ತೀವ್ರಗಾಮಿ ಪಕ್ಷದ ಸುಭಾಷ್‌ಚಂದ್ರಬೋಸರು ೧೯೩೮ ಫೆಬ್ರವರಿ ೧೯ ರಂದು ಗುಜರಾತಿನ 'ಹರಿಪುರ'ದಲ್ಲಿ ನಡೆದ ೫೧ನೇ ಕಾಂಗ್ರೆಸ್ ಅಧಿವೇಶನದಲ್ಲಿ ಸರ್ವಾನುಮತದಿಂದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ೧೯೩೯ ರಲ್ಲಿ ಎರಡನೇ ಬಾರಿ ಅಧ್ಯಕ್ಷರಾಗಬೇಕೆಂಬ ಒಲವನ್ನು ಬೋಸ್ ತೋರಿದಾಗ ಗಾಂಧಿ ಇವರಿಗೆ ಬೆಂಬಲ ಸೂಚಿಸಲಿಲ್ಲ. ಸಾಮಾನ್ಯವಾಗಿ ಗಾಂಧಿಯವರೇ ಎಲ್ಲಾ ಅಧಿವೇಶನ ಗಳಲ್ಲೂ ಅಧ್ಯಕ್ಷರು ಯಾರಾಗಬೇಕೆಂದು ನಿರ್ಧರಿಸುತ್ತಿದ್ದರು. ೧೯೩೮ರಲ್ಲಿ ಸುಭಾಷ್ ಅಧ್ಯಕ್ಷರಾಗುವುದಕ್ಕೆ ಗಾಂಧಿ ವಿರೋಧ ತೋರಿರಲಿಲ್ಲ. ಈ ಸಾರಿ ಅಬ್ದುಲ್ ಕಲಾಂ ಅಜಾದ್‌ರ ಹೆಸರನ್ನು ಅಧ್ಯಕ್ಷಗಾದಿಗೆ ಸೂಚಿಸಿದ್ದರು. ಅಧ್ಯಕ್ಷರಾಗಲು ಒಪ್ಪದ ಕಲಾಂ, ನಾಮಪತ್ರವನ್ನು ಹಿಂದಕ್ಕೆ ಪಡೆದಾಗ ಗಾಂಧಿ ಡಾ. ಪಟ್ಟಾಭಿ ಸೀತಾರಾಮಯ್ಯನವರ ಹೆಸರನ್ನು ಸೂಚಿಸಿದರು. ಚುನಾವಣೆ ನಡೆದಾಗ ಸುಭಾಷ್ ೯೫ ಮತಗಳಿಂದ ವಿಜಯಿಗಳಾಗಿದ್ದರು.

ಬ್ರಿಟಿಷರು ಯುದ್ಧದಲ್ಲಿ ತೊಡಗಿದಾಗ ಅವರಿಗೆ ಯಾವ ರೀತಿಯ ಸಹಕಾರ, ಸಹಾಯ ನೀಡುವುದು ಸುಭಾಷ್‌ಚಂದ್ರಬೋಸರಿಗೆ ಕಿಂಚಿತ್ತೂ ಇಷ್ಟವಿರಲಿಲ್ಲ. ಆದರೆ ಕಾಂಗ್ರೆಸ್‌ನಲ್ಲಿ ಒಂದು ಬಣ, ಗಾಂಧಿ, ನೆಹರೂ ಮುಂತಾದವರು ಬ್ರಿಟಿಷರಿಗೆ ಸಹಾಯ ಮಾಡಲು ಒಲವು ತೋರಿಸುತ್ತಿದ್ದರು. ಈ ನಿಟ್ಟಿನಲ್ಲಿ ಎ.ಐ.ಸಿ.ಸಿ. ಒಂದು ಸ್ಪಷ್ಟ ನಿಲುವು ತಳೆಯಲು ಕಷ್ಟವಾದಾಗ ಸುಭಾಷ್ ಬೇಸರಗೊಂಡು ಏಪ್ರಿಲ್ ೨೦ ರಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ 'ಫಾರ್‌ವರ್ಡ್‌ಬ್ಲಾಕ್' ಎಂಬ ನೂತನ ಪಕ್ಷವೊಂದನ್ನು ಕಟ್ಟಿದರು. "ಶಿಸ್ತಿರುವ ವಾಮಪಕ್ಷ ಇಲ್ಲದೇ ಇರುವ ಸಂದರ್ಭದಲ್ಲಿ ಗಾಂಧೀ ಪಕ್ಷದವರೊಡನೆ ಹೋರಾಡುವುದು ಅಸಾಧ್ಯ" ಎಂದು ಗುಡುಗಿದರು.

ಮುಸ್ಲಿಂ ಲೀಗ್, ಷರತ್ತಿನ ಮೇಲೆ ಬ್ರಿಟಿಷ್ ಸರಕಾರಕ್ಕೆ ಬೆಂಬಲ ಹಾಗೂ ಸಹಕಾರ ನೀಡಲು ಮುಂದಾಯಿತು.

(i) ಕಾಂಗ್ರೆಸ್ ಪ್ರಾಂತಗಳಲ್ಲಿ ಮುಸ್ಲಿಮರಿಗೆ 'ನ್ಯಾಯ ಹಾಗೂ ತೃಪ್ತಿಕರ ಒಡನಾಟ'ಗಳ ಆಶ್ವಾಸನೆಯನ್ನು ಸರಕಾರ ನೀಡಬೇಕು.

(ii) ಭಾರತಕ್ಕೆ ಸಂವಿಧಾನಾತ್ಮಕ ಸ್ಥಾನಮಾನಗಳನ್ನು ನೀಡುವ ಪ್ರಶ್ನೆಗೆ ಸಂಬಂಧಿಸಿದಂತೆ ಅಖಿಲ ಭಾರತ ಮುಸ್ಲಿಂ ಲೀಗಿನ ಅನುಮತಿ ಹಾಗೂ ಮನ್ನಣೆಯನ್ನು ಪಡೆಯದೆಯೇ ಯಾವುದೇ ಘೋಷಣೆಯನ್ನು ಮಾಡಬಾರದು, ಸಂವಿಧಾನ ರೂಪಿಸಬಾರದು ಹಾಗೂ ಭಾರತದ ಮುಸ್ಲಿಮರನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆ 'ಮುಸ್ಲಿಮ್‌ಲೀಗ್' ಎಂದು ಮನ್ನಣೆ ನೀಡಬೇಕು.

ಜಗತ್ತಿನ ಎರಡನೇ ಮಹಾಯುದ್ಧ ಪ್ರಾರಂಭವಾದಾಗ ಬ್ರಿಟಿಷ್ ಸರಕಾರ ಭಾರತೀಯರನ್ನು ಕೇಳದೆ ಭಾರತದ ಸೈನ್ಯವನ್ನು ಯುದ್ಧದಲ್ಲಿ ತೊಡಗಿಸಿ 'ಭಾರತವು ಯುದ್ಧಾಸಕ್ತ ರಾಷ್ಟ್ರ'ವೆಂದು ಘೋಷಿಸಿದುದರ ವಿರುದ್ಧವಾಗಿ ೧೯೪೧೧ರಲ್ಲಿ ರಾಮಗಡದಲ್ಲಿ ಮೌಲಾನಾ ಅಬುಲ್ ಕಲಾಂ ಆಜಾದ್ ಅಧ್ಯಕ್ಷತೆಯಲ್ಲಿ ಸೇರಿದ್ದ ಅಧಿವೇಶನ ಭುಗಿಲೆದ್ದು ಭಾರತ ಸರ್ಕಾರಕ್ಕೆ ಛೀಮಾರಿ ಹಾಕುವ ಸೂಚನೆಗೆ ಅನುಮೋದನೆ ನೀಡಿತು 'ಸಂಪೂರ್ಣ ಸ್ವಾತಂತ್ರ್ಯಕ್ಕೆ ಕಡಿಮೆ ಎನಿಸುವ ಯಾವುದೇ ವ್ಯವಸ್ಥೆಯನ್ನು ಭಾರತದ ಜನತೆ ಒಪ್ಪರು' ಎಂಬ ಗೊತ್ತುವಳಿ ಸ್ವೀಕರಿಸಿ ಸರಕಾರಕ್ಕೆ ಕಳುಹಿಸಿಕೊಟ್ಟಿತು. 'ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಪ್ರಕ್ರಿಯೆಯ ಮೊದಲ ಹೆಜ್ಜೆಯಾಗಿ ಕೇಂದ್ರದಲ್ಲಿ ಶೀಘ್ರವೇ ತಾತ್ಕಾಲಿಕವಾದ ರಾಷ್ಟ್ರೀಯ ಸರ್ಕಾರವನ್ನು ರಚಿಸತಕ್ಕದ್ದು' ಎಂದು ವೈಸರಾಯರನ್ನು ಒತ್ತಾಯಿಸಿದ ಕಾಂಗ್ರೆಸ್ 'ಈ ದಿಸೆಯಲ್ಲಿ ಸರ್ಕಾರ ಶೀಘ್ರವೇ ಅನುಕೂಲಕರವಾಗಿ ಪ್ರತಿಕ್ರಿಯಿಸದೆ ಇದ್ದರೆ ಕಾಂಗ್ರೆಸ್ ರಾಷ್ಟ್ರದ ಹಿತದೃಷ್ಟಿಯಿಂದ ಸೂಕ್ತ ಕ್ರಮಕೈಗೊಳ್ಳಲು ಸನ್ನದ್ಧವಾಗುತ್ತದೆ' ಎಂದು ಎಚ್ಚರಿಕೆಯನ್ನೂ ನೀಡಿತು.

ಈ ವೇಳೆಗೆ ಮುಸ್ಲಿಮರ ಬಗ್ಗೆ ಗಾಂಧೀಜಿ ಹಿಂದೆ ತಳೆದಿದ್ದ ಮನೋಭಾವನೆ ಪರಿವರ್ತನಗೊಂಡಿತ್ತು. ೧೯೪೦ ಜೂನ್ ೧೫ ರ 'ಹರಿಜನ' ಪತ್ರಿಕೆಯಲ್ಲಿನ ಲೇಖನ ಕಾಂಗ್ರೆಸ್ಸಿಗರನ್ನು ಆಶ್ಚರ್ಯಗೊಳಿಸಿತು. 'ಭಾರತದ

ಪರವಾಗಿ ಮಾತನಾಡುವಂತೆ ತೋರಿಸಿಕೊಳ್ಳುವ ಹಾಗೂ ಪರಿಶುದ್ಧ ಸ್ವಾತಂತ್ರ್ಯವನ್ನು ಬಯಸುವ ಕಾಂಗ್ರೆಸ್ ಹೀಗೆ ಮಾಡದವರ ಜೊತೆ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಿಲ್ಲ. ಮುಸ್ಲಿಂ ಲೀಗ್ ಯಥಾರ್ಥವಾಗಿಯೂ ಒಂದು ಕೋಮುವಾದಿ ಸಂಸ್ಥೆ. ಅದು ಭಾರತವು ಎರಡು ಭಾಗಗಳಾಗಬೇಕೆಂದು ಬಯಸುತ್ತಿದೆ........'

ಜೂನ್ ೧೫ ಮತ್ತು ೧೬ ರಂದು ನಡೆದ ಮುಸ್ಲಿಮ್‌ಲೀಗ್‌ನ ಕಾರ್ಯಕಾರಿ ಸಭೆ ಜಿನ್ನಾರವರ ಧೋರಣೆಯನ್ನು ಸಂಪೂರ್ಣವಾಗಿ ಅನುಮೋದಿಸಿ ಕೆಳಕಂಡ ನಿರ್ಣಯವನ್ನು ಅಂಗೀಕರಿಸಿತು.

(i) ವೈಸ್‌ರಾಯರೊಡನೆ ಸಂಧಾನ ನಡೆಸಲು ಜಿನ್ನಾರವರಿಗೆ ಪೂರ್ಣ ಅಧಿಕಾರವನ್ನು ನೀಡಲಾಗಿದೆ.

(ii) ಜಿನ್ನಾರ ಅನುಮತಿ ಪಡೆಯದೆ ಸಮಿತಿಯ ಯಾವುದೇ ಇತರ ಸದಸ್ಯರು ಕಾಂಗ್ರೆಸ್ ಪಕ್ಷದ ಮುಖಂಡರೊಡನೆ ಸಂಧಾನ ನಡೆಸಕೂಡದು.

(iii) ಜಿನ್ನಾರಿಂದ ಸಲಹೆ ಸೂಚನೆ ಪಡೆಯದೆ ಯಾವ ಮುಸ್ಲಿಮರೂ ಯುದ್ಧ ಸಮಿತಿಗಳಲ್ಲಿ ಸೇವೆ ಸಲ್ಲಿಸಬಾರದು.

ಯುದ್ಧಕ್ಕೆ ಭಾರತದ ಬೆಂಬಲ ಗಳಿಸಲು ಬ್ರಿಟಿಷರು 'ಆಗಸ್ಟ್ ಕೊಡುಗೆ' ಹೆಸರಿನಲ್ಲಿ ಕೆಲವು ಹೊಸ ಸಲಹೆಗಳನ್ನು ನೀಡಿದರು. ಈ ಸಲಹೆಗಳಲ್ಲಿ ಜಿನ್ನಾರವರಿಗೆ 'ವೀಟೊ' ಅಧಿಕಾರವನ್ನು ನೀಡುವ ಸಂಚು ನಡೆದಿದೆ ಎಂಬ ಸಂದೇಹ ಬಂದುದರಿಂದ ಹಾಗೂ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆ ಸ್ಪಷ್ಟ ಭರವಸೆ ಇಲ್ಲದುದರಿಂದ ಕಾಂಗ್ರೆಸ್ ಈ ಸಲಹೆಗಳನ್ನು ಒಪ್ಪಲಿಲ್ಲ. ಕಾಯಿದೆಭಂಗ ಚಳುವಳಿಯನ್ನು ಗಾಂಧೀಜಿಯ ಮುಖಂಡತ್ವದಲ್ಲಿ ಮತ್ತೆ ಪ್ರಾರಂಭಿಸಲು ಕಾಂಗ್ರೆಸ್ ಪಕ್ಷ ನಿರ್ಧರಿಸಿತು. ಸುಭಾಷ್‌ಚಂದ್ರಬೋಸ್‌ರವರ ಫಾರ್ವರ್ಡ್‌ಬ್ಲಾಕ್ ಸಹ ಇದರಲ್ಲಿ ಹೆಚ್ಚು ಆಸಕ್ತಿ ವಹಿಸಿತು.

ಯುದ್ಧ ಕಾಲದಲ್ಲಿ ಭಾರತದ ಸಮಸ್ಯೆ ದಿನದಿನಕ್ಕೆ ಕಗ್ಗಂಟಾಗುತ್ತಿದ್ದುದರಿಂದ ತಾತ್ಕಾಲಿಕವಾಗಿ ಈ ಬಿಕ್ಕಟ್ಟನ್ನು ಪರಿಹರಿಸಲು ಕ್ರಿಪ್ಸ್ ಆಯೋಗವನ್ನು ಬ್ರಿಟನ್ ಪ್ರಧಾನಮಂತ್ರಿ ಚರ್ಚಿಲ್ ರಚಿಸಿ ಕ್ರಿಪ್ಸ್‌ರವರನ್ನು ಸಂಧಾನಕ್ಕಾಗಿ ದೆಹಲಿಗೆ ಕಳುಹಿಸಿದರು. ಈ ಆಯೋಗ ೧೯೪೨ ಮಾರ್ಚ್ ೨೩ ರಂದು ದೆಹಲಿಗೆ ಬಂದಿಳಿಯಿತು.

ಭಾರತ ಸರಕಾರ ಹಾಗೂ ದೇಶೀಯ ಹಲವಾರು ಮುಖಂಡರೊಡನೆ ಮಾತುಕತೆ ನಡೆಸಿದ ಈ ಆಯೋಗ ನೀಡಿದ ಸಲಹೆಗಳು :

(i) ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ (ii) ಯುದ್ಧ ನಿಂತೊಡನೆ ಸಂವಿಧಾನ ರಚನೆ (iii) ಜನಾಂಗ ಸಂಬಂಧವಾದ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ರಕ್ಷಣೆ (iv) ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಎಲ್ಲಾ ವ್ಯವಹಾರಗಳ ಪರಮಾಧಿಕಾರ ಭಾರತದ ಕೇಂದ್ರ ಸರ್ಕಾರದ ಹೊಣೆಗಾರಿಕೆಗೆ ಸೇರಿದ್ದುದಾಗಿರುತ್ತದೆ (v) ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಪಕ್ಷಗಳ ಬೇಡಿಕೆಗಳಿಗೆ ಸಮಾನ ಪ್ರಾಧಾನ್ಯತೆ ಮುಂತಾದವು.

ಈ ಸಲಹೆಗಳನ್ನು ಕೂಲಂಕಷವಾಗಿ ಪರಾಮರ್ಶಿಸಿದ ಕಾಂಗ್ರೆಸ್ ಇವನ್ನು ವಿರೋಧಿಸಲು ತೀರ್ಮಾನಿಸಿತು. ವಿಭಜನೆಯ ಪರವಾಗಿ ನಿಶ್ಚಿತ ಘೋಷಣೆ ಇಲ್ಲದ್ದರಿಂದ ಮುಸ್ಲಿಂಲೀಗೂ ಇವನ್ನು ತಿರಸ್ಕರಿಸಿತು.

ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ರಂಗದಲ್ಲಿ ಬ್ರಿಟನ್ ಬಿಕ್ಕಟ್ಟಿಗೆ ಸಿಲುಕಿ ಕೊಂಡಾಗ ಭಾರತದಲ್ಲಿ ರಾಜಕೀಯ ಸುಧಾರಣೆ ತರುವ ಬಗ್ಗೆ ಒಲವು ತೋರುವ ನಾಟಕವನ್ನು ಬ್ರಿಟಿಷ್ ಕೇಂದ್ರೀಯ ಸರಕಾರ ಹಿಂದಿನಿಂದಲೂ ಆಡುತ್ತಲೇ ಬಂದಿತ್ತು. ಈ ಸಾರಿಯೂ ಹಾಗೆಯೇ ಆಯಿತು. ಬ್ರಿಟಿಷ್ ಸರ್ಕಾರದ ಅಟ್ಲೀಯವರಿಗೆ ಈ ಸಂಧಾನ ಯಶಸ್ವಿಯಾಗುವುದು ಬೇಕಿರಲಿಲ್ಲ ವೆಂಬುದು ಲೂಯಿ ಫಿಶರ್ ಅವರ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ :

"ಚರ್ಚಿಲ್ ಆಗಲಿ, ವೈಸ್‌ರಾಯ್ ವೇವಲ್ ಆಗಲಿ, ಕ್ರಿಪ್ಸ್ ಆಯೋಗ ಯಶಸ್ವಿಯಾಗಬೇಕೆಂದು ಬಯಸಿರಲಿಲ್ಲ. ವಾಸ್ತವವಾಗಿ ಅದು ಯಶಸ್ವಿಯಾಗ ಬಾರದೆಂದೇ ಅವರು ನಿರ್ಧರಿಸಿದ್ದರು. ಕ್ರಿಪ್ಸ್ ಪ್ರಾಮಾಣಿಕರಾಗಿದ್ದರು. ಈ ಸಮಸ್ಯೆಯನ್ನು ಪರಿಹರಿಸುವ ಬಗೆಯನ್ನೂ ತಿಳಿದಿದ್ದರು. ಅವರಿಗೆ ಯಾವುದೇ ಸ್ವಾತಂತ್ರ್ಯ ಅಥವಾ ಅಧಿಕಾರವಿದ್ದಿದ್ದರೆ, ಕೇವಲ ಐದು ನಿಮಿಷಗಳಲ್ಲಿ ಅವರು ಮತ್ತು ನೆಹರೂ ಜೊತೆಗೂಡಿ ಸಮಸ್ಯೆಯನ್ನು ಪರಿಹರಿಸುತ್ತಿದ್ದರು".

◆ ◆ ◆

೧೭. ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳುವಳಿ

ಕಾಂಗ್ರೆಸ್ ತನ್ನ ಅಂತಿಮ ಹೋರಾಟಕ್ಕೆ ಸಿದ್ಧವಾಯಿತು. ೧೯೪೨ ಆಗಸ್ಟ್ ೮ನೇ ತಾರೀಖು ಬೊಂಬಾಯಿಯಲ್ಲಿ ಸೇರಿದ ಎ.ಐ.ಸಿ.ಸಿ.ಯು 'ಬ್ರಿಟಿಷರೇ ಭಾರತವನ್ನು ಬಿಟ್ಟುತೊಲಗಿ' ನಿರ್ಣಯವನ್ನು ಪ್ರಚಂಡ ಬಹುಮತದಿಂದ ಅನುಮೋದಿಸಿತು. ಗಾಂಧಿಯು ಈ ನಿಲುವನ್ನು 'ಅಹಿಂಸಾತ್ಮಕ ದಂಗೆ' ಅಥವಾ 'ಆಯುಧರಹಿತ ಕ್ರಾಂತಿ' ಎಂದು ಘೋಷಿಸಿದರು. ಮುಂದೆ ಮಾತನಾಡುತ್ತಾ ಅವರು "ನೀವು ಪ್ರತಿಯೊಬ್ಬರೂ ಈ ಕ್ಷಣದಿಂದ ಪೂರ್ಣ ಸ್ವತಂತ್ರರು ಎಂದು ತಿಳಿಯಬೇಕು. ಹಾಗೇ ನಿರ್ಭಯದಿಂದ ವರ್ತಿಸಬೇಕು. ಪೂರ್ಣ ಸ್ವಾತಂತ್ರ್ಯಕ್ಕೆ ಎಳ್ಳಷ್ಟು ಕಡಿಮೆಯಾದರೂ ಅದು ನಮಗೆ ಸಮ್ಮತವಿಲ್ಲ. 'ಮಾಡು ಇಲ್ಲವೆ ಮಡಿ' ಇದೇ ಪ್ರತಿಯೊಬ್ಬ ಭಾರತೀಯನ ನಿರ್ಧಾರ. ಕಾಂಗ್ರೆಸ್ ಸಂಸ್ಥೆ ನನ್ನ ಮೇಲೆ ವಿಶ್ವಾಸವಿಟ್ಟು ಈ ಚಳುವಳಿಯ ನೇತೃತ್ವ ವಹಿಸುವ ಗುರುತರ ಜವಾಬ್ದಾರಿಯನ್ನು ನನಗೆ ವಹಿಸಿದೆ. ಅದನ್ನು ತ್ರಿಕರಣ ಪೂರ್ವಕವಾಗಿ ನಿರ್ವಹಿಸಲು ನಾನು ಶ್ರಮಿಸುತ್ತೇನೆ. ನಾನು ನಿಮ್ಮ ಅಧಿಪತಿಯಲ್ಲ, ಸೇವಕ. ಯಾರು ಉತ್ತಮ ಸೇವಕನೋ ಅವನೇ ಮುಖಂಡನಾಗುತ್ತಾನೆ. ನಾನು ದೇಶದ ಮುಖ್ಯಸೇವಕ' ಎಂದು ನುಡಿದರು.

ಗಾಂಧೀಜಿ ಎಂದಿನಿಂದಲೂ ನಡೆಸಿಕೊಂಡು ಬಂದಿದ್ದಂತೆ 'ವೈರಿಗೆ ಎಚ್ಚರಿಕೆ ಕೊಟ್ಟೇ ಪ್ರಹಾರ ಮಾಡು' ಎಂಬ ನೀತಿಗನುಗುಣವಾಗಿ ವೈಸ್‌ರಾಯ್ ಲಾರ್ಡ್‌ಲಿನ್‌ಲಿತ್‌ಗೋರವರಿಗೆ ಎ.ಐ.ಸಿ.ಸಿ. ನಿರ್ಣಯವನ್ನು ತಿಳಿಸಿ ತಮ್ಮ ಮುಂದಿನ ಕಾರ್ಯಚಟುವಟಿಕೆಗಳ ವಿವರಗಳನ್ನು ನೀಡಿದರು.

ಎ.ಐ.ಸಿ.ಸಿ. ನಿರ್ಣಯದ ತೀವ್ರತೆಯನ್ನು ಪೂರ್ಣವಾಗಿ ಅರ್ಥಮಾಡಿ ಕೊಂಡಿದ್ದ ಭಾರತ ಸರಕಾರ ಕೂಡಲೇ ಕಾರ್ಯಪ್ರವೃತ್ತವಾಯಿತು.

ಮರುದಿನ ಕಾಂಗ್ರೆಸ್ ಚಳುವಳಿಯನ್ನು ಪ್ರಾರಂಭಿಸುವ ಮುನ್ನವೇ ಬೆಳಗಿನ ಜಾವ ಗಾಂಧೀಜಿ ; ಆಜಾದ್ ; ಮಹದೇವಭಾಯಿ; ಮೀರಾಬೆನ್; ಸರೋಜಿನಿ ನಾಯ್ಡು ಮುಂತಾದ ಕಾಂಗ್ರೆಸ್‌ನ ಹಿರಿಯ ನಾಯಕರನ್ನೆಲ್ಲಾ ಸರಕಾರ ಬಂಧಿಸಿತು.

ಗಾಂಧೀಜಿ, ಮಹದೇವ ಭಾಯಿ, ಸರೋಜಿನಿ, ಮೀರಾಬೆನ್‌ರವರನ್ನು ಪೂನಾದ ಹೊರವಲಯದಲ್ಲಿದ್ದ ಆಗಾಖಾನ್ ಅರಮನೆಯಲ್ಲಿ ಸೆರೆಯಲ್ಲಿಟ್ಟರು. ಗಾಂಧಿ ಹಸು ಅಥವಾ ಎಮ್ಮೆಯ ಹಾಲನ್ನು ಸೇವಿಸುತ್ತಿರಲಿಲ್ಲವಾದ್ದರಿಂದ ಅವರಿಗಾಗಿ ಮೇಕೆಯೊಂದನ್ನು ಜೈಲಿಗೆ ತಂದರು. ಕೆಲವೇ ದಿನಗಳ ನಂತರ ಕಸ್ತೂರಬಾ ಮತ್ತು ಡಾ. ಸುಶೀಲಾನಯ್ಯರ್‌ರವರನ್ನು ಬಂಧಿಸಿ ಅದೇ ಜೈಲಿಗೆ ಕರೆತರಲಾಯಿತು.

ಇದರಿಂದಾಗಿ ರಾಷ್ಟ್ರಾದ್ಯಂತ ಜನ ರೊಚ್ಚಿಗೆದ್ದರು. ಹರತಾಳ, ಪ್ರತಿಭಟನಾ ಸಭೆ ನಡೆದವು. ಗಾಂಧಿಯ ಅಪೇಕ್ಷೆಗೆ ವಿರುದ್ಧವಾಗಿ ಹಿಂಸಾಕೃತ್ಯಗಳೂ ಜರುಗಿದವು. ಸರ್ಕಾರದವರು ಯುದ್ಧದೋಪಾದಿಯಲ್ಲಿ ಜನರ ಮೇಲೆ ಧಾಳಿ ನಡೆಸಿದರು. ಸಹಸ್ರಾರು ಜನ ಗಾಯಗೊಂಡರು. ನೂರಾರು ಜನ ಅಸುನೀಗಿದರು. ಸರ್ಕಾರಿ ಹಾಗೂ ಖಾಸಗಿ ಆಸ್ತಿ ನಷ್ಟಗೊಂಡವು. ಈ ವಾರ್ತೆ ಕೇಳಿ, ನೊಂದ ಗಾಂಧಿ ೧೯೪೩ ಫೆಬ್ರವರಿ ೧೦ನೇ ತಾರೀಖಿನಿಂದ ಮೂರು ವಾರಗಳ ಉಪವಾಸ ವ್ರತ ಕೈಗೊಂಡರು. ಬ್ರಿಟಿಷರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಲಯದಲ್ಲಿ ಭಾರತದ ಸ್ಥಿತಿಗತಿಯ ಬಗ್ಗೆ ಮಾಡುತ್ತಿದ್ದ ಅಪಪ್ರಚಾರವನ್ನು ಖಂಡಿಸಿದರು.

ಈ ಚಳವಳಿಯನ್ನು ಹತ್ತಿಕ್ಕಲು ಕಾರ್ಯಪ್ರವೃತ್ತರಾಗಿದ್ದ ಭಾರತಸರ್ಕಾರ ಅಲಹಾಬಾದಿನ ಕಾಂಗ್ರೆಸ್ ಕಛೇರಿಯನ್ನು ವಶಪಡಿಸಿಕೊಂಡಿತು. ಹಾಗೇ ಕಾಂಗ್ರೆಸ್ ನಿಧಿಯನ್ನು ಮುಟ್ಟುಗೋಲುಹಾಕಿಕೊಂಡಿತು. ಗಾಂಧೀಜಿಯ 'ಹರಿಜನ' ಪತ್ರಿಕಾಲಯದ ಮುತ್ತಿಗೆ ನಡೆಸಿ, ಒಳಗಿದ್ದ ಯಂತ್ರಗಳನ್ನು ನಾಶಪಡಿಸಿತು. ಅನೇಕ ಪತ್ರಿಕೆಗಳ ಪ್ರಕಟಣೆಗೆ ನಿಷೇಧ ಹೇರಿತು.

ಈ ವ್ಯಾಪಕ ಚಳುವಳಿಯಲ್ಲಿ ನಷ್ಟಕ್ಕೊಳಗಾದ ಆಸ್ತಿಪಾಸ್ತಿಗಳ ವಿವರ ಹಾಗೂ ಸಾವು ನೋವುಗಳ ವಿವರ ಸರ್ಕಾರಿ ದಾಖಲೆಗಳಲ್ಲಿ ಹೀಗೆ ನಮೂದಾಗಿವೆ. ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಹಾಳುಗೆಡವಿದ ಪ್ರಕರಣಗಳು ೩೫೦೦; ಹಾನಿಗೊಳಿಸಲಾದ ಅಂಚೆ ಕಚೇರಿಗಳು ೮೦೦ ; ಸರ್ಕಾರಿ ಇಲಾಖಾ ಉದ್ಯೋಗಿಗಳ ಮೇಲೆ ಧಾಳಿ ಲೆಕ್ಕಕ್ಕೆ ಸಿಗದಷ್ಟು ನಡೆದಿವೆ. ಹಾನಿಗೊಳಗಾದ ರೈಲ್ವೆ ನಿಲ್ದಾಣಗಳು ೨೫೦, ಸುಟ್ಟು ಹಾಕಲಾದ ಪೊಲೀಸ್ ಠಾಣೆಗಳು ೭೦, ಸುಟ್ಟುಹಾಕಿದ ಸರ್ಕಾರಿ ಕಟ್ಟಡಗಳು ೮೦, ನೆಹರೂರವರು ಈ ಪ್ರಕರಣಗಲ್ಲಿ ಆಗಿರುವ ನಷ್ಟದ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದಾರೆ :

'ಅಧಿಕೃತ ಅಂದಾಜಿನ ಪ್ರಕಾರ ೧೯೨೦ರ ಗಲಭೆಗಳಲ್ಲಿ ಪೊಲೀಸರು ಅಥವಾ ಮಿಲಿಟರಿಯವರು ಗುಂಡು ಹಾರಿಸಿದಾಗ ೧೦೨೮ ಜನ ಸತ್ತರು ಮತ್ತು ೩೨೦೦ ಜನ ಗಾಯಗೊಂಡರೆಂದು ತಿಳಿದುಬರುತ್ತದೆ. ಆದರೆ ಅಂದಾಜು ಮಾಡಲಾಗಿರುವ ಈ ಸಂಖ್ಯೆ ಖಂಡಿತವಾಗಿಯೂ ಅತಿಕಡಿಮೆ. ಏಕೆಂದರೆ ಕಡೇ ಪಕ್ಷ ೫೩೮ ಸಂದರ್ಭಗಳಲ್ಲಾದರೂ ಗುಂಡು ಹಾರಿಸಲಾಯಿತೆಂದು ಅಧಿಕೃತವಾಗಿ ಪ್ರಕಟಿಸಲಾಗಿರುವುದರಿಂದ ಅಂದಾಜಾಗಿರುವ ಮೃತರ ಸಂಖ್ಯೆ ಅತಿ ಕಡಿಮೆ ಎನ್ನುವುದರಲ್ಲಿ ಸಂಶಯವಿಲ್ಲ.... ಜನರು ಅಂದಾಜು ಮಾಡಿರುವ ಒಟ್ಟು ಸಾವುಗಳ ಸಂಖ್ಯೆ ೨೫,೦೦೦. ಆದರೆ ಇದು ತುಂಬ ಉತ್ಪ್ರೇಕ್ಷಿತ ಸಂಖ್ಯೆಯಾಗಿರಬಹುದು. ಬಹುಶಃ ೧೦,೦೦೦ ಇದಕ್ಕೆ ಅತ್ಯಂತ ಸಮೀಪದ ಸಂಖ್ಯೆಯಾಗಿರಬಹುದು.'

ಆಗಸ್ಟ್ ೯ ರಿಂದ ೧೯೪೨ನೇ ವರ್ಷದ ಕೊನೆಯವರೆಗಿನ ಅವಧಿಯಲ್ಲಿ ಬಂಧಿತರಾದ, ಶಿಕ್ಷೆಗೊಳಗಾದ ಹಾಗೂ ವಿಚಾರಣೆ ಇಲ್ಲದೆ ಬಂಧನದಲ್ಲಿದ್ದ ವ್ಯಕ್ತಿಗಳ ಸಂಖ್ಯೆ ಅನುಕ್ರಮವಾಗಿ ೬೦,೨೨೯ (ಸರಿಸುಮಾರಾಗಿ) ; ೨೬,೦೦೦ ಮತ್ತು ೧೮,೦೦೦ ಇತ್ತು. ಇವೆಲ್ಲವೂ ಅಧಿಕೃತ ಸಂಖ್ಯೆಗಳು. ಮಿಲಿಟರಿ ಪಡೆಯವರಲ್ಲಿ ೧೧ ಮಂದಿ ಮೃತಪಟ್ಟರು. ೭ ಮಂದಿ ಗಾಯಗೊಂಡರು.

ಗಾಂಧಿ ಘೋಷಿಸಿದ 'ಕ್ವಿಟ್ ಇಂಡಿಯಾ ಚಳುವಳಿ' ಅನಿರೀಕ್ಷಿತವಾಗಿ ಹೀಗೆ ಬೃಹತ್ತಾಗಿ ಬೆಳೆದು ಅಪಾರವಾದ ಪ್ರಾಣಹಾನಿ ಹಾಗೂ ವ್ಯಾಪಕ ಕಷ್ಟ ನಷ್ಟಗಳಿಗೆ ಕಾರಣವಾಗುತ್ತದೆಂದು ಕಾಂಗ್ರೆಸ್ ಪಕ್ಷ ನಿರೀಕ್ಷಿಸಿರಲಿಲ್ಲ ಎಂಬುದು ಅಬುಲ್ ಕಲಾಂ ಆಜಾದ್‌ರವರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ.

'ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಗಾಂಧೀಜಿ ಬಹಿರಂಗವಾಗಿಯಾಗಲಿ ಅಥವಾ ಖಾಸಗಿಯಾಗಿಯಾಗಲಿ ಕಾರ್ಯಾಚರಣೆ ಯಾವ ರೀತಿಯಲ್ಲಿ ನಡೆಯಬೇಕೆಂಬುದನ್ನು ತಿಳಿಸಿರಲಿಲ್ಲ. ಅವರ ಮನಸ್ಸಿನಲ್ಲಿ ಏನಿತ್ತು ಎಂಬುದನ್ನು ಅವರು ತೋರ್ಪಡಿಸಿರಲಿಲ್ಲ. ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನಾಚರಿಸ ಬೇಕೆಂಬುದಷ್ಟೇ ಅವರ ಉದ್ದೇಶವಾಗಿತ್ತು. ಆದ್ದರಿಂದ ಗಾಂಧೀಜಿಯವರಾಗಲಿ ಅಥವಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಾಗಲಿ ಯಾವುದೇ ಆದೇಶವನ್ನು ನೀಡಲಿಲ್ಲ. ಎಂತಹ ಹೊಸ ಪರಿಸ್ಥಿತಿಯನ್ನಾಗಲಿ ಎದುರಿಸಲು ಜನರು ಸಿದ್ಧರಾಗಿರಬೇಕು ಮತ್ತು ಎಂತಹ ಸಂದರ್ಭ ಒದಗಿದರೂ

ಜನರು ಶಾಂತಿಯುತ ಹಾಗೂ ಅಹಿಂಸಾತ್ಮಕ ಕಾರ್ಯಾಚರಣೆಯನ್ನೇ ಅನುಸರಿಸುವ ನೀತಿಗೆ ಬದ್ಧರಾಗಿರಬೇಕೆಂದು ಅವರು ಕರೆಕೊಟ್ಟಿದ್ದರು' (Freedom India III. ಪು. ೬೬೩, ೬೬೭-೮, ೬೭೩).

ಬಿರುಗಾಳಿಯಂತೆ ಬೀಸಿ ಅಪಾರ ಅನಾಹುತವನ್ನುಂಟು ಮಾಡಿ ಸರಕಾರವನ್ನು ತತ್ತರಗೊಳಿಸಿದ ಈ ಚಳುವಳಿ ೧೯೪೨ರ ಸೆಪ್ಟೆಂಬರ್ ಹೊತ್ತಿಗೆ ತಣ್ಣಗಾಯಿತು.

ಗಾಂಧೀಜಿ ಮತ್ತು ಸಂಸ್ಥೆಯ ಎಲ್ಲಾ ಮುಖಂಡರೂ ಬಂಧಿತರಾದ ಮೇಲೆ ಜಯಪ್ರಕಾಶ್ ನಾರಾಯಣರವರು ಈ ಚಳುವಳಿ ಬಗ್ಗೆ ಆಸ್ಥೆ ವಹಿಸಿ ಮಾರ್ಗದರ್ಶನ ನೀಡಲು ಮುಂದಾದ್ದನ್ನು ಗಾಂಧೀಜಿ ತುಂಬ ಮೆಚ್ಚಿಕೊಂಡಿದ್ದರು. ಈ ಬಗ್ಗೆ ಹಲವು ಬಾರಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

೧೯೪೨ರ ಈ ಚಳುವಳಿ ಹೆಚ್ಚಾಗಿ ವಿದ್ಯಾರ್ಥಿಗಳು, ರೈತರು ಮತ್ತು ಮಧ್ಯಮ ವರ್ಗದ ಜನರಿಗೇ ಸೀಮಿತವಾಗಿತ್ತು. ಬುದ್ಧಿಜೀವಿಗಳು ಅಥವಾ ಉನ್ನತವರ್ಗದ ಜನರು ಈ ಚಳುವಳಿಯಲ್ಲಿ ಯಾವುದೇ ಸಕ್ರಿಯ ಪಾತ್ರವನ್ನು ವಹಿಸಿರಲಿಲ್ಲವೆಂಬುದು ಗಮನಿಸಬೇಕಾದ ಅಂಶ.

ಅಹಿಂಸಾತ್ಮಕವಾಗಿ ಪ್ರಾರಂಭಗೊಂಡ ಈ ಚಳುವಳಿ ಒಮ್ಮೆಗೇ ಹಿಂಸಾತ್ಮಕ ರೂಪ ತಳೆಯಲು ಅಧಿಕಾರರೂಢ ಬ್ರಿಟಿಷ್ ಸರಕಾರವೇ ಕಾರಣವಾಗಿತ್ತು ಎಂಬುದನ್ನು ಬ್ರಿಟಿಷ್ ಪತ್ರಕರ್ತ ಹೊರೇಸ್ ಅಲೆಗ್ಸಾಂಡರ್‌ರವರ ಅಭಿಪ್ರಾಯ ದೃಢೀಕರಿಸುತ್ತದೆ.

'ಪೊಲೀಸರು ಚಳುವಳಿಯನ್ನು ಅಡಗಿಸಲು ದಮನಕಾರಿ ಕ್ರಮಗಳನ್ನು ಅನುಸರಿಸಿದರು. ಶಾಂತಿಯುತವಾಗಿಯೇ ಚಳುವಳಿಯನ್ನು ನಡೆಸಬೇಕೆಂದು ಉದ್ದೇಶಿಸಿದ್ದ ಜನರನ್ನು, ಪೊಲೀಸರ ಈ ಕ್ರಮ ಕೆರಳಿಸಿ ಅವರು ಹಿಂಸೆಗಿಳಿಯುವಂತೆ ಮಾಡಿತು' (Horace Alexander. p. ೪೪).

ಇದೇ ಅಭಿಪ್ರಾಯವನ್ನು ಗಾಂಧೀಜಿ ಲಾರ್ಡ್‌ಲಿನ್‌ಲಿತ್‌ಗೋ ಅವರಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ. 'ಈ ಭಯಾನಕ ಹಿಂಸೆಯೇ ಜನರನ್ನು ಹಿಂಸಾಕೃತ್ಯಗಳಿಗೆ ಪ್ರಚೋದಿಸಿತು'.

ಈ ಕ್ವಿಟ್ ಇಂಡಿಯಾ ಚಳುವಳಿ ಹಿಂಸಾತ್ಮಕ ರೂಪ ತಾಳಿ ಬಹುಬೇಗ ಕುಸಿಯಿತಾದರೂ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಜನರು ವೈಯಕ್ತಿಕವಾಗಿ

ಹಾಗೂ ಸಾಮೂಹಿಕವಾಗಿ ಧೈರ್ಯ ಸಾಹಸಗಳನ್ನು ಪ್ರದರ್ಶಿಸಬಲ್ಲರು. ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಯಾವುದೇ ಹೋರಾಟಕ್ಕೆ ಹಾಗೂ ಬಲಿದಾನಕ್ಕೆ ಸಂಕಲ್ಪಬದ್ಧರೆಂಬುದನ್ನು ಪ್ರದರ್ಶಿಸಿತು. ಈ ದೃಷ್ಟಿಯಿಂದ ಈ ಚಳುವಳಿ ಸಫಲವಾಯಿತೆಂದೇ ಹೇಳಬೇಕಾಗುತ್ತದೆ.

◆ ◆ ◆

'ಉಪವಾಸದ ಶಕ್ತಿ'

೧೯೧೩ ದ. ಆಫ್ರಿಕಾದಲ್ಲಿ ಸತ್ಯಾಗ್ರಹಿಗಳು ಜೈಲು ಸೇರಿದರು. ಜೈಲಿನಲ್ಲಿ ತಮಗೆ ತಕ್ಕ ಶಾಕಾಹಾರವನ್ನು ಕೊಡಬೇಕೆಂಬ ಬೇಡಿಕೆ ತಿರಸ್ಕೃತವಾದಾಗ 'ಉಪವಾಸ ಸತ್ಯಾಗ್ರಹ' ಆರಂಭಿಸಿದರು. ನಾಲ್ಕು ದಿನ ಯಾವ ಆಹಾರವನ್ನೂ ಮುಟ್ಟಲಿಲ್ಲ. ಕೆಲವರಂತೂ ಕೆಲಸ ಮಾಡುವುದನ್ನೂ ನಿಲ್ಲಿಸಲಿಲ್ಲ. ಕೈದಿಗಳ ಜೀವಕ್ಕೆ ಅಪಾಯ ಇದೆ ಎಂದು ವೈದ್ಯರು ಜೈಲಿನ ಗೌರ್ನರಿಗೆ ವರದಿ ಮಾಡಿದರು. ಯಾವಾಗಲೂ ದರ್ಪದಿಂದ ಇರುತ್ತಿದ್ದ ಆ ಅಧಿಕಾರಿಗೆ ಚಿಂತೆ ಹೆಚ್ಚಿತು. ಜೈಲಿನೊಳಗೆ ಅವನು ಹೋಗುತ್ತಿದ್ದುದೇ ಅಪರೂಪ. ಈಗ ಹತ್ತು ನಿಮಿಷಗಳಿಗೊಮ್ಮೆ ಆತಂಕದಿಂದ ಬಂದು ಹೋಗುತ್ತಿದ್ದ.

ಒಬ್ಬ ಜೈಲು (ಆಫ್ರಿಕನ್) ವಾರ್ಡನ್ ಗೌರ್ನರ್‌ನ ಪರದಾಟವನ್ನು ನೋಡಿ ಸತ್ಯಾಗ್ರಹಿಗಳ ಮುಖಂಡ ರಾವ್‌ಜಿಗೆ ಹೇಳಿದ "ನೀವೇ ನಿಜವಾದ ಧೀರರು, ನಿಜವಾದ ಹೀರೋಗಳು. ಈ ದರ್ಪದ ಬಿಳಿಯರಿಗೆ ಸರಿಯಾದ ಪಾಠ ಕಲಿಸಿದಿರಿ. ನಮ್ಮ ಬಾಸ್ ಗೌರ್ನರ್ ಇದ್ದಾನಲ್ಲ, ಅವನು ಜೈಲಿಗೆ ಬರುತ್ತಿದ್ದುದೇ ಅಪರೂಪ. ಈಗ ನೋಡಿ, ಹೆದರಿಕೆಯಿಂದ ಕಂಗಾಲಾಗಿ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದಾನೆ. ಅವನ ದರ್ಪವನ್ನೆಲ್ಲ ಹಿಂಡಿ ತೆಗೆದು ಹಾಕಿದ ಹಾಗೆ ಇದೆ".

ಕೊನೆಗೂ ಸತ್ಯಾಗ್ರಹಿಗಳು ಗೆದ್ದರು. ಅವರಿಗೆ ಊಟದಲ್ಲಿ ತುಪ್ಪವನ್ನು ಕೊಡಲು ಸರಕಾರ ಒಪ್ಪಿತು.

(ಆಧಾರ : **Raoji Bhat patel. The making of the Mahatma.**)

೧೮. ಕಸ್ತೂರಬಾ – ಅಂತಿಮ ಯಾತ್ರೆ

೧೯೪೪ರ ಫೆಬ್ರುವರಿ ೨೨ ರಂದು ಮಹಾಶಿವರಾತ್ರಿ.

ಆಗಾಖಾನರ ಅರಮನೆಯಲ್ಲಿ ಕಸ್ತೂರಬಾ ತೀವ್ರ ಅನಾರೋಗ್ಯದಿಂದ ಹಾಸಿಗೆಯ ಮೇಲೆ ನಿಶ್ಶಕ್ತರಾಗಿ ಮಲಗಿದ್ದರು. ಮಗ ದೇವದಾಸ್ ಬಳಿಯಲ್ಲೇ ಕುಳಿತು ಏದುಬ್ಬಸ ಪಡುತ್ತಿದ್ದ ತಾಯಿಯನ್ನು ಬಹಳ ಕಾತುರದಿಂದ ನಿರುಕಿಸುತ್ತಿದ್ದ. ವಿಮಾನದಿಂದ ಪೆನ್ಸಿಲಿನ್ ತರಿಸಲು ಏರ್ಪಾಡುಮಾಡಿದ್ದು ಅದು ಆಗ ತಾನೇ ಬಂದಿತ್ತು. ಡಾಕ್ಟರು ಅದನ್ನು ಕೊಡಲು ಸಿದ್ಧರಾಗಿದ್ದರು. ತಾಯಿಯ ಮುಖದಲ್ಲಿ ನೋವು ಹೆಪ್ಪುಗಟ್ಟಿತ್ತು. ಇಂಗ್ಲಿಷ್ ಔಷಧಿಯ ಉಪಚಾರ ಗಂಡನಿಗೆ ಇಷ್ಟವಿಲ್ಲದ್ದರಿಂದ ಅವರಿಗೂ ಬೇಡವಾಗಿತ್ತು. ಇಂತಹ ಔಷಧಿಯನ್ನು ಅವರು ಎಂದೂ ಸೇವಿಸಿಯೇ ಇರಲಿಲ್ಲ. ಮರಣಕಾಲದಲ್ಲಿ ಅದನ್ನು ಸೇವಿಸಿ ಗಂಡನ ದೃಷ್ಟಿಯಲ್ಲಿ ಕೀಳಾಗುವುದು ಆಕೆಗೆ ಇಷ್ಟವಿರಲಿಲ್ಲ. ಸೆರೆಮನೆಯ ಅಧಿಕಾರಿಯೊಡನೆ ಗಂಡ ಅದೇ ತಾನೇ ಬಂದು ಬದಿಯಲ್ಲಿ ನಿಂತಿದ್ದರು. ಮಗ ಮತ್ತು ಹೆಂಡತಿ ಗಾಂಧಿಯನ್ನು ಹನಿದುಂಬಿದ ಕಣ್ಣಿನಿಂದ ನೋಡಿದರು. ಗಾಂಧಿಗೆ ಹೆಂಡತಿಯ ಅಂತಿಮ ಕಾಲ ಸಮೀಪಿಸಿದೆ ಎಂದು ಖಾತ್ರಿಯಾಯಿತು.

ಗಾಂಧಿ ಮಗನಿಗೆ ಹಾಗೂ ಸುತ್ತಲೂ ನಿಂತಿದ್ದವರಿಗೆ ನುಡಿದರು. "ಈಕೆಗೆ ಈಗ ಯಾವ ಔಷಧಿಯೂ ಫಲಕಾರಿಯಾಗುವುದಿಲ್ಲ ಪಾಪ. ಏಕೆ ಚುಚ್ಚಿ ಆಕೆಯನ್ನು ನೋಯಿಸುವುದು, ಎಲ್ಲರೂ ರಾಮಧ್ಯಾನ ಮಾಡಿ. ಆಕೆಯ ಮನಸ್ಸಿಗೆ ಶಾಂತಿ ದೊರೆಯುತ್ತದೆ. ರಾಮನಾಮ ಸ್ಮರಣೆಯೇ ಅಂತ್ಯ ಕಾಲದಲ್ಲಿ ದಿವ್ಯೌಷಧಿ" ಎಂದು ತಾವೇ ರಾಮಧ್ಯಾನ ಪ್ರಾರಂಭಿಸಿದರು.

ಸೆರೆಮನೆ ಅಧಿಕಾರಿಗಳೂ ಸೇರಿ ಎಲ್ಲರೂ ರಾಮಧ್ಯಾನ ಪ್ರಾರಂಭಿಸಿದರು. ಗಾಂಧಿ ಆಕೆಯ ತಲೆಯನ್ನು ತಮ್ಮ ತೊಡೆಯ ಮೇಲಿರಿಸಿಕೊಂಡು ಪ್ರೀತಿಯಿಂದ ಕುರುಳಲ್ಲಿ ಕೈಯಾಡಿಸತೊಡಗಿದರು. ತೃಪ್ತಿ ಸಮಾಧಾನದ ಅಲೆ ಅವರ ಮುಖದ ಮೇಲೆ ಹರಿದು ಬಂದಿತ್ತು.

ಕಸ್ತೂರಬಾ ಗಂಡನ ಮುಖವನ್ನೊಮ್ಮೆ ಮಗನ ಮುಖವನ್ನೊಮ್ಮೆ ಹನಿದುಂಬಿದ ಕಣ್ಣಿನಿಂದ ನೋಡಿದರು. 'ಭಗವಂತ ಕೃಪೆಮಾಡು' ಎಂದು ದೇವರಿಗೆ ಕೈಮುಗಿಯಲು ಪ್ರಯತ್ನಿಸಿದರು. ಕೈ ಮೇಲೆ ಏಳಲಿಲ್ಲ. 'ರಾಮ.... ರಾಮ' ಅಂದರು. ಪ್ರಾಣ ಪಕ್ಷಿ ಹಾರಿಹೋಯಿತು.

ಆಗ ಜೈಲರು ತಮ್ಮ ಕೈಗಡಿಯಾರ ನೋಡಿಕೊಂಡರು. ಏಳುಗಂಟೆ ಮೂವತ್ತೈದು ನಿಮಿಷ ತೋರಿಸುತ್ತಿತ್ತು.

ಬಾರವರ ಕೊನೆಯ ಕೋರಿಕೆಯಂತೆ ಗಾಂಧೀಜಿ ಸ್ವತಃ ತಾವೇ ನೂತ ನೂಲಿನಿಂದ ನೇಯ್ದಿದ್ದ ಖಾದಿಸೀರೆಯನ್ನು ಆಕೆಯ ಮೇಲೆ ಹೊದಿಸಿದರು.

ಸೆರೆಯಲ್ಲಿಯೇ ಆಕೆಯ ಅಂತ್ಯಕ್ರಿಯೆ ನಡೆದುಹೋಯಿತು.

ಗಾಂಧಿ ಅಥವಾ ಕಸ್ತೂರಬಾರು ಇಲ್ಲವೇ ಮಗ ದೇವದಾಸ್ ಯಾರಾದರೂ ಕ್ಷಮಾಪಣೆಯನ್ನು ಕೇಳಿದ್ದರೆ ಸರಕಾರ ಅವರ ಬಿಡುಗಡೆ ಮಾಡುತ್ತಿತ್ತು. ಆದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿದಿದ್ದ ಅವರು ಯಾರೂ ಕ್ಷಮಾಪಣೆ ಕೇಳಲು ಸಿದ್ಧರಿರಲಿಲ್ಲ.

ಕಸ್ತೂರಬಾ ಅವರ ಧ್ಯೇಯೋದಾತ್ತ ಜೀವನದ ಬಗ್ಗೆ ಹೆಮ್ಮೆಪಟ್ಟಿದ್ದ ಸಹಸ್ರಾರು ಅಭಿಮಾನಿಗಳು ಕಸ್ತೂರಬಾ ನಿಧಿಗೆ ಧಾರಾಳವಾಗಿ ಹಣ ನೀಡಿದರು. ಇದನ್ನು ಸಂಗ್ರಹಿಸಿದ ಸರೋಜಿನಿನಾಯ್ಡು 'ಕಸ್ತೂರಬಾ ಸ್ಮಾರಕ ಸಂಸ್ಥೆ' ಸ್ಥಾಪಿಸಿ ಅದಕ್ಕೆ ನೀಡಿದರು. ಈ ಸಂಸ್ಥೆ ಮಹಿಳಾ ಪುರೋಭಿವೃದ್ಧಿ, ಅಸ್ಪೃಶ್ಯತಾ ನಿವಾರಣೆ, ಖಾದಿ ಉದ್ಯೋಗ, ಮಕ್ಕಳ ಶಿಕ್ಷಣ ಮುಂತಾದ ಜನಪರ, ಜನಹಿತ ಕಾರ್ಯಗಳಿಗೆ ಶ್ರಮಿಸುತ್ತಿದೆ.

ಕಸ್ತೂರಬಾ ಭಾರತದ ಜನಮನದಲ್ಲಿ ಆದರ್ಶ ಮಹಿಳೆಯಾಗಿ, ಅನುಕರಣೀಯ ವ್ಯಕ್ತಿಯಾಗಿ ಶಾಶ್ವತವಾಗಿ ನೆಲೆಸಿದ್ದಾರೆ.

◆ ◆ ◆

೧೯. ಅಂತಿಮ ಸ್ವಾತಂತ್ರ್ಯಸಮರ

ಕಾಂಗ್ರೆಸ್‌ನ ಮುಖಂಡರೆಲ್ಲಾ ಜೈಲಿನಲ್ಲಿದ್ದ ಸಮಯದಲ್ಲಿ ಮುಸ್ಲಿಮ್‌ಲೀಗ್ ಮತ್ತು ಹಿಂದೂಮಹಾಸಭೆಗಳು ಲಭಿಸಿದ ಈ ಮುಕ್ತ ಅವಕಾಶವನ್ನು ತಮ್ಮ ತಮ್ಮ ಸಂಸ್ಥೆಗಳ ಧ್ಯೇಯೋದ್ದೇಶಗಳನ್ನು ಜನಮನದಲ್ಲಿ ಬಿತ್ತಲು ಹವಣಿಸತೊಡಗಿದ್ದವು. ಮುಸ್ಲಿಮ್‌ಲೀಗಿನ ಗುರಿ ಪಾಕಿಸ್ತಾನವನ್ನು ರಚಿಸುವುದೇ ಆಗಿದ್ದರೆ, ಹಿಂದೂಮಹಾಸಭೆ ಭಾರತ ದೇಶದ ಅಖಂಡತ್ವವನ್ನು ಕಾಪಾಡುವುದಾಗಿತ್ತು. ಯಾವುದೇ ಕಾರಣಕ್ಕೂ ಭಾರತದ ಯಾವುದೇ ಪ್ರಾಂತ, ಜನಾಂಗ ಅಥವಾ ಅದರ ಭಾಗವು ದೇಶದಿಂದ ಬೇರೆಯಾಗುವುದನ್ನು ತಡೆಯುವ ದೃಢ ನಿಶ್ಚಯಮಾಡಿತ್ತು.

ಗಾಂಧೀಜಿಯವರ ಉಪವಾಸ ಮಾರ್ಚ್ ೩, ೧೯೪೩ ರಂದು ಮುಕ್ತಾಯ ಗೊಂಡಿತು. ವೈಸ್‌ರಾಯ್ ಲಾರ್ಡ್‌ಲಿನ್‌ಲಿತ್‌ಗೋ ೧೯೪೩, ಅಕ್ಟೋಬರ್ ೨೦ ರಂದು ನಿವೃತ್ತಿ ಹೊಂದಿ ಕಮಾಂಡರ್ ಇನ್ ಚೀಫ್ ಆಗಿದ್ದ ಲಾರ್ಡ್ ವೇವಲ್ ಅವರ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಅವರು ತಮ್ಮ ಮೊದಲನೇ ಭಾಷಣದಲ್ಲಿ ಭಾರತಕ್ಕೆ ಅಧಿರಾಜ್ಯ ಸ್ಥಾನವನ್ನು ಕೊಡಲು ಬ್ರಿಟಿಷ್ ಸರಕಾರ ಸಿದ್ಧವಿದೆಯೆಂದೂ, ಇದಕ್ಕೆ ಪೂರಕವಾಗಿ ಭಾರತ ತನ್ನದೇ ಸಂವಿಧಾನವನ್ನು ರಚಿಸಿಕೊಳ್ಳಲು ಸಿದ್ಧವಾಗಬೇಕೆಂದೂ ತಿಳಿಸಿದರು. ಕಾಯಿದೆಭಂಗ ಚಳುವಳಿ ಮತ್ತು ಪ್ರತಿಬಂಧಕ ಮೊದಲಾದವುಗಳನ್ನು ವಾಪಸ್ಸು ಪಡೆದ ಹೊರತು ಜೈಲಿನಲ್ಲಿರುವ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರು.

ಅನಾರೋಗ್ಯ ಕಾರಣದಿಂದ ಜೈಲಿನಿಂದ ಬಿಡುಗಡೆಗೊಂಡಿದ್ದ ಗಾಂಧೀಜಿ, ಜೂನ್ ೧೭, ೧೯೪೪ ರಂದು ವೈಸ್‌ರಾಯ್ ಲಾರ್ಡ್‌ವೇವಲ್ಲರ ಬಳಿ ರಾಜಕೀಯದ ಬಗ್ಗೆ ಮಾತನಾಡಲು ಭೇಟಿಗೆ ಅನುಮತಿ ಕೋರಿದರು. ವೇವಲ್ಲರು ಅನುಮತಿ ನೀಡಲಿಲ್ಲ. ಗಾಂಧೀಜಿ ಜುಲೈ ೨೭ ರಂದು ಒಂದು ಪತ್ರ ಬರೆದು ಬ್ರಿಟಿಷ್ ಸರಕಾರವು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆ

ಘೋಷಣೆ ಮಾಡಿದರೆ ತಾವು ಕಾಯಿದೆಭಂಗ ಚಳುವಳಿಯನ್ನು ನಿಲ್ಲಿಸುವ ಬಗ್ಗೆ ಹಾಗೂ ಬ್ರಿಟನ್‌ನ ಯುದ್ಧ ಪ್ರಯತ್ನಕ್ಕೆ ಪೂರ್ಣ ಸಹಕಾರ ನೀಡುವ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸಲಹೆ ಮಾಡುವುದಾಗಿ ತಿಳಿಸಿದರು. ಇದನ್ನು ಸೆಕ್ರೆಟರಿ ಆಫ್ ಸ್ಟೇಟ್ ಒಪ್ಪಲಿಲ್ಲ. ಆಗ ಗಾಂಧೀಜಿ, ಜಿನ್ನಾರವರೊಡನೆ ಭಾರತವನ್ನು ವಿಭಾಗಿಸುವ ವಿಷಯದಲ್ಲಿ ಚರ್ಚಿಸಲು ಸಿದ್ಧವೆಂದು ಘೋಷಿಸಿದಾಗ ರಾಷ್ಟ್ರಾದ್ಯಂತ ಕೋಲಾಹಲ ಪರಿಸ್ಥಿತಿ ಉದ್ಭವಿಸಿತು. 'ತಮಗೆ ಇಷ್ಟಬಂದಂತೆ ಭಾರತವನ್ನು ವಿಭಾಗಿಸಲು ಇದು ಗಾಂಧೀಜಿ ಮತ್ತು ರಾಜಾಜಿಯವರ ಖಾಸಗಿ ಆಸ್ತಿಯಲ್ಲ" ಎಂದು ಸಾವರ್ಕರ್ ಗುಡುಗಿದರು. ಆದರೂ ಗಾಂಧೀಜಿ ರಾಷ್ಟ್ರಕ್ಕೆ ಸ್ವರಾಜ್ಯವನ್ನು ಬೇಗ ತಂದು ಕೊಡುವ ದೃಷ್ಟಿಯಿಂದ ಜಿನ್ನಾರವರೊಡನೆ ಸೆಪ್ಟೆಂಬರ್ ೯, ೧೯೪೪ರಿಂದ ಕೆಲದಿನ ಸುದೀರ್ಘವಾಗಿ ಈ ಬಗ್ಗೆ ಚರ್ಚಿಸಿದರು. ಜಿನ್ನಾರವರ ವಾದ ಭಾರತೀಯ ಮುಸ್ಲಿಮರು ಪ್ರತ್ಯೇಕ ರಾಷ್ಟ್ರಕ್ಕೆ ಸೇರಿದವರು' ಎಂಬುದನ್ನು ಒಪ್ಪಲಿಲ್ಲ. ಸ್ವಾತಂತ್ರ್ಯ ಗಳಿಸಿದ ನಂತರ ಮುಸ್ಲಿಮರಿಗೆ ಪ್ರತ್ಯೇಕ ರಾಜ್ಯ ನೀಡುವ ಬಗ್ಗೆ ಚರ್ಚಿಸಬಹುದು ಎಂಬ ಗಾಂಧಿಯವರ ಸಲಹೆಯನ್ನು ಜಿನ್ನಾ ಒಪ್ಪಲಿಲ್ಲ. ಹೀಗಾಗಿ ಈ ಮಾತುಕತೆಗಳು ವಿಫಲಗೊಂಡವು.

ಭಾರತೀಯ ಸಮಸ್ಯೆಗಳನ್ನು ಮುಸ್ಲಿಮ್ ಲೀಗ್ ಹಾಗೂ ಕಾಂಗ್ರೆಸ್ ನಡುವಣ ಸಂಧಾನದಿಂದ ಬಗೆಹರಿಸಿಕೊಳ್ಳಲು ಅಸಮರ್ಥರು ಎಂದು ಬ್ರಿಟಿಷ್ ಸರಕಾರ ಅಭಿಪ್ರಾಯಪಟ್ಟಿತು.

ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಭೂಲಾಬಾಯಿ ದೇಸಾಯಿ ಮತ್ತು ಶಾಸನಸಭೆಯ ನಾಯಕ ಲಿಯಾಕತ್ ಅಲಿಖಾನ್ ಇವರಿಬ್ಬರೂ ಈ ಸಮಸ್ಯೆಯನ್ನು ಬಗೆಹರಿಸಲು ಹಲವು ಸಲಹೆ ಸೂಚನೆಗಳನ್ನು ನೀಡಿದರು. ಅವೂ ಒಪ್ಪಿಗೆಯಾಗಲಿಲ್ಲ. ಲಾರ್ಡ್ ವೇವಲ್ಲರು, ಸೆಕ್ರೆಟರಿ ಆಫ್ ಸ್ಟೇಟ್‌ರವರೊಡನೆ ಪರಾಮರ್ಶಿಸಿ ಒಂದು ಕಾಂಗ್ರೆಸ್ ಮತ್ತು ಮುಸ್ಲಿಮ್‌ಲೀಗ್‌ಗೆ ಒಪ್ಪಿಗೆಯಾಗಬಹುದಾದ ಪ್ರಸ್ತಾಪವನ್ನು ರೂಪಿಸುವ ಉದ್ದೇಶದಿಂದ ಮಾರ್ಚ್ ೨೫, ೧೯೪೫ ರಂದು ಲಂಡನ್‌ಗೆ ಹೋಗಿ ಜೂನ್ ೪ ರಂದು ಒಂದು ಹೊಸ ಪ್ರಸ್ತಾಪವನ್ನು ಹೊತ್ತು ತಂದರು. ಈ ಬಗ್ಗೆ ಚರ್ಚಿಸಲು ಸಿಮ್ಲಾದಲ್ಲಿ ಒಂದು ರಾಜಕೀಯ ಸಮ್ಮೇಳನ ಏರ್ಪಡಿಸುವುದಾಗಿಯೂ ಅದಕ್ಕೆ ಇಪ್ಪತ್ತೊಂದು ಮುಖಂಡರನ್ನು ಆಹ್ವಾನಿಸುವ

ಉದ್ದೇಶವಿದೆಯೆಂದೂ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಹೀಗೆ ಸೇರುವ ರಾಜಕೀಯ ಮುಖಂಡರ ಎಕ್ಸಿಕ್ಯೂಟೀವ್ ಕೌನ್ಸಿಲ್‌ನಲ್ಲಿ ಎಲ್ಲಾ ಪ್ರಮುಖ ಜಾತಿಯ ಪ್ರತಿನಿಧಿಗಳು, ಸವರ್ಣಹಿಂದೂಗಳು, ಮುಸಲ್ಮಾನರಿಗೆ ಸಮಾನ ಪ್ರಾತಿನಿಧ್ಯ ನೀಡಲಾಗುವುದೆಂದೂ ತಿಳಿಸಿದರು. ಸವರ್ಣ ಹಿಂದೂಗಳು ಮತ್ತು ಮುಸಲ್ಮಾನರಿಗೆ ಸಮಾನ ಪ್ರಾತಿನಿಧ್ಯ ನೀಡುವ ಬಗ್ಗೆ ಬಹಳ ಚರ್ಚೆಗಳಾದವು. ಸಾರ್ವಜನಿಕರು ಹಾಗೂ ವೃತ್ತ ಪತ್ರಿಕೆಗಳು ಈ ಪ್ರಸ್ತಾಪದ ಬಹಳಷ್ಟು ಅಂಶಗಳನ್ನು ಸ್ವಾಗತಿಸಿದರೂ ಕೆಲವು ಅಂಶಗಳು ಜಿನ್ನಾರವರಿಗೆ ಹಾಗೂ ಗಾಂಧೀಜಿಯವರಿಗೆ ಒಪ್ಪಿಗೆಯಾಗಲಿಲ್ಲ.

ಈ ಪ್ರಸ್ತಾಪಗಳ ಬಗ್ಗೆ ಚರ್ಚಿಸಲು ಲಾರ್ಡ್ ವೇವಲ್ಲರೂ ಸಿಮ್ಲಾದಲ್ಲಿ ಒಂದು ಸಮಾವೇಶ ಏರ್ಪಡಿಸಿದರು. ಇದರಲ್ಲಿ ೨೧ ಆಹ್ವಾನಿತರು ಭಾಗವಹಿಸಿದ್ದರು. ಆದರೆ ಗಾಂಧಿ ಇದರಲ್ಲಿ ಭಾಗವಹಿಸಲಿಲ್ಲ. ಕೌನ್ಸಿಲ್ ರಚನೆ ಬಗ್ಗೆ ಈ ಸಮಾವೇಶದಲ್ಲಿ ಬಿಕ್ಕಟ್ಟು ತಲೆದೋರಿತು. ಲೀಗಿಗೆ ಸೇರಿರದ ಮುಸ್ಲಿಮರನ್ನು ಇದರಲ್ಲಿ ಸೇರಿಸಿಕೊಳ್ಳುವುದನ್ನು ಜಿನ್ನಾ ಒಪ್ಪಲಿಲ್ಲ. ಇದರಿಂದಾಗಿ ಅಬುಲ್ ಕಲಾಂ ಆಜಾದ್ ಸಹ ಸದಸ್ಯರಾಗುವಂತಿರಲಿಲ್ಲ. ಎಲ್ಲಾ ಮತದವರು ವಿಶೇಷವಾಗಿ ಮುಸ್ಲಿಮರು, ಪರಿಶಿಷ್ಟ ಜಾತಿಯವರು ಹಾಗೂ ಕ್ರಿಶ್ಚಿಯನ್ನರನ್ನು ತನ್ನ ವಿಭಾಗದಡಿ ಸೇರಿಸಿಕೊಳ್ಳುವ ಹಕ್ಕು ತನಗಿರಬೇಕೆಂದು ಕಾಂಗ್ರೆಸ್ ವಾದಿಸಿತು. ಮುಸ್ಲಿಮ್‌ಲೀಗ್ ಪ್ರತಿನಿಧಿಗಳನ್ನು ಮುಸ್ಲಿಮ್ ಲೀಗಿನಿಂದಲೇ ಆರಿಸಬೇಕೆಂದು ಜಿನ್ನಾ ಪಟ್ಟು ಹಿಡಿದರು. ಹೀಗೆ ಮಾಡದಿದ್ದರೆ ಸಹಕಾರವನ್ನು ನೀಡುವುದಿಲ್ಲವೆಂದು ಜಿನ್ನಾ ಸ್ಪಷ್ಟವಾಗಿ ಹೇಳಿದಾಗ ಸಮಾವೇಶ ವಿಫಲವಾಯಿತೆಂದು ವೈಸ್‌ರಾಯ್ ಘೋಷಿಸಿದರು.

ಈ ಸಮಾವೇಶವನ್ನು ಆಯೋಜಿಸಿ ಲಾರ್ಡ್ ವೇವಲ್ಲರು ಅಪರೋಕ್ಷವಾಗಿ ಮುಸ್ಲಿಮ್‌ಲೀಗ್‌ಗೆ ಸಹಾಯ ಮಾಡಿದಂತಾಯಿತು. ಭಾರತದ ಮುಸ್ಲಿಮರನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆ 'ಮುಸ್ಲಿಮ್ ಲೀಗ್' ಎಂದು ಸೈದ್ಧಾಂತಿಕವಾಗಲ್ಲ ದಿದ್ದರೂ ರಾಜಕೀಯವಾಗಿ ಸರ್ಕಾರ ಒಪ್ಪಿದಂತಾಯಿತು. ಇದರಿಂದಾಗಿ ಮುಸ್ಲಿಮ್ ಲೀಗ್‌ಗೆ ರಾಜಕೀಯ ವೇದಿಕೆಯಲ್ಲಿ ಮಹತ್ವದ ಸ್ಥಾನ ಲಭಿಸಿದಂತಾಯಿತು.

೧೯೩೯ರಲ್ಲಿ ಪ್ರಾರಂಭಗೊಂಡಿದ್ದ ಮಹಾಯುದ್ಧ ಆರು ವರ್ಷಗಳ ನಂತರ ೧೯೪೫ ಆಗಸ್ಟ್ ೧೫ ರಂದು ಜಪಾನ್ ಶರಣಾಗುವುದರೊಂದಿಗೆ ಮುಕ್ತಾಯಗೊಂಡಿತು. ಇದಕ್ಕೆ ಸ್ವಲ್ಪ ಮೊದಲು ಬ್ರಿಟನ್ನಿನಲ್ಲಿ ಮಹಾ ಚುನಾವಣೆ ನಡೆದು ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಚರ್ಚಿಲ್ ಸ್ಥಾನದಲ್ಲಿ ಕ್ಲೆಮೆಂಟ್ ಅಟ್ಲೀ ಪ್ರಧಾನ ಮಂತ್ರಿಯಾಗಿದ್ದರು. ಲೇಬರ್ ಪಕ್ಷಕ್ಕೆ ಭಾರತದ ಬಗೆಗೆ ಕನ್ಸರ್ವೇಟೀವ್ ಪಕ್ಷಕ್ಕಿಂತಲೂ ಹೆಚ್ಚಿನ ಸಹಾನುಭೂತಿಯಿತ್ತು. ಆದ್ದರಿಂದ ಅವರು ಭಾರತೀಯರ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನಕ್ಕೆ ಮುಂದಾದರು. ಈ ಬಗ್ಗೆ ಬ್ರಿಟಿಷರು ತೆಗೆದುಕೊಂಡ ಮೊದಲನೇ ಕ್ರಮವೆಂದರೆ ಭಾರತದಲ್ಲಿ ತಡಮಾಡದೆ ಮಹಾಚುನಾವಣೆಯನ್ನು ನಡೆಸಿ ಕೇಂದ್ರ ಶಾಸನಗಳ ಹಾಗೂ ಪ್ರಾಂತೀಯ ಶಾಸನ ಸಭೆಗಳನ್ನು ಕಾರ್ಯೋನ್ಮುಖ ಮಾಡುವುದು ಹಾಗೂ ನೂತನ ಸ್ವತಂತ್ರ ಸ್ವಯಂ ಆಡಳಿತ ಸಂವಿಧಾನವನ್ನು ಸಿದ್ಧಪಡಿಸಲು ಸೂಕ್ತ ವೇದಿಕೆಯನ್ನು ಸಿದ್ಧಪಡಿಸುವುದು.

ಕಾಂಗ್ರೆಸ್‌ನ ಬಹಳಷ್ಟು ನಾಯಕರು ಇನ್ನೂ ಜೈಲಿನಲ್ಲಿದ್ದರು. ಅವರೆಲ್ಲರ ಆಸ್ತಿಪಾಸ್ತಿಯನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡಿದ್ದರಿಂದ ಕಾಂಗ್ರೆಸ್ ಚುನಾವಣೆ ಎದುರಿಸಲು ಬಹಳ ಕಷ್ಟಪಡಬೇಕಾಯಿತು. ಬ್ರಿಟಿಷರ ಸೆರೆಸಿಕ್ಕಿದ್ದ ಸುಭಾಷ್‌ಚಂದ್ರಬೋಸರ ಐ.ಎನ್.ಎ. ಸೈನ್ಯ ಒಂದು ವಿಧದಲ್ಲಿ ಇವರ ಸಹಾಯಕ್ಕೆ ಬಂತು.

ಬ್ರಿಟಿಷರು ಐ.ಎನ್.ಎ. ಗೆ ಸೇರಿದ್ದ ಸುಮಾರು ೨೦ ಸಾವಿರ ಸೈನಿಕರನ್ನು ಸೆರೆಹಿಡಿದು ರಾಜದ್ರೋಹದ ಆಪಾದನೆ ಹೊರಿಸಿ ಅವರನ್ನು ವಿಚಾರಣೆಗೆ ಗುರಿಪಡಿಸಿತ್ತು. ಈ ವಿಚಾರಣೆ ನಡೆಸಲು ಸರಕಾರ ಪ್ರತ್ಯೇಕ ಒಂದು ಟ್ರಿಬ್ಯೂನಲ್ ನೇಮಿಸಿತ್ತು. ಐ.ಎನ್.ಎ. ಸೈನಿಕರನ್ನು ತಾಯ್ನಾಡಿಗೆ ಹೋರಾಡಿದ ದೇಶಭಕ್ತರೆಂದು ಪರಿಗಣಿಸಿದ ಕಾಂಗ್ರೆಸ್ ಅವರ ಪರವಾಗಿ ಹೋರಾಡಲು ತೇಜ್‌ಬಹದ್ದೂರುಸಪ್ರು ; ಭೂಲಾಬಾಯಿ ದೇಸಾಯಿ ಮತ್ತು ನೆಹರೂ ಇವರನ್ನೊಳಗೊಂಡ ಒಂದು ನ್ಯಾಯವಾದಿಗಳ ಸಮಿತಿಯನ್ನು ರಚಿಸಿ ವಾದ ಮಾಡುವ ಹೊಣೆಯನ್ನು ಇವರಿಗೆ ಒಪ್ಪಿಸಿತು. ಹೀಗೆ ಈ ಆಪಾದಿತರ ಪರ ಕಾಂಗ್ರೆಸ್ ಪಕ್ಷ ನಿಂತದ್ದು ಜನಮನದಲ್ಲಿ ಬಹು ಒಳ್ಳೆಯ ಪ್ರಭಾವ ಬೀರಿತು. ಉಕ್ಕೇರಿದ ಈ ಉತ್ಸಾಹದ ಪ್ರಭಾವ ಕಾಂಗ್ರೆಸ್ ರಾಷ್ಟ್ರಾದ್ಯಂತ ಗೆಲುವು

ಸಾಧಿಸಲು ಸಹಾಯಕವಾಯಿತು. ಈ ದೇಶಭಕ್ತರಿಗೆ ಬ್ರಿಟಿಷ್ ಸರಕಾರ ಕೊಡುತ್ತಿದ್ದ ಚಿತ್ರಹಿಂಸೆಯನ್ನು ಪ್ರತಿಭಟಿಸಿ ಕಲ್ಕತ್ತಾ, ಲಾಹೋರ್, ಬೊಂಬಾಯಿ, ಲಕ್ನೋ, ಮಧುರೆ ಮುಂತಾದೆಡೆ ಉಗ್ರ ಚಳುವಳಿ ನಡೆಯಿತು. ಅಲ್ಲಲ್ಲೇ ಹಿಂಸಾಚಾರವೂ ಜರುಗಿತು. ಪೊಲೀಸರ ಗೋಲಿಬಾರಿಗೆ ಹಲವು ಮಂದಿ ಸಾವನ್ನು ಅಪ್ಪಿದರು. ಪರೋಕ್ಷವಾಗಿ ಈ ಅನಿರೀಕ್ಷಿತ ಹೋರಾಟ ಕಾಂಗ್ರೆಸ್‌ಗೆ ಹೆಚ್ಚಿನ ಬೆಂಬಲವನ್ನು ಒದಗಿಸಿಕೊಟ್ಟಿತು.

ಕೇಂದ್ರ ಶಾಸನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಜಯಗಳಿಸಿತು. ಇದಾದ ಕೆಲದಿನಗಳಲ್ಲೇ ಪ್ರಾಂತೀಯ ಶಾಸನಸಭೆಗೂ ಚುನಾವಣೆ ನಡೆದು ಅಸ್ಸಾಂ, ವಾಯುವ್ಯಗಡಿನಾಡು, ಬೊಂಬಾಯಿ, ಮದರಾಸು, ಯು.ಪಿ., ಬಿಹಾರ, ಒರಿಸ್ಸಾ ಮತ್ತು ಸಿ.ಪಿ.ಗಳಲ್ಲಿ ಕಾಂಗ್ರೆಸ್ ಬಹುಮತ ಪಡೆಯಿತು. ಮುಸ್ಲಿಂಲೀಗ್ ಸಿಂಧ್, ಬಂಗಾಳ, ಪಂಜಾಬ್ ಮುಂತಾದೆಡೆ ಮುನ್ನಡೆ ಸಾಧಿಸಿತ್ತು.

೧೯೪೬ರ ಜನವರಿ ೨೮ರಂದು ವೈಸ್‌ರಾಯ್ ರಾಜಕೀಯ ನಾಯಕರನ್ನೊಳಗೊಂಡ ಒಂದು ನೂತನ ಕಾರ್ಯನಿರ್ವಾಹಕ ಮಂಡಳಿಯನ್ನು ರಚಿಸುವುದಾಗಿಯೂ, ಸಾಧ್ಯವಾದಷ್ಟು ಬೇಗನೆ ಸಂವಿಧಾನ ರಚನಾ ಸಭೆಯನ್ನು ರೂಪಿಸುವುದಾಗಿಯೂ ಪ್ರಕಟಿಸಿದರು. ಈ ಬಗ್ಗೆ ಮುಂದಿನ ಕಾರ್ಯನಿರ್ವಹಣೆ ಹಾಗೂ ರೂಪರೇಷೆಗಳನ್ನು ನಿರ್ಣಯಿಸಲು ಲಾರ್ಡ್ ವೇವಲ್ಲರು ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ರವರೊಂದಿಗೆ ಸಮಾಲೋಚಿಸಿ ಲಂಡನ್‌ನಿಂದ ಬಂದು, ಭಾರತದ ಪ್ರಮುಖ ರಾಜಕೀಯ ಮುಖಂಡರೊಡನೆ ಸಾಮೂಹಿಕವಾಗಿ ಹಾಗೂ ಪ್ರತ್ಯೇಕವಾಗಿ ಚರ್ಚೆ ನಡೆಸಿದರು. ಇದೇ ಸಮಯದಲ್ಲಿ ರಾಯಲ್ ಇಂಡಿಯನ್ ನೇವಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಭಾರತೀಯರ ಒಂದು ವರ್ಗವು ದಂಗೆ ಯೆದ್ದಿತು. ರಂಗೂನ್ ಜಪಾನಿಯರ ಕೈವಶವಾಯಿತು. ಬಹುಶಃ ಇವೆಲ್ಲದರ ಪರಿಣಾಮವಾಗಿ ಬ್ರಿಟಿಷ್ ಸರಕಾರ ಸರ್ ಸ್ಟಾಫರ್ಡ್ ಕ್ರಿಪ್ಸ್ ಆಯೋಗವನ್ನು ನೇಮಿಸಿ ಭಾರತೀಯ ನಾಯಕರನ್ನು ಭೇಟಿ ಮಾಡಿ ಸಂವಿಧಾನಕ ಎಡರು ತೊಡರುಗಳನ್ನು ಕುರಿತು ಚರ್ಚಿಸಿ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆ ನೀತಿ ನಿಯಮಗಳನ್ನು ರೂಪಿಸಲು ಆದೇಶಿಸಿತು.

ಕ್ರಿಪ್ಸ್ ನೇತೃತ್ವದ ಈ ಕ್ಯಾಬಿನೆಟ್ ಆಯೋಗದ ಪ್ರಕಟಣೆಯನ್ನು ಭಾರತ ಸ್ವಾಗತಿಸಿತು.

೧೯೪೬ರ ಮಾರ್ಚ್ ೨೪ ರಂದು ದೆಹಲಿಗೆ ಆಗಮಿಸಿದ ಈ ಆಯೋಗದಲ್ಲಿನ ಪಕ್ಷದ ನಾಯಕರು, ಹಿರಿಯ ರಾಜಕಾರಣಿಗಳು, ಪ್ರಾಂತೀಯ ಮುಖ್ಯಮಂತ್ರಿಗಳು, ಗೌರ್ನರ್‌ಗಳು, ಅಲ್ಪಸಂಖ್ಯಾತರ ಪ್ರತಿನಿಧಿಗಳು, ರಾಜರು ಹಾಗೂ ಇತರ ರಾಜಕೀಯ ಆಸಕ್ತರನ್ನು ಭೇಟಿಮಾಡಿ ಮಾತುಕತೆ ನಡೆಸಿ ಅವರೆಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಕಾಂಗ್ರೆಸ್‌ನ ವಾದವನ್ನು ಅಬುಲ್ ಕಲಾಂ ಆಜಾದರು ಆಯೋಗದ ಮುಂದೆ ಮಂಡಿಸಿದರು. ಗಾಂಧಿಯುವರು ಆಯೋಗದ ಮುಂದೆ ಮಾತನಾಡುತ್ತಾ ಜಿನ್ನಾರವರ ದ್ವಿರಾಷ್ಟ್ರತತ್ವ ಬಹು ಅನರ್ಥ ಎಂದು ವರ್ಣಿಸಿದರು. ಜಿನ್ನಾ ಪಾಕಿಸ್ತಾನ ರಚನೆಗೇ ಒತ್ತಾಯಿಸಿದರು. ಡಾ. ಅಂಬೇಡ್ಕರ್ ಪರಿಶಿಷ್ಟ ಜಾತಿ ಒಕ್ಕೂಟದ ಬಗ್ಗೆ, ಜಗಜೀವನರಾಂರವರು ನಿಮ್ನವರ್ಗದ ಬಗ್ಗೆ ತಮ್ಮ ವಾದ ಮಂಡಿಸಿದರು. ಸಿಖ್ ಪ್ರತಿನಿದಿಗಳು ಏಕೀಕೃತ ಭಾರತ ರಚನೆಗೆ ಒತ್ತಾಸೆ ನೀಡಿದರು. ಲಿಬರಲ್ ಮುಖಂಡರಾದ ಸಪ್ರು ಮತ್ತು ಜಯಕರ್ ಶೀಘ್ರವೇ ಮಧ್ಯಂತರ ಸರ್ಕಾರ ರಚನೆಗೆ ಒತ್ತಾಯಿಸಿದರು ಹಾಗೂ ಪಾಕಿಸ್ತಾನದ ವಾದವನ್ನು ವಿರೋಧಿಸಿದರು. ಆದರೆ ಪ್ರಸ್ತುತದ ರಾಜಕೀಯ ಕಗ್ಗಂಟನ್ನು ಬಿಡಿಸುವ ಸಲುವಾಗಿ ಕೇಂದ್ರ ಸರಕಾರ ರಚನೆಯಲ್ಲಿ ಮುಸ್ಲಿಮರು ಮತ್ತು ಹಿಂದೂಗಳಿಗೆ ಸಮಾನ ಪ್ರಾತಿನಿಧ್ಯನಿರುವುದು ಸೂಕ್ತವೆಂದೂ ಸೂಚಿಸಿದರು. ಹಿಂದೂ ಮಹಾಸಭೆ ಕೇಂದ್ರದಲ್ಲಿ ಹಿಂದೂ ಮತ್ತು ಮುಸಲ್ಮಾನರಿಗೆ ಸಮಾನತೆ ಇರಬೇಕೆಂಬ ನಿಲುವನ್ನು ಕಟುವಾಗಿ ಖಂಡಿಸಿತು.

ಕೇಂದ್ರ ಸರ್ಕಾರ ರಚನೆಯಲ್ಲಿ ಒಪ್ಪಂದವನ್ನು ಸಾಧಿಸಲಾಗದ ಕ್ಯಾಬಿನೆಟ್ ಆಯೋಗವು ೧೯೪೭ರ ಮೇ ೧೬ ರಂದು ತನ್ನದೇ ನಿರ್ಧಾರ ವನ್ನು ಪ್ರಕಟಿಸಿತು. "ಭಾರತೀಯರು ಮುಂದಿನ ಭಾರತ ಸಂವಿಧಾನವನ್ನು ರಚಿಸಲು ಶೀಘ್ರವೇ ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು. ನೂತನ ಸಂವಿಧಾನವು ಜಾರಿಗೆ ಬರುವವರೆಗೆ ಬ್ರಿಟಿಷ್ ಇಂಡಿಯಾದ ಆಡಳಿತವನ್ನು ನಿರ್ವಹಿಸಲು ತಕ್ಷಣವೇ ಒಂದು ಮಧ್ಯಂತರ ಸರ್ಕಾರವನ್ನು ರಚಿಸತಕ್ಕದ್ದು". ಕ್ಯಾಬಿನೆಟ್ ಆಯೋಗದ ಈ ಪ್ರಸ್ತಾಪವನ್ನು ಭಾರತದಲ್ಲಿನ ಜನಸಾಮಾನ್ಯರು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಗಾಂಧೀಜಿ 'ಕ್ಯಾಬಿನೆಟ್ ಆಯೋಗದ ಸಾಧನೆ ಪ್ರಶಂಸಾರ್ಹ' ಎಂದು ಶ್ಲಾಘಿಸಿದರು. ಆದರೆ ಮುಸ್ಲಿಂ ಲೀಗ್

ಆಯೋಗದ ಯೋಜನೆಯನ್ನು ತಿರಸ್ಕರಿಸಿತು ಹಾಗೂ ಕಟುವಾಗಿ ಆಯೋಗದ ನಿಲುವನ್ನು ಖಂಡಿಸಿತು.

ಆಗಸ್ಟ್ ೬ ರಂದು ವೈಸ್‌ರಾಯ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನೆಹರೂರವರನ್ನು ಮಧ್ಯಂತರ ಸರ್ಕಾರವನ್ನು ರಚಿಸಲು ಸಲಹೆ ನೀಡಲು ಕೋರಿದರು. ಆಗಸ್ಟ್ ೮ ರಂದು ವಾರ್ಧಾದಲ್ಲಿ ಸೇರಿದ ಕಾರ್ಯಕಾರಿ ಸಮಿತಿ ನೆಹರೂರವರಿಗೆ ಮಧ್ಯಂತರ ಸರ್ಕಾರವನ್ನು ರಚಿಸಲು ಅನುಮತಿ ನೀಡಿತು. ಈ ಬಗ್ಗೆ ಆಗಸ್ಟ್ ೧೨ ರಂದು ವೈಸ್‌ರಾಯ್ ಕಾಂಗ್ರೆಸ್ ಅಧ್ಯಕ್ಷರನ್ನು ಸರಕಾರವನ್ನು ರಚಿಸುವಂತೆ ಕೋರುವ ಅಧಿಕೃತ ಪ್ರಕಟಣೆ ಹೊರಡಿಸಿದರು. ನೆಹರೂರವರು ಆಹ್ವಾನವನ್ನು ಅಂಗೀಕರಿಸಿ ಮಧ್ಯಂತರ ಸರ್ಕಾರದಲ್ಲಿ ಇರುವ ಹದಿನಾಲ್ಕು ಸ್ಥಾನಗಳ ಪೈಕಿ ಐದನ್ನು ಜಿನ್ನಾ ಅವರು ನಾಮಕರಣ ಮಾಡುವವರಿಗೆ ನೀಡುವುದಾಗಿ ಜಿನ್ನಾರವರಿಗೆ ಪತ್ರ ಬರೆದರು. ಜಿನ್ನಾ ಈ ಸಲಹೆಯನ್ನು ಒಪ್ಪಲಿಲ್ಲ. ಆಗಸ್ಟ್ ೧೬ ರಂದು ನೆಹರೂರವರ ನಿಲುವನ್ನು ವಿರೋಧಿಸಿ 'ನೇರ ಕಾರ್ಯಾಚರಣೆ ದಿನ' ಆಚರಿಸುವುದಾಗಿ ಘೋಷಿಸಿ ಹೀಗೆ ಕಟುವಾದ ಹೇಳಿಕೆಯನ್ನು ನೀಡಿದರು :

'ನಾವಿಂದು ಸಂವಿಧಾನಾತ್ಮಕ ಮಾರ್ಗವನ್ನು ತ್ಯಜಿಸಿದ್ದೇವೆ. ನಾವು ಪಿಸ್ತೂಲು, ಬಂದೂಕು ತಯಾರಿಸುವುದಲ್ಲದೆ ಉಪಯೋಗಿಸುವ ತಯಾರಿಯಲ್ಲಿದ್ದೇವೆ'.

ನೇರ ಕಾರ್ಯಾಚರಣೆಯ ಈ ಕಟು ನಿರ್ಣಯವನ್ನು ಮುಸ್ಲಿಂಲೀಗ್ ತೆಗೆದುಕೊಳ್ಳುವ ಬಹು ಹಿಂದೆಯೇ ಹಿಂಸಾತ್ಮಕ ಕಾರ್ಯಾಚರಣೆಗೆ ಇದು ಸನ್ನದ್ಧವಾಗಿರಬೇಕೆನಿಸುತ್ತದೆ. ಏತಕ್ಕೆಂದರೆ ಜಿನ್ನಾರವರ ಈ ಹೇಳಿಕೆ ಹೊರಬೀಳುತ್ತಿದ್ದಂತೆಯೇ ರಾಷ್ಟ್ರಾದ್ಯಂತ ವಿರೋಧಿ ಅಲೆ ವಿಷದಂತೆ ಒಮ್ಮೆಗೇ ಪಸರಿಸಿ ಕೊಲೆ, ಸುಲಿಗೆ, ಬೆಂಕಿ ಹಚ್ಚುವ ಪ್ರಕರಣ, ಮತಾಂತರ, ಮಾನಹರಣ ಮುಂತಾದ ಹಿಂಸಾತ್ಮಕ ಕೃತ್ಯಗಳು ನಡೆಯತೊಡಗಿದವು. ಬಂಗಾಳದಲ್ಲಿ ಅದರಲ್ಲೂ ಕಲ್ಕತ್ತಾದಲ್ಲಿ ಮುಖ್ಯಮಂತ್ರಿ ಸುಹ್ರಾವರ್ದಿಯವರ ಆಡಳಿತದಲ್ಲಿ ಮಾನವ ಮಾರಣ ಹೋಮವೇ ನಡೆದು ಹೋಯಿತು. ಅಧಿಕೃತ ಅಂದಾಜಿನ ಪ್ರಕಾರ ೫೦೦೦ ಜನ ಜೀವತೆತ್ತರು, ೧೫೦೦೦ಕ್ಕೂ ಹೆಚ್ಚು ಜನ ಗಾಯಗೊಂಡರು. ಒಂದು ಲಕ್ಷ ಜನ ನಿರ್ವಸಿತರಾದರು. ಈ ಕರಾಳ

ದಿನಗಳಲ್ಲಿ ಕಲ್ಕತ್ತೆಯಲ್ಲಿ ನಡೆದುದರ ಬೀಭತ್ಸ ವರದಿಯನ್ನು ಲಿಯೋನಾರ್ಡ್ ವೋಸ್ಲೆ ನೀಡಿರುತ್ತಾನೆ. '೧೯೪೬ರ ಆಗಸ್ಟ್ ೧೬ನೆಯ ತಾರೀಕಿನ ಮುಂಜಾನೆಯಿಂದ ಮೂರು ದಿನಗಳು ನಿರಂತರ ಮುಸ್ಸಂಜೆಯವರೆಗೆ ಕಲ್ಕತ್ತಾದ ಜನರು ಒಬ್ಬರನ್ನೊಬ್ಬರು ಇರಿದರು, ಕಡಿದರು, ಸುಟ್ಟರು, ಗುಂಡಿಟ್ಟರು, ಸುಮಾರು ೬೦೦೦ ಜನ ಸತ್ತರು. ಇನ್ನೊಂದು ೨೦,೦೦೦ ಜನರು ಅತ್ಯಚಾರಕ್ಕೊಳಗಾಗಿ ಅಂಗವಿಕಲರಾದರು'.

ಕಲ್ಕತ್ತಾದಂತೆಯೇ ಪಂಜಾಬ್ ಪ್ರಾಂತದಲ್ಲೂ ಮುಸ್ಲಿಂಲೀಗ್ ನಡೆಸಿದ ನೇರ ಕಾರ್ಯಾಚರಣೆಯಲ್ಲಿ ಬೀದಿ ಕಾಳಗ ನಡೆದು ಕೊಲೆ, ಸುಲಿಗೆ, ಮಾನಹಾನಿ, ಇರಿತ ಮುಂತಾದ ದುಷ್ಕೃತ್ಯಗಳು ಹೇರಳವಾಗಿ ನಡೆದವು. ಮುಸಲ್ಮಾನರೇ ಅಧಿಕ ಸಂಖ್ಯೆಯಲ್ಲಿದ್ದ ನೌಖಾಲಿಯಲ್ಲಿ ಹಿಂದೂಗಳ ಮೇಲೆ ಅಮಾನುಷ ದೌರ್ಜನ್ಯಗಳು ನಡೆದವು.

ಆಗಸ್ಟ್ ೨೪, ೧೯೪೬ ರಂದು ವೈಸ್‌ರಾಯರು ಗೌರ್ನರ್ ಜನರಲ್‌ರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರ ರಾಜೀನಾಮೆಯನ್ನು ಅಂಗೀಕರಿಸಿ ನೆಹರೂ ನೇತೃತ್ವದ ಮಧ್ಯಂತರ ಸರಕಾರಕ್ಕೆ ಅಧಿಕಾರ ವರ್ಗಾಯಿಸಿ ಕೊಟ್ಟರು. ಆ ದಿನವೇ ಮತ್ತೆ ಮುಸ್ಲಿಂಲೀಗ್ ವಿರೋಧ ಚಳವಳಿಯನ್ನು ಆರಂಭಿಸಿತು. ಕಲ್ಕತ್ತ ನಗರವು ಮುಸ್ಲಿಂ ಲೀಗ್ ನಡೆಸಿದ ಅಭೂತಪೂರ್ವ ದೌರ್ಜನ್ಯಕ್ಕೆ ರಂಗಸ್ಥಳವಾಗಿತ್ತು. ಈ ಬಗ್ಗೆ ಆಜಾದರು ವೈಸ್‌ರಾಯರಿಗೆ ಹೇಳಿದ ಈ ಮಾತುಗಳು ಅಂದಿನ ಪರಿಸ್ಥಿತಿಗೆ ಕನ್ನಡಿ ಹಿಡಿಯುತ್ತದೆ.

'ಅಂದು ಕಲ್ಕತ್ತೆಯ ಭೂಗತ ಜಗತ್ತಿನ ಗೂಂಡಾಗಿರಿಗೆ ತಮ್ಮಿಚ್ಛೆ ಬಂದಂತೆ ವರ್ತಿಸಲು ಸರ್ಕಾರವು ಪರವಾನಗಿ ಕೊಟ್ಟಂತಿತ್ತು.'

"ಸ್ವಾತಂತ್ರ್ಯ ಸಂಪಾದನೆ ನನ್ನ ಕಿರೀಟವಾದರೆ ಜಾತೀಯ ಕಲಹ ನನ್ನ ಅವನತಿ" ಎನ್ನುತ್ತಿದ್ದ ಗಾಂಧೀಜಿ ಅಕ್ಟೋಬರ್ ೨೮ನೇ ತಾರೀಖು ಬಂಗಾಳಕ್ಕೆ 'ಸೌಹಾರ್ದ ಯಾತ್ರೆ' ಕೈಗೊಂಡರು. ಮುಸಲ್ಮಾನರೇ ಅಧಿಕ ಸಂಖ್ಯೆಯಲ್ಲಿದ್ದ ನೌಖಾಲಿಯಲ್ಲಿ ಹಿಂದೂಗಳ ಮಾರಣಹೋಮವೇ ನಡೆದುಹೋಗಿತ್ತು. ಹಿಂದೂ-ಮುಸ್ಲಿಂ ಶಾಂತಿಗಾಗಿ ಕಲ್ಕತ್ತಾದಲ್ಲಿ ಗಾಂಧೀಜಿ ಮೂರು ದಿನ ಉಪವಾಸ ಕೈಗೊಂಡರು. ಮೂರು ತಿಂಗಳು ನೌಖಾಲಿ, ರಾಮಗಂಜ್, ದಸ್‌ಘರಿಯೆ, ಮಧುಪುರ್, ಶ್ರೀರಾಮಪುರ, ನಾರಾಯಣಪುರ ಮುಂತಾದ ಸ್ಥಳಗಳಿಗೆ

ಕಾಲ್ನಡಿಗೆಯಲ್ಲಿ ಪ್ರವಾಸಮಾಡಿ ಜನರಲ್ಲಿ ಶಾಂತಿ ಭಿಕ್ಷೆ ಬೇಡಿದರು. ಬಂಗಾಳದಿಂದ ಬಿಹಾರಕ್ಕೂ ಹೋಗಿ ಅಲ್ಲೂ ಹಿಂದೂ-ಮುಸ್ಲಿಂ ಸೌಹಾರ್ದಕ್ಕಾಗಿ ಶ್ರಮಿಸಿದರು. ಈ ಪ್ರವಾಸದಲ್ಲಿ ಪ್ಯಾರೇಲಾಲ್ ಮತ್ತು ಸುಶೀಲಾನಯ್ಯಾರ್ ಸಹ ಭಾಗವಹಿಸಿದ್ದರು. ದಿನಾಂಕ : ೩೦-೩-೧೯೪೭ ರಂದು ಗಾಂಧೀಜಿ ದೆಹಲಿಗೆ ಹಿಂತಿರುಗಿದರು. ಇದೇ ದಿನಗಳಲ್ಲಿ ಬೊಂಬಾಯಿ ಮತ್ತು ಅಹಮದಾಬಾದ್‌ಗಳಲ್ಲೂ ಮತೀಯ ಗಲಭೆಗಳು ನಡೆದು ಅಪಾರ ಕಷ್ಟನಷ್ಟಗಳಿಗೆ ಜನತೆ ಒಳಗಾಯಿತು.

ದೇಶಾದ್ಯಂತ ಸಾಕಷ್ಟು ವಿಧ್ವಂಸಕ ಕೃತ್ಯಗಳನ್ನು ನಡೆಸಿದ್ದ ಮುಸ್ಲಿಂಲೀಗ್ ೧೯೪೬ ಡಿಸೆಂಬರ್ ೧೩ ರಂದು ಮಧ್ಯಂತರ ಸರ್ಕಾರದಲ್ಲಿ ಸೇರಿಕೊಳ್ಳಲು ಒಪ್ಪಿಗೆ ನೀಡಿತು. ಸರಕಾರದಲ್ಲಿ ಮುಸ್ಲಿಂ ಲೀಗ್‌ನ ಐದು ಸದಸ್ಯರುಗಳಿಗೆ ಅವಕಾಶ ಕಲ್ಪಿಸಿಕೊಡುವ ಸಲುವಾಗಿ ಕಾಂಗ್ರೆಸ್‌ನ ಶರತ್‌ಚಂದ್ರಬೋಸ್, ಸರ್ ಶಫಾತ್ ಅಹಮದ್‌ಖಾನ್ ಮತ್ತು ಸಯ್ಯದ್ ಅಲಿ ಜ್ಜಹೀರ್ ಮಧ್ಯಂತರ ಸರಕಾರದಿಂದ ನಿರ್ಗಮಿಸಿದರು. ಸರಕಾರದಲ್ಲಿ ಈಗ ಮುಸ್ಲಿಂಲೀಗ್ ಸೇರಿಕೊಂಡಿದ್ದುದರಿಂದ ರಾಜ್ಯಾಂಗ ರಚನಾ ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಅದಕ್ಕಾಗಿ ಹಿಂದೆ ಲೀಗ್ ಬಹಿಷ್ಕರಿಸಿ ಮಾಡಿದ್ದ ನಿರ್ಣಯವನ್ನು ರದ್ದುಪಡಿಸಬೇಕೆಂದು ವೈಸ್‌ರಾಯ್ ಜಿನ್ನಾರವರನ್ನು ವಿನಂತಿಸಿಕೊಂಡರು. ಆದರೆ ಅವರು ಈ ಸಲಹೆಗೆ ಒಪ್ಪದೆ ಸಂವಿಧಾನ ರಚನಾ ಸಭೆಯನ್ನು ಅನಿರ್ದಿಷ್ಟಕಾಲ ಮುಂದೂಡಲು ಸರಕಾರವನ್ನು ಒತ್ತಾಯಿಸತೊಡಗಿದರು. ಕೇವಲ ಕಾಂಗ್ರೆಸ್ ಪ್ರತಿನಿಧಿಗಳಿರುವ ಸಂವಿಧಾನರಚನಾ ಮಂಡಲವನ್ನು ನೇಮಿಸುವುದು ಮುಂದೆ ಅನರ್ಥಕ್ಕೆ ಕಾರಣವಾಗಬಹುದೆಂದು ಬೆದರಿಕೆ ಹಾಕಿದರು. ಬ್ರಿಟನ್ನಿನ ಸೆಕ್ರೆಟರಿ ಆಫ್ ಸ್ಟೇಟ್ ಈ ಬೆದರಿಕೆಗೆ ಸೊಪ್ಪು ಹಾಕಲಿಲ್ಲ. ಆದರೂ ಈ ಬಗ್ಗೆ ಒಮ್ಮತಕ್ಕೆ ಬರುವ ಕಡೆಯ ಪ್ರಯತ್ನ ನಡೆಸಲು ಸಂಧಾನಕ್ಕಾಗಿ ನೆಹರೂ, ಬಲದೇವ್ ಸಿಂಗ್, ಜಿನ್ನಾ ಮತ್ತು ಲಿಯಾಖತ್ ಅಲಿಖಾನ್ ರವರನ್ನು ವೈಸ್‌ರಾಯ್ ಜೊತೆಯಲ್ಲಿ ಲಂಡನ್‌ಗೆ ಬರಲು ಆಹ್ವಾನಿಸಿದರು.

ಈ ನಿಯೋಗ ಡಿಸೆಂಬರ್ ೨, ೧೯೪೬ ರಂದು ಲಂಡನ್ ತಲುಪಿ, ಸೆಕ್ರೆಟರಿ ಆಫ್ ಸ್ಟೇಟ್‌ರವರೊಡನೆ ಪರಾಮರ್ಶೆ ನಡೆಸಿತು. ಯಾವುದೇ

ಪರಿಹಾರವು ಸಾಧ್ಯವಾಗಲಿಲ್ಲ. ಫೆಡರಲ್ ನ್ಯಾಯಾಲಯಕ್ಕೆ ಈ ಸಮಸ್ಯೆಯನ್ನು ಕೊಂಡೊಯ್ಯುವ ಬಗ್ಗೆಯೂ ಒಮ್ಮತ ಸಾಧ್ಯವಾಗಲಿಲ್ಲ.

ಸರಕಾರಕ್ಕೆ ರಾಜ್ಯಾಂಗ ರಚನಾ ಸಭೆಯ ರಚನೆಯನ್ನು ಮುಂದೂಡುವುದು ಇಷ್ಟವಿರಲಿಲ್ಲ.

ಮಧ್ಯಂತರ ಸರ್ಕಾರದಲ್ಲಿ ಸೇರಿಕೊಂಡ ಮುಸ್ಲಿಂಲೀಗ್ ಒಳಗೇ ಕಿರುಕುಳಕೊಡಲು ಪ್ರಾರಂಭಿಸಿತು. ಆರು ತಿಂಗಳಲ್ಲಿ ಆಡಳಿತ ಚಕ್ರ ಉರುಳಿ ಬೀಳುವಷ್ಟು ಆಡಳಿತಾತ್ಮಕ ತೊಂದರೆಗಳನ್ನು ನೀಡಿ ಪಾಕಿಸ್ತಾನ ರಚನೆಗೆ ಕಾಂಗ್ರೆಸ್ ಒಪ್ಪುವಷ್ಟು ಒತ್ತಡ ತಂದಿತು.

ದಿನೇ ದಿನೇ ಉಲ್ಬಣಗೊಳ್ಳುತ್ತಿದ್ದ ರಾಜಕೀಯ ಪರಿಸ್ಥಿತಿಯಲ್ಲಿ ರಾಜ್ಯಾಂಗ ರಚನೆಯ ಅನಿವಾರ್ಯತೆಯನ್ನು ಮನಗಂಡ ಸರ್ಕಾರ ಅದನ್ನು ರಚಿಸುವ ಘೋಷಣೆ ಮಾಡಿತು.

ಈ ರಾಜ್ಯಾಂಗ ರಚನಾ ಸಭೆಯು ೧೯೪೬ರ ಡಿಸೆಂಬರ್ ೯ ರಂದು ಸೇರಿತು. ನಿರೀಕ್ಷಿಸಿದಂತೆಯೇ ಮುಸ್ಲಿಂಲೀಗ್ ಇದರಲ್ಲಿ ಭಾಗವಹಿಸಲಿಲ್ಲ.

ದಿನಾಂಕ : ೩೧-೧-೧೯೪೭ರಂದು ಸೇರಿದ ಮುಸ್ಲಿಂಲೀಗ್‌ನ ಕಾರ್ಯಕಾರಿ ಸಮಿತಿಯು ಕ್ಯಾಬಿನೆಟ್‌ಮಿಷನ್‌ನ ಪ್ರಸ್ತಾಪಗಳೂ ವಿಫಲವಾಗಿದೆ ಎಂದು ಘೋಷಿಸಿದ್ದಲ್ಲದೆ ರಾಜ್ಯಾಂಗ ರಚನಾಸಭೆ ನ್ಯಾಯಬಾಹಿರವಾದುದೆಂದೂ ಹೇಳಿಕೆ ನೀಡಿತು.

ಫೆಬ್ರವರಿ ತಿಂಗಳಲ್ಲಿ ನಡೆದ ಕಾಂಗ್ರೆಸ್ ಸಭೆಯ ಅಧ್ಯಕ್ಷತೆಯನ್ನು ಡಾ.ರಾಜೇಂದ್ರ ಪ್ರಸಾದರು ವಹಿಸಿದ್ದರು. ನೆಹರೂರವರು ಆ ಸಭೆಯ ಧ್ಯೇಯ ಧೋರಣೆಗಳನ್ನು ಎಲ್ಲ ಸದಸ್ಯರುಗಳ ಗಮನಕ್ಕೆ ತಂದರು. ಆ ಸಭೆ ಅಂಗೀಕರಿಸಿದ ಮೊದಲ ನಿರ್ಣಯ 'ಭಾರತ ಸ್ವತಂತ್ರ ಪ್ರಜಾಪ್ರಭುತ್ವ ತಳಹದಿಯ ಮೇಲೆ ನಿರ್ಮಿತಗೊಳ್ಳಲಿರುವ ಗಣರಾಜ್ಯವಾಗಲಿದೆ.'

ಮುಸ್ಲಿಮ್ ಲೀಗ್ ಹೀಗೆ ಎಲ್ಲಾ ವಿಷಯಗಳಲ್ಲೂ ಅಸಹಕಾರ ಅಥವಾ ವಿರೋಧ ತೋರುತ್ತಾ ತಮ್ಮ ಹಿಂದಿನ ನೆಲೆಯಲ್ಲೇ ಪಟ್ಟು ಹಿಡಿದು ಕುಳಿತಿದ್ದುದರಿಂದ ಲಾರ್ಡ್ ವೇವಲ್ಲರು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ನಡುವಣ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಸತತ ಪ್ರಯತ್ನ ನಡೆಸಿದ್ದರು.

ಗಾಂಧಿಯವರು ಹಿಂದಿನಿಂದ ಹೇಳುತ್ತಾ ಬಂದಿದ್ದಂತೆ 'ಹಿಂದೂ

ಮುಸ್ಲಿಮ್ ನಡುವಣ ಆಂತರಿಕ ಸಮಸ್ಯೆಯಾದ ಮತಭೇದ, ಬ್ರಿಟಿಷರು ಭಾರತ ಬಿಟ್ಟುಹೋದ ಹೊರತೂ ಬಗೆ ಹರಿಯುವುದಿಲ್ಲ. ಅವರು ಹೋದ ಮೇಲೆ ಈ ಸಮಸ್ಯೆ ತಾನೇ ತಾನಾಗಿ ಬಗೆ ಹರಿಯುತ್ತೆ'. ಈ ಅಭಿಪ್ರಾಯವನ್ನೇ ಬೆಂಬಲಿಸಿ ಬ್ರಿಟನ್‌ನ ಪ್ರಧಾನ ಮಂತ್ರಿ ಅಟ್ಲೀ ಭಾರತ ಸರ್ಕಾರದ ಆಡಳಿತದ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಭಾರತೀಯರ ಕೈಗೊಪ್ಪಿಸುವ ನಿರ್ಧಾರವನ್ನು ದಿನಾಂಕ ೨೦, ಫೆಬ್ರವರಿ ೧೯೪೭ ರಂದು ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದ್ದರು.

ಲಾರ್ಡ್ ವೇವಲ್ಲರ ಸ್ಥಾನದಲ್ಲಿ ಅಡ್ಮಿರಲ್ ವಿ ಸ್ಕೌಂಟ್ ಮೌಂಟ್ ಬ್ಯಾಟನ್‌ರವರು ದಿನಾಂಕ ೨೪ರ ಮಾರ್ಚ್ ೧೯೪೭ರಂದು ಭಾರತದ ನೂತನ ವೈಸ್‌ರಾಯ್ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರು ಅಂದು ನುಡಿದ ಈ ಮಾತುಗಳು ಭಾರತದ ಸ್ವಾತಂತ್ರ್ಯ ಚರಿತ್ರೆಯಲ್ಲಿ ದಾಖಲೆಯಾಗುಳಿದಿವೆ.

"ನಾನು ಕೊನೆ ವೈಸ್‌ರಾಯ್ ಆಗಿ ಬಂದಿದ್ದೇನೆ. ಭಾರತದಲ್ಲಿ ಆಂಗ್ಲರ ಆಡಳಿತ ಮುಕ್ತಾಯಗೊಳಿಸಿ ಭಾರತೀಯರಿಗೆ ಅಧಿಕಾರ ವಹಿಸಿಕೊಡುವುದು ನನ್ನ ಜವಾಬ್ದಾರಿ".

ಈ ಜವಾಬ್ದಾರಿಯನ್ನು ಅವರು ಬಹು ಯಶಸ್ವಿಯಾಗಿ ನಿರ್ವಹಿಸಿದ್ದು ಚಾರಿತ್ರಿಕ ದಾಖಲೆಯಾಗುಳಿದಿದೆ.

ಬ್ರಿಟಿಷ್ ಪ್ರಧಾನಿ ಅಟ್ಲೀಯವರು ೧೯೪೮ ಜೂನ್ ಮಧ್ಯಭಾಗದ ವೇಳೆಗೆ ಆಡಳಿತಾರೂಢ ಬ್ರಿಟಿಷರು ಭಾರತ ಬಿಟ್ಟು ಹೋಗುವುದಾಗಿ ಘೋಷಿಸಿದ್ದುದರಿಂದ ಮೌಂಟ್ ಬ್ಯಾಟನ್‌ರವರು ಸರ್ಕಾರಿ ಆಡಳಿತವನ್ನು ಮಧ್ಯಂತರ ಸರಕಾರಕ್ಕೆ ಒಪ್ಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದರು.

ಅಧಿಕಾರ ವಹಿಸಿಕೊಂಡ ಕೂಡಲೇ ಮೌಂಟ್ ಬ್ಯಾಟನ್ ಮಾಡಿದ ಮೊದಲ ಕೆಲಸವೆಂದರೆ ಕಾಂಗ್ರೆಸ್ ಹಾಗೂ ಮುಸ್ಲಿಮ್ ಲೀಗ್‌ನ ಪ್ರಮುಖರಾದ ಗಾಂಧಿ ಮತ್ತು ಜಿನ್ನಾರವರನ್ನು ಭೇಟಿಗೆ ಆಹ್ವಾನಿಸಿ ಪತ್ರ ಬರೆದದ್ದು. ಆಗ ಗಾಂಧೀಜಿಯವರು ಪಾಟ್ನಾ ಜಿಲ್ಲೆಯ ಪ್ರವಾಸದಲ್ಲಿದ್ದರು. ಅವರು ದೆಹಲಿಗೆ ಹಿಂತಿರುಗಿ ಬಂದ ಮೇಲೆ ಏಪ್ರಿಲ್ ೧ನೇ ತಾರೀಖು ಸರ್ದಾರ್ ಪಟೇಲರು ಗಾಂಧಿಯವರನ್ನು ವೈಸ್‌ರಾಯರ ಭೇಟಿಗೆ ಕರೆದೊಯ್ದರು. ಭಾರತದ ವಿಭಜನೆಯ ಮಾತು ಅಲ್ಲಿ ಪ್ರಸ್ತಾಪಕ್ಕೆ ಬಂದಾಗ ಗಾಂಧಿ ಬಹಳ

ನೊಂದುಕೊಂಡರು. ಆಗಬಾರದ್ದು ಆಗುತ್ತಿರುವುದಕ್ಕೆ ವಿಷಾದಿಸಿದರು. ೧೯೪೭ರ ಏಪ್ರಿಲ್ ೮ ರಂದು ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ತಮ್ಮ ದುಃಖವನ್ನು ಎಲ್ಲರೊಡನೆ ಹಂಚಿಕೊಂಡರು. 'ವಿಭಜನೆಯ ಮಾತು ಬಂದಾಗ ನನ್ನ ಹೃದಯ ಉರಿಯುತ್ತದೆ. ಶರೀರದ ಒಂದು ಭಾಗವನ್ನು ಕತ್ತರಿಸಿದರೆ ಅದರ ಸ್ಥಿತಿ ಏನಾದೀತು! ಈ ರೀತಿ ಮಾಡುವುದಕ್ಕಿಂತ ಇಡೀ ದೇಶವನ್ನು ಮುಸ್ಲಿಂ ಲೀಗಿನ ವಶಕ್ಕೆ ಕೊಟ್ಟುಬಿಡುವುದು ಒಳ್ಳೆಯದು.....' ಈ ಹತಾಶ ನುಡಿ ಕೇಳಿ ದೇಶ ವಿಕ್ಷುಬ್ಧಗೊಂಡಿತು. ಈ ಹೇಳಿಕೆ ಬಗ್ಗೆ ಗಾಂಧೀಜಿ ಕಟು ನಿಂದೆಯನ್ನು ಕೇಳಬೇಕಾಯಿತು. ಬಹಳಷ್ಟು ಸಂಸ್ಥೆಗಳು, ಸಾರ್ವಜನಿಕರು ಈ ನಿಲುವನ್ನು ಖಂಡಿಸಿ ಗಾಂಧಿಯ ಮೇಲೆ ಕೋಪಾಗ್ನಿಯನ್ನೇ ಹರಿಸಿದರು.

ಜಿನ್ನಾರವರು ಬಹಳ ಹಟವಾದಿ. ಅವರು ತಮ್ಮ ನಿಲುವಿಗೆ ಕಟ್ಟುಬಿದ್ದಿದ್ದರು. ಅವರಿಗೆ ಬೇಕಾಗಿದ್ದುದು ಪಾಕಿಸ್ತಾನ, ಹಿಂದೂಸ್ತಾನವಲ್ಲ.

ಗಾಂಧಿಯವರು ತಮ್ಮ ಹತಾಶಭಾವನೆಗೆ ಆಂತರ್ಯದಲ್ಲಿರುವ ನೋವೇ ಕಾರಣವೆಂದು ಈ ಬಗ್ಗೆ ಹಲವು ಕಡೆ ವಿವರಣೆಯನ್ನು ನೀಡಬೇಕಾಯಿತು.

'ಹಿಂದೂಸ್ತಾನವನ್ನು ವಿಭಜಿಸುವುದರ ಅರ್ಥ, ಎಂದಾದರೂ ಒಂದು ದಿನ ನೂರು ತುಂಡಾಗಲು ಅನುವು ಮಾಡಿಕೊಟ್ಟಂತೆ ! ಬೇರೆ ಬೇರೆ ಜಾತಿಗಳು ತಮ್ಮ ತಮ್ಮ ರಾಜ್ಯಕ್ಕಾಗಿ ಹೋರಾಟ ನಡೆಸಬಹುದು ! ಆಗ ಹಿಂದೂಸ್ತಾನದ ಸ್ಥಿತಿ ಏನಾದೀತು ! ಜನತೆಯ ಸ್ಥಿತಿ ಏನಾದೀತು ! ನಮ್ಮ ಹೋರಾಟಕ್ಕೆ ಸಲ್ಲುವ ಬೆಲೆ ಇದೇ ಏನು ?!'

ಈ ವಿಶ್ಲೇಷಣೆ ಜನರ ಕೋಪವನ್ನು ತಣ್ಣಗಾಗಿಸಿತು. ಅಲ್ಪಸಂಖ್ಯಾತರು, ಹರಿಜನರು, ಹಿಂದುಳಿದವರು, ದಲಿತರು, ಬಡಜನರು ಇವರಿಗಾಗಿಯೇ ಅಹರ್ನಿಶಿ ಶ್ರಮಿಸುತ್ತಾ ಖಾದಿ ಉತ್ಪಾದನೆ, ಗ್ರಾಮೋದ್ಯೋಗ, ಸರ್ವೋದಯ, ಸಮಾಜನಿರ್ಮಾಣ, ರಾಮರಾಜ್ಯ ಸ್ಥಾಪನೆ ಮುಂತಾದ ಜನಪರ ಜನಹಿತ ಕಾರ್ಯಾಚರಣೆಯಲ್ಲೇ ತೊಡಗಿದ್ದ ಗಾಂಧೀಜಿ 'ಮಹಾತ್ಮ'ರ ಪದವಿಗೇರಿ ನಿಂತಿದ್ದರು. ಭಾರತದ ಜನತೆಯ ಆರಾಧ್ಯ ಪುರುಷರಾಗಿದ್ದರು. ಪ್ರಪಂಚದ ದೃಷ್ಟಿಯಲ್ಲಿ ಆದರ್ಶಮಾನವ, ಶಾಂತಿದೂತ, ಅಹಿಂಸಾ ಅಧ್ವರ್ಯು ಆಗಿದ್ದರು. ಈ ಹಿನ್ನೆಲೆಯಲ್ಲಿ ರೂಪುಗೊಂಡಿದ್ದ ಗಾಂಧಿಯವರ ಮನಸ್ಸು ಸದಾ ಮೇಲ್ಮಟ್ಟದ ಚಿಂತನೆಯನ್ನೇ ಮಾಡುತ್ತಿತ್ತು ಎಂಬುದಕ್ಕೆ ಉದಾಹರಣೆ ಈ ಕೆಳಗಿನ ಮಾತುಗಳು:

ಜೂನ್ ೨೭, ೧೯೪೭ರಂದು ಆರ್ಥರ್ ಮೂರ್ ಎಂಬ ಪ್ರವಾಸಿ ಪತ್ರಕರ್ತ ಗಾಂಧೀಜಿಯನ್ನು ಪ್ರಶ್ನಿಸಿದರು. "ಮಹಾತ್ಮರೆ, ಭಾರತಕ್ಕೆ ತಾವು ಸ್ವಾತಂತ್ರ್ಯ ತಂದುಕೊಡುತ್ತಿದ್ದೀರಿ. ಇದು ತಮ್ಮ ಶ್ಲಾಘನೀಯ ಸಾಧನೆ. ಇದಕ್ಕಾಗಿ ತಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತಿದ್ದೇನೆ. ಈ ಬಗ್ಗೆ ತಮ್ಮಲ್ಲಿ ನನ್ನದೊಂದು ಕಿರು ಪ್ರಶ್ನೆ!"

"ಕೇಳಿ ..... ಕೇಳಿ ನಿರ್ಭಯವಾಗಿ ಏನು ಬೇಕಾದರೂ ಪ್ರಶ್ನಿಸಿ" ನಗುತ್ತಲೇ ಗಾಂಧಿ ನುಡಿದರು.

"ಸ್ವಾತಂತ್ರ್ಯ ಭಾರತದ ರಾಷ್ಟ್ರಾಧ್ಯಕ್ಷರು ಯಾರಾಗಬೇಕು ?"

"ಸ್ವಾತಂತ್ರ್ಯ ಭಾರತದ ರಾಷ್ಟ್ರಾಧ್ಯಕ್ಷಿಣಿ ಒಬ್ಬ ಹರಿಜನ ಮಹಿಳೆ ಆಗಬೇಕು".

"ನೀವು ಸತ್ಯವಾಗಿ ಮಹಾತ್ಮರು" ಅವರ ಕಾಲಿಗೆರಗಿ ಆರ್ಥರ್‌ಮೂರ್ ಮುಂದೆ ನಡೆದಿದ್ದರು.

◆ ◆ ◆

ರದ್ದಿ ಕಾಗದದ ಬುಟ್ಟಿ

ಗಾಂಧೀಜಿ ಲಂಡನ್ನಿಗೆ ದುಂಡು ಮೇಜಿನ ಪರಿಷತ್ತಿಗೆ ಹೋಗುವಾಗ ನಡೆದ ಸಂಗತಿ. ಅವರೊಡನೆ ಜಹಜಿನಲ್ಲಿ ಒಬ್ಬ ಬಿಳಿಯ ಯಾತ್ರಿಕನೂ ಪ್ರಯಾಣ ಮಾಡುತ್ತಿದ್ದ. ಅವನು ಗಾಂಧೀಜಿಯವರನ್ನು ಟೀಕಿಸುತ್ತಾ ಏನಾದರೂ ಅವರ ಬಗ್ಗೆ ಕೆಟ್ಟದ್ದನ್ನಾಡುತ್ತಲೇ ಇದ್ದ. ಆದರೆ ಗಾಂಧೀಜಿಯವರು ಅವನ ಮಾತಿಗೆ ನಿಗ ಕೊಡಲಿಲ್ಲ.

ಒಂದು ದಿನ ಈ ಪ್ರಭೃತಿ ಗಾಂಧಿಯವರ ಮೇಲೆ ಒಂದು ವ್ಯಂಗ್ಯ ಕಟ್ಟಿ, ಗೀಚಿದ ಪುಟಗಳನ್ನು ಗಾಂಧೀಜಿಯುವರ ಮುಖದೆದುರು ಹಿಡಿದು ಓದಲು ಹೇಳಿದ. ಗಾಂಧೀಜಿಯವರು ಆ ಪುಟಗಳನ್ನು ಸೇರಿಸಿದ್ದ ಗುಂಡು ಪಿನ್ನಿಗೆ ಕೈ ಹಚ್ಚಿ ಅದನ್ನು ಬಿಡಿಸಿ ತಮ್ಮ ಡಬ್ಬಿಯಲ್ಲಿಟ್ಟುಕೊಂಡರು. ಉಳಿದ ಪುಟಗಳನ್ನು ಹರಿದು ಹತ್ತಿರದಲ್ಲೇ ಇದ್ದ ರದ್ದಿ ಕಾಗದದ ಬುಟ್ಟಿಯಲ್ಲಿ ಎಸೆದರು.

('ಹೀಗಿದ್ದರು ಬಾಪೂ' ಸಂಗ್ರಾಹಕ : ಟಿ.ವಿ. ವೆಂಕಟರಮಣಯ್ಯ)

೨೦. ಭಾರತ ಸ್ವಾತಂತ್ರ್ಯ ಗಳಿಸಿತು

ಬಂಗಾಳ, ಬಿಹಾರ, ಪಂಜಾಬ್, ದೆಹಲಿ ಮುಂತಾದೆಡೆ ಮುಸ್ಲಿಮ್‌ಲೀಗ್ ನಡೆಸಿದ ಹತ್ಯಾಕಾಂಡದಿಂದ ದೇಶ ಜರ್ಜರಿತಗೊಂಡಿತ್ತು. ಅಶಾಂತಿ, ಅಭದ್ರತೆ ಎಲ್ಲೆಡೆ ತಾಂಡವವಾಡುತ್ತಿತ್ತು. ಮೌಂಟ್‌ಬ್ಯಾಟನ್ ಹಿಂದೂ ಮುಸಲ್ಮಾನರ ಮಧ್ಯೆ ನಡೆಯುತ್ತಿದ್ದ ಈ ನರಹತ್ಯೆಯನ್ನು ನಿಯಂತ್ರಿಸಲು ಶಕ್ತಿಮೀರಿ ಶ್ರಮಿಸಿದರು. ಜಿನ್ನಾ ಮತ್ತು ಕಾಂಗ್ರೆಸ್ ಮುಖಂಡರೊಡನೆ ಸೌಹಾರ್ದಯುತ ಒಪ್ಪಂದ ಏರ್ಪಡಿಸಲು ಬಹಳ ಪ್ರಯತ್ನ ಮಾಡಿದರು. ಜಿನ್ನಾ ತಮ್ಮ ಹಟವನ್ನು ಬಿಡದೆ ಇದ್ದಾಗ ಅವ್ಯಾಹತವಾಗಿ ನಡೆಯುತ್ತಿದ್ದ ನರಹತ್ಯೆ, ದರೋಡೆ, ಅರಾಜಕತೆ ನಿಲ್ಲಲಿ ಎಂಬ ಆಶಯದಿಂದ ಮೌಂಟ್ ಬ್ಯಾಟನ್‌ರವರ ಶಿಪಾರಸ್ಸಿನ ಮೇಲೆ ಅಟ್ಲೀ ಸರಕಾರ ಭಾರತಕ್ಕೆ ಹಿಂದೆ ಅವರು ಸ್ವಾತಂತ್ರ್ಯ ಕೊಡಲು ನಿರ್ಧರಿಸಿದ್ದ ಜೂನ್ ೧೯೪೮ಕ್ಕೆ ಮುಂಚೆಯೇ ಸ್ವಾತಂತ್ರ್ಯ ನೀಡಲು ಮುಂದಾದರು. ಭಾರತ ಇಬ್ಭಾಗವಾಗುವ ಅನಿವಾರ್ಯತೆಯನ್ನು ಮನಗಂಡು ದಿನಾಂಕ ೧೮, ಜುಲೈ ೧೯೪೭ ರಂದು, ಜಿನ್ನಾರವರ ಬೇಡಿಕೆಯನ್ನು ಪುರಸ್ಕರಿಸಿ ಭಾರತವನ್ನು ತುಂಡರಿಸಿ ಪಾಕಿಸ್ತಾನ ನಿರ್ಮಿಸಲು ಅಟ್ಲೀ ಸರಕಾರ ಒಪ್ಪಿಗೆಯನ್ನು ನೀಡಿತು. ಗಾಂಧಿಯವರಿಗೆ ಈ ತೀರ್ಮಾನ ಬಹು ನೋವುಂಟು ಮಾಡಿತು. ಆದರೆ ಕಾಂಗ್ರೆಸ್ ಸಂಸ್ಥೆ ಸಹ ಇದಕ್ಕೆ ಒಪ್ಪಿಗೆ ನೀಡಿದ್ದುದರಿಂದ, ಅನಿವಾರ್ಯವಾಗಿ ಗಾಂಧೀಜಿ ಸಹ ಇದನ್ನು ಒಪ್ಪಲೇಬೇಕಾಯಿತು. ಇದನ್ನೇ ಅವರು ಪತ್ರಗಾರರೊಬ್ಬರಿಗೆ ಸ್ಪಷ್ಟಪಡಿಸಿದ್ದಾರೆ. "ವಿಭಜನೆಯನ್ನು ನಾನು ಎಂದೂ ಒಪ್ಪಿರಲಿಲ್ಲ. ಇಂದೂ ಸಮರ್ಥಿಸುತ್ತಿಲ್ಲ. ಆದರೆ ಮನಸ್ಸಿಲ್ಲದಿದ್ದರೂ ಕಾಂಗ್ರೆಸ್ ಇದನ್ನೊಪ್ಪಿಕೊಂಡಿರುವಾಗ ನಾನು ಅದರ ವಿರುದ್ಧ ಹೋರಾಟ ಹೂಡಲಾರೆ."

೧೯೪೭, ಆಗಸ್ಟ್ ೧೪-೧೫ರ ಮಧ್ಯರಾತ್ರಿ ಭಾರತ ಸ್ವತಂತ್ರವಾಯಿತು. ಜವಾಹರ್‌ಲಾಲ್ ನೆಹರೂರವರು ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ಮೌಂಟ್ ಬ್ಯಾಟನ್‌ರವರು ಸ್ವತಂತ್ರ ಭಾರತದ ಗೌರ್ನರ್ ಜನರಲ್ಲಾದರು. ಅಧಿಕಾರ ಸ್ವೀಕರಿಸಿದೊಡನೆ ಅವರು ಆಡಿದ ಮಾತು

ಉಲ್ಲೇಖನೀಯ : "ಸ್ವಾತಂತ್ರ್ಯ ಭಾರತದ ಗೌರ್ನರ್ ಜನರಲ್ ಆಗಿ ನಾನಿಂದು ಗೌರವ ಪಡೆಯುತ್ತಿದ್ದೇನೆ. ನಾನು ನಿಮ್ಮ ಸೇವಕ". ಇವರು ಭಾರತದಲ್ಲಿ ಇರುವಷ್ಟು ಕಾಲವೂ ಭಾರತದ ಸ್ನೇಹಿತರಾಗೇ ಇದ್ದರು. ಪಾಕಿಸ್ತಾನ ೧೯೪೭ರ ಆಗಸ್ಟ್ ೧೪ ರಂದು ರೂಪುಗೊಂಡಿತು. ಮಹಮ್ಮದಾಲಿ ಜಿನ್ನಾ ರಾಷ್ಟ್ರದ ಪ್ರಥಮ ಗೌರ್ನರ್ ಜನರಲ್ ಆದರು. ಲಿಯಾಖತ್ ಆಲಿಖಾನ್ ರವರು ಪ್ರಧಾನಮಂತ್ರಿಯಾದರು.

ಮೌಂಟ್ ಬ್ಯಾಟನ್‌ರವರಿಗೆ ಗಾಂಧಿಯವರನ್ನು ಕಂಡರೆ ಅಪಾರ ಗೌರವ. ಭಾರತ ಸ್ವಾತಂತ್ರ್ಯ ರಾಷ್ಟ್ರವಾಗಿ ಘೋಷಿತವಾದ ಮೇಲೆ ಮೌಂಟ್ ಬ್ಯಾಟನ್ ಗಾಂಧಿಯವರ ಬಗ್ಗೆ ಹೇಳಿರುವ ಈ ಮಾತುಗಳು ಅವರ ಮೇಲಿರುವ ಗೌರವವನ್ನು ಪ್ರತಿಮಿಸುತ್ತವೆ.

"ಎಲ್ಲರೂ ಮಹಾತ್ಮಾಗಾಂಧಿಯವರಿಗೆ ಋಣಿಯಾಗಿರಬೇಕು. ಅವರನ್ನು ಯಾರೇ ಆಗಲಿ ಎಂದೂ ಮರೆಯಲಾಗದು. ಸ್ವಾತಂತ್ರ್ಯವನ್ನು ಅಹಿಂಸೆಯಿಂದ ಗಳಿಸಿಕೊಟ್ಟ ಮಹಾನ್ ಶಿಲ್ಪಿ ಅವರು. ಇಂತಹ ಅಮೂಲ್ಯ ಸಂದರ್ಭದಲ್ಲಿ ಅವರು ನಮ್ಮೊಡನಿಲ್ಲ. ಆದರೂ ನಮ್ಮ ಯೋಚನೆಯಲ್ಲಿ, ವಿಚಾರದಲ್ಲಿ ಅವರು ತುಂಬಿಕೊಂಡಿದ್ದಾರೆ......"

ಮಹಾತ್ಮಾ ಗಾಂಧಿಯವರು, ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಸಮಾರಂಭವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾಗ, ಅವರು ದೆಹಲಿಯಲ್ಲಿ ಉಪಸ್ಥಿತರಿರಲಿಲ್ಲ. ಕಲ್ಕತ್ತಾದಲ್ಲಿ ಮುಸ್ಲಿಮ್‌ಲೀಗ್ ನಡೆಸುತ್ತಿದ್ದ ದಂಗೆ, ನರಮೇಧವನ್ನು ನಿಯಂತ್ರಿಸುತ್ತಿದ್ದರು.

ಆಗಸ್ಟ್ ೧೪ರಂದೇ ಬಂಗಾಳಕ್ಕೆ ಹೋಗಿದ್ದ ಅವರು ಕಲ್ಕತ್ತಾದಲ್ಲಿ ಅಲ್ಲಿನ ಮುಖ್ಯಮಂತ್ರಿ ಸುಹ್ರಾವರ್ದಿ ಜೊತೆ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. "ನಾಳೆಯಿಂದ ನಾವು ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತರಾಗುತ್ತೇವೆ. ಆದರೆ ಇಂದು ಮಧ್ಯರಾತ್ರಿ ಭಾರತ ಎರಡು ಹೋಳಾಗಿ ಒಡೆದು ಹೋಗುತ್ತದೆ. ನಾಳೆಯ ದಿನ ನಮ್ಮ ಪಾಲಿಗೆ ಸಂತೋಷದ ದಿನವೂ ಹೌದು. ದುಃಖದ ದಿನವೂ ಹೌದು" ಎಂದು ಭಾವುರಾಗಿ ನುಡಿದ ಬಾಪು ಕಲ್ಕತ್ತಾ ಜನರನ್ನು ಕೋಮು ಸೌಹಾರ್ದತೆಯನ್ನು ಶತಾಯಗತಾಯ ಕಾಯ್ದುಕೊಳ್ಳಬೇಕೆಂದು, ಭಾವೋದ್ರೇಕಗೊಂಡು ವಿನಾಶಕಾರಿ ದೌರ್ಜನ್ಯಕ್ಕೆ ಕೈಹಾಕಬಾರದೆಂದು ಮನವಿ ಮಾಡಿಕೊಂಡರು. 'ಹಿಂದೂ

ಮುಸ್ಲಿಂ ಭಾಯಿ ಭಾಯಿ' ಎಂದು ತಾವೇ ಕೂಗಿ ಹೇಳಿ ಎಲ್ಲರೂ ಕೂಗಿ ಹೇಳಲು ಪ್ರೇರೇಪಿಸಿದರು.

ಈ ಎಲ್ಲಾ ಹತ್ಯಾಕಾಂಡ, ನರಮೇಧಕ್ಕೆ ಮುಸ್ಲಿಂಲೀಗ್ ಮುಖ್ಯ ಮಂತ್ರಿ ಸುರ್ಹಾವರ್ದಿಯವರೇ ಕಾರಣರೆನ್ನುವ ಜನರ ಅನಿಸಿಕೆಯನ್ನು ಅವರ ಗಮನಕ್ಕೆ ತಂದಾಗ, ಅವರೂ ಬಹು ಸಂಯುಮದಿಂದ ಈ ಪರಿಸ್ಥಿತಿಯನ್ನು ನಿಯಂತ್ರಿಸಬೇಕೆಂದು ಸಲಹೆ ನೀಡಿದರು.

ಗಾಂಧೀಜಿ ಬಂಗಾಳದ ಬಹುತೇಕ ಊರು ಗ್ರಾಮಗಳಿಗೆ ಪಾದಯಾತ್ರೆ ಮಾಡಿ ಕೋಮು ಸೌಹಾರ್ದತೆ ಸ್ಥಾಪಿಸಲು ಅಹರ್ನಿಶಿ ಶ್ರಮಿಸಿದರು. ೭೨ ಗಂಟೆಗಳ ಉಪವಾಸ ಮಾಡಿ ಉದ್ರಿಕ್ತಗೊಂಡಿದ್ದ ಜನರಲ್ಲಿ ಸದ್ಭಾವನೆ ಉಂಟುಮಾಡಿದ್ದು, ಶಾಂತಿಯನ್ನು ಸ್ಥಾಪಿಸಿದ್ದು ಗಾಂಧಿ ಮಾಡಿದ ದೊಡ್ಡ ಚಮತ್ಕಾರವೆಂದೇ ಪತ್ರಿಕೆಗಳೆಲ್ಲಾ ಶ್ಲಾಘಿಸಿದವು.

ಗಾಂಧಿಯವರು ೧೯೪೮ರ ಆಗಸ್ಟ್ ತಿಂಗಳಲ್ಲಿ ಬಂಗಾಳ ದೇಶದಲ್ಲಿ ಪ್ರವಾಸ ಮಾಡುತ್ತಿದ್ದಾಗ ಬಂಗಾಳದ ಮುಖ್ಯಮಂತ್ರಿ ಸುರ್ಹಾವರ್ದಿ ಮತ್ತು ಆಚಾರ್ಯ ಕೃಪಲಾನಿಯವರೊಡನೆ ಹಿಂದೂ ಮುಸ್ಲಿಂ ಹತ್ಯಾಕಾಂಡದಿಂದ ಜಜ್ಜರಿತನಾಗಿದ್ದ ಬೇಲಿಘಾಟ್ ಗ್ರಾಮಕ್ಕೆ ಬಂದರು. ಅಲ್ಲಿ ನೆರೆದಿದ್ದ ಸಾರ್ವಜನಿಕ ಸಭೆಯಲ್ಲಿ ಗಾಂಧಿ ನುಡಿದರು. 'ಶಾಂತಿ ಸ್ಥಾಪನೆಗಾಗಿ ನಾವು ಇಲ್ಲಿಗೆ ಬಂದಿದ್ದೇವೆ. ರಾಷ್ಟ್ರದ ಐಕ್ಯತೆಯ ಹಿತದೃಷ್ಟಿಯಿಂದ ಕೋಮು ಸೌಹಾರ್ದತೆ ಅತಿಮುಖ್ಯ. ದಯವಿಟ್ಟು ಅದನ್ನು ಕಾಪಾಡಿ. ೧೯೪೬ನೇ ವರ್ಷದ ಪ್ರತೀಕಾರವನ್ನು ಈಗ ೧೯೪೭ರಲ್ಲಿ ತೀರಿಸಿಕೊಳ್ಳುವುದು ಸರಿಯೆ?

ಗಾಂಧಿಯವರು ಮಾತು ಮುಂದುವರಿಸುವುದಕ್ಕೆ ಬಿಡದೆ ಗುಂಪಿನಲ್ಲಿದ್ದ ಒಬ್ಬ ಹಿಂದೂ ಅಬ್ಬರಿಸಿದ. "ಬಾಪೂಜೀ, ... ಕಳೆದ ವರ್ಷ ಆಗಸ್ಟ್ ಹದಿನಾರರಂದು ಹಿಂದೂಗಳ ಮೇಲೆ ಅಮಾನುಷ ಅತ್ಯಾಚಾರ ನಡೆದಾಗ, ನಮ್ಮ ಹೆಣ್ಣು ಮಕ್ಕಳ ಮಾನಭಂಗ ನಡೆದಾಗ, ಮಕ್ಕಳ ಕಗ್ಗೊಲೆ ನಡೆದಾಗ, ನಮ್ಮ ಮನೆ ಮಠ ಸುಟ್ಟಾಗ ತಾವು ಇತ್ತ ಬರಲಿಲ್ಲ. ಈಗ ಮುಸ್ಲಿಮರು ತೊಂದರೆಯಲ್ಲಿರುವುದನ್ನು ತಿಳಿದು ಇಲ್ಲಿಗೆ ಧಾವಿಸಿ ಬಂದಿದ್ದೀರಿ ! ಇಲ್ಲಿಂದ ಹೊರಟು ಹೋಗಿ ನೀವು ಮುಸಲ್ಮಾನರ ಪಕ್ಷಪಾತಿಗಳು ಎಂಬ ಮಾತನ್ನು ಸತ್ಯ ಮಾಡಿದಿರಿ !"

ಗಾಂಧಿಯ ಎದೆಗೆ ಭರ್ಜಿ ತಿವಿದಂತಾಯಿತು. ಒಂದು ಕ್ಷಣ ಸ್ತಬ್ಧರಾಗಿ ನಿಂತರು. ಅನಂತರ ಸಾವರಿಸಿಕೊಂಡು ನುಡಿದರು.

'ದೇಶ ಬಂಧುಗಳೇ, ನನ್ನ ಈ ಸೌಹಾರ್ದ ಯಾತ್ರೆಯನ್ನು ಅಪಾರ್ಥ ಮಾಡಿಕೊಳ್ಳಬೇಡಿ. ಅಂದು ಬಂಗಾಳದ ಹಲವು ಹಳ್ಳಿ, ಊರುಗಳಿಗೆ ಪಾದಯಾತ್ರೆ ಮಾಡಿದ್ದೆ. ಶಾಂತಿಭಿಕ್ಷೆಯನ್ನು ಬೇಡಿದ್ದೆ. ಅಂದು ನಿಮ್ಮೂರಿಗೆ ಬರಲಾಗದ್ದಕ್ಕೆ ಕ್ಷಮೆಯಾಚಿಸುತ್ತೇನೆ. ನನ್ನ ದೃಷ್ಟಿಯಲ್ಲಿ ಹಿಂದೂ-ಮುಸ್ಲಿಂ ಎಲ್ಲರೂ ದೇವರ ಮಕ್ಕಳು. ಯಾರಿಗೆ ನೋವಾದರೂ ದೇವರಿಗೆ ನೋವಾಗುತ್ತದೆ. ದೇವರಿಗೆ ನೋವಾಗುವುದನ್ನು ನಾನು ಎಂದೂ ಸಹಿಸಲಾರೆ. ಆಗ ನನ್ನ ಮನಸ್ಸಿಗೂ ನೋವಾಗುತ್ತದೆ. ಆದ್ದರಿಂದ ಯಾರೂ ಯಾರಿಗೂ ನೋವುಂಟುಮಾಡಬಾರದು. ಅದೇ ನನ್ನ ಕಳಕಳಿಯ ಮನವಿ. ಅಹಿಂಸೆಯೇ ಶ್ರೇಷ್ಠವಾದ ಧರ್ಮ. ಅದನ್ನು ಎಲ್ಲರೂ ನೆನಪಿಡಿ. ಇದೇ ನನ್ನ ಪ್ರಾರ್ಥನೆ....'

ಕಲ್ಕತ್ತಾದಲ್ಲಿ ಪೂರ್ಣಶಾಂತಿ ನೆಲೆಸಿದ ಮೇಲೆ ಗಾಂಧಿ ದಿನಾಂಕ : ೯-೯-೧೯೪೭ ರಂದು ದೆಹಲಿಯತ್ತ ಪಯಣ ಬೆಳೆಸಿದರು. ಅಲ್ಲಿ ಮುಸಲ್ಮಾನ್ ಮತ್ತು ಸಿಖ್ಖರ ನಡುವೆ ಹೋರಾಟ ನಡೆದಿದ್ದು ರಕ್ತದ ಕೋಡಿಯೇ ಹರಿದಿತ್ತು. ಇಲ್ಲೂ ಶಾಂತಿ ಸ್ಥಾಪನೆ ಹಾಗೂ ಮತೀಯ ಸೌಹಾರ್ದ ಸ್ಥಾಪನೆಯೇ ಗಾಂಧಿಯವರ ಮುಖ್ಯ ಗುರಿಯಾಗಿತ್ತು. ಅದಕ್ಕೇ ಗಾಂಧಿ ದಿನವೂ ಬಿರ್ಲಾಭವನದಲ್ಲಿ ಪ್ರಾರ್ಥನಾ ಸಭೆ ನಡೆಸಿ, ಶಾಂತಿ ಸಂದೇಶ ಸಾರುತ್ತಿದ್ದರು. 'ಹಿಂಸೆಗೆ ಹಿಂಸೆಯೇ ಉತ್ತರವೆನ್ನುವವರು ಮಾನಸಿಕ ಸಮತೋಲನವನ್ನು ಕಳೆದುಕೊಂಡವರಾಗಿರುತ್ತಾರೆ. ತಾವು ದಯವಿಟ್ಟು ಆ ಗುಂಪಿಗೆ ಸೇರಬೇಡಿ ಎನ್ನುವುದೇ ನನ್ನ ಮನವಿ'. ದಿನವೂ ಜನರನ್ನು ಹೀಗೆ ಮನವಿ ಮಾಡಿಕೊಳ್ಳುತ್ತಿದ್ದರು.

ಪಾಕಿಸ್ತಾನದಲ್ಲಿ ಇದೇ ರೀತಿ ಹಿಂದೂ–ಮುಸ್ಲಿಂ ಕೋಮು ಗಲಭೆ ಉಲ್ಬಣಾವಸ್ಥೆಗೆ ತಲುಪಿ, ಹಿಂದೂಗಳ ಮಾರಣ ಹೋಮ ಜರುಗುತ್ತಿತ್ತು. ಗಾಂಧಿಯವರು ಎಷ್ಟೇ ವಿಧದಲ್ಲಿ ಈ ಹತ್ಯಾಕಾಂಡವನ್ನು ಹತ್ತಿಕ್ಕಲು ಮನವಿ ಮಾಡಿಕೊಂಡರೂ ಫಲಕಾರಿಯಾಗದ್ದರಿಂದ ತಮ್ಮ ಕೊನೆಯ ಅಸ್ತ್ರವಾದ 'ಉಪವಾಸ'ವನ್ನು ಪ್ರಾರಂಭಿಸಲು ನಿಶ್ಚಯಿಸಿದರು. ಹನ್ನೆರಡನೇ ತಾರೀಖಿನ ಪ್ರಾರ್ಥನಾ ಸಭೆಯಲ್ಲಿ ತಮ್ಮ ಆಶಯವನ್ನು ಜನರ ಮುಂದೆ ತೆರೆದಿಟ್ಟರು.

'ಉಪವಾಸವನ್ನು ಆರೋಗ್ಯಕ್ಕಾಗಿ ಮಾಡಬಹುದು ಅಥವಾ ನಡೆದಿರುವ ಅಥವಾ ನಡೆಯಲಿರುವ ಅನ್ಯಾಯವನ್ನು ಹತ್ತಿಕ್ಕಲಿಕ್ಕಾಗಿ, ಪ್ರಾಯಶ್ಚಿತ್ತ ರೂಪದಲ್ಲಿ ಮಾಡಬಹುದು. ಇಂದು ಎಲ್ಲೆಡೆ ಹಿಂದೂ–ಮುಸ್ಲಿಮರ ಮಧ್ಯೆ ಅವ್ಯಾಹತವಾಗಿ ನರಹತ್ಯೆ ನಡೆದಿದೆ. ಹಿಂಸೆಯಿಂದ ಏನನ್ನೂ ಸಾಧಿಸುವುದು ಅಸಾಧ್ಯ ಎಂಬುದನ್ನು ಜನತೆ ಮನಗಾಣಬೇಕು. ಅಹಿಂಸೆಯಿಂದ ಎಲ್ಲವನ್ನೂ ಸಾಧಿಸಬಹುದು ಎಂಬುದನ್ನು ನೀವಾಗಲೇ ಕಂಡಿದ್ದೀರಿ. ಅಹಿಂಸಾತ್ಮಕ ಮಾರ್ಗವೇ ಸರ್ವಶ್ರೇಷ್ಠವಾದದ್ದು. ಅದರಿಂದ ಸಾಧಿತವಾಗದ ಕಾರ್ಯವೇ ಇಲ್ಲ. ಸಮಾಜದ ಕಲ್ಯಾಣಕ್ಕಾಗಿ, ಅನ್ಯಾಯದ ಅಂತ್ಯಕ್ಕಾಗಿ, ಕಲುಷಿತ ಹಿಂದೂ ಮುಸ್ಲಿಂ ಮತೀಯ ಭಾವನೆಯ ಹರಣಕ್ಕಾಗಿ, ಅಹಿಂಸೆಯ ಪೂಜಾರಿಯಾದ ನಾನು ಕೈಕೊಳ್ಳಬಹುದಾದ ಕಾರ್ಯವೆಂದರೆ 'ಉಪವಾಸ'. ಈ ಅಸ್ತ್ರವನ್ನು ಈಗ ಉಪಯೋಗಿಸುತ್ತಿದ್ದೇನೆ. ಪರಿಶುದ್ಧ ಹೃದಯದ ನಾನು, ಶಾಂತಿ ಸ್ಥಾಪನೆಗಾಗಿ ನನ್ನ ಬಲಿದಾನ ನೀಡಲು ನಿಶ್ಚಯಿಸಿದ್ದೇನೆ. ಡೆಲ್ಲಿ ಶಾಂತವಾದರೆ ನಾನು ಉಪವಾಸ ನಿಲ್ಲಿಸುತ್ತೇನೆ. ಮಾನವ ಮಾರಣಹೋಮ, ದಂಗೆ, ಸುಲಿಗೆ, ಮಾನಾಪಹರಣ ಈ ದುಷ್ಕೃತ್ಯಗಳು ನಿಲ್ಲುವವರೆಗೂ ನನ್ನ ಉಪವಾಸ ನಡೆದೇ ಇರುತ್ತದೆ. ಡೆಲ್ಲಿಯಲ್ಲಿ ಮುಸಲ್ಮಾನರ ಹತ್ಯೆ ನಿಲ್ಲಬೇಕು. ಪಾಕಿಸ್ತಾನದಲ್ಲಿ ಹಿಂದೂಗಳ ಹತ್ಯೆ ಕೊನೆಗೊಳ್ಳಬೇಕು. ನನ್ನ ಉಪವಾಸ ಬಂಗಾಳದಲ್ಲಿ, ಬಿಹಾರದಲ್ಲಿ ನರಹತ್ಯೆ ನಿಲ್ಲಿಸುವಲ್ಲಿ ಸಾರ್ಥಕವಾಗಿದೆ. ಡೆಲ್ಲಿ ಮತ್ತು ಪಂಜಾಬಿನ ಜನ ಸಹ ನನ್ನ ಮನವಿಗೆ ಸ್ಪಂದಿಸುತ್ತಾರೆಂಬ ಆಶಾಭಾವನೆ ಹೊಂದಿದ್ದೇನೆ. ಭಾರತದ ಘನತೆ ಗೌರವ ಶಾಂತಿಯಲ್ಲಿ ಅಡಗಿದೆ".

ಎಲ್ಲಾ ಮತಬಾಂಧವರ ಹೃದಯವನ್ನು ಜೋಡಿಸುವ ಸಲುವಾಗಿ ದಿನಾಂಕ: ೧೩-೧-೧೯೪೮ ರಂದು ಪ್ರಾರಂಭಿಸಿದ ಆಮರಣಾಂತ ಉಪವಾಸವನ್ನು ದಿನಾಂಕ: ೧೮-೧-೧೯೪೮ ರಂದು ೧೨೨ ಗಂಟೆಗಳ ತರುವಾಯ ಜನರ ಅಪಾರ ಬೇಡಿಕೆಯ ಮೇರೆಗೆ ನಿಲ್ಲಿಸಿದರು. ಗಾಂಧೀಜಿ ಆಶಿಸಿದ್ದ ಪರಿಣಾಮ ಡೆಲ್ಲಿ ಹಾಗೂ ಪಂಜಾಬಿನಲ್ಲಿ ಆಗಿತ್ತು. ಡೆಲ್ಲಿಯ ಪ್ರಮುಖರು ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧಿಯವರ ಏಳು ಶರತ್ತುಗಳನ್ನೂ ಒಪ್ಪಿ ಕರಾರು ಪತ್ರಕ್ಕೆ ಹಿಂದೂ, ಮುಸ್ಲಿಂ, ಸಿಖ್ ನಾಯಕರುಗಳ ಸಹಿಯೊಡನೆ ಗಾಂಧಿಯವರಿಗೆ ಅದನ್ನು ಅರ್ಪಿಸಿದರು. ಈ ಕರಾರುಪತ್ರದ ಮುಖ್ಯಾಂಶ

ಹಿಂದೂ, ಮುಸ್ಲಿಂ, ಸಿಖ್ಖರು ಒಬ್ಬರಿಗೊಬ್ಬರು ರಕ್ಷಣೆ ಕೊಟ್ಟುಕೊಂಡು, ಕೋಮು ಸೌಹಾರ್ದವನ್ನು ನಿರಂತರ ಕಾಪಾಡಿಕೊಂಡು ಬರಬೇಕು. ಈ ಕರಾರು ಪತ್ರದಲ್ಲಿ ಮುಸ್ಲಿಂ ಬಾಂಧವರ ರಕ್ಷಣೆಗೇ ಒತ್ತು ಕೊಡಲಾಗಿತ್ತು.

'ಉಪವಾಸ'ವನ್ನು ಅಂತ್ಯಗೊಳಿಸಿದ ಸಂದರ್ಭದಲ್ಲಿ ಗಾಂಧಿಯವರು ನುಡಿದ ಮಾತುಗಳು 'ಸತ್ಯದ' ಶ್ರೇಷ್ಠತೆಯನ್ನು ಎತ್ತಿಹಿಡಿಯುವುದಲ್ಲದೆ 'ಅಹಿಂಸೆ'ಯ ಮಹತ್ವವನ್ನು ಬಿತ್ತರಿಸುತ್ತಿದೆ.

"ದೇವರ ಮತ್ತೊಂದು ಹೆಸರಾದ 'ಸತ್ಯಕ್ಕಾಗಿ ನಾನು ಉಪವಾಸ ಹೂಡಿದೆ. ದೇವರ ಹೆಸರಿನಲ್ಲಿ ನಾವು ಈಗ ಕೊಲೆ, ಸುಲಿಗೆ, ಮತಾಂತರ, ಸ್ತ್ರೀಯರ ಅಪಹರಣ ಮುಂತಾದ ಕಾರ್ಯಗಳನ್ನು ಎಡಬಿಡದೆ ಮಾಡುತ್ತಿದ್ದೇವೆ. ಆದರೆ 'ಸತ್ಯದ ಹೆಸರಿನಲ್ಲಿ ಈ ಅನಾಹುತ ಯಾವುದೂ ನಡೆದಿಲ್ಲ. ಈ ಸತ್ಯದ ಹೆಸರಿನಲ್ಲೇ ನಾನು ಉಪವಾಸ ಪ್ರಾರಂಭಿಸಿದೆ. ಇದೇ ಸತ್ಯದ ಹೆಸರಿನಲ್ಲಿ ಉಪವಾಸವನ್ನು ನಿಲ್ಲಿಸುತ್ತಿದ್ದೇನೆ. 'ಸತ್ಯಮೇವ ಜಯತೆ', ಸತ್ಯಕ್ಕೆ ಎಂದೂ ಸೋಲಿಲ್ಲ.... ಎಂದೂ ಸತ್ಯವೇ ಜಯಿಸುತ್ತದೆ. ದಂಗೆ, ನರಹತ್ಯೆ ನಿಲ್ಲಿಸಿ ನೀವು ಸತ್ಯದ ಮಹತ್ವವನ್ನು ಎತ್ತಿ ಹಿಡಿದಿದ್ದೀರಿ. ಸತ್ಯಕ್ಕೆ ಜಯ ತಂದುಕೊಟ್ಟಿದ್ದೀರಿ. ನಿಮಗೆಲ್ಲರಿಗೂ ಅಭಿನಂದನೆಗಳು".

ದೆಹಲಿಯ ಬಿರ್ಲಾಭವನದಲ್ಲಿ ತಂಗಿದ್ದ ಗಾಂಧಿ ದಿನವೂ ಬೆಳಿಗ್ಗೆ ಪ್ರಾರ್ಥನಾ ಸಭೆಯನ್ನು ನಡೆಸುತ್ತಿದ್ದರು. ಉಪವಾಸವಿದ್ದಾಗಲೂ ಇದನ್ನೇ ನಡೆಸಿದರು. ಜನವರಿ ೨೦, ೧೯೪೮ ರಂದು ಪ್ರಾರ್ಥನಾ ಸಭೆಯಲ್ಲಿ ಬಾಂಬೊಂದು ಸಿಡಿದು ಅನೇಕರು ಗಾಯಗೊಂಡರು. ಈ ವಿಧ್ವಂಸಕ ಕೃತ್ಯವನ್ನು ಗಾಂಧಿ ಖಂಡಿಸಿ ಇದನ್ನು ನಡೆಸಿದಾತನಿಗೆ ಸದ್ಬುದ್ಧಿಯನ್ನು ದೇವರು ಕರುಣಿಸಲಿ ಎಂದು ಆಶಿಸಿ, ತಮ್ಮ ದಿನನಿತ್ಯದ ಕಾರ್ಯಕ್ರಮದಂತೆ ಪ್ರಾರ್ಥನೆಯನ್ನು ಮುಂದುವರಿಸಿದರು. ಇಂತಹ ಸ್ಥಿತಪ್ರಜ್ಞತೆ ಹಾಗೂ ಮನೋದಾರ್ಢ್ಯ ಗಾಂಧಿಯವರನ್ನು ಬಿಟ್ಟು ಮತ್ಯಾರಿಗಾದರೂ ಲಭಿಸಲು ಸಾಧ್ಯವೆ?

ಖಂಡಿತಾ ಸಾಧ್ಯವಿಲ್ಲ.

◆ ◆ ◆

೨೧. ಹುತಾತ್ಮರಾದ ಗಾಂಧೀಜಿ

೧೯೪೮ರ ಜನವರಿ ಮೂವತ್ತನೇ ತಾರೀಖು ಭಾರತ ಎಂದೆಂದೂ ಮರೆಯಲಾಗದ ದುರ್ದಿನ. ಭಾರತಾಂಬೆಯ ಶ್ರೇಷ್ಠಪುತ್ರ, ಸ್ವಾತಂತ್ರ್ಯ ಸಮರದ ರೂವಾರಿ, ಅಹಿಂಸಾ ವ್ರತದ ಅಧ್ವರ್ಯು, 'ಮಹಾತ್ಮ' ಮೋಹನದಾಸ ಕರಮಚಂದ ಗಾಂಧಿಯವರು ಹುತಾತ್ಮರಾದ ದಿನ.

ಅಂದು ಶುಕ್ರವಾರ, ಪ್ರತಿದಿನ ಸಂಜೆ ೫-೩೦ಕ್ಕೆ ಪ್ರಾರ್ಥನಾ ಸಭೆಗೆ ಹೋಗುವುದು ರೂಢಿ. ಎಲ್ಲಾ ಕಾರ್ಯಕ್ರಮಗಳೂ ದಿನದ ವೇಳಾಪಟ್ಟಿಯಂತೆಯೇ ನಡೆಸಿಕೊಂಡು ಬರುತ್ತಿದ್ದುದು ಅವರ ಅಭ್ಯಾಸ. ಅಂದು ಸರ್ದಾರ್ ಪಟೇಲರು ಗಾಂಧಿಯವರೊಡನೇ ಯಾವುದೋ ಮಹತ್ವದ ವಿಷಯವನ್ನು ಚರ್ಚಿಸಲು ಬಂದಿದ್ದರು. ಮಾತು ಮುಗಿಯುವುದರಲ್ಲಿ ಐದು ನಿಮಿಷ ತಡವಾಗಿತ್ತು. ದಡಬಡಿಸಿ ಮೊಮ್ಮಕ್ಕಳ ಆಸರೆ ಪಡೆದು ಗಾಂಧೀಜಿ ಪ್ರಾರ್ಥನಾ ಸಭೆಯತ್ತ ನಡೆದರು. ಪಟೇಲರು ಕಾರಿನಲ್ಲಿ ತಮ್ಮ ಮನೆಗೆ ಹೊರಟು ಹೋಗಿದ್ದರು.

ಬಿರ್ಲಾ ಭವನದ ಹೊರಗಿನ ಮೈದಾನದಲ್ಲಿ ಹಾಕಿದ್ದ ಆಸನದತ್ತ ನಿಧಾನವಾಗಿ ಹೆಜ್ಜೆ ಹಾಕಿದರು. ತುಂಬಿದ್ದ ಸಭೆ ಜಯಕಾರ ಮಾಡುತ್ತಿತ್ತು. ಮೂವತ್ತೈದು ವರ್ಷದ ಒಬ್ಬ ಯುವಕ ಗುಂಪಿನಿಂದ ನುಗ್ಗಿ ಬಂದು ಗಾಂಧೀಜಿಯವರ ಕಾಲು ಮುಟ್ಟಿ ನಮಸ್ಕರಿಸಿದ.

"ತಾವು ಇಂದು ಅಪರೂಪವಾಗಿ ಐದು ನಿಮಿಷ ತಡವಾಗಿ ಬಂದಿದ್ದೀರಿ" ಎಂದು ನುಡಿದ. ಎದುರಿಗೆ ನಿಂತಿದ್ದ ಆ ಯುವಕ ಒಳ ಜೇಬಿನಿಂದ ಪಿಸ್ತೂಲನ್ನು ಸರ್ರನೆ ಹೊರತೆಗೆದು ಗಾಂಧೀಯವರ ಮೇಲೆ ಒಮ್ಮೆಗೇ ಮೂರು ಗುಂಡು ಹಾರಿಸಿದ. ಗುಂಡುಗಳು ಗಾಂಧೀಯುವರ ಹೃದಯ ಮತ್ತು ಹೊಟ್ಟೆಯನ್ನು ಪ್ರವೇಶಿಸಿದ್ದವು.

"ಹೇ ! ರಾಮ್.... ರಾಮ್..." ಅವರ ಬಾಯಿಂದ ಉದ್ಗಾರ ಕೇಳಿ ಬಂತು. ಅಕ್ಕಪಕ್ಕದಲ್ಲಿ ನಿಂತು ಆಸರೆ ನೀಡಿದ್ದ ಮೊಮ್ಮಕ್ಕಳು ಅವ್ವಾಗಾಂಧಿ ಮತ್ತು ಮಣಿ ಗಾಂಧಿ ತಾತನ ಶರೀರ ಕೆಳಗೆ ಬೀಳದಂತೆ ಹಿಡಿದುಕೊಂಡರು.

ಗಾಂಧೀಯವರ ಶರೀರದಿಂದ ಹರಿದ ರಕ್ತ ಬಿಳಿಯ ಅಂಗವಸ್ತ್ರವನ್ನು ಕೆಂಪಾಗಿಸಿತ್ತು. ಕಾರ್ಯಕರ್ತರು ಗಾಂಧಿಯನ್ನು ಬಿರ್ಲಾಭವನಕ್ಕೆ ಎತ್ತಿಕೊಂಡು ಹೋದರು. ಡಾಕ್ಟರು ಬಂದು ಪರೀಕ್ಷಿಸುವ ವೇಳೆಗಾಗಲೇ ಅವರ ದಿವ್ಯ ಆತ್ಮ ಶರೀರ ಬಿಟ್ಟು ಸ್ವರ್ಗ ಸೇರಿತ್ತು.

ಒಮ್ಮೆಗೇ ಎಲ್ಲೆಡೆ ಹಾಹಾಕಾರ ಕೇಳಿ ಬಂತು. ಗಾಂಧೀ ಅಂಗರಕ್ಷಕರು ಕೊಲೆ ಪಾತಕಿಯನ್ನು ಹಿಡಿದುಕೊಂಡಿದ್ದರು. ಕೋಪೋದ್ರಿಕ್ತರಾಗಿದ್ದ ಜನ ಕೊಲೆಪಾತಕಿಯ ಮೇಲೇರಿ ಹೋದರು. ಪೊಲೀಸರು ಆತನನ್ನು ರಕ್ಷಿಸಿ ಕೂಡಲೇ ಠಾಣೆಯತ್ತ ಕರೆದೊಯ್ದರು. ಈ ಹೃದಯವಿದ್ರಾವಕ ಸುದ್ದಿಯನ್ನು ಕೇಳಿ ದೆಹಲಿಯ ಅಭಿಮಾನಿಗಳು ಗುಂಪು ಗುಂಪಾಗಿ ಬಿರ್ಲಾ ಭವನದ ಕಡೆ ಧಾವಿಸಿ ಬಂದರು.

ಕೊಲೆ ಪಾತಕಿಯ ಹೆಸರು ನಾಥೂರಾಂ ವಿನಾಯಕ ಗೋಡ್ಸೆ ಎಂದು ಅನಂತರ ಗೊತ್ತಾಯಿತು. ಗಾಂಧಿ, ಮುಸಲ್ಮಾನರ ಪಕ್ಷಪಾತಿಯೆಂಬ ತಪ್ಪು ತಿಳುವಳಿಕೆ ಆತನದು. ಹಿಂದೂ ಧರ್ಮವನ್ನು ಉಳಿಸುವ ಭ್ರಮೆಯಿಂದ ಆತ ಮಹಾತ್ಮರ ಕೊಲೆಗೈದಿದ್ದ.

ಈ ಬರ್ಬರ ಹತ್ಯೆ ಸುದ್ದಿ ತಿಳಿದ ಕೆಲವೇ ನಿಮಿಷಗಳಲ್ಲಿ ಪಟೇಲ್, ನೆಹರೂ, ಮೌಂಟ್‌ಬ್ಯಾಟನ್, ಮಂತ್ರಿ ಮಂಡಲದ ಎಲ್ಲಾ ಸದಸ್ಯರೂ ಅಲ್ಲಿಗೆ ಧಾವಿಸಿ ಬಂದು ಕಂಬನಿಗರೆದರು.

ಈ ದುಃಖ ವಾರ್ತೆ ಪ್ರಪಂಚವನ್ನೆಲ್ಲಾ ದಿಗ್ಭ್ರಾಂತಿಗೊಳಿಸಿತು. ಪ್ರಪಂಚದ ಎಲ್ಲಾ ಕಡೆಯಿಂದಲೂ ಸಂತಾಪ ಸೂಚಕ ಸಂದೇಶಗಳು ಸಹಸ್ರ ಸಂಖ್ಯೆಯಲ್ಲಿ ಬರಹತ್ತಿದವು. ಬಿರ್ಲಾ ಭವನದಲ್ಲಿ ಗಾಂಧೀಜಿಯವರ ಶವದ ಸುತ್ತ ಬಂದು ಕುಳಿತಿದ್ದ ಎಲ್ಲಾ ಧರ್ಮ ಗುರುಗಳೂ ಧರ್ಮ ಗ್ರಂಥ ಪಾರಾಯಣ ಪ್ರಾರಂಭಿಸಿದ್ದರು. ಭವನದ ಹೊರಗಡೆ ನೂರಾರು ಜನರು ಕುಳಿತು ವಿವಿಧ ಭಾಷೆಯಲ್ಲಿ ಭಜನಾ ಕಾರ್ಯಕ್ರಮ ನಡೆಸ ತೊಡಗಿದ್ದರು.

'ವೈಷ್ಣವೊ ಜನತೋ ತೇನೆ ಕಹಿಯೇ.....' ಗಾಂಧಿಯವರಿಗೆ ಪ್ರಿಯವಾಗಿದ್ದ ಈ ಹಾಡನ್ನು ಎಲ್ಲರೂ ಗುನುಗುಟ್ಟುತ್ತಿದ್ದರು. ಎಲ್ಲರ ಹೃದಯ ದುಃಖಾರ್ದ್ರವಾಗಿತ್ತು. ಕಣ್ಣುಗಳು ಹನಿದುಂಬಿದ್ದವು.

ಮಾರನೆ ದಿನ ಸಂಜೆ ೩೧-೧-೧೯೪೮ರಂದು ಸರಕಾರದ ಸಕಲ ಗೌರವಗಳೊಂದಿಗೆ ಮೃತ ದೇಹವನ್ನು ಯಮುನಾ ನದಿ ತೀರಕ್ಕೆ ಅಲಂಕೃತವಾದ

ಮಿಲಿಟರಿ ವಾಹನದ ಮೇಲಿಟ್ಟು ಸಾಗಿಸಲಾಯಿತು. ಈ ಮೆರವಣಿಗೆಯಲ್ಲಿ ಮೌಂಟ್‌ಬ್ಯಾಟನ್, ನೆಹರೂ, ಪಟೇಲ್ ಆದಿಯಾಗಿ ರಾಷ್ಟ್ರದ ನಾಯಕರು ಹಾಗೂ ಅಂತರಾಷ್ಟ್ರೀಯ ಗೌರವಾನ್ವಿತರು ಸೇರಿದ್ದರು.

'ರಘುಪತಿ ರಾಘವ ರಾಜಾರಾವ್ .....' ಹಾಡನ್ನು ಹಾಡುತ್ತಾ ಸಹಸ್ರಾರು ಅಭಿಮಾನಿಗಳು ಈ ವಾಹನದ ಹಿಂದೆ ನಡೆದಿದ್ದರು. ಮೃತ ದೇಹದ ಬದಿಯಲ್ಲಿ ಮಕ್ಕಳಾದ ದೇವದಾಸ್, ರಾಮದಾಸ್, ಗಾಂಧಿಯವರ ಬಹುದಿನದ ಕಾರ್ಯದರ್ಶಿ ಪ್ಯಾರೆಲಾಲ್ ಹಾಗೂ ಮೊಮ್ಮಕ್ಕಳು ಅವ್ವಾಗಾಂಧಿ, ಮನುಗಾಂಧಿ ಕುಳಿತಿದ್ದರು.

ಸಂಜೆ ಸುಮಾರು ಐದು ಗಂಟೆ ಹೊತ್ತಿಗೆ ರಾಜ್‌ಘಾಟ್‌ನಲ್ಲಿ ನಿರ್ಮಿಸಿದ್ದ ವೇದಿಕೆಯ ಮೇಲೆ ಇರಿಸಿದ್ದ ರಾಷ್ಟ್ರಪುರುಷ ಮಹಾತ್ಮಾಗಾಂಧಿಯವರ ಶರೀರಕ್ಕೆ ಮಗ ದೇವದಾಸ್ ಅಗ್ನಿ ಸ್ಪರ್ಶ ಮಾಡಿದ. ಗಂಧದ ಚಿತೆಯಲ್ಲಿ ಗಾಂಧೀಜಿಯ ಶರೀರ ಉರಿದು ಭಸ್ಮವಾಗಿ ಅವರ ದಿವ್ಯಾತ್ಮ ಭಗವಂತನ ಪಾದ ಸೇರಿತು.

ಸೇರಿದ್ದ ಸಮಸ್ತರೂ ಗೌರವ ಪೂರ್ವಕವಾಗಿ ಅಶ್ರುತರ್ಪಣ ಅರ್ಪಿಸಿದರು.

ಶಾಂತಿ, ಅಹಿಂಸೆ ಎಂದೇ ಜೀವನ ಪರ್ಯಂತ ಹೋರಾಡಿದ ಗಾಂಧಿ ಹಂತಕನೊಬ್ಬನ ಗುಂಡಿಗೆ ತುತ್ತಾದುದು ತೀರಾ ಅನಿರೀಕ್ಷಿತ, ಅಷ್ಟೇ ವಿರೋಧಾಭಾಸದ ಘಟನೆಯಾಗಿತ್ತು.

'ಈ ದೇಶದ ಬೆಳಕು ನಂದಿ ಹೋಯಿತು. ನಮ್ಮ ಬಾಳಿನಿಂದಲೂ ಬೆಳಕು ಹೋಯಿತು' ನೆಹರೂರವರ ಈ ಭಾವಪೂರ್ಣ ಶ್ರದ್ಧಾಂಜಲಿ ನುಡಿಯಲ್ಲಿ ನೂರುಕೋಟಿ ಭಾರತೀಯರ ಅಳಲಿನ ತುಡಿತವೂ ಮಿಡಿದಿದೆ.

ಹೊಸಬೆಳಕನ್ನು ಕಾಣಲು ಭಾರತದ ಜನತೆ ತವಕಿಸುತ್ತಿದೆ.

◆ ◆ ◆

೨೨. ಗಾಂಧಿಯ ಬಗ್ಗೆ ಕೇಳಿ ಬಂದಿರುವ ನುಡಿಮುತ್ತುಗಳು

'ಗಾಂಧಿಯವರು ಪ್ರೇಮ ಮತ್ತು ಸಹಿಷ್ಣುತೆಯ ಪ್ರಚಾರಕ್ಕಾಗಿ ಮಡಿದರು. ಆ ಧ್ಯೇಯಗಳು ಇಂದು ಜಗತ್ತಿಗೆ ಬೇಕಾಗಿವೆ. ಜಗತ್ತಿಗೆ ಇಂತಹ ಆದರ್ಶ ಜೀವಿಯನ್ನು ಕೊಟ್ಟುದಕ್ಕೆ ಭಾರತಕ್ಕೆ ಈ ದುಃಖದಲ್ಲಿಯೂ ಹೆಮ್ಮೆಯುಂಟಾಗಿದೆ. ಗಾಂಧಿಯವರ ಮೇಲ್ಪಂಕ್ತಿ ಭಾರತದ ಧ್ಯೇಯಸಾಧನೆಗೆ ಸ್ಫೂರ್ತಿಯೂ, ಶಕ್ತಿಯೂ ಆಗುವುದೆಂಬ ನಂಬಿಕೆ ಭಾರತಕ್ಕೆ ಇದೆ.....'

-ಲಾರ್ಡ್ ಮೌಂಟ್ ಬೇಟನ್

'ಗಾಂಧಿಯವರ ಮರಣ ಜಗತ್ತಿಗೇ ಆಗಿರುವ ಭಾರಿ ನಷ್ಟ ; ಅವರು ದೊಡ್ಡ ನಾಯಕರು. ಅವರ ಧ್ಯೇಯ ಧೋರಣೆಗಳನ್ನು ಅನುಸರಿಸುವುದೇ ನಮಗಿರುವ ಕೆಲಸ....'

-ಲೇಡಿ ಮೌಂಟ್‌ಬೇಟನ್

'ಗಾಂಧಿಯವರ ಮರಣದ ಸುದ್ದಿ ಕೇಳಿ ನಾನೂ, ರಾಣಿಯೂ ಸ್ಥಂಭಿತ ರಾಗಿದ್ದೇವೆ. ಜಗತ್ತು, ಭಾರತೀಯರು ಅನುಭವಿಸುತ್ತಿರುವ ಈ ತುಂಬಲ ಸಾಧ್ಯವಾದ ನಷ್ಟದಲ್ಲಿ ನಮ್ಮ ಶ್ರದ್ಧಾಪೂರ್ವಕ ಸಹಾನುಭೂತಿಯಿದೆ.

-ಜಾರ್ಜ್ ಚಕ್ರವರ್ತಿ

'ಗಾಂಧಿಯವರು ಜೀವನದಲ್ಲಿ ಹೇಗೆಯೋ ಹಾಗೇ ಸಾವಿನಲ್ಲಿಯೂ ಸತ್ಯದ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಇದನ್ನು ನಾವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳುವುದು ನಮಗೂ, ಭಾರತಕ್ಕೂ ಒಳ್ಳೆಯದು... ಕೋಪದಿಂದ ಯಾರೂ ಅಚಾತುರ್ಯ ನಡೆಸಬಾರದು. ಆ ಮಹಾಗುರು ಕೊಟ್ಟಿರುವ ಬೋಧನೆ ಗಳನ್ನು ಚಾಚೂ ತಪ್ಪದೆ ಅನುಸರಿಸಬೇಕು. ಧೀರರಾಗಿ, ಶಕ್ತರಾಗಿ ವರ್ತಿಸಬೇಕು. ಆತನ ಆತ್ಮ ನಮ್ಮನ್ನು ನೋಡುತ್ತಿದೆ.

-ಜವಾಹರಲಾಲ್ ನೆಹರೂ

'.....ಗಾಂಧೀಜಿ ಯಾವಾಗಲೂ ನಮ್ಮೊಂದಿಗೆ ಇದ್ದೇ ಇರುತ್ತಾರೆ. ಯಾಕೆಂದರೆ ಅವರ ಬೋಧನೆಗಳೂ, ಆದರ್ಶಗಳೂ ನಮ್ಮ ಮುಂದೆ ಇವೆ. ಅವರ ದೇಹ ಬೂದಿಯಾದರೂ ಅವರ ಆತ್ಮ ಎಂದೆಂದಿಗೂ ನಮ್ಮೊಂದಿಗೆ ಇರುತ್ತದೆ. ಆತ್ಮ ಅವಿನಾಶಿ.

-ಸರದಾರ್ ಪಟೇಲ್

'ಈ ಭಯಂಕರವಾದ ದುಃಖ ಸನ್ನಿವೇಶದಲ್ಲಿ ಅವರ ಶಂಖನಾದ ನಮ್ಮನ್ನು ಮತ್ತೆ ನಮ್ಮ ಕರ್ತವ್ಯದಲ್ಲಿ ತೊಡಗುವಂತೆ ಮಾಡಲಿ. ಆತ ಧೂಳಿನಿಂದ ಧೀರರನ್ನು ನಿರ್ಮಿಸಿದ. ತನ್ನ ಜೀವಮಾನದುದ್ದಕ್ಕೂ ಗುಲಾಮಗಿರಿ, ದಬ್ಬಾಳಿಕೆ, ಅನ್ಯಾಯಗಳಿಗೆ ಎದುರಾಗಿ ಅವನು ಹೂಡಿದ ಹೋರಾಟದಲ್ಲೆಲ್ಲಾ ನಮ್ಮಂತಹ ಅಶಕ್ತರನ್ನೇ ಪೂರ್ಣವಾಗಿ ಉಪಯೋಗಿಸಿಕೊಂಡ. ಭಾರತಕ್ಕೆ ಬೇಕಾಗಿರುವುದು ಅಂತಹ ಧೀರತೆ; ಅಪಾಯಗಳನ್ನು ತೃಣವಾಗಿ ಎಣಿಸುವ ಧೈರ್ಯ, ನ್ಯಾಯ ಸ್ಥಾಪನೆಗಾಗಿ ಸರ್ವಸ್ವವನ್ನು ಬಲಿಕೊಡುವ ಕುರುಡು ಧೈರ್ಯ, ಗಾಂಧಿಯವರು ಇದಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟಿದ್ದಾರೆ. ಅವರು ಬದುಕಿದ್ದಾಗ ಅವರನ್ನು ಅನುಸರಿಸಿದಂತೆ ಈಗ ಸತ್ತನಂತರವೂ ಅವರನ್ನು ಅನುಸರಿಸುವುದು ನಮ್ಮ ಧರ್ಮ.

-ರಾಜೇಂದ್ರ ಬಾಬು

'..... ಗಾಂಧಿ ಅವರು ನಮ್ಮ ಪ್ರೇಮ ಗುರುವಾಗಿ, ಅಜಾತಶತ್ರುವಾಗಿ, ಸತ್ಯ ಧರ್ಮ ಪ್ರವರ್ತಕರಾಗಿದ್ದರು. ನಮ್ಮ ದೇಶದ ಕೋಟ್ಯಂತರ ಜನರ ಸಂಕಟವನ್ನು ತಮ್ಮ ಪ್ರೇಮದಿಂದ ಗುಣಪಡಿಸುವ ವೈದ್ಯರಾಗಿದ್ದರು. ಭಾರತದ ಸ್ತ್ರೀ ಪುರುಷರು ಪ್ರತಿದಿನವೂ ಸಂಧ್ಯಾಕಾಲ ಐದು ಗಂಟೆಗೆ, ಗಾಂಧಿಯವರು ಬಿದ್ದ ದಿನದ ಸಭೆಯನ್ನು ಜ್ಞಾಪಿಸಿಕೊಳ್ಳಲಿ. ಅವರ ಧ್ಯೇಯವನ್ನು ಜ್ಞಾಪಿಸಿ ಕೊಳ್ಳಲಿ.... ಗಾಂಧಿಯವರು ಹೇಳಿದ ಮಾರ್ಗದಿಂದ ಹೊರತು ಬೇರೆ ಮಾರ್ಗದಿಂದ ಕೆಡುಕನ್ನು ಜಯಿಸುವುದು ಸಾಧ್ಯವಿಲ್ಲ....'

- ಸಿ. ರಾಜಗೋಪಾಲಾಚಾರಿ

'..... ಗಾಂಧಿಯವರ ಸಜೀವ ಗುರುತುಗಳು ನಾವು. ಅವರ ಯೋಧರು ನಾವು. ಯುದ್ಧ ನಿಮಗ್ನವಾದ ಜಗತ್ತಿನಲ್ಲಿ ನಾವು ಗಾಂಧಿಯವರ ಬಾವುಟಧಾರಿಗಳು. ನಮ್ಮ ಮುಂಚೂಣಿಯ ಧ್ವಜ 'ಸತ್ಯ'. ನಮ್ಮ ಎದೆಗಾವಲು ಗುರಾಣಿ 'ಅಹಿಂಸೆ'. ರಕ್ತಪಾತವಿಲ್ಲದೆ ಜಯಿಸುವ ಆತ್ಮಶಕ್ತಿಯೇ ನಮ್ಮ ಪ್ರಜ್ವಲಿಸುವ 'ಕತ್ತಿ'. ನಮ್ಮ ಗುರುವಿನ ಹೆಜ್ಜೆಯನ್ನು ನಾವು ಅನುಸರಿಸಬೇಡವೆ? ನಾವು ಅವರ ಅಹಿಂಸಾಯುದ್ಧದ ಯೋಧರಾಗಬೇಡವೆ ? ಜಗತ್ತಿಗೆ ನಾವು ಗಾಂಧಿಯವರ ಸಂದೇಶವನ್ನು ಸಾರಬೇಡವೆ? ಗಾಂಧಿಯವರ ಧ್ವನಿ ಇನ್ನು ಕೇಳುವುದಿಲ್ಲ. ಆದರೆ ಆ ಧ್ವನಿಯನ್ನು ಜಗತ್ತಿಗೆ ತೆಗೆದುಕೊಂಡು ಹೋಗಿ ಮುಟ್ಟಿಸುವ ಕೋಟ್ಯಂತರ ಧ್ವನಿ ನಮ್ಮಲ್ಲಿದೆ. ಆ ಧ್ವನಿ ನಮ್ಮ ಕಾಲದ ಜಗತ್ತನ್ನು ಮಾತ್ರವೇ ಅಲ್ಲ, ಮುಂದೆ ಅನೇಕ ಶತಮಾನಗಳ ಜಗತ್ತನ್ನು ಮುಟ್ಟುವುದು.....'

- ಸರೋಜಿನಿ ನಾಯಿಡು

'.... ಗಾಂಧಿಯವರ ಮರಣದಿಂದ, ಜಗತ್ತು ಇನ್ನೂ ಸತ್ಯ, ಅಹಿಂಸೆಯಿಂದ ಬಾಳಲು ಸಿದ್ಧವಾಗಿಲ್ಲವೆಂದು ಗೊತ್ತಾಗುತ್ತದೆ... ಸತ್ಯ ಅಹಿಂಸೆಯನ್ನು ಅನುಸರಿಸುವವನು ಇನ್ನೂ ಹುತಾತ್ಮನಾಗುತ್ತಿದ್ದಾನೆ. ಇತಿಹಾಸದುದ್ದಕ್ಕೂ ಹೀಗೆಯೇ ಆಗಿದೆ. ಪ್ರೀತಿಗೆ ತನ್ನ ಜನ ಅಥವಾ ಬೇರೆಯ ಜನವೆಂಬ ಭೇದವೇ ಇಲ್ಲ. ಗಾಂಧಿ ಜಗತ್ತಿಗೆ ಇವನ್ನೇ ತೋರಿಸಿದರು. ಹಿಂದೂ, ಮುಸಲ್ಮಾನ, ಸಿಖ್ ಅಥವಾ ಬೇರೆ ಜಾತಿಯವರೆಂಬ ಭೇದ ಭಾವನೆ ಅವರಿಗೆ ಇರಲಿಲ್ಲ. ಅವರ ದೃಷ್ಟಿಯಲ್ಲಿ ಪ್ರಪಂಚಕ್ಕೆಲ್ಲಾ ಇರುವುದು ಒಂದೇ ಧರ್ಮ. ಅದೇ ಜಗತ್ತನ್ನು ಒಂದುಗೂಡಿಸುವ ಮಾನವತಾಧರ್ಮ.....'

- ಆಚಾರ್ಯ ಕೃಪಲಾನಿ

'ನನ್ನ ಬಾಳಿನಲ್ಲಿ ನಾನು ಅನೇಕ ಹೊರೆಗಳನ್ನು ಹೊತ್ತಿದ್ದೇನೆ, ಆದರೆ ಗಾಂಧಿಯವರ ನಿಧನದಿಂದುಂಟಾಗಿರುವ ಹೊರೆ, ಹೊರಲಸಾಧ್ಯವಾಗಿದೆ. ಗಾಂಧಿಯವರ ಮರಣದಿಂದ ನನ್ನ ಮೆದುಳು ಚಲಿಸದಂತಾಗಿದೆ. ಗಾಂಧಿಯವರು ತಮ್ಮ ಪ್ರಯಾಣವನ್ನು ಮುಗಿಸಿದರು. ನಾವು ನಮ್ಮ ಪ್ರಯಾಣ ಪ್ರಾರಂಭಿಸ

ಬೇಕಾಗಿದೆ. ನಾವು ಈ ಪ್ರಯಾಣವನ್ನು ಜಯಕಾರಿಯಾಗಿ ಮುಗಿಸುತ್ತೇವೆಂದು ಊಹಿಸೋಣ.

-ಮೌಲಾನಾ ಅಬುಲ್‌ಕಲಾಂ ಆಜಾದ್

'....ಗಾಂಧಿಯವರು ನಮಗಾಗಿ ಸಂಪಾದಿಸಿದ ಸ್ವಾತಂತ್ರ್ಯವನ್ನು ನಾವು ಅನುಭವಿಸಬೇಕಾದರೆ ಎಂತಹ ಬೆಂಕಿಯಲ್ಲಿ ನಾವು ಪ್ರಾಣತ್ಯಾಗವಮಾಡಿ ಆ ಬೆಂಕಿಯನ್ನು ಆರಿಸಬೇಕೆಂಬುದು ಅವರ ಮರಣದಿಂದ ಸ್ಪಷ್ಟವಾಗುತ್ತಿದೆ."

-ಪ್ಯಾರೆಲಾಲ್

'..... ಮಹಾತ್ಮಾಗಾಂಧಿಯವರು ಬುದ್ಧನಂತೆ, ಕ್ರಿಸ್ತನಂತೆ ಎಂದೆಂದಿಗೂ ಜೀವಿಸಿರುತ್ತಾರೆ. ಬುದ್ಧಕ್ರಿಸ್ತರು ಪ್ರೇಮದ ಧರ್ಮವನ್ನು ಬೋಧಿಸಿದರು. ಆದರೆ ಬಾಪು ಪ್ರೇಮದ ಧರ್ಮ ಬರಿಯ ಸನ್ಯಾಸಿಗಳಿಗೆ ಮಾತ್ರವಲ್ಲ. ಇದು ಸಮಾಜದ ನಿತ್ಯ ಧರ್ಮ, ಸತ್ಯ ಕರ್ಮ ಎಂಬುದನ್ನು ಆಚರಿಸಿ ತೋರಿಸಿದರು.

- ಸುಶೀಲ ನಯ್ಯರ್

'.....ಗಾಂಧಿಯವರು ಭಾರತದ ಪ್ರಮುಖ ನಾಯಕರು. ಭಾರತದ ಇತಿಹಾಸದಲ್ಲಿ ಅವರ ಸ್ಥಾನ ಹಿರಿಯದು. ಅಳಿಸಲಾಗದುದು. ಭಾರತೀಯ-ಸ್ವಾತಂತ್ರ್ಯ ಚಳವಳಿಯಲ್ಲಿ ಅವರ ಹೆಸರು ಸುವರ್ಣಾಕ್ಷರಗಳು.....'

-ಆಂಡ್ರಿ ಗ್ರೊಮಿಕೊ (ರಷ್ಯಾ)

'...ಗಾಂಧಿಯವರು ಯಾವ ಧ್ಯೇಯಕ್ಕಾಗಿ ತಮ್ಮ ಬಾಳನ್ನೇ ಮೀಸಲಾಗಿಟ್ಟರೋ ಆ ಧ್ಯೇಯ, ಅವರ ಈ ತ್ಯಾಗದಿಂದ ಪೂರ್ಣವಾಗಲೆಂದು ಹಾರೈಸೋಣ ....'

- ಸರ್. ಜಫರುಲ್ಲಾ ಖಾನ್ (ಪಾಕಿಸ್ತಾನ)

'..... ಈ ಅದ್ವಿತೀಯರಾದ ವಿಭೂತಿಯ ನಿಧನದಿಂದ ಬ್ರಿಟಿಷ್ ದೇಶಕ್ಕೆ ಮಾತ್ರವಲ್ಲದೆ ಜಗತ್ತಿಗೇ ನಷ್ಟವಾಗಿದೆ. ಮಾನವ ಜಗತ್ತಿನ ಈ ವಿಶಿಷ್ಟ ಸೇವಕನ ನಿಧನದಿಂದ ಬ್ರಿಟನ್ನಿನಲ್ಲಿ ನಾವೆಲ್ಲಾ ತುಂಬ ದುಃಖಿತರಾಗಿದ್ದೇವೆ.

-ಕ್ಲೆಮೆಂಟ್ ಅಟ್ಲೀ

'.... ಈ ಅಮಾನುಷ ದುರಂತ ನನ್ನನ್ನು ಸ್ತಂಭಿತಗೊಳಿಸಿದೆ.

- ಚರ್ಚಿಲ್

'..... ಜಗತ್ತಿನಲ್ಲಿ ಅವರಿಗಿಂತ ಹೆಚ್ಚಾದ ಆತ್ಮಜ್ಞಾನದ ಗುರು ನಮ್ಮ ಕಾಲದಲ್ಲಿ ಇಲ್ಲ. ಎಲ್ಲಾದುದಕ್ಕಿಂತ ಹೆಚ್ಚಾಗಿ ಆತ್ಮಕ್ಕೆ ಬೆಲೆಯುಂಟೆಂದು ಭಾವಿಸುವವರಿಗೆಲ್ಲಾ ಅವರ ಮರಣದಿಂದ ತುಂಬ ನಷ್ಟವಾಗಿದೆ....'

- ಸರ್. ಸ್ಟಾಫರ್ಡ್ ಕ್ರಿಪ್ಸ್

'ಅತಿ ಒಳ್ಳೆಯವನಾಗಿರುವುದು ಕೂಡ ಅಪಾಯವೆಂದು ಇದರಿಂದ ಗೊತ್ತಾಗುತ್ತದೆ'

-ಜಾರ್ಜ್ ಬರ್ನಾರ್ಡ್ ಷಾ

'ಗಾಂಧಿಯವರು ಭಾರತದ ಹಿರಿಯ ರಾಷ್ಟ್ರ ಪುರುಷರು. ಅಷ್ಟೇ ಅಲ್ಲ, ಅವರು ಅಂತಾರಾಷ್ಟ್ರ ಮಹನೀಯರೂ ಹೌದು. ಅವರ ಆಚರಣೆ, ಬೋಧನೆಗಳು ಜಗತ್ತಿಗೆ ಎಲ್ಲರ ಮೇಲೂ ಪರಿಣಾಮವುಂಟು ಮಾಡಿವೆ.

-ಪ್ರೆಸಿಡೆಂಟ್ ಟ್ರೂಮನ್ (ಅಮೆರಿಕಾ)

'..... ಈ ಅಹಿಂಸಾ ಯೋಧ, ಹಿಂಸೆಗೆ ಬಲಿಯಾದುದು ದೊಡ್ಡ ಆಘಾತಕಾರಿ ಘಟನೆಯಾಗಿದೆ....'

- ಚಿಯಾಂಗ್ ಕೈಶೇಕ್

'.... ಬಾಪು ಯಾವ ಧ್ಯೇಯಕ್ಕಾಗಿ ಮಡಿದರೋ ಆ ಸಾಧನೆಗೆ ನನ್ನನ್ನು ಮೀಸಲಾಗಿಸುತ್ತೇನೆ.'

- ವಿಜಯಲಕ್ಷ್ಮಿ ಪಂಡಿತ್

'..... ಗಾಂಧಿಯವರು ಏಷ್ಯಾದ ಮಹಾತ್ಮರು. ಅವರ ನಂತರವೂ ಅವರ ಧ್ಯೇಯ ಧೋರಣೆಗಳು ಈ ಜಗತ್ತಿನಲ್ಲಿ ಆಚಂದ್ರಾರ್ಕವಾಗಿ ಉಳಿಯುವುವು'

- ಜಯಪ್ರಕಾಶ್‌ನಾರಾಯಣ್

'..... ನಾವು ಹಿಂಸೆಯ ಕೈವಾಡದಲ್ಲಿ ಸಿಲುಕಿ ನಾಶವಾಗದಿರಬೇಕಾದರೆ ನಾವು ಮಹಾತ್ಮಾಗಾಂಧಿಯವರು ಯಾವ ಧ್ಯೇಯಕ್ಕಾಗಿ ಬಾಳಿದರೋ, ಮಡಿದರೋ ಆ ಧ್ಯೇಯದಿಂದ ಮಾತ್ರ ಸಾಧ್ಯ.'

- ಸರ್ ಸರ್ವಪಳ್ಳಿ ರಾಧಾಕೃಷ್ಣನ್

◆◆◆

ಸಾರ್ವಜನಿಕ ಹಣಕಾಸು

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ನೇಟಾಲ್ ಇಂಡಿಯನ್ ಕಾಂಗ್ರೆಸ್ ಸಂಸ್ಥೆಯನ್ನು ಭಾರತೀಯ ನಿವಾಸಿಗಳ ಸೇವೆಗಾಗಿ ಸ್ಥಾಪಿಸಿದರು. ಅವರು ಸಾರ್ವಜನಿಕ ಸಂಸ್ಥೆಯ ಹಣವನ್ನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು.

ಒಂದು ಸಲ ಅವರ ಪರಿಚಯದವರು ಒಬ್ಬರು ಒಂದು ವಾರಕ್ಕಾಗಿ ೩೦೦ ಪೌಂಡ್‌ಗಳ ಸಾಲ ಕೇಳಿದರು. ಗಾಂಧೀಜಿಯ ಬಳಿ ಅಷ್ಟು ದುಡ್ಡು ಇರಲಿಲ್ಲ. ಆ ಮಿತ್ರನನ್ನು ನಿರಾಶೆಗೊಳಿಸುವುದೂ ಅವರಿಗೆ ಇಷ್ಟವಿರಲಿಲ್ಲ.

ಕಾಂಗ್ರೆಸ್ಸಿನ ಬ್ಯಾಂಕ್ ಅಕೌಂಟ್ ಅವರ ಕೈಯಲ್ಲೇ ಇತ್ತು. ೩೦೦ ಪೌಂಡ್‌ನ ಚೆಕ್ ಬರೆದು ಆ ಮಿತ್ರನಿಗೆ ಕೊಟ್ಟರು. ಸ್ವಲ್ಪ ಹೊತ್ತಿನ ಮೇಲೆ ತಾವು ಮಾಡಿದ ಕೆಲಸ ತಪ್ಪಾಯಿತೆಂದು ಅವರಿಗೆ ಅರಿವಾಯಿತು. ಅವತ್ತು ಅವರಿಗೆ ಊಟ, ನಿದ್ದೆ – ಯಾವುದೂ ಬೇಡವಾಯಿತು. ಮನಸ್ಸಿನ ಹಿಂಸೆ ತೀವ್ರವಾಯಿತು. 'ಮುಂದೆ ಎಂದಿಗೂ ಸಾರ್ವಜನಿಕ ಸಂಸ್ಥೆಯನ್ನು ವೈಯಕ್ತಿಕ ಕೆಲಸಕ್ಕಾಗಿ ಉಪಯೋಗ ಮಾಡುವುದಿಲ್ಲ' ಈ ನಿರ್ಧಾರ ಅವರ ಚಿಂತೆಯನ್ನು ಕಡಿಮೆ ಮಾಡಿತು.

ಬೆಳಿಗ್ಗೆ ಸ್ನಾನ ಮಾಡಿ ಆಫೀಸಿಗೆ ಹೋಗುವಾಗಲೂ ಇದೇ ಚಿಂತೆ ಇವರನ್ನು ಕಾಡುತ್ತಿತ್ತು. ಆಫೀಸಿನಲ್ಲಿ ಗುಮಾಸ್ತ ಅವರಿಗೆ ಬಂದಿದ್ದ ಒಂದು ಟೆಲಿಗ್ರಾಮನ್ನು ಅವರಿಗೆ ಕೊಟ್ಟ. ತೊಂಭತ್ತು ಜನ ಭಾರತೀಯರು ಅಕ್ರಮವಾಗಿ ಟ್ರಾನ್ಸ್‌ವಾಲ್ ನೇಟಾಲ್ ಗಡಿಯನ್ನು ದಾಟಿದರೆಂದು ಅವರ ಮೇಲೆ ಕೋರ್ಟಿನಲ್ಲಿ ಕೇಸು ಹಾಕಿದ್ದರು.

ಅಲ್ಲಿಗೆ ರೈಲಿನಲ್ಲಿ ಗಾಂಧೀಜಿ ಧಾವಿಸಿದರು. ಅವರನ್ನೆಲ್ಲಾ ತಾವು ಕೋರ್ಟಿನಲ್ಲಿ ರಕ್ಷಣೆ ಮಾಡುವೆನೆಂದು ಆಶ್ವಾಸನೆ ಕೊಟ್ಟರು.

ಈ ಬಗ್ಗೆ ಅವರಿಂದ ಪಡೆದ ಫೀಜನ್ನು ತಕ್ಷಣ ಬ್ಯಾಂಕಿಗೆ ಕಟ್ಟಿದರು. ಆಗ ಅವರಿಗೆ ಸಮಾಧಾನವಾಯಿತು.

('ವಿಜ್ಞಾನಯುಗದ ಮಹಾಪ್ರಾಜ್ಞ' (ಮಹಾತ್ಮ) – ಪ್ರೊ. ಎನ್. ಕೃಷ್ಣಸ್ವಾಮಿ)

೨೩. ಗಾಂಧಿ ಉವಾಚ

'ಹಿಂದೂಗಳು, ಭಾರತದಲ್ಲಿರುವ ಮುಸಲ್ಮಾನರನ್ನು ರಕ್ಷಿಸುವುದು ನಮ್ಮ ಕರ್ತವ್ಯ. ಭಾರತದ ಮುಸಲ್ಮಾನರು ತ್ರಿವರ್ಣ ಧ್ವಜವನ್ನು ಗೌರವಿಸಬೇಕು. ಬಹುಸಂಖ್ಯಾತರಾದ ಭಾರತದ ಹಿಂದೂಗಳು ಮುಸಲ್ಮಾನರನ್ನು ಕರುಣೆಯಿಂದ ಕಾಣಬೇಕು. ಅವರಿಗೆ ಹೆದರಬಾರದು. ಅವರನ್ನು ಅವರವರ ಮನೆಯಲ್ಲೇ ಸ್ಥಾಪಿಸಬೇಕು. ಭಾರತದ ಶಾಂತಿಗೆ ಅದೇ ಗುರಿ. ಈ ಔದಾರ್ಯಕ್ಕೆ ಹಿಂದೂ ಧರ್ಮ ಎಂದೆಂದಿಗೂ ಪ್ರಸಿದ್ಧಿಯಾಗಿದೆ. ಎಲ್ಲರನ್ನೂ ತನ್ನ ರಕ್ಷಣೆಯಲ್ಲಿ ತೆಗೆದುಕೊಳ್ಳುವುದೇ ಹಿಂದೂ ಧರ್ಮದ ತಿರುಳು'.

'ಬಲಾತ್ಕಾರದಿಂದ ಅತ್ಯಾಚಾರಕ್ಕೆ ಒಳಗಾದ ಸ್ತ್ರೀಯರನ್ನು ತಿರಸ್ಕರಿಸಬಾರದು. ಆಕೆ ಅಶುದ್ಧಳಲ್ಲ, ಕಳಂಕಿಯೂ ಅಲ್ಲ.'

'ಪಾಕಿಸ್ತಾನ ಹಿಂದೂಸ್ತಾನವನ್ನು ಯುದ್ಧ ಮಾಡಿ ಗೆಲ್ಲಲಾರದು. ಅದನ್ನು ನಾನು ಪ್ರತಿಭಟಿಸುತ್ತೇನೆ. ಹಿಂದೂ ಧರ್ಮವನ್ನು ನಾಶಮಾಡಲು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ. ಹಿಂದೂಗಳ ಧರ್ಮ ನಾಶವಾಗುವುದಾದರೆ ಅದು ಹಿಂದೂಗಳಿಂದಲೇ, ಇಸ್ಲಾಂ ಧರ್ಮನಾಶವಾಗುವುದಾದರೆ ಅದು ಮುಸಲ್ಮಾನರಿಂದಲೇ'.

'ಪ್ರತಿಯೊಬ್ಬರೂ ತಮ್ಮ ಧರ್ಮವನ್ನು ಅನುಸರಿಸಿಕೊಂಡು ಹೋಗಲು ಅವಕಾಶವಿಲ್ಲದ ಸ್ವಾತಂತ್ರ್ಯ ಸ್ವಾತಂತ್ರ್ಯವೇ ಅಲ್ಲ. ಕಾಂಗ್ರೆಸ್ ಜಾತಿ ರಹಿತ ಸಂಸ್ಥೆ. ಅದರ ಆಶ್ರಯದಲ್ಲಿ ಎಲ್ಲಾ ಜಾತಿಯವರೂ ನಿರ್ಭಯದಿಂದಿರಬಹುದು'.

'ಕೋಪದಿಂದ ಏನೂ ಪ್ರಯೋಜನವಿಲ್ಲ. ಇಂದಿನ ಅತ್ಯಾಚಾರಗಳಿಗೆಲ್ಲಾ ಕೋಪ ಮತ್ತು ಸೇಡಿನ ಮನೋಭಾವನೆಯೇ ಮುಖ್ಯ ಕಾರಣ'.

'ಒಬ್ಬನಾಗಲಿ, ಒಂದು ಗುಂಪಾಗಲಿ ಹುಚ್ಚರಾದರೆ, ಎಲ್ಲರೂ ಹಾಗೆಯೇ ಆಗಬೇಕೆ ? ಕೊಲ್ಲುವುದರಿಂದಲೂ, ಲೂಟಿ ಮಾಡುವುದರಿಂದಲೂ ಅವರವರ ಧರ್ಮವೇ ನಾಶವಾಗುತ್ತದೆ. ಯಾವ ಧರ್ಮವೂ ಈ ಹುಚ್ಚನ್ನು ಬೋಧಿಸುವುದಿಲ್ಲ'.

'ಸ್ವಾತಂತ್ರ್ಯವೆಂಬ ಅಮೃತ ಫಲವನ್ನು ಅರಗಿಸಿಕೊಳ್ಳಲಾರದೆ ನೀವು

ಎಲ್ಲವನ್ನೂ ಕಳೆದುಕೊಂಡಿರೆಂದು ಮುಂದಿನ ಜನಾಂಗ ನಿಮ್ಮನ್ನು ದೂರದಿರಲಿ'.

'ನಾನು ಹಿಂದೂ, ಮುಸ್ಲಿಮ್, ಸಿಖ್ ಎಲ್ಲರ ಸೇವಕ. ನನ್ನ ಸಂದೇಶ ಎಲ್ಲರಿಗೂ ಒಂದೇ'.

'ಔದಾರ್ಯಕ್ಕೆ ಹಿಂದೂ ಧರ್ಮ ಅನಾದಿಕಾಲದಿಂದಲೂ ಪ್ರಸಿದ್ಧವಾಗಿದೆ. ಎಲ್ಲರನ್ನೂ ತನ್ನ ರಕ್ಷಣೆಯಲ್ಲಿ ತೆಗೆದುಕೊಳ್ಳುವುದೇ ಹಿಂದೂ ಧರ್ಮದ ತಿರುಳು. ಒಳ್ಳೆಯದನ್ನು ಬಿತ್ತಿದರೆ ಒಳ್ಳೆಯದು ಬೆಳೆಯುತ್ತೆ ಪ್ರೇಮವನ್ನು ಬಿತ್ತಿದರೆ ಪ್ರೇಮ ಬೆಳೆಯುತ್ತದೆ. ದುಷ್ಟರನ್ನು ದೇವರ ಕೈಗೆ ಬಿಡಿ. ದೇವರು ಖಂಡಿತಾ ಶಿಕ್ಷಿಸುತ್ತಾನೆ'.

'ಸಹನೆಯಿಂದ ನಾವು ಹೆಚ್ಚು ವೀರರೂ ವಿವೇಕಿಗಳೂ ಆಗುತ್ತೇವೆ'.

'ಬಹುಸಂಖ್ಯಾತರು ಅಲ್ಪಸಂಖ್ಯಾತರಲ್ಲಿ ಅಪನಂಬಿಕೆ ಇಡುವುದು ಹೇಡಿತನ. ಯಾರು ನಿಮ್ಮ ಶತ್ರುವೋ ಅವರೆದುರಿಗೆ ಧೈರ್ಯದಿಂದಿರಿ'.

'ನಾನು ಯಾವಾಗಲೂ ಎಲ್ಲಾ ಯುದ್ಧಕ್ಕೂ ವಿರೋಧಿ'.

'ನಮ್ಮನ್ನು ವಿಭಾಗಿಸುವ ಜಾತಿಮತಗಳಿಗಿಂತ ನಮ್ಮನ್ನು ಒಂದುಗೂಡಿಸುವ ಸಂದರ್ಭಗಳೇ ಹೆಚ್ಚಾಗಿದ್ದರೂ ನಾವು ಜಾತಿಯ ಹೆಸರಿನಲ್ಲಿ ಕಾದಾಡುವುದು ದುರ್ದೈವ'

'ನಮ್ಮ ಅಧಿಕಾರ ಲಾಲಸೆಯಿಂದ ಜನರಿಗೆ ನಮ್ಮಲ್ಲಿ ದ್ವೇಷವುಂಟಾಗುತ್ತದೆ'

'ಕಾಂಗ್ರೆಸ್ ಬದುಕಬೇಕಾದರೆ ಭಕ್ತರು ಅಧಿಕಾರ ಲಾಲಸೆಯನ್ನು ಬಿಡಬೇಕು'

'ನನ್ನ ಮರಣಾನಂತರ ನನ್ನ ತತ್ವಗಳೆಲ್ಲಾ ಬರಿಯ ಒಣ ಪದ್ಧತಿಗಳಾದವೆಂದು ಅರಿವಾದರೆ ನನ್ನ ಆತ್ಮಕ್ಕೂ ದುಃಖವಾಗುವುದು. ನಾವು ಮೌನವಾಗಿ, ನಿಶ್ಶಬ್ದವಾಗಿ ಕೆಲಸ ಮಾಡಬೇಕು. ನಾನು ಗಾಂಧಿಯ ಅನುಯಾಯಿ ಎಂದು ಯಾರೂ ಕೊಚ್ಚಿಕೊಳ್ಳಬೇಡಿ. ನಾನೇ ನನ್ನ ಅನುಯಾಯಿಯಾದರೆ ಸಾಕು. ನಾನೇ ನನ್ನ ಪೂರ್ಣ ಅನುಯಾಯಿಯಲ್ಲ ಎಂಬುದು ನನಗೆ ಗೊತ್ತಿದೆ. ಯಾಕೆಂದರೆ ನನ್ನ ಧ್ಯೇಯಕ್ಕೆ ಅನುಸಾರವಾಗಿ ಬಾಳುವುದು ನನ್ನಿಂದಲೇ ಸಾಧ್ಯವಾಗಿಲ್ಲ'

'ರಾಮನಾಮವು ಎಲ್ಲಕ್ಕೂ ಸಿದ್ಧೌಷಧ'

'ನಾನು ಧರ್ಮದ ಮನುಷ್ಯ, ರಾಜಕೀಯವು ನನ್ನ ರಕ್ತದಲ್ಲಿಲ್ಲ. ಧರ್ಮವು ನನ್ನ ಕಣ್ಣಿನ ಬೆಳಕು. ಜೀವದ ಉಸಿರು. ಆದರೆ ಪಾರತಂತ್ರದಲ್ಲಿರುವವನು ತನ್ನ ಆತ್ಮೋನ್ನತಿಯನ್ನು ಸದುಪಯೋಗಪಡಿಸಿಕೊಳ್ಳಲಾರ. ಆದುದರಿಂದ ಸ್ವಾತಂತ್ರ್ಯವನ್ನು ಮೊದಲು ಗಳಿಸಬೇಕು. ಇದಕ್ಕಾಗಿ ಪ್ರಾಣವನ್ನು ಬಲಿಕೊಡಲು ಸಿದ್ಧರಾಗಿರಬೇಕು'

'ಮರಣವು ಮನುಷ್ಯನ ಸ್ವಾಭಾವಿಕವಾದ ಗುರಿ. ಮರಣಕ್ಕೆ ಯಾಕೆ ಹೆದರಬೇಕು! ಮರಣವೇ ನಮ್ಮ ವಿಶ್ರಾಂತಿ ಸ್ಥಾನ. ಮರಣವೇ ನಮ್ಮ ಅತ್ಯುತ್ಕೃಷ್ಟ ಮಿತ್ರ'

'ಧೈರ್ಯದಿಂದ, ತೇಜಸ್ಸಿನಿಂದ ಪ್ರಾಮಾಣಿಕವಾಗಿ ಬಾಳಿ, ಆತ್ಮಗೌರವಕ್ಕೆ ವಿರೋಧವಾಗಿ ಬಾಳಬೇಡಿ. ಹೇಡಿಯಂತೆ ಬಾಳುವುದಕ್ಕಿಂತ ಸಾವು ಮೇಲು. ತುಂಬು ಜೀವನ, ಪೂರ್ಣಬಾಳನ್ನು ಸಾಧಿಸಿ.'

'ಅಹಿಂಸೆಯ ಅನುಸರಣೆಯ ಜೊತೆಯಲ್ಲಿ ಬುದ್ಧಿಯೂ ಬೆಳೆಯುತ್ತದೆ. ನಿರ್ದಿಷ್ಟವಲ್ಲದ ಜ್ಞಾನದಿಂದ ಹೇಗೆ ಪ್ರಯೋಜನವಿಲ್ಲವೋ ಹಾಗೆಯೇ ಅನವಶ್ಯಕವಾಗಿ ತಲೆಯಲ್ಲಿ ತುಂಬಿಕೊಂಡ ಪುಸ್ತಕ ಜ್ಞಾನದಿಂದಲೂ ಏನೂ ಪ್ರಯೋಜನವಿಲ್ಲ'

'ನಾನು ಬಹಳ ಕಷ್ಟ ಕೊಡುವ ಯಜಮಾನ. ನನ್ನಲ್ಲಿಯೂ ನಾನು ಕೊಳೆ ಸಹಿಸುವುದಿಲ್ಲ. ಇತರರಲ್ಲಿಯೂ ಸಹಿಸುವುದಿಲ್ಲ'

'ಮನುಷ್ಯ ತನ್ನ ಕರ್ತವ್ಯ ತಾನು ಮಾಡಬೇಕು. ವಾಗ್ದಾನದಂತೆ ಸದಾ ನಡೆಯಬೇಕು. ಇದಕ್ಕೆ ಎಂದಿಗೂ ತಪ್ಪಬಾರದು'

'ಜನತೆ, ದೇಶಸೇವಕರನ್ನು ಇಷ್ಟೊಂದು ಸನ್ಮಾನಿಸಬಾರದು. ಆಗ ಪ್ರತಿಯೊಬ್ಬ ದೇಶಸೇವಕನೂ ತನ್ನ ಸೇವೆಗೆ ಈ ಪ್ರತಿಫಲ ದೊರಕಬೇಕೆಂಬುದನ್ನು ನಿರೀಕ್ಷಿಸಲು ಹೇಳಿ ಕೊಟ್ಟಂತಾಗುವುದು'

'ಜನತೆಯ ಕೋಪ ಬಿಸಿಲಿಗಿಂತಲೂ ಕ್ರೂರವಾದುದು'

'ನಮಗೆ ಕೇಡನ್ನು ಮಾಡಿದವರೂ ನಮ್ಮ ಮಿತ್ರರೇ, ನಾವು ಇರುವುದು ಸೇವೆ ಮಾಡುವುದಕ್ಕೇ ಹೊರತು, ಮಾಡಿಸಿಕೊಳ್ಳುವುದಕ್ಕಲ್ಲ'

'ಈ ಜಗತ್ತು ಒಂದಾಗಬೇಕು. ಇಲ್ಲದಿದ್ದರೆ ಇದರಲ್ಲಿ ಬಾಳಲು ನನಗೆ ಇಷ್ಟವಿಲ್ಲ. ಒಂದೇ ಗುರಿಯಿಂದ ಕೆಲಸ ಮಾಡಿದರೆ ಆಗ ಅದು ಕಾರ್ಯಗತ

ವಾಗುವುದರಲ್ಲಿ ಸಂಶಯವಿಲ್ಲ'

'ಭಗವಂತನಿಗೆ ಎಲ್ಲಿಯವರೆಗೆ ಈ ದೇಹದ ಸೇವೆ ಬೇಕೋ ಅಲ್ಲಿಯ ವರೆಗೆ ಅವರಿಂದ ದುಡಿಸಿಕೊಳ್ಳುತ್ತಾನೆ. ಒಂದು ಕ್ಷಣವೂ ಹೆಚ್ಚಾಗಿ ಅಲ್ಲ'

'ವ್ಯಕ್ತಿ ಎಷ್ಟು ಅಲ್ಪನಾದರೂ ಅವನ ಆತ್ಮಶಕ್ತಿ ಜಗತ್ತನ್ನೇ ಆಡಿಸಬಲ್ಲದು. ಇಂತಹ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳುವುದು ಎಲ್ಲರಿಗೂ ಸಾಧ್ಯ'

'ನಂಬಿಕೆಯಿಂದ ನಂಬಿಕೆ ಹುಟ್ಟುತ್ತದೆ'

'ನಮ್ಮ ಅಧಿಕಾರ ಲಾಲಸೆಯಿಂದ, ಜನರಿಗೆ ನನ್ನಲ್ಲಿ ದ್ವೇಷವುಂಟಾಗುವುದು'

'ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ನಮ್ಮ ಜನಾಂಗವನ್ನು ಕಟ್ಟುವುದೇ ಸರ್ವೋದಯದ ಗುರಿ. ಇಲ್ಲಿ ಜಾತಿ, ಮತ, ಬಂಡವಾಳದ ದಬ್ಬಾಳಿಕೆ, ಒಬ್ಬರನ್ನು ಒಬ್ಬರು ತುಳಿಯುವುದು ಇವಾವುದಕ್ಕೂ ಅವಕಾಶವಿಲ್ಲ. ವ್ಯಕ್ತಿಗಳಿಗೂ ಪಂಗಡಗಳಿಗೂ ಪೂರ್ಣ ಬೆಳವಣಿಗೆಯ ಸ್ವಾತಂತ್ರ್ಯವುಂಟು'

'ರಾಮನೆಂದು ಹೇಳುವಾಗ ಯಾವ ಹಿಂದುವೂ ದಶರಥನ ಮಗ ರಾಮನನ್ನು ಮನಸ್ಸಿನಲ್ಲಿಟ್ಟುಕೊಂಡಿರುವುದಿಲ್ಲ. ಅವನು ದೇವರಾಗಿ ಬೆಳೆದ ರಾಮನನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತಾನೆ. ರಾಮನಾಮವೆಂಬುದೂ ಹಾಗೆಯೇ, ಅದು ಬರಿಯ ಹೆಸರಲ್ಲ, ಭಗವಂತನಿಗೆ ಸಹಸ್ರ ಹೆಸರುಗಳಿವೆ. ಅದರಲ್ಲಿ ರಾಮನೂ ಒಂದು.

'ಸ್ವರಾಜ್ಯವು ಬುದ್ಧಿವಂತರಿಗಾಗಿಯೇ ಹೊರತು ದಡ್ಡರಿಗಾಗಿ ಅಲ್ಲ. ಅಜ್ಞಾನವೇ ಎಲ್ಲಾ ಅಪಜಯಕ್ಕೂ ಕಾರಣ. ಹೆಡ್ಡತನ ಜೀವರಹಿತ ದೇಹದಂತೆ'

'ಅಹಿಂಸೆಯನ್ನೂ, ಸತ್ಯವನ್ನೂ ದಡ್ಡರೂ ಬುದ್ಧಿಹೀನರೂ ಪಾಲಿಸುವುದು ಸಾಧ್ಯವಿಲ್ಲ. ಈ ಎರಡು ಸತ್ಯಗಳನ್ನೂ ಅನುಸರಿಸುವವರ ದೇಹ ಮತ್ತು ಮನಸ್ಸು ಪೂರ್ಣ ಬೆಳವಣಿಗೆ ಹೊಂದುತ್ತವೆ. ಅಹಿಂಸೆಯ ಅಭ್ಯಾಸದ ಜೊತೆಯಲ್ಲಿ ಬುದ್ಧಿಯೂ ಚುರುಕಾಗುತ್ತದೆ'

'ದೇಹಕ್ಕೆ ರಕ್ತವು ಎಷ್ಟು ಆವಶ್ಯಕವೋ ಹಾಗೆಯೇ ಆತ್ಮವನ್ನು ಅರಿಯಲು ನಂಬಿಕೆಯೂ ಅಗತ್ಯ'

'ಅಹಿಂಸೆ ದುರ್ಬಲನ ಅಸ್ತ್ರವಲ್ಲ, ಶಕ್ತಿವಂತನ ದಿವ್ಯಾಸ್ತ್ರ'

'ಸತ್ಯಾಗ್ರಹ ಜೀವಿಸುವುದನ್ನು ಕಲಿಸುತ್ತದೆ. ಹಾಗೆಯೇ ಸಾಯಲೂ

ಧೈರ್ಯ ನೀಡುತ್ತದೆ'

'ಸತ್ಯಾಗ್ರಹಿ ಎಂದೂ ಹೊರಗಿನ ಶಕ್ತಿಯನ್ನು ಅವಲಂಬಿಸುವುದಿಲ್ಲ. ಆತ್ಮಶಕ್ತಿಯೇ ಆತನಿಗೆ ಬಲವನ್ನು ನೀಡುತ್ತದೆ.'

'ಕಣ್ಣಿಗೆ ಪ್ರತಿಯಾಗಿ ನೀನು ಕಣ್ಣನ್ನು ಅಪೇಕ್ಷಿಸಿದರೆ ನಿನ್ನ ಕಣ್ಣ ಮುಂದೆ ಪ್ರಪಂಚವೇ ಕುರುಡಾಗುತ್ತದೆ'

'ಸ್ವಾತಂತ್ರ್ಯವೇ ತನ್ನ ಜನ್ಮಸಿದ್ಧಹಕ್ಕು ಎಂದು ನಂಬಿರುವ ಯಾವ ವ್ಯಕ್ತಿಯನ್ನೂ, ಯಾವ ಸರಕಾರವೂ, ಯಾವ ಕಾರಣಕ್ಕೂ ತನ್ನತ್ತ ಬಾಗುವಂತೆ ಮಾಡಲು ಸಾಧ್ಯವಿಲ್ಲ.'

◆◆◆

ಗಾಂಧೀಜಿ ರಾಜಕಾರಣವನ್ನು ಉನ್ನತಮಟ್ಟಕ್ಕೆ ಏರಿಸಲು ಸದಾ ಪ್ರಯತ್ನಪಟ್ಟರು. ಧರ್ಮ ಬೇರೆಯಲ್ಲ, ರಾಜಕಾರಣ ಬೇರೆಯಲ್ಲ. ವ್ಯಾಖ್ಯಾನ ಮಾಡಲು ಅವು ತತ್ವಗಳಲ್ಲ. ಅವು ಆಚರಣೆಗೆ ತರಬೇಕಾದಂತಹವು. ಸತ್ಯ ನಮ್ಮ ಜೀವನದಲ್ಲಿ, ನಮ್ಮ ಸಹಜ ಆಲೋಚನೆಯಲ್ಲಿ ಪ್ರಧಾನವಾಗಿ ಭಾಗವಹಿಸಬೇಕೆಂದು ತಿಳಿಯ ಹೇಳುತ್ತಿದ್ದರು.

ಭಾರತದಲ್ಲಿ ಈಗಲೂ ಬಾಪೂಜಿ ಸಜೀವ ಶಕ್ತಿ. ಕಾರಣ, ಆತನ ವ್ಯಕ್ತಿತ್ವ ನಮ್ಮ ಮನಸ್ಸುಗಳಲ್ಲಿ ಜೀವಂತವಾಗಿದೆ. ನೆಹರೂರವರು ಗಾಂಧೀಜಿಯವರ ಮೂಲಭೂತ ಆದರ್ಶಗಳ ಆಧಾರದ ಮೇಲೆ ರೂಪುಗೊಂಡ ಮಾರ್ಗದಲ್ಲಿ ಹೋಗುತ್ತಿದ್ದಾರೆ.

ಗಾಂಧೀಜಿ ನಮ್ಮೊಂದಿಗೆ ಇದ್ದಾಗ ಗಾಂಧಿತ್ವ ಎಲ್ಲಾ ಮಹಾಧರ್ಮಗಳಂತೆ, ಆ ಧರ್ಮ ಸ್ಥಾಪಕರು ಜೀವಂತರಾಗಿದ್ದಾಗ ಇದ್ದಂತೆ ಇದೂ ಪರಮ ಶಕ್ತಿಯಿಂದ ಕೂಡಿತ್ತು. ಅದು ಜೀವಂತವಾಗಿದ್ದು ಬೆಳೆಯುತ್ತಿದ್ದು ವಿಕಾಸಗೊಳ್ಳುತ್ತಿತ್ತು. ಇದೇ ದಾರಿಯೆಂಬ ನಿಶ್ಚಿತ ರೇಖೆ ಇರಲಿಲ್ಲ. ವ್ಯಾಖ್ಯಾನದ ಪ್ರಶ್ನೆಯೇ ಇಲ್ಲ. ಪರಿಸ್ಥಿತಿಗೆ ಅನುಸಾರವಾಗಿ ನೀತಿ ರೂಪುಗೊಳ್ಳುತ್ತಿತ್ತು. ಗಾಂಧೀಜಿಯವರ ವಿಚಾರಗಳು ಧರ್ಮಲಿಪ್ತವಾದುವು. ಪ್ರಾಚೀನ ಪರಂಪರೆಗೆ ಸಮೀಪ ಗತವಾದವು. ಆದರೂ ಆ ನಂಬಿಕೆಗಳಲ್ಲಿ, ಕೃತಿಗಳಲ್ಲಿ, ಸಂಕುಚಿತ ಭಾವವಿರಲಿಲ್ಲ. ಎಲ್ಲಾ ಧರ್ಮಗಳ ಮೂಲಾಧಾರವೊಂದೇ 'ಐಕ್ಯತೆ'.

(ಇಂದಿರಾ ಪ್ರಿಯದರ್ಶಿನಿ, ಲೇಖಕರು : ದಿ. ತಿ. ತಾತಾಚಾರ್ಯ)

೨೪. 'ಮಹಾತ್ಮಗಾಂಧಿ' ನಡೆದು ಬಂದ ದಾರಿ

ಅಕ್ಟೋಬರ್ ೨, ೧೮೬೯ :	ಮೋಹನ್‌ದಾಸ್ ಕರಮಚಂದ್ ಗಾಂಧಿಯ ಜನನ ಕಾಥೀವಾಡದ ಪೋರ್ ಬಂದರಿನಲ್ಲಿ (ಸುಧಾಮಪುರಿ). ತಂದೆ: ಕರಮಚಂದ್ ಗಾಂಧಿ ; ತಾಯಿ : ಪುತಲಿಬಾಯಿ ; ಸಹೋದರಿ : ಕಲಿತಾಬೆನ್ ; ಸಹೋದರರು : ಲಕ್ಷ್ಮೀದಾಸ್ ಗಾಂಧಿ ; ಕರ್ಸನ್ ಗಾಂಧಿ.
೧೮೮೨.	ಕಸ್ತೂರಬಾರೊಡನೆ ವಿವಾಹ.
೧೮೮೩.	ರಾಜ್‌ಕೋಟೆಯ ಆಲ್‌ಫ್ರೆಡ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿ.
೧೮೮೫	ತಂದೆ ಕರಮಚಂದ್‌ರ ಮರಣ.
೧೮೮೭.	ಮೆಟ್ರಿಕ್ ತೇರ್ಗಡೆ (ಭಾವನಗರದಲ್ಲಿ-ಕಾಲೇಜು)
ಸೆಪ್ಟೆಂಬರ್ ೪, ೧೮೮೮.	ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪಯಣ.
ಜೂನ್ ೧೩, ೧೮೯೧.	ಬ್ಯಾರಿಸ್ಟರ್ ಆಗಿ ಭಾರತಕ್ಕೆ ಹಿಂತಿರುಗಿದರು.
ಏಪ್ರಿಲ್ ೧೮೯೩.	ದಕ್ಷಿಣ ಆಫ್ರಿಕಾಕ್ಕೆ ಉದ್ಯೋಗದ ಮೇಲೆ ಪ್ರಯಾಣ.
೨೨/೫/೧೮೯೪.	ನೇಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪನೆ.
ನವಂಬರ್ ೧೫, ೧೮೯೬.	ಪತ್ನಿ ಮತ್ತು ಎರಡು ಮಕ್ಕಳೊಡನೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ.
೧೮೯೯.	ಬೋಅರ್ ಯುದ್ಧ.
೧೯೦೧.	ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಪ್ರಯಾಣ.
೧೯೦೩.	ದಕ್ಷಿಣ ಆಫ್ರಿಕಾದ ಪ್ರಿಟೋರಿಯಾಕ್ಕೆ ಆಗಮನ. ಇಂಡಿಯನ್ ಅಸೋಸಿಯೇಶನ್ ಸ್ಥಾಪನೆ.

೧೯೦೪.	'ಇಂಡಿಯನ್ ಒಪಿನಿಯನ್' ಪತ್ರಿಕೆ ಸ್ಥಾಪನೆ ಮತ್ತು 'ಫೀನಿಕ್ಸ್' ತೋಟ ಸ್ಥಾಪನೆ.
೧೯೦೬.	ಏಷ್ಯಾಟಿಕ್ ಆರ್ಡಿನೆನ್ಸ್ ವಿರುದ್ಧ ಚಳುವಳಿ.
೧೯೦೮.	ಎರಡು ತಿಂಗಳ ಸಜೆ.
೧೯೦೭-೧೯೦೮	ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ. ಹಲವು ಬಾರಿ ಸೆರೆವಾಸ.
೧೯೧೦.	ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ.
೧೯೧೨	ದಕ್ಷಿಣ ಆಫ್ರಿಕಾಗೆ ಗೋಖಲೆ ಆಗಮನ.
೧೯೧೪.	ಭಾರತಕ್ಕೆ ಪಯಣ.
ಜನವರಿ ೧೯೧೫.	ಬೊಂಬಾಯಿಯಲ್ಲಿ ಫಿರೋಜ್ ಷಾ ಮೆಹ್ತಾ ಹಾಗೂ ಗೋಖಲೆ ಭೇಟಿ.
೧೯೧೫.	ಕಾಶಿ ವಿಶ್ವವಿದ್ಯಾನಿಲಯ ಉದ್ಘಾಟನೆ. ನೆಹರೂ ಭೇಟಿ. ಅಹಮದಾಬಾದ್‌ನಲ್ಲಿ 'ಸತ್ಯಾಗ್ರಹ ಆಶ್ರಮ' ಸ್ಥಾಪನೆ.
೧೯೧೭.	ಕೈಸರ್-ಇ-ಹಿಂದ್ ಪ್ರಶಸ್ತಿ (ದಕ್ಷಿಣ ಆಫ್ರಿಕಾದಲ್ಲಿ) ಚಂಪಾರಣ ಸತ್ಯಾಗ್ರಹ.
೧೯೧೯	ಯಂಗ್ ಇಂಡಿಯಾ ನವಜೀವನ ಪತ್ರಿಕೆಗಳ ಸಂಪಾದಕತ್ವ ೧೩/೪/೧೯೧೯- ಜಲಿಯನ್ ವಾಲಾಬಾಗ್ ಹತ್ಯಾಕಾಂಡ.
೧೯೨೦-೧೯೨೧.	ಅಸಹಕಾರ ಚಳುವಳಿ ; ಖಿಲಾಫತ್ ಚಳುವಳಿ ; ಕೈಸರ್-ಇ-ಹಿಂದ್ ಪದಕ ತ್ಯಾಗ ; ಅಹಮದಾಬಾದಿನ ಸಬರಮತಿಯಲ್ಲಿ ಆಶ್ರಮ ಸ್ಥಾಪನೆ.
೧೯೨೨.	ಚೌರಿ ಚೌರಾ ಹತ್ಯಾಕಾಂಡ. ರಾಷ್ಟ್ರವ್ಯಾಪಿ ಅಸಹಕಾರ ಚಳುವಳಿ. 'ಯಂಗ್

	ಇಂಡಿಯಾ'ದಲ್ಲಿನ ಲೇಖನಕ್ಕಾಗಿ ಕಾರಾಗೃಹ ಶಿಕ್ಷೆ.
೧೯೨೩.	ಸೇವಾದಳ ಸ್ಥಾಪನೆ. ಹಿಂದೂ-ಮುಸಲ್ಮಾನರ ಐಕ್ಯತೆಗಾಗಿ ೨೧ ದಿನಗಳ ಉಪವಾಸ.
೧೯೨೪.	ಕಾಂಗ್ರೆಸ್‌ನ ಬೆಳಗಾಂ ಅಧಿವೇಶನದ ಅಧ್ಯಕ್ಷತೆ. ನಿಂತು ಹೋಗಿದ್ದ 'ಯಂಗ್ ಇಂಡಿಯಾ' 'ನವ ಜೀವನ' ಮರು ಆರಂಭ.
೧೯೨೮.	ಸೈಮನ್ ಕಮೀಷನ್ ವಿರುದ್ಧ ಚಳುವಳಿ. ಬಾರ್ಡೋಲಿ ಸತ್ಯಾಗ್ರಹ.
೧೯೨೯.	'ಸಂಪೂರ್ಣ ಸ್ವಾತಂತ್ರ್ಯ' ಗುರಿ ಘೋಷಣೆ. ಆರು ತಿಂಗಳ ಸೆರೆವಾಸ. ಕಾಂಗ್ರೆಸ್' 'ಅಕ್ರಮ ಸಂಸ್ಥೆ' ಯೆಂದು ಸರ್ಕಾರ ಘೋಷಣೆ.
ಮಾರ್ಚ್ ೧೨, ೧೯೩೦.	ದಂಡೀಯಾತ್ರೆ ; ಗಾಂಧಿ ಮತ್ತು ಕಾರ್ಯಕಾರಿ ಸದಸ್ಯರ ಬಂಧನ. ಬ್ರಿಟಿಷರಿಂದ ಹರಿಜನರನ್ನು ಹಿಂದೂ ಸಮಾಜದಿದ ಬೇರ್ಪಡಿಸುವ ಹಂಚಿಕೆ.
೧೯೧೩.	ಗಾಂಧಿ ಇರ್ವಿನ್ ಒಪ್ಪಂದ: ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಪ್ರಯಾಣ.
ಜನವರಿ ೧೯೩೨.	ಸತ್ಯಾಗ್ರಹ. ಯರವಾಡಾ ಜೈಲುವಾಸ.
ಫೆಬ್ರುವರಿ ೧೯೩೩.	'ಹರಿಜನ' ಪತ್ರಿಕೆ ಪ್ರಾರಂಭ ; ಆತ್ಮಶುದ್ಧಿಗಾಗಿ ೨೧ ದಿನ ಉಪವಾಸ.
೧೯೩೪	ಕಾಂಗ್ರೆಸ್‌ಗೆ ರಾಜೀನಾಮೆ ಗ್ರಾಮೋದ್ಯೋಗ ಸಂಘಗಳ ಸ್ಥಾಪನೆ.
೧೯೩೬	ವಾರ್ಧಾ ಸಮೀಪ 'ಸೇವಾಗ್ರಾಮ' ಆರಂಭ.
೧೯೩೭	ಮಹಾಯುದ್ಧದ ಬಗ್ಗೆ ಹಿಟ್ಲರ್‌ಗೆ ಪತ್ರ.
ಅಕ್ಟೋಬರ್ ೧೧,೧೯೪೦,	ವ್ಯಕ್ತಿಗತ ಸತ್ಯಾಗ್ರಹ ಆರಂಭ.

೧೯೪೧.	ಗೋಸೇವಾಸಂಘ ಸ್ಥಾಪನೆ.
ಮಾರ್ಚ್, ೨೭, ೧೯೪೨.	ಕ್ರಿಪ್ಸ್ ಜೊತೆ ಸಂಧಾನ ಪ್ರಕ್ರಿಯೆ.
ಆಗಸ್ಟ್ ೧೯೪೨.	'ಭಾರತ ಬಿಟ್ಟು ತೊಲಗಿ' ಚಳುವಳಿ ಪ್ರಾರಂಭ.
೧೯೪೨-೧೯೪೪.	ಭಾರತದ ಸ್ವಾತಂತ್ರ್ಯಕ್ಕಾಗಿ ಐ. ಎನ್. ಎ. ಹೋರಾಟ.
ಫೆಬ್ರವರಿ ೨೨, ೧೯೪೪.	ಶಿವರಾತ್ರಿ ದಿನ ಕಸ್ತೂರಬಾ ನಿಧನ. (ಆಗಾಖಾನ್ ಅರಮನೆಯಲ್ಲಿ)
ಫೆಬ್ರವರಿ ೨೨, ೧೯೪೪.	ಹಿಂದೂ ಮುಸ್ಲಿಂ ಏಕತೆ ಬಗ್ಗೆ ಜಿನ್ನಾರೊಡನೆ ಮಾತುಕತೆ.
೧೯೪೫.	ಸಿಮ್ಲಾ ಸಮ್ಮೇಳನ.
೧೯೪೬	ಮುಸ್ಲಿಂಲೀಗ್‌ನಿಂದ ನೇರ ಕಾರ್ಯಾಚರಣೆ. ಕೋಮು ಗಲಭೆ, ಗಾಂಧಿ ಆಮರಣಾಂತ ಉಪವಾಸ. ನೌಖಾಲಿಯಲ್ಲಿ ಗಾಂಧಿಯ ಪಾದಯಾತ್ರೆ.
ಆಗಸ್ಟ್ ೬, ೧೯೪೬.	ತಾತ್ಕಾಲಿಕ ಸರ್ಕಾರ ರಚಿಸಲು ನೆಹರೂಗೆ ಆಹ್ವಾನ. ಭಾರತದ ವಿಭಜನೆ ಬಗ್ಗೆ ಗಾಂಧಿ, ಗಫಾರ್ ಖಾನ್ ವಿರೋಧ.
ಮಾರ್ಚ್, ೧೯೪೭.	ಮೌಂಟ್ ಬ್ಯಾಟನ್ ಜೊತೆ ಮಾತುಕತೆ ; ಜಿನ್ನಾರೊಡನೆ ಸಮಾಲೋಚನೆ.
ಆಗಸ್ಟ್ ೧೫, ೧೯೪೭.	ಭಾರತಕ್ಕೆ ಸ್ವಾತಂತ್ರ್ಯ. ರಾಷ್ಟ್ರಾದ್ಯಂತ ಕೋಮುಗಲಭೆ, ಗಾಂಧಿಯ ನೌಖಾಲಿ ಭೇಟಿ, ೭೨ ಗಂಟೆಗಳ ಉಪವಾಸ.
ಫೆಬ್ರವರಿ, ೨ ೧೯೪೭.	ಬ್ರಿಟಿಷ್ ಆಡಳಿತದ ಅಂತ್ಯವನ್ನು ಅಟ್ಲೀಯಿಂದ ಘೋಷಣೆ.

ಮಾರ್ಚ್, ೨೪, ೧೯೪೭.	ವೈಸ್‌ರಾಯ್ ಆಗಿ ಮೌಂಟ್ ಬ್ಯಾಟನ್ ಅಧಿಕಾರ ಸ್ವೀಕಾರ.
೧೯೪೭ ಡಿಸೆಂಬರ್ ೮,	ಕೋಮುಗಲಭೆ ನಂದಿಸಲು ಗಾಂಧಿ ದೆಹಲಿಗೆ ಆಗಮಿಸಿದರು.
ಜನವರಿ ೧೯೪೮.	ಕೋಮುಗಲಭೆ ನಂದಿಸಲು ದೆಹಲಿಯಲ್ಲಿ ಗಾಂಧಿಯ ಉಪವಾಸ ಸತ್ಯಾಗ್ರಹ.
ಜನವರಿ ೨೦, ೧೯೪೮.	ಗಾಂಧಿ ಪ್ರಾರ್ಥನಾ ಸಭೆಯಲ್ಲಿ ಬಾಂಬ್ ಸ್ಫೋಟ.
ಜನವರಿ ೩೦, ೧೯೪೮.	ದೆಹಲಿಯಿಂದ ಬಿರ್ಲಾ ಪ್ರಾರ್ಥನಾ ಮಂದಿರದಲ್ಲಿ. ನಾಥುರಾಂ ವಿನಾಯಕ ಗೋಡ್ಸೆಯಿಂದ ಗಾಂಧಿ ಹತ್ಯೆ.
ಜನವರಿ ೩೧, ೧೯೪೮.	ರಾಜ್‌ಘಾಟ್‌ನಲ್ಲಿ ಗಾಂಧಿಯ ಕಳೇಬರದ ದಹನ.

◆ ◆ ◆

ಆಕರ ಗ್ರಂಥಗಳು

೧. ಸ್ವಾತಂತ್ರ್ಯ ಸಂಗ್ರಾಮ — ಭಾರತೀಯ ವಿದ್ಯಾಭವನ,
ಸಂ : ಎ. ವಿ. ನರಸಿಂಹಮೂರ್ತಿ — ಬೆಂಗಳೂರು - ೧

೨. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ — ಗಾಂಧಿಸ್ಮಾರಕ ನಿಧಿ, ಮೈಸೂರು
ಲೇಖಕ : ಮೋ. ಕ. ಗಾಂಧಿ

೩. ಭಾರತದ ರಾಜಕೀಯ ಸಮಸ್ಯೆ — ಮಿಂಚಿನ ಬಳ್ಳಿ ಪ್ರಕಾಶನ
ಲೇಖಕ : ಬುರ್ಲಿ ಬಿಂದು ಮಾಧವ

೪. ಮಹಾತ್ಮ ಗಾಂಧೀ : — ಕರ್ನಾಟಕ ಗಾಂಧಿ ಸ್ಮಾರಕನಿಧಿ,
ಜೀವನದ ಮೈಲಿಗಲ್ಲುಗಳು : — ಬೆಂಗಳೂರು

೫. ಗಾಂಧೀಜಿ ಕ ಜೀವನ್ ಪ್ರಭಾತ್ (ಹಿಂದಿ) — ಸಸ್ತಾ ಸಾಹಿತ್ಯಾ ಮಂಡಲ
ಸಂಗ್ರಹಕಾರ : ಅಶೋಕ್ — ಪ್ರಕಾಶನ, ದೆಹಲಿ

೬. An Autobiography — Navajivan Publishing House
M. K. Gandhi — Ahmedabad - 380014

೭. ಜ್ಞಾನ ಗಂಗೋತ್ರಿ — ಕರ್ನಾಟಕ ಕೋ. ಆಪರೇಟಿವ್
(ಕಿರಿಯರ ವಿಶ್ವಕೋಶ) — ಪಬ್ಲಿಷಿಂಗ್ ಹೌಸ್,ಬೆಂಗಳೂರು

೮. ಭಾರತ ಭಾರತಿ — ರಾಷ್ಟ್ರೋತ್ಥಾನ ಪರಿಷತ್ತು,
ಬೆಂಗಳೂರು

೯. Thoughts to Inspire & Celebrate Gandhi — Gajanan Khergamker
Jacco Publishing House

೧೦. Souvenir-81st Plenary Session Indian National Congress — Karnataka Pradesh
Congress committee

೧೧. ಸ್ವಾತಂತ್ರ್ಯದ ಅಂತರ್ಜಾಲ (ರಾಮ್ ಮನೋಹರ್ ಲೋಹಿಯಾ ಪ್ರಾತಿನಿಧಿಕ ಲೇಖನಗಳು)	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
೧೨. ಭಾರತ ಭಾಗ್ಯ ವಿಧಾತ ಗೊರೂರು ರಾಮಸ್ವಾಮಿ ಅಯ್ಯಂಗಾರ್	ಸತ್ಯಶೋಧನ ಪ್ರಕಾಶನ
೧೩. ಸ್ಮರಣೀಯ ಹುತಾತ್ಮರು ಎಸ್. ವಿ. ಶ್ರೀನಿವಾಸರಾವ್	ಸೌರಭ ಪ್ರಕಾಶನ ಬೆಂಗಳೂರು - ೫೦
೧೪. 'ಮಹಾತ್ಮ' ವಿಜ್ಞಾನ ಯುಗದ ಪ್ರಾಜ್ಞ ಪ್ರೊ. ಎನ್. ಕೃಷ್ಣಸ್ವಾಮಿ	
೧೫. ಗಾಂಧಿ ಚರಿತ ಮಾನಸ ಪಿ. ವೆಂಕೋಬರಾವ್	ಜೀವನ ವಿಕಾಸ ಸಾಹಿತ್ಯ ಗಾಂಧೀ ಸ್ಮೃತಿ ಕುಟೀರ ಶ್ರೀರಾಮಪುರ, ಬೆಂಗಳೂರು-೨೧
೧೬. ಪರ್ಣಕುಟಿ ಸಿದ್ಧವನಹಳ್ಳಿ ಕೃಷ್ಣ ಶರ್ಮಾ	ಗಾಂಧಿ ಸಾಹಿತ್ಯ ಸಂಘ ಬೆಂಗಳೂರು
೧೭. ಇಂದಿರಾ ಪ್ರಿಯದರ್ಶಿನಿ ದಿ. ತಿರುಮಲೆ ತಾತಾಚಾರ್ಯ	ಆರ್.ಬಿ. ಪ್ರಕಾಶನ ವಾಣಿವಿಲಾಸ ರಸ್ತೆ, ಬೆಂಗಳೂರು-೪
೧೮. ಹೀಗಿದ್ದರು ಬಾಪೂ ಸಂಗ್ರಾಹಕ : ಟಿ.ವಿ. ವೆಂಕಟರಮಣಯ್ಯ	ತೊಣ್ಣೂರು ಪ್ರಕಾಶನ ರಾಜಾಜಿನಗರ, ಬೆಂಗಳೂರು-೧೦
೧೯. ವಿನೋಬಾ ಭಾವೆ ಎಚ್.ಎಸ್. ದೊರೆಸ್ವಾಮಿ	ಸಾಹಿತ್ಯ ಮಂದಿರ ಬೆಂಗಳೂರು

W. O. 8566 - MUPM - 1,100 copies - 27-9-2005

ಗಾಂಧಿ ಭವನದ ಕೆಲವು ಪ್ರಕಟಣೆಗಳು

1. ಮಹಾತ್ಮ (ಸಂಪುಟ–೨) : ಡಾ. ಎಚ್. ತಿಪ್ಪೇರುದ್ರಸ್ವಾಮಿ ರೂ. 39–00
2. ಮಹಾತ್ಮ (ಸಂಪುಟ–೩) : ನಾಡಿಗ ಕೃಷ್ಣಮೂರ್ತಿ ರೂ. 25–00
3. ಮಹಾತ್ಮ (ಸಂಪುಟ–೪) : ಡಾ. ಎ. ಎಲ್. ಶಿವರುದ್ರಪ್ಪ ರೂ. 35–00
4. ಮಹಾತ್ಮ (ಸಂಪುಟ–೮) : ಎಚ್. ಪಿ. ಮಲ್ಲೇದೇವರು ರೂ. 18–00
5. ಮಹಾತ್ಮ ಗಾಂಧಿ–ಅಂತಿಮ ಹಂತ (ಸಂಪುಟ–೧)
   ಅನು : ಕೆ. ವಿ. ಶಂಕರ ಗೌಡ ರೂ. 80–00
6. ಮಹಾತ್ಮ ಗಾಂಧಿ–ಅಂತಿಮ ಹಂತ (ಸಂಪುಟ–೨)
   ಅನು : ಕೆ. ವಿ. ಶಂಕರ ಗೌಡ ರೂ. 135–00
7. ಕುವೆಂಪು ಕಂಡಂತೆ ಗಾಂಧೀಜಿ : ಪ್ರೊ. ದೇಜಗೌ ರೂ. 25–00
8. ಗಾಂಧೀಜಿ ಮತ್ತು ಸ್ವಾತಂತ್ರ್ಯ ಸಂಗ್ರಾಮ :
   ಎಸ್. ವಿ. ಶ್ರೀನಿವಾಸರಾವ್ ರೂ. 50–00
9. ಗಾಂಧೀಜಿ ಬಾಲ್ಯ ಮತ್ತು ವಿಜ್ಞಾನ :
   ಡಾ. ಎಸ್. ಜೆ. ನಾಗಲೋಟಿಮಠ ರೂ. 25–00
10. ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಗಳು :
    ಪ್ರೊ. ಎ. ಎಸ್. ವೇಣುಗೋಪಾಲರಾವ್ ರೂ. 25–00

ಗಾಂಧಿ ಭವನ
ಮಾನಸಗಂಗೋತ್ರಿ, ಮೈಸೂರು–570 006

ಬೆಲೆ : ರೂ. 50–00